1943

ಶಿವಾನುಭವ ಗ್ರಂಥಮಾಲಾ ಸಂ|| ೨೮

0134

# ಶಿವಾನುಭವ ಶಬ್ದಕೋಶ.

ಗ್ರಂಥಾಲಯ
[illegible]
ಕನ್ನಡ [illegible]
[illegible]
[illegible]

ಸಂಪಾದಕರು:

ರಾ. ಬ. ಪಿ. ಜಿ. ಹಳಕಟ್ಟಿ, ಬಿ. ಎ., ಎಲ್. ಎಲ್. ಬಿ.

ವಿಜಾಪುರ.

The Vijay College
LIBRARY
VIJAY COLLEGE,
BIJAPUR.

೧೯೪೩

( ಇದರ ಯಾವತ್ತು ಅಧಿಕಾರವು ಕಾದಿಡಲ್ಪಟ್ಟಿದೆ. )

ಬೆಲೆ: ರೂ|| ೨—೮—೦

A.No
134

O33:16k
Hal
6971

ಇದನ್ನು ವಿಜಾಪುರದಲ್ಲಿ
ರಾ. ಬ. ಪಿ. ಜಿ. ಹಳಕಟ್ಟಿ ಬಿ. ಎ., ಎಲ್. ಎಲ್. ಬಿ. ಇವರು
ತಮ್ಮ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ೧೬೨೦ (ಅ) ನೇ ಮನೆಯಲ್ಲಿ
ಪ್ರಕಟಿಸಿದರು.

134

# ಪ್ರಸ್ತಾವನೆ.

ನಾವು ಈಗ ‘ಶಿವಾನುಭವ ಶಬ್ದಕೋಶ’ ಎಂಬ ಹೆಸರಿನ ಈ ಗ್ರಂಥವನ್ನು ಸಿದ್ಧಗೊಳಿಸಿ ವಾಚಕರಿಮುಂಗೆ ಇಟ್ಟಿದ್ದೇವೆ. ಶಿವಾನುಭವ ಶಾಸ್ತ್ರದಲ್ಲಿ ಉಪಯೋಗಿಸಲ್ಪಡುವ ಶಬ್ದಗಳ ಅರ್ಥವನ್ನು ಸಂಕ್ಷಿಪ್ತವಾಗಿ ಬರೆಯುವದೇ ನಮ್ಮ ಉದ್ದೇಶವಾಗಿರುತ್ತದೆ. ವಚನಕಾರರು ಕೆಲವೊಂದು ವಿಷಯವನ್ನು ತೆಗೆದುಕೊಂಡು ಕ್ರಮಯುಕ್ತವಾಗಿ ಅದನ್ನು ನಿರೂಪಿಸುತ್ತ ಹೋಗುವದಿಲ್ಲ. ಅವರ ವಚನಗಳು ಅವರಿಗೆ ಸ್ಫೂರ್ತಿಯುಂಟಾದಾಗ ಬರೆದವುಗಳಿರುತ್ತವೆ. ಆದ್ದರಿಂದ ಅವರು ವಿವೇಚಿಸುವ ವಿಷಯಗಳ ಮುಖ್ಯ ಭಾವವು ವಾಚಕರಿಗೆ ತಿಳಿದಿರುತ್ತದೆಂದು ಭಾವಿಸಿ ಅವರು ಅವುಗಳನ್ನು ರಚಿಸುವದುಂಟು. ಆದರೆ ಈಗಿನ ಕಾಲದಲ್ಲಿ ವಚನಕಾರರ ಅಭಿಪ್ರಾಯಗಳು ಬಹು ಜನರಿಗೆ ಅಪರಿಚಿತವಿರುತ್ತವೆ. ಆದಕಾರಣ ವಚನಗಳ ಅರ್ಥವು ಅವರಿಗೆ ಸರಿಯಾಗಿ ಆಗುವದಿಲ್ಲ. ವಚನಗಳ ಅರ್ಥವು ತಮಗೆ ತಿಳಿಯುವದಿಲ್ಲೆಂಬ ಆಕ್ಷೇಪಗಳು ಯಾವಾಗಲೂ ಮಾಡಲ್ಪಡುತ್ತಿರುವುದರಿಂದ ಇಂಥವರಿಗೆ ಉಪಯೋಗವಾಗಬೇಕೆಂದು ನಾವು ಈ ಗ್ರಂಥವನ್ನು ಸಿದ್ಧಪಡಿಸಿದ್ದೇವೆ.

ವೀರಶೈವ ಮತವು ಕೆಲವೊಂದು ವಿಶಿಷ್ಟ ಸ್ವರೂಪವನ್ನು ಹೊಂದಿರುತ್ತದೆ. ಅದಕ್ಕೆ ‘ಶಿವಾನುಭವ ಶಾಸ್ತ್ರ’ ಅಥವಾ ‘ಷಟ್‌ಸ್ಥಲ ಸಿದ್ಧಾಂತ’ ಎಂಬ ಹೆಸರು ಬಂದಿದೆ. ಅದು ಆಗಂತುಕವಾಗಿ ಉಂಟಾದ ಧರ್ಮವಲ್ಲ. ಅನೇಕ ವಿದ್ವಾಂಸರು ಮತ್ತು ಶಿವಾನುಭವಿಗಳು ಅದರ ಸಲುವಾಗಿ ದುಡಿದಿರುತ್ತಾರೆ. ಆದ್ದರಿಂದ ಅದರಲ್ಲಿ ಅನೇಕ ಅಂಗೋಪಾಂಗಗಳುಂಟಾಗಿ ಅದು ಒಂದು ವಿಶಿಷ್ಟ ಧರ್ಮ ಮತ್ತು ವಾಙ್ಮಯದ ಸ್ವರೂಪವನ್ನು ಹೊಂದಿದೆ. ಇದರಲ್ಲಿ ವಿಶಿಷ್ಟಾರ್ಥವುಳ್ಳ ಅಸಂಖ್ಯ ಶಬ್ದಗಳು ಬಂದಿರುತ್ತವೆ. ಆದರೆ ಈಚೆಗೆ ಈ ಶಾಸ್ತ್ರದ ಅಭ್ಯಾಸವು ನಿಂತು ಹೋಗಿರುವುದರಿಂದ ಈ ಶಬ್ದಗಳ ಅರ್ಥವು ವಾಚಕರಿಗೆ ಚನ್ನಾಗಿ ಬೋಧವಾಗುವದಿಲ್ಲ. ಈ ತೊಂದರೆಯನ್ನು ಶಕ್ಯವಿದ್ದಷ್ಟು ದೂರ ಮಾಡಲು ನಾವು ಈ ಗ್ರಂಥದಲ್ಲಿ ಯತ್ನಿಸಿದ್ದೇವೆ.

ಈ ಕಾರ್ಯವನ್ನು ನಾವು ಕೈಕೊಂಡ ಬಳಿಕ ಅದು ಬಹು ಬಿಕ್ಕಟ್ಟಿನದಾಗಿ ನಮಗೆ ಆರಂಭದಲ್ಲಿ ತೋರಿಬರಹತ್ತಿತು. ಯಾಕಂದರೆ ಶಿವಾನುಭವ

ಶಬ್ದಗಳಿಗೆ ಸಂದರ್ಭಾನುಸಾರ ಅನೇಕ ಅರ್ಥಗಳು ಉಂಟಾಗುತ್ತವೆ. ಅವು
ಗಳೆಲ್ಲವನ್ನು ನಾವು ಸಂಗ್ರಹಿಸಿ ವ್ಯವಸ್ಥಿತವಾಗಿ ಬರೆಯುವದು ಬಹು
ಕಠಿಣವಾದ ಕೆಲಸವೆಂದು ನಮಗೆ ತೋರಿತು. ಆದರೂ ಈ ಕಾರ್ಯ
ವನ್ನು ನಾವು ಪ್ರಾರಂಭ ಮಾಡಿ ಮುಗಿಸಿದ್ದಾಗಿದೆ. ಇದು ಎಷ್ಟರಮಟ್ಟಿಗೆ
ಯಶಸ್ವಿಯಾಗಿದೆಂಬದನ್ನು ಪರೀಕ್ಷಿಸುವ ಭಾರವನ್ನು ವಾಚಕರ ಕಡೆಗೆ
ನಾವು ಬಿಡುತ್ತೇವೆ. ಇಂಥ ಪ್ರಯತ್ನವು ಇದೇ ಮೊದಲನೆಯದಾದ್ದರಿಂದ
ಇದರಲ್ಲಿ ಅನೇಕ ದೋಷಗಳಿರಬಹುದು. ನಾವು ಕೊಟ್ಟಿರುವ ಅರ್ಥ
ದಲ್ಲಿಯೂ ಮತಭೇದಗಳಾಗಬಹುದು. ಅವುಗಳನ್ನು ವಾಚಕರು ನಮಗೆ
ತಿಳಿಸಿದಲ್ಲಿ ಅವುಗಳನ್ನು ನಾವು ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿ
ಕೊಳ್ಳುವೆವು.

ಈ ಕೋಶವನ್ನು ಸಿದ್ಧಪಡಿಸುವಲ್ಲಿ ಶಬ್ದಗಳ ಭಾವವು ಅತಿ ಸ್ಪಷ್ಟ
ವಾಗಿಯೂ ಸಂಕ್ಷಿಪ್ತವಾಗಿಯೂ ಇರಬೇಕೆಂದು ನಾವು ಉದ್ದೇಶಪಟ್ಟ ಇದೇ
ರೀತಿಯನ್ನು ನಾವು ಶಕ್ಯವಿದ್ದಷ್ಟರಮಟ್ಟಿಗೆ ಅನುಸರಿಸುತ್ತ ಬಂದಿದ್ದೇವೆ.
ನಿಜವಾಗಿ ಒಂದೊಂದು ವಿಷಯ ನಿರೂಪಣೆಗೆ ದೊಡ್ಡ ದೊಡ್ಡ ಲೇಖ
ಗಳೇ ಬೇಕು. ಅವುಗಳಲ್ಲಿ ಗೂಢಾರ್ಥಗಳೂ ಇವೆ. ಅವುಗಳನ್ನೆಲ್ಲ
ಇಲ್ಲಿ ನಿರೂಪಿಸಲು ಪ್ರಯತ್ನಿಸದೆ ಅವುಗಳ ಸಾಮಾನ್ಯಾರ್ಥವನ್ನು ಆದಷ್ಟು
ತಿಳಿಯಾದ ಭಾಷೆಯಲ್ಲಿ ಬರೆಯಲು ಪ್ರಯತ್ನಿಸಿದ್ದೇವೆ. ಶಿವಾನುಭವ
ಶಾಸ್ತ್ರದ ಅಭ್ಯಾಸವನ್ನು ಆರಂಭ ಮಾಡುವವರಿಗೆ ಈ ಗ್ರಂಥದ ಉಪ
ಯೋಗವು ಹೆಚ್ಚು ಆಗಬಹುದೆಂದು ಎಣಿಸಿದ್ದೇವೆ. ಆದರೆ ವಿಷಯಗಳ
ವಿಶೇಷಜ್ಞಾನ ಮಾಡಿಕೊಳ್ಳಲಪೇಕ್ಷಿಸುವವರು ಮೂಲ ವಚನಗ್ರಂಥ
ಗಳನ್ನೇ ನೋಡಬೇಕೆಂದು ನಮ್ಮ ಸೂಚನೆ ಇದೆ.

ಈ ಶಿವಾನುಭವ ಶಬ್ದಕೋಶಕ್ಕೆ ಆಧಾರ ಗ್ರಂಥಗಳು ನಾವು ರಚಿ
ಸಿದ ವಚನ ಶಾಸ್ತ್ರಸಾರ ಭಾಗ ೧ ಮತ್ತು ಭಾಗ ೨ ಇದರ ಪೂರ್ವಾರ್ಧ
ಮತ್ತು ಉತ್ತರಾರ್ಧ ಇವುಗಳೇ ಇರುತ್ತವೆ. ಇವುಗಳಲ್ಲಿ ೧ನೇ ಭಾಗ
ದಲ್ಲಿ ಷಟ್‌ಸ್ಥಲಸಿದ್ಧಾಂತದ ಮಹತ್ವದ ಮೂಲ ವಚನ ಗ್ರಂಥಗಳಿವೆ.
೨ನೇ ಭಾಗದ ಪೂರ್ವಾರ್ಧದಲ್ಲಿ ಗುರು, ಲಿಂಗ, ಜಂಗಮಗಳ ವಿವೇ



ಯು ಇದೆ. ಇದರ ಉತ್ತರ ಭಾಗದಲ್ಲಿ ಪಾದೋದಕ, ಪ್ರಸಾದ,
ೂತಿ, ರುದ್ರಾಕ್ಷಿ, ಮಂತ್ರ ಇವುಗಳ ನಿರೂಪಣೆ ಇದೆ. ಈ ಭಾಗವು
ನ್ನು ಪ್ರಕಟವಾಗಿಲ್ಲ. ಈ ಗ್ರಂಥಗಳ ಮರ್ಮಗಳನ್ನು ತಿಳಿಯಲಪೇ
ವವರು ಈ ಶಿವಾನುಭವ ಶಬ್ದಕೋಶವನ್ನು ಮೊದಲು ಓದಿ ನೋಡ
ದ್ದು. ಆಮೇಲೆ ಬೇರೆ ಬೇರೆ ವಿಷಯಗಳ ವಿಸ್ತೃತ ಭಾವವನ್ನು
ಮೂಲ ಗ್ರಂಥಗಳಲ್ಲಿಯೇ ತಿಳಿದುಕೊಳ್ಳತಕ್ಕದ್ದು. ಅಂದರೆ ಈಗಿನ
ಥವು ವಚನಶಾಸ್ತ್ರಸಾರದ ಭಾಗಗಳನ್ನು ತಿಳಿಯಲು ಒಂದು
ಡಿಯೆಂದು ಭಾವಿಸಿ ವಾಚಕರು ಇದರ ಉಪಯೋಗವನ್ನು ಮಾಡಿ
ಳ್ಳಬೇಕೆಂದು ನಾವು ಸೂಚಿಸುತ್ತೇವೆ.

ಪುಸ್ತಕದ ಆರಂಭದಲ್ಲಿ ನಾವು ವಿಷಯಾನುಕ್ರಮಣಿಕೆಯನ್ನು
ಟ್ಟಿದ್ದೇವೆ. ಅದು ಅತ್ಯಂತ ಸಾಮಾನ್ಯ ಸ್ವರೂಪದ್ದಿದೆ. ಅದರ ಸಹಾಯ
ವಾಚಕರು ಕೆಲವೊಂದು ವಿಷಯವನ್ನು ತೆಗೆದುಕೊಂಡು ಮೊದಲು
ತಕ್ಕದ್ದು. ಓದುತ್ತ ಹೋಗುವಲ್ಲಿ ಅದಕ್ಕೆ ಸಂಬಂಧಿಸಿದ ಬೇರೆ
ಯಗಳನ್ನು ಅವರು ತಿಳಿಯಲಪೇಕ್ಷಿಸಿದರೆ, ಪುಸ್ತಕದ ಅಂತ್ಯದಲ್ಲಿ
ಟ್ಟಿರುವ ಶಬ್ದಾನುಕ್ರಮಣಿಕೆ (Index) ಯನ್ನು ನೋಡಿ ಅದರ
ಯದಿಂದ ಗ್ರಂಥದ ಬೇರೆ ಭಾಗಗಳಲ್ಲಿಯ ವಿಷಯಗಳನ್ನು
ತುಕಿ ಅವಲೋಕಿಸಬೇಕು. ಅವುಗಳನ್ನೂ ವಚನಶಾಸ್ತ್ರಸಾರದ ಆಯಾ
ಗಗಳಲ್ಲಿಯ ವಿಸ್ತೃತ ನಿರೂಪಣೆಗಳನ್ನೂ ನೋಡಿದಲ್ಲಿ ಷಟ್‌ಸ್ಥಲ
ದ ಸಾಮಾನ್ಯ ಸ್ವರೂಪ ವಾಚಕರಿಗೆ ಗೊತ್ತಾಗುವದೆಂದು ನಾವು
ಸಿದ್ದೇವೆ.

ಪ್ರಕಟಪಡಿಸಿದ ಈ ಗ್ರಂಥದ ಪ್ರತಿಗಳು ಬಹಳ ಸ್ವಲ್ಪ ಇರು
. ಅಲ್ಲದೆ ಈಗ ಕಾಗದದ ಬೆಲೆಯು ಮಿತಿಮೀರಿ ಹೆಚ್ಚಿದೆ.
ರಿಂದ ಗ್ರಂಥದ ಬೆಲೆಯನ್ನು ವಾಚಕರು ನಿರೀಕ್ಷಿಸದೆ ಅದರ ಮಹತ್ವ
ಲಕ್ಷಿಸಿ ಅದನ್ನು ಆದರಿಸಬೇಕೆಂದು ನಮ್ಮ ಸವಿನಯ ವಿನಂತಿ ಇದೆ.

ವಿಜಾಪುರ
೧೬-೬-೧೯೪೩.

ಫ. ಗು. ಹಳಕಟ್ಟಿ,
ಗ್ರಂಥಕರ್ತ.

## ಅನುಕ್ರಮಣಿಕೆ.

(ಈ ಅನುಕ್ರಮಣಿಕೆಯಲ್ಲಿ ವಿಷಯಗಳ ಸ್ಥೂಲ ನಿರ್ದೇಶ ಮಾತ್ರವಿ


| | ವಿಷಯಗಳು. | ಗುಂಪುಗ |
|---|---|---|
| (೧) | ಜಗತ್ತಿನ ಆವಿರ್ಭಾವ ... ... | ೧-೩೫ |
| (೨) | ದೇಹದ ವಿವರಣೆಗಳು ... ... | ೩೬-೪೮ |
| (೩) | ಷಟ್‌ಸ್ಥಲಗಳು ... ... ... | ೫೧-೬೮ |
| (೪) | ಮೂವತ್ತಾರ ಸ್ಥಲಗಳು ... ... | ೬೯-೮೭ |
| (೫) | ಸ್ಥಲವಿಭೇದಗಳು ... ... | ೮೮-೯೫ |
| (೬) | ಏಕೋತ್ತರ ಶತಸ್ಥಲಗಳು ... ... | ೯೬-೧೦ |
| (೭) | ಆಚಾರ ಸಂಬಂಧದ ವಿಷಯಗಳು ... | ೧೦೯-೧ |
| (೮) | ಗುರುಲಿಂಗಜಂಗಮಗಳು ... ... | ೧೨೫-೧ |
| (೯) | ಪಾದೋದಕ ಪ್ರಸಾದಗಳು ... ... | ೧೩೮- |
| (೧೦) | ವಿಭೂತಿ ... ... | ೧೬೯-೧ |
| (೧೧) | ರುದ್ರಾಕ್ಷಿ ... ... | ೧೭೪-೧ |
| (೧೨) | ಮಂತ್ರ ವಿಷಯಗಳು ... ... | ೧೭೮- |
| (೧೩) | ಜಪವಿಷಯಗಳು ... ... | ೨೭೧ |
| (೧೪) | ಮಿಶ್ರಾರ್ಪಣ ವಿಷಯಗಳು ... ... | ೨೯೯-೩ |
| (೧೫) | ಪಂಚೀಕರಣ ... ... | ೩೦೬-೩ |
| (೧೬) | ಮಾರ್ಗಕ್ರಿಯೆಗಳು ಮತ್ತು ಮೀರಿದ ಕ್ರಿಯೆಗಳು | ೩೧೮-೩ |
| (೧೭) | ಪೂಜಾರ್ಚನೆ ವಿಧಿವಿಧಾನಗಳು ... | ೩೫೪-೩ |
| (೧೮) | ವಿವಿಧವಿಷಯಗಳು ... ... | ೩೮೯-೪ |


# ಶಿವಾನುಭವ ಶಬ್ದಕೋಶ.

(ವಚನ ಶಾಸ್ತ್ರದಲ್ಲಿ ವಿಶೇಷಾರ್ಥವುಳ್ಳ ಪಾರಿಭಾಷಿಕ ಶಬ್ದಗಳು ಅನೇಕ ಬರುವದುಂಟು. ಅವುಗಳ ಭಾವವು ವಾಡಿಕೆಯಾಗಿ ಜನರಿಗೆ ಅಪರಿಚಿತವಾಗಿರುತ್ತದೆ. ವಚನಗಳ ಅರ್ಥವು ತಿಳಿಯದಿರಲಿಕ್ಕೆ ಇದೊಂದು ಮುಖ್ಯ ಕಾರಣವಾಗಿರುತ್ತದೆ. ಆದ್ದರಿಂದ ಇಂಥ ಕಠಿಣ ಶಬ್ದಗಳನ್ನು ಆಯ್ದು ಅವುಗಳ ಅರ್ಥವನ್ನು ವಿವರಿಸುವ ಒಂದು ಕೋಶವನ್ನು ಸಿದ್ಧಪಡಿಸಬೇಕೆಂದು ಬಹುಜನರ ಕೋರಿಕೆ ಇರುವದು ನಮಗೆ ಕಂಡುಬಂದಿರುತ್ತದೆ. ಆದುದರಿಂದ 'ಶಿವಾನುಭವ ಶಬ್ದಕೋಶ' ಎಂಬ ಹೆಸರನ್ನಿಟ್ಟು ಇಂಥ ಒಂದು ಕೋಶವನ್ನು ಸಿದ್ಧಪಡಿಸಲೆಣಿಸಿ ನಾವು ಈ ಪ್ರಯತ್ನವನ್ನು ಈಗ ಆರಂಭಿಸಿದ್ದೇವೆ. ವಚನಶಾಸ್ತ್ರದಲ್ಲಿ ಬೇರೆ ಬೇರೆ ಸಂದರ್ಭಗಳ ಪ್ರಕಾರ ಶಬ್ದಗಳಿಗೆ ಭಿನ್ನ ಭಿನ್ನ ಅರ್ಥಗಳಿರುತ್ತವೆ. ಅವುಗಳೆಲ್ಲವನ್ನು ಒಳಕೊಳ್ಳುವಂತೆ ಕೋಶವನ್ನು ರಚಿಸುವದು ಬಹು ದುಸ್ತರವಾದದ್ದು. ಆದರೆ ವಾಚಕರು ಇದರಲ್ಲಿ ನಮಗೆ ಸಹಕರಿಸಿದಲ್ಲಿ ಸರಿಯಾಗಿ ಈ ಕಾರ್ಯವು ಜರಗಬಹುದೆಂದು ನಾವು ಎಣಿಸಿದ್ದೇವೆ. ಈ ಕೋಶವು ಸದ್ಯಕ್ಕೆ ಪೂರ್ಣ ವಿವರಣೆಯುಳ್ಳದ್ದೆಂದು ಯಾರೂ ಭಾವಿಸಕೂಡದು. ಇದರಲ್ಲಿ ದೋಷಗಳಿದ್ದರೆ ವಾಚಕರು ಅವುಗಳನ್ನು ನಮ್ಮ ಲಕ್ಷಕ್ಕೆ ಅವಶ್ಯವಾಗಿ ತರಬೇಕೆಂದು ನಮ್ಮ ವಿನಂತಿ ಇದೆ.)

ಸಂಪಾದಕ.

(೧) ಬಯಲು, ನಿರವಯ, ಶೂನ್ಯ:— ಇವು ಮೂರು ಪರ್ಯಾಯ ಶಬ್ದಗಳು. ಅವೆಲ್ಲವೂ ಒಂದೇ ಅರ್ಥವನ್ನು ಸೂಚಿಸುತ್ತಿವೆ. ಜಗತ್ತು ಪ್ರಕಟವಾಗದ ಸ್ಥಿತಿಯನ್ನು ವಚನಕಾರರು ಬಯಲೆಂತಲೂ, ಶೂನ್ಯವೆಂತಲೂ, ನಿರವಯವೆಂತಲೂ ಕರೆಯುತ್ತಾರೆ. ಜಗತ್ತಿನಲ್ಲಿ ಇಂದ್ರಿಯಗಳಿಗೆ ಗೋಚರವಾಗುವ ಗುಣ, ಕ್ರಿಯೆ, ಶಕ್ತಿ ಮೊದಲಾದವು ಈ ಕಾಲದಲ್ಲಿ

ಗೂಢ ಸ್ಥಿತಿಯಲ್ಲಿ ಇರುತ್ತವೆ. ಈ ಸ್ಥಿತಿಯು ಅಲೆಗಳಿಲ್ಲದ ಸಮುದ್ರದೋಪಾದಿ ಎಂದು ಇದನ್ನು ವಚನಕಾರರು ವರ್ಣಿಸುವದುಂಟು. ಅಂದರೆ ಇದು ಅತ್ಯಂತ ಶಾಂತ ಸ್ತಬ್ಧ ಸ್ಥಿತಿಯು. ಏನೇನೂ ತೋರದ ಸ್ಥಿತಿಯು. ಇದನ್ನು ವಚನಕಾರರು 'ಇಲ್ಲವೆ' ಎಂತಲೂ ಬೇರೊಂದು ಶಬ್ದದಿಂದ ಕರೆಯುತ್ತಾರೆ. ನಾಸ್ತಿಕರು ಪರಮಾತ್ಮನು 'ಶೂನ್ಯ' ಎಂದರೆ ಇಲ್ಲವೇ ಇಲ್ಲ, ಎಂದು ಅಭಿಪ್ರಾಯಪಡುತ್ತಾರೆ. ಆದರೆ ವಚನಕಾರರಲ್ಲಿ ಈ ಭಾವವಿಲ್ಲ. ಜಗತ್ತು, ಪರಮಾತ್ಮ ಅಥವಾ ಪರಬ್ರಹ್ಮವಸ್ತು ಇವುಗಳಿಗೆ ಅಸ್ತಿತ್ವವು ಇದೆ ಎಂತಲೇ ಅವರ ಭಾವವು. ಆದರೆ ಮೂಲಸ್ಥಿತಿಯಲ್ಲಿ ಮಾತ್ರ ಅವುಗಳಿಗೆ ಪ್ರಕಟತೆ ಇಲ್ಲೆಂದು ತೋರಿಸುವ ಅಭಿಪ್ರಾಯದಿಂದ ಅವರು ಈ ತೆರವ ಶಬ್ದಗಳನ್ನು ಉಪಯೋಗಿಸುತ್ತಾರೆ. ಮೊದಲು ಬಯಲು. ತರುವಾಯ ಆ ಬಯಲಿನೊಳಗಿಂದಲೇ ಜಗತ್ತು ಪ್ರಕಟವಾಗುತ್ತದೆ. ಮತ್ತು ಕಡೆಗೆ ಈ ಬಯಲಿನಲ್ಲಿಯೇ ಅದು ಲಯವಾಗುತ್ತದೆ. ಶೂನ್ಯ, ನಿರವಯ, ಬಯಲು ಇವುಗಳನ್ನು ಪರಬ್ರಹ್ಮವಸ್ತು ಎಂದು ವೇದಾಂತಿಗಳ ಶಬ್ದದಿಂದ ಕರೆಯಬಹುದು.

(೨) ಬ್ರಹ್ಮಾಂಡ, ಜಗತ್ತು:— ಬಯಲು ಪ್ರಕಟವಾಗಲು, ಅದು ಬ್ರಹ್ಮಾಂಡ, ಜಗತ್ತು ಈ ಶಬ್ದಗಳಿಂದ ಕರೆಯಲ್ಪಡುತ್ತಿದೆ. ಇದು ಅನೇಕ ತರದ ಜೀವರಾಶಿಗಳನ್ನು ಒಳಕೊಂಡಿರುತ್ತದೆ.

(೩) ಪಿಂಡ, ಅಂಗ, ಶರೀರ, ದೇಹ:— ಇವೆಲ್ಲವೂ ಪರ್ಯಾಯ ಶಬ್ದಗಳೆಂದು ಹೇಳಬಹುದು. ಆದರೆ ಉಪಯೋಗದಲ್ಲಿ ದೇಹ ಈ ಶಬ್ದವು ವಾಡಿಕೆಯಾಗಿ ಮನುಷ್ಯನಿಗೆ ಮಾತ್ರ ಅನ್ವಯಿಸುತ್ತದೆ. ಉಳಿದ ಮೂರು ಶಬ್ದಗಳು ಅದಕ್ಕೂ ಹೆಚ್ಚು ವ್ಯಾಪಕಾರ್ಥವುಳ್ಳವಾಗಿವೆ. ಅಂದರೆ ಮನುಷ್ಯನಿಗಷ್ಟೇ ಅಲ್ಲ ಇತರ ವಸ್ತುಗಳಿಗೂ ಅವು ಅನ್ವಯಿಸುತ್ತವೆ. ಬ್ರಹ್ಮಾಂಡ ಎಂಬುದು ಜಗತ್ತನ್ನೆಲ್ಲ ನಿರ್ದೇಶಿಸುತ್ತಿದೆ. ಆದರೆ ಪಿಂಡ ಈ ಶಬ್ದವು ಜಗತ್ತಿನಲ್ಲಿರುವ ಪ್ರತ್ಯೇಕ ವಸ್ತುವನ್ನು ನಿರ್ದೇಶಿಸುತ್ತಿದೆ. ಶರೀರ ಮತ್ತು ಅಂಗ ಇವು ಪರ್ಯಾಯ ಶಬ್ದಗಳಾಗಿವೆ. ಅವು ಇಂದ್ರಿಯಗಳಿಗೆ ಗೋಚರವಾಗುವಂಥವುಗಳು, ಕ್ರಿಯಾಯುಕ್ತವಾದವುಗಳು, ಜೀವಮಯವಾದವು

ಗಳು. ಅಂಗ ಇದನ್ನು ಜೀವ ಎಂತಲೂ ಆಗಿಂದಾಗ್ಗೆ ಹೇಳುವದುಂಟು.

(೪) ಕ್ರಿ, ಕ್ರಿಯೆ, ಮಾಟ:— ಮನುಷ್ಯನ ಕಾರ್ಯಗಳು ಈ ಶಬ್ದಗಳಿಂದ ಕರೆಯಲ್ಪಡುತ್ತಿವೆ. ಇವೆಲ್ಲವೂ ಪರ್ಯಾಯ ಶಬ್ದಗಳು. 'ಮಾಡು' ಎಂಬ ಧಾತುವಿನಿಂದ 'ಮಾಟ' ಈ ಶಬ್ದವು ಬಂದಿದೆ. ವಚನಕಾರರು ಈ ಶಬ್ದವನ್ನು ಕ್ರಿಯೆ ಈ ಅರ್ಥದಲ್ಲಿ ಉಪಯೋಗಿಸುತ್ತಾರೆ. ಹಾಗೆಯೇ ಅವರು ಕ್ರಿಯೆ ಈ ಶಬ್ದದ ಬದಲು 'ಕ್ರಿ' ಎಂದು ಸಂಕ್ಷೇಪವಾಗಿಯೂ ಆಗಿಂದಾಗ್ಗೆ ಉಪಯೋಗಿಸುವದುಂಟು.

(೫) ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳು:— ಇವು ಶರೀರದಲ್ಲಿ ಮಾಡಲ್ಪಟ್ಟ ಮೂರು ವಿಭಾಗಗಳಿವೆ. ಇವುಗಳು ತನುತ್ರಯಗಳೆಂತಲೂ ಕರೆಯಲ್ಪಡುತ್ತಿವೆ. ಇವುಗಳ ವ್ಯಾಖ್ಯೆಗಳು ವಚನಶಾಸ್ತ್ರಸಾರ ಭಾಗ ೨, ಪುಟ ೧೧೧ ರಲ್ಲಿ ಕೊಡಲ್ಪಟ್ಟಿವೆ. ಪಂಚಭೂತಗಳಿಂದಾದ ಬಾಹ್ಯ ಶರೀರವೇ ಸ್ಥೂಲಶರೀರವು. ಇದು 'Physical body' ಎಂದು ಹೇಳಬಹುದು. ಜ್ಞಾನೇಂದ್ರಿಯ, ಪಂಚ ವಿಷಯಗಳು, ವಾಯು ಪಂಚಕಗಳು, ಮನ, ಬುದ್ಧಿ ಇವುಗಳುಳ್ಳದೇ ಸೂಕ್ಷ್ಮ ಶರೀರವು. ಇದು "Mental body" ಎಂದು ಹೇಳಬಹುದು. 'ಕಾರಣ ಶರೀರ' ವು ಮೂಲಾತ್ಮವುಳ್ಳುದು. ಉಳಿದ ಶರೀರಗಳಲ್ಲಿ ಅದು ಚೈತನ್ಯವನ್ನು ಉಂಟು ಮಾಡುವಂತಹದು. ಉಳಿದ ಶರೀರಗಳಲ್ಲಿ ಆಗುವ ಅನುಭವಗಳನ್ನೆಲ್ಲ ಅದು ತನ್ನಲ್ಲಿ ಸಂಗ್ರಹಿಸಿಕೊಳ್ಳುತ್ತಿದೆ. ಮತ್ತು ಅವುಗಳಿಗೆ ಬೇಕಾದ ಕಾಲದಲ್ಲಿ ಅದರ ಉಪಯೋಗವನ್ನು ಅಂದರೆ ಅನುಭವವನ್ನು ಒದಗಿಸಿ ಕೊಡುತ್ತಿದೆ. ಅದು "*Causal body*" ಎಂದು ಹೇಳಬಹುದು, ಸ್ಥೂಲ ಶರೀರದಲ್ಲಿ ಕ್ರಿಯೆಯು ಗೋಚರವಾಗುವಂಥ ಸ್ವರೂಪದಲ್ಲಿರುತ್ತದೆ. ಸೂಕ್ಷ್ಮ ಶರೀರದಲ್ಲಿ ಮನಸ್ಸು ಬಹು ಪ್ರಬಲವಾದದ್ದು. ಆದರೆ ಕಾರಣ ಶರೀರದಲ್ಲಿ ಜ್ಞಾನವು ಸಂಗ್ರಹಿಸಲ್ಪಡುವದುಂಟು. ಅದು '*Sub-conscious body*' ಎಂದು ಹೇಳಬಹುದು.

(೬) ಅರಿವು, ಜ್ಞಾನಃ – ವಚನಕಾರರು ತಮ್ಮ ವಚನಗಳಲ್ಲಿ ಅರಿವು ಈ ಶಬ್ದವನ್ನು ಬಹಳ ಉಪಯೋಗಿಸುವದುಂಟು. ಅವರು ಜ್ಞಾನ ಮತ್ತು ಕ್ರಿಯೆ ಇವುಗಳನ್ನು ಭಿನ್ನವಾಗಿ ಎಣಿಸುವದಿಲ್ಲ. ಅವರ ದೃಷ್ಟಿಯಲ್ಲಿ ಅರಿವು ಎಂದರೆ ಕೇವಲ ತಿಳುವಳಿಕೆ ಮಾತ್ರವಲ್ಲ, ಕ್ರಿಯೆಯಿಂದಾದ ಅನುಭವವೂ ಅದರಲ್ಲಿ ಕೂಡಿದೆ. ತಿಳುವಳಿಕೆಯು ಕ್ರಿಯೆಯಲ್ಲಿಯೇ ತೋರಬೇಕು. ಅದೇ ಅರಿವು, ಅಥವಾ ಜ್ಞಾನ. ಕ್ರಿಯೆಯಲ್ಲಿ ಅದು ತೋರದೆ ಹೋದರೆ ಅದು ಅರಿವೂ ಅಲ್ಲ, ಅಥವಾ ಜ್ಞಾನವೂ ಅಲ್ಲ. ಅದು ಬರಿಯ ತರ್ಕ, ವಿಚಾರ, ನುಡಿ ಎಂದು ಅವರು ಭಾವಿಸುತ್ತಾರೆ.

(೭) ಅನುಭಾವ, ಅನುಭಾವಿಗಳು; ಅನುಭವ, ಶಿವಾನುಭವ, ಶಿವಾನುಭವಿಗಳು; ಅನುಭಾವ ಗೋಷ್ಠಿಃ— ಈ ಬಗೆಯ ಶಬ್ದಗಳು ವಚನಗಳಲ್ಲಿ ಪದೇ ಪದೇ ಬರುತ್ತಿವೆ. ಮನುಷ್ಯನು ತಾನು ಮೊದಲು ವಿಚಾರ ಮಾಡಬೇಕು. ವಿಚಾರ ಮಾಡಿದ ಬಳಿಕ ಅವನು ಅದರಂತೆ ಆಚರಿಸಬೇಕು. ಹೀಗೆ ಆಚರಿಸುವುದೇ ಅನುಭಾವವು. ಆದರೆ ಹೀಗೆ ಆಚರಿಸುವ ಪೂರ್ವದಲ್ಲಿ ಅವನು ಬಲ್ಲವರೊಡನೆ ತಾನು ತಿಳಿದದ್ದರ ಬಗ್ಗೆ ಚರ್ಚಿಸಬೇಕು. ಅಥವಾ ಅವರಿಂದ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬೇಕು. ಹೀಗೆ ತಿಳಿದುಕೊಳ್ಳುವ ಕಾರ್ಯಕ್ಕೆ 'ಶಿವಾನುಭವ' ಎಂತಲೂ ಹೆಸರು ಇದೆ. ಉದಾಹರಣಾರ್ಥವಾಗಿ, ಬಸವೇಶ್ವರನು ಶರಣರೊಡನೆ ಶಿವಾನುಭವ ಮಂಟಪದಲ್ಲಿ ಶಿವಾನುಭವ ಸದ್ಗೋಷ್ಠಿಯನ್ನು ಮಾಡುತ್ತಿದ್ದನೆಂದು ಆಗಿಂದಾಗ್ಗೆ ವರ್ಣನೆಗಳು ಬರುತ್ತಿವೆ. ಈ ರೀತಿ ಆಚರಿಸುವವರು, ಅಂದರೆ ಮೊದಲು ಸ್ವಂತವಾಗಿ ವಿಚಾರ ಮಾಡುವದು, ಆಮೇಲೆ ತಾನು ವಿಚಾರ ಮಾಡಿದ್ದನ್ನು ತನ್ನವರೊಡನೆ ಚರ್ಚಿಸಿ ದೃಢಪಡಿಸಿಕೊಳ್ಳುವದು, ಹೀಗೆ ದೃಢಪಡಿಸಿಕೊಂಡು ಅದರಂತೆ ಆಚರಿಸುವದು, ಆಚರಿಸುವಲ್ಲಿ ತನಗುಂಟಾದ ಅನುಭವವನ್ನು ಹೆರರಿಗೆ ಹೇಳುವದು, ಅವರಿಗ ಕೇಳಿ ತನ್ನ ಮಾರ್ಗವನ್ನು ಹೆಚ್ಚಿಗೆ ಸುಧಾರಿಸಿಕೊಳ್ಳುವದು, ಈ ಎಲ್ಲ ಕಾರ್ಯಗಳನ್ನು ಮಾಡುವಂಥವರು ಶಿವಾನುಭವಿಗಳು. ಇದು ಬಸವಾದಿ ಶಿವಶರಣರು ಶಿವಾನುಭವ ಮಂಟಪದಲ್ಲಿ ಮೊದಲು ಜರಗಿಸುತ್ತಿದ್ದ ಕ್ರಮವು. ಈ ಪ್ರಕಾರ ಆಚರಿಸಿ ಅವರು ನುಡಿದ ವಾಕ್ಯಗಳೇ



ವಚನಗಳಾಗಿವೆ. ಆ ವಚನಗಳನ್ನು ಓದಿ, ತಿಳಿದು, ನಡೆಯುವದೇ ಶಿವಾನುಭವವೆನಿಸಿಕೊಳ್ಳುತ್ತಿದೆ.

(೮) ಮಾರ್ಗ ಕ್ರಿ, ಮೀರಿದ ಕ್ರಿಃ – ಕ್ರಿಯೆಗಳಲ್ಲಿ ಎರಡು ವಿಧಗಳಿವೆ. ಸ್ಥೂಲ ಶರೀರದಲ್ಲಿ ಮಾಡುವ ಕ್ರಿಯೆಗಳು ಮಾರ್ಗ ಕ್ರಿಗಳು. ಇವುಗಳು ಸಾಮಾನ್ಯ ಜ್ಞಾನವುಳ್ಳವರಿಗೆ ತಕ್ಕವುಗಳಾಗಿರುತ್ತವೆ. ಇವು ಸ್ಥೂಲಾಚರಣೆಗಳು. ಆದರೆ ಅನುಭವದಿಂದ ಮರ್ಮವನ್ನು ತಿಳಿದುಕೊಂಡು ಅಂತರಂಗದಲ್ಲಿ ಅವುಗಳನ್ನು ದೃಢಪಡಿಸಿಕೊಂಡು ಆಚರಿಸಿದ್ದಾದರೆ, ಅವು ಮೀರಿದ ಕ್ರಿಯೆಗಳು. ಅವು ಅಂತರಂಗದ ಆಚರಣೆಗೆ ಸಂಬಂಧಿಸುತ್ತವೆ. ಭಕ್ತ, ಮಾಹೇಶ್ವರ, ಪ್ರಸಾದಿ ಸ್ಥಲಗಳಲ್ಲಿಯ ಆಚರಣೆಗಳು ಮಾರ್ಗಕ್ರಿಯೆಗಳೆಂತಲೂ, ಪ್ರಾಣಲಿಂಗಿ, ಶರಣ, ಐಕ್ಯ ಈ ಸ್ಥಲಗಳಲ್ಲಿಯ ಆಚರಣೆಗಳು ಮೀರಿದ ಕ್ರಿಯೆಗಳೆಂತಲೂ ಹೇಳಲ್ಪಡುತ್ತಿವೆ.

(೯) ಮಾಯೆ, ಮಾಯಾಶಕ್ತಿಃ – ಮನುಷ್ಯನಲ್ಲಿ ಕೆಡಕುಮಾರ್ಗವನ್ನು ಕೈಕೊಳ್ಳುವ ಪ್ರವೃತ್ತಿಯು ಇರುತ್ತದೆ. ಇದಕ್ಕೆ ಮಾಯೆಯೇ ಕಾರಣವು. ಅದೊಂದು ಶಕ್ತಿ ಎಂತಲೂ ಭಾವಿಸಲ್ಪಡುತ್ತಿದೆ. ಶುದ್ಧಾದ್ವೈತಿಗಳಲ್ಲಿ ಮಾಯೆಗೆ ಒಂದು ವಿಶೇಷಾರ್ಥವಿದೆ. ಜಗತ್ತು ಸುಳ್ಳೆಂದು ಅವರು ಹೇಳುತ್ತಾರೆ. ಇದೇ ಅವರ ಪ್ರಕಾರ ಮಾಯೆಯು. ಆದರೆ ಜಗತು ಸುಳ್ಳೆಂದು ವೀರಶೈವರು ಭಾವಿಸುವದಿಲ್ಲ. ಅದಕ್ಕೆ ಅಸ್ತಿತ್ವವಿದೆ ಎಂದು ಅವರು ಭಾವಿಸುತ್ತಾರೆ. ಕ್ರಿಯೆಗಳಲ್ಲಿ ಕೆಡಕು ಮತ್ತು ಒಳ್ಳೆಯದು ಹೀಗೆ ಇರುವದು ಕಂಡುಬರುತ್ತಿದೆ. ಕೆಡುಕುತನಕ್ಕೆ ಪ್ರೇರಣೆ ಮಾಡುವಂತಹದೇ ಮಾಯೆಯು. ವೀರಶೈವನು ಇದನ್ನು ಮೊದಲು ದೂರಮಾಡಬೇಕು. ಇದನ್ನು ದೂರಮಾಡಿದಲ್ಲಿ ಅವನು ಲಿಂಗಧಾರಣೆಗೆ ಅರ್ಹನಾಗುತ್ತಾನೆ. ವಚನಕಾರರು ಸಂಸಾರಹೇಯಸ್ಥಲ, ಮಾಯಾವಿಡಂಬನಸ್ಥಲ ಎಂದು ಒಂದು ಸ್ಥಲವನ್ನು ಕಲ್ಪಿಸಿ ಮನುಷ್ಯನು ಈ ಮಾಯೆಯಿಂದ ದೂರಾಗಬೇಕೆಂದು ಮೊದಲು ಉಪದೇಶಿಸುವದುಂಟು.

(೧೦) ಸಂಸಾರಃ— ಸಂಸಾರವು ಮಾಯಾಮಯವಾದದ್ದೆಂದು ವಚನಕಾರರು ಅದನ್ನು ವರ್ಣಿಸುತ್ತಾರೆ. ಅದು ತ್ಯಾಜ್ಯವೆಂತಲೂ

ಅವರು ಹೇಳುವದುಂಟು. ಆದರೆ ಅದು ಕೆಡಕಿನ ಕಡೆಗೆ ಒಯ್ಯುತ್ತಿದ್ದರೆ ಮಾತ್ರ ಅದನ್ನು ತ್ಯಜಿಸಬೇಕು. ಹೀಗೆ ಅವರು ಹೇಳುವಲ್ಲಿ ಹೆಂಡಿರು, ಮಕ್ಕಳು, ಬಂಧು ಬಳಗ, ಸ್ನೇಹಿತರು ಇವರನ್ನು ಬಿಟ್ಟುಬಿಡಬೇಕೆಂದು ಅವರ ಅಭಿಪ್ರಾಯವಲ್ಲ. ಇವರೊಡನೆ ಇದ್ದರೂ ಕೂಡ, ಮೋಕ್ಷ ಹೊಂದಲು ಶಕ್ಯವಿದೆಂದು ಅವರ ಅಭಿಪ್ರಾಯವಿರುತ್ತದೆ. ಆದುದರಿಂದ ಇವರು ತ್ಯಾಜ್ಯರಲ್ಲ. ಅವರ ದೃಷ್ಟಿಯಲ್ಲಿ ಸಂಸಾರವೆಂದರೆ ವಿಷಯ ಲಂಪಟತನವು. ಇದು ಮಾತ್ರ ತ್ಯಾಜ್ಯವು. ವಿಷಯಾಸಕ್ತನಾಗದೆ ಸದ್ಗುಣವುಳ್ಳವನಾಗಿ ಆಚರಿಸಿದ್ದಾದರೆ ಇದು ಮನುಷ್ಯನನ್ನು ಉಚ್ಚಸ್ಥಾನಕ್ಕೆ ಒಯ್ಯುತ್ತಿದೆ. ಸಂಸಾರದಲ್ಲಿದ್ದರೂ ಹೀಗೆ ಆಚರಿಸಬೇಕೆಂದು ವಚನಕಾರರು ಸಂಸಾರಹ್ಯೇಯಸ್ಥಲದಲ್ಲಿ ಉಪದೇಶಿಸುತ್ತಾರೆ.

(೧೧) ನಾದ ಬಿಂದು ಕಲೆಗಳುಃ – ಶೂನ್ಯ ಅಥವಾ ಬಯಲು ಇದರಲ್ಲಿ ಮೊದಲು ನಾದವು ಉತ್ಪನ್ನವಾಗುತ್ತಿದೆ. ಜಗತ್ತು ಉಂಟಾಗಬೇಕೆಂಬ ಅಭಿಲಾಷೆಯೇ ಇದಕ್ಕೆ ಕಾರಣವು. ಈ ಅಭಿಲಾಷೆಯೇ ಚಿತ್ತೆನಿಸಿಕೊಳ್ಳುತ್ತಿದೆ. ನಾದವೆಂದರೆ ಒಂದು ಬಗೆಯ ಅಲುಗಾಡುವಿಕೆಯು (*Vibration*). ಈ ಅಲುಗಾಡುವಿಕೆಯಿಂದ ಬಿಂದುವು ಉದಯವಾಗುತ್ತಿದೆ. ಬಿಂದುವು ವಸ್ತುವೆಂದು ಹೇಳಬಹುದು. ಅದು ಸ್ಥೂಲವು. ಅದರಲ್ಲಿ ನಾದವಿದೆ. ಈ ನಾದವು ಈ ಬಿಂದುವಿಗೆ ಚೈತನ್ಯಕೊಡುತ್ತಿದೆಂದು ಹೇಳಬಹುದು. ಇವೆರಡೂ ಪರಸ್ಪರಾವಲಂಬಿಗಳು. ಅವು ಒಂದನ್ನೊಂದು ಬಿಟ್ಟು ಪ್ರಕಟವಾಗಲಾರವು. ಇವೆರಡೂ ಪ್ರಕಟವಾದ ಕೂಡಲೆ ಕಲೆಯು ಆ ವಸ್ತುವಿನಲ್ಲಿ ಉತ್ಪನ್ನವಾಗುತ್ತಿದೆ. ಈ ಕಲೆಯ ಮೂಲಕವಾಗಿಯೇ ವಸ್ತುವಿನ ಗುಣ, ರೂಪ, ಮೊದಲಾದವುಗಳು ತೋರುತ್ತಿವೆ. ಈ ನಾದ ಬಿಂದು ಕಲೆಗಳೆಲ್ಲವೂ ಯಾವಾಗಲೂ ಒಟ್ಟುಗೂಡಿ ವ್ಯವಹರಿಸುತ್ತಿವೆ. ಆದರೆ ಅವು ಮೂಲಚಿತ್ತುವಿನಲ್ಲಿ ಬೆರೆತಿರುತ್ತವೆ. ಈ ನಾಲ್ಕೂ ಕೂಡಿದಲ್ಲಿ ಒಂದು ಪದಾರ್ಥವಾಗುತ್ತಿದೆ. ಮೂಲ ಚಿತ್ತುವಿನ ಮೇಲೆಯೇ ಪದಾರ್ಥಗಳ ವೈಶಿಷ್ಟ್ಯವು ಅವಲಂಬಿಸಿದೆ. ಪದಾರ್ಥಗಳ ವೈಶಿಷ್ಟ್ಯದ ವ್ಯವಹರಣೆಯು ನಾದಬಿಂದು ಕಲೆಗಳ ಮುಖಾಂತರವಾಗಿಯೇ ನಡೆಯು



ತ್ತಿದೆ. ಜಗತ್ತಿನಲ್ಲೆಲ್ಲ ಈ ನಾದ ಬಿಂದು ಕಲೆಗಳು ಪಸರಿಸಿರುತ್ತವೆ. ಅವಿಲ್ಲದೆ ಜಗತ್ತು ನಡೆಯಲಾರದು. ಅವು ಸಣ್ಣದರಲ್ಲಿಯೂ ದೊಡ್ಡದರಲ್ಲಿಯೂ ಇರುತ್ತಿವೆ. ಆದರೆ ಪದಾರ್ಥಗಳ ಭಿನ್ನತೆಗಳು ಅಥವಾ ವೈಶಿಷ್ಟ್ಯಗಳು ಮೂಲ ಚಿತ್ತುವಿನ ಮೇಲೆಯೇ ಅವಲಂಬಿಸಿರುತ್ತವೆ. (ಹೆಚ್ಚಿನ ವಿವರಣೆಗೋಸ್ಕರ ವಚನಶಾಸ್ತ್ರಸಾರ ಭಾಗ ೨ ಸೃಷ್ಟಿಯ ರಚನೆ ಈ ವಿಷಯದಲ್ಲಿ ಹೇಳಿದ ವಚನಗಳನ್ನು ಮತ್ತು ಅನುಬಂಧ ೧ (ಅ) ನೋಡಬೇಕು.)

(೧೨) ಶಕ್ತಿಃ— ಜಗತ್ತಿನಲ್ಲಿ ಮತ್ತು ಜಗತ್ತಿನ ಪ್ರತಿಯೊಂದು ಪದಾರ್ಥದಲ್ಲಿ ಶಕ್ತಿಯು (*energy*) ಇದೆ. ಕೆಲವೊಂದು ಪರಿಸ್ಥಿತಿಯಲ್ಲಿ ಬಯಲಿನಲ್ಲಿ ಅದು ಪ್ರಕಟವಾಗುತ್ತದೆ. ಆಗ ಅದನ್ನು ಚೈತನ್ಯವೆಂದು ಹೇಳುತ್ತೇವೆ. ಮೊದಲು ಬಯಲು ಸ್ಥಿತಿಯಲ್ಲಿ ಅದು ತೋರುವದಿಲ್ಲ. ಅದು ಗುಪ್ತವಾಗಿರುತ್ತದೆ. ಆದರೂ ಅದು ಇರುತ್ತದೆ. ಅದು ಜೀವ ಇದರ ಮೂಲಕ ಜಗತ್ತಿನಲ್ಲಿ ಪ್ರವಹಿಸುತ್ತದೆ. ಈ ಶಕ್ತಿಯ ಮೂಲಕವಾಗಿಯೇ ಜೀವನ ಅಸ್ತಿತ್ವವನ್ನು ಕಂಡು ಹಿಡಿಯುತ್ತೇವೆ. ಜಗತ್ತಿನ ವ್ಯಾಪಾರಗಳು ಅದರ ಮೂಲಕವಾಗಿಯೇ ನಡೆಯುತ್ತಿವೆ. ಶಕ್ತಿಯು ಸರಿಯಾದ ಮತ್ತು ಯೋಗ್ಯವಾದ ಹಾದಿಯಿಂದ ನಡೆಯತಕ್ಕದ್ದು. ಅಂದರೆ ಅದರಿಂದ ಪ್ರಯೋಜನವುಂಟು. ಮತ್ತು ತನಗೂ ಜಗತ್ತಿಗೂ ಹಿತವಿದೆ. ಆದರೆ ಅದು ಸರಿಯಾದ ಹಾದಿಯಿಂದ ಹೋಗದಿದ್ದರೆ, ಅದರಿಂದ ಕೇಡುಂಟು. ಆದ್ದರಿಂದ ವಚನಕಾರರು ಶಕ್ತಿಯಲ್ಲಿ ಎರಡು ವಿಭಾಗಗಳನ್ನು ಮಾಡುತ್ತಾರೆ. ಒಂದು ಕೆಡಕು ಮತ್ತೊಂದು ಒಳ್ಳೆಯದು. ವಚನಕಾರರು ಷಟ್‌ಸ್ಥಲಗಳ ಪ್ರಕಾರ ತಮ್ಮ ವಿಷಯಗಳನ್ನು ವಿವೇಚಿಸುವದುಂಟು. ಆದ್ದರಿಂದ ಅವರು ಶಕ್ತಿಯಲ್ಲಿ ಇವುಗಳಿಗನುಸರಿಸಿ ಆರು ಪ್ರಕಾರಗಳನ್ನು ಮಾಡಿದ್ದಾರೆ. ಅವು ಯಾವವೆಂದರೆಃ - (೧) ಚಿತ್ ಶಕ್ತಿ (೨) ಪರಾಶಕ್ತಿ (೩) ಆದಿಶಕ್ತಿ (೪) ಇಚ್ಛಾಶಕ್ತಿ (೫) ಜ್ಞಾನಶಕ್ತಿ (೬) ಕ್ರಿಯಾಶಕ್ತಿ. ಶಕ್ತಿಯು ಪ್ರಕಟವಾಗಲಿಕ್ಕೆ ಯಾವಾಗಲೂ ಅದಕ್ಕೆ ಅಂಗವು ಬೇಕು. ಅಂದರೆ ಅದಕ್ಕೆ ಒಂದು ಸ್ಥೂಲವಾದ ಶರೀರವು ಬೇಕು. ವಿದ್ಯುಲ್ಲತೆಯು ಜಗತ್ತಿನಲ್ಲೆಲ್ಲ ತುಂಬಿದೆ. ಆದರೆ ಅದು ಪ್ರಕಟವಾಗಲಿಕ್ಕೆ ಒಂದು ತಂತಿಯು ಬೇಕು.

ಹಾಗೆಯೇ ಶಕ್ತಿಯು ಪ್ರಕಟತೆಗೆ ಒಂದು ಅಂಗವು ಬೇಕು. ಅಂಗದಲ್ಲಿ
ಈ ಶಕ್ತಿಯು ಪ್ರವಹಿಸಿದ ಕೂಡಲೆ ಅದರಿಂದ ಕ್ರಿಯೆಗಳಾಗುತ್ತವೆ. ಈ
ಅಂಗವಲ್ಲಿ ಅಥವಾ ಶರೀರದಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ, ಎಂಬ ಶರೀರಗ
ಳವೆ. ಆ ಶರೀರಗಳಲ್ಲೆಲ್ಲ ಈ ಶಕ್ತಿಯು ತೋರುತ್ತಿದೆ. ಹೀಗೆ ತೋರಿದ
ಕೂಡಲೆ ಆ ಶರೀರಗಳ ಗುಣಧರ್ಮಗಳು ಅದರ ಮೂಲಕ ಪ್ರಕಟವಾ
ಗುತ್ತವೆ. ಈ ಶಕ್ತಿಯು ಮನುಷ್ಯನಲ್ಲಷ್ಟೇ ಅಲ್ಲ, ಜಗತ್ತಿನಲ್ಲೆಲ್ಲ ಪಸರಿಸಿ
ರುತ್ತದೆ. ಆದ್ದರಿಂದ ಜಗತ್ತು ಶಕ್ತಿವಿಶಿಷ್ಟವಾಗಿರುತ್ತದೆಂದು ಹೇಳಲ್ಪ
ಡುತ್ತಿದೆ.

(೧೩) ಭಕ್ತಿಃ— ಶಕ್ತಿಯು ಸರಿಯಾದ ಮಾರ್ಗದಿಂದ ಪ್ರವಹಿಸಿ
ದಲ್ಲಿ ಅದು ಭಕ್ತಿ ಎಂದು ಹೇಳಲ್ಪಡುತ್ತಿದೆ. ಯಾಕಂದರೆ ಈ ಭಕ್ತಿಯ
ಲ್ಲಿಯೂ ಶಕ್ತಿ ಇದೆ. ಷಟ್‌ಸ್ಥಲಗಳ ಪ್ರಕಾರ ಭಕ್ತಿಯು ಆರು ವಿಧವಾ
ಗಿರುತ್ತದೆ. ಈ ವಿಧಗಳು ಯಾವವೆಂದರೆಃ— (೧) ಶ್ರದ್ಧಾಭಕ್ತಿ (೨) ನಿಷ್ಠಾ
ಭಕ್ತಿ, (೩) ಅವಧಾನಭಕ್ತಿ (೪) ಅನುಭಾವಭಕ್ತಿ (೫) ಸುಜ್ಞಾನಭಕ್ತಿ
(೬) ಸಮರಸಭಕ್ತಿ. ವಚನಕಾರರು ಭಕ್ತಿ ಇದಕ್ಕೆ ಬಹು ವ್ಯಾಪಕಾ
ರ್ಥವನ್ನು ಕೊಟ್ಟಿದ್ದಾರೆ. ಭಕ್ತಿಮಾರ್ಗ, ಜ್ಞಾನಮಾರ್ಗ, ಕರ್ಮಮಾರ್ಗ
ಎಂದು ಹಿಂದೂ ಧರ್ಮಶಾಸ್ತ್ರಕಾರರು ಹೇಳುವದುಂಟು. ಆದರೆ
ಅವರು ಹೇಳುವ ಈ ಭಕ್ತಿಮಾರ್ಗವು ವಚನಕಾರರ ಪ್ರಕಾರ ಶ್ರದ್ಧಾ
ಭಕ್ತಿ ಮತ್ತು ನಿಷ್ಠಾಭಕ್ತಿ ಇವುಗಳಲ್ಲಿ ಮಾತ್ರ ಬರುತ್ತಿದೆ. ವಚನ
ಕಾರರು ಈ ಪ್ರಕಾರ ಭಕ್ತಿ ಇದಕ್ಕೆ ವ್ಯಾಪಕಾರ್ಥ ಕೊಟ್ಟಿದ್ದಾರೆ. ಸರಿಯಾದ
ಅಂದರೆ ಒಳ್ಳೆಯ ರೀತಿಯಿಂದ ನಡೆಯಿಸಿಕೊಂಡು ಹೋಗುವ ಯಾವ
ಮಾರ್ಗವಾದರೂ ಕೂಡ ಭಕ್ತಿ ಎಂದು ಭಾವಿಸಿ ಅವರು ವಿವೇಚಿಸು
ತ್ತಾರೆ. ಜ್ಞಾನವು ಸರಿಯಾದ ಮಾರ್ಗದಿಂದ ಪ್ರವಹಿಸುತ್ತ ಪರಮಾತ್ಮ
ನೆಡೆಗೆ ಮನುಷ್ಯನನ್ನು ಒಯ್ದಿದ್ದಾದರೆ ಅದೂ ಕೂಡ 'ಸುಜ್ಞಾನಭಕ್ತಿ'
ಎಂದು ವಚನಕಾರರು ತಮ್ಮ ಷಟ್‌ಸ್ಥಲ ವಿವೇಚನೆಯಲ್ಲಿ ಹೇಳುತ್ತಾರೆ.

(೧೪) ಪ್ರವೃತ್ತಿ:— ಶಕ್ತಿಯು ಸರಿಯಾದ ಮಾರ್ಗದಿಂದ ಹೋದ
ದ್ದಾದರೆ ಮಾತ್ರ ಅದರ ಮೂಲಕ ಮನುಷ್ಯನ ಗುಣಗಳು ವಿಕಾಸ ಹೊಂ



ದುತ್ತವೆ. ಉದಾಹರಣಾರ್ಥವಾಗಿ ಚಿಕ್ಕಂದಿನಲ್ಲಿ ಮಕ್ಕಳ ಬುದ್ಧಿಯು ಪ್ರಕ
ಟವಾಗಿರುವದಿಲ್ಲ. ಆದರೆ ಮುಂದೆ ಅದು ಬೆಳವಣಿಗೆಯನ್ನು ಹೊಂದುತ್ತ
ಹೋಗುತ್ತದೆ. ಇದು ಅವರ ಪ್ರವೃತ್ತಿಯು. ಇಂಥ ಪ್ರವೃತ್ತಿಯ ಮೂಲ
ಕವೇ ಮನುಷ್ಯನಲ್ಲಿ ಪರಿಪೂರ್ಣತೆಯು ಕ್ರಮೇಣ ಉಂಟಾಗುತ್ತ
ಹೋಗುತ್ತದೆ. ಆಗ ಅವನ ಮನಸ್ಸು, ಬುದ್ಧಿ, ಚಿತ್ತವೃತ್ತಿ ಮೊದಲಾದ
ವುಗಳೂ ಅವನ ಸ್ಥೂಲ, ಸೂಕ್ಷ್ಮ ಕಾರಣ ಶರೀರಗಳೂ ಉಚ್ಚ ಸ್ಥಿತಿ
ಯನ್ನು ಹೊಂದುತ್ತ ಹೋಗುತ್ತವೆ. ವಚನಕಾರರು ತಾವು ಹೇಳುವ
ಷಟ್‌ಸ್ಥಲಗಳ ಆಚರಣೆಗಳಂತೆ ನಡೆದದ್ದಾದರೆ ಈ ಪ್ರವೃತ್ತಿಯು ಉಂಟಾ
ಗುತ್ತದೆಂದು ಅವರ ಅಭಿಪ್ರಾಯ. ಇದಕ್ಕೆ ಇಂಗ್ಲಿಷದಲ್ಲಿ *Evolution*
ಎಂದು ಹೇಳಬಹುದು.

(೧೫) ನಿವೃತ್ತಿ:— ಪ್ರವೃತ್ತಿಯು ಪರಿಪೂರ್ಣತೆಯನ್ನು ಹೊಂದಿದ
ಬಳಿಕ ನಿವೃತ್ತಿಯು ತಲೆದೋರುತ್ತದೆ. ಇದಕ್ಕೆ ಇಂಗ್ಲೀಷದಲ್ಲಿ *invo-*
*lution* ಎಂದು ಹೇಳಬಹುದು. ಆಗ ಸ್ಥೂಲ ಸೂಕ್ಷ್ಮ ಕಾರಣ ಶರೀರಗ
ಳಲ್ಲಿ ಪರಸ್ಪರ ಏಕರೂಪತೆಯು ಉಂಟಾಗುತ್ತದೆ. ಅಂದರೆ ಸ್ಥೂಲ ಶರೀರದ
ಮೇಲಿನ ಪರಿಣಾಮಗಳು ಕೂಡಲೆ ಸೂಕ್ಷ್ಮ ಶರೀರದ ಮೇಲೆ ಮತ್ತು ಕಾರಣ
ಶರೀರಗಳ ಮೇಲೆ ಆಗುತ್ತವೆ. ಕಾರಣ ಶರೀರದಿಂದ ಹೊರಟ ಚೈತನ್ಯವು
ಕೂಡಲೆ ಸೂಕ್ಷ್ಮ ಮತ್ತು ಸ್ಥೂಲ ಶರೀರಗಳ ಮೇಲೆ ಆಗುತ್ತದೆ. ಈ
ಸ್ಥಿತಿಯಲ್ಲಿ ಮನುಷ್ಯನ ಕ್ರಿಯೆಗಳು ಸರಿಯಾಗಿ ನಡೆಯುತ್ತವೆ. ಅವನಲ್ಲಿ
ಕ್ಲೇಶ, ದುಃಖ ಮೊದಲಾದವುಗಳು ಉಂಟಾಗಲಾರವು. ಆಗ ಅವನ
ವ್ಯಾಪಾರಗಳು ಒಂದರಲ್ಲಿ ಒಂದು ಬೆರೆದು ಕಡೆಗೆ ಅವನು ಪರಮಾತ್ಮನಲ್ಲಿ
ಅಥವಾ ನಿರವಯದಲ್ಲಿ ಬೆರೆತು ಹೋಗುತ್ತಾನೆ. (ವಚನಶಾಸ್ತ್ರಸಾರ
ಭಾಗ ೨ ಪುಟ ೩೩೦ ರಿಂದ ೩೩೪ ನೋಡಿರಿ.)

(೧೬) ಲಿಂಗಃ— ಅಂಗದಲ್ಲಿ ಶಕ್ತಿ ಇದೆ. ಈ ಶಕ್ತಿಯ ಮೂಲ
ಕವೇ ಅಂಗದ ವ್ಯಾಪಾರಗಳು ನಡೆಯುತ್ತಿವೆ. ಈ ಶಕ್ತಿಯ ಮೂಲಕವೇ
ಜೀವನು ವ್ಯವಹರಿಸುತ್ತಾನೆ. ಅವನ ಈ ಶಕ್ತಿಯು ಸರಿಯಾದ ಮಾರ್ಗ

ವಿಂದ ನಡೆದಲ್ಲಿ ಆ ಮಾರ್ಗವು ಭಕ್ತಿಯುಕ್ತವಾದುದೆಂದು ಹೇಳಲ್ಪಡುವದುಂಟು. ಇಂಥ ಭಕ್ತಿಯುಕ್ತ ಕಾರ್ಯಗಳ ಮೂಲಕವೇ ಈ ಶಕ್ತಿಯಲ್ಲಿ ಲಿಂಗವು ತಲೆದೋರುತ್ತದೆ. ಆಗ ಪ್ರಕಟವಾದ ಲಿಂಗದ ವಶದಿಂದ ಹೀಗೆ ಇಂಥ ಅಂಗವು ಚಲನೆಹೊಂದುತ್ತದೆ. ಆದ್ದರಿಂದ ಲಿಂಗವೆಂದರೆ (*Spiritual energy*) ಎಂದು ಹೇಳಬಹುದು. ಅದು ಪರಮಾತ್ಮನ ಅಂಶವೇ ಇರುತ್ತದೆ. ಮುಂದೆ ಭಕ್ತಿಯು ಅಂಗದಲ್ಲಿ ಹೆಚ್ಚುತ್ತ ಹೋದಲ್ಲಿ ಲಿಂಗದ ಪ್ರಜ್ವಲನೆಯಾದರೂ ಹೆಚ್ಚುತ್ತ ಹೋಗುತ್ತಿದೆ. ಹೀಗೆ ಮನುಷ್ಯನಲ್ಲಿ ಪ್ರಗತಿ ತಲೆದೋರುತ್ತದೆ. ಅದು ಬೆಳೆಯುತ್ತ ಹೋದಲ್ಲಿ ಜೀವನು ಕಡೆಗೆ ಪರಮಾತ್ಮನಲ್ಲಿ ಅಥವಾ ನಿರವಯದಲ್ಲಿ ಅಥವಾ ಶೂನ್ಯದಲ್ಲಿ ಬೆರೆತುಹೋಗುತ್ತಾನೆ. ಇದೇ ಲಿಂಗಾಂಗ ಸಾಮರಸ್ಯವು ಅಥವಾ ಮೋಕ್ಷವು ಅಥವಾ ಐಕ್ಯವು ಅಥವಾ ಶಿವೈಕ್ಯವು, ಲಿಂಗೈಕ್ಯ ಸ್ಥಿತಿಯು. ವಚನಕಾರರು ಈ ಲಿಂಗ ವಿಕಾಸದ ಬಗ್ಗೆ ತಮ್ಮ ವಿಚಾರಗಳನ್ನು ಷಟ್‌ಸ್ಥಲಕ್ಕೆ ಅನುಸರಿಸಿ ಹೇಳುತ್ತಾರೆ. ಆದ್ದರಿಂದ ಲಿಂಗದಲ್ಲಿ ಅವರು ಆರು ವಿಭಾಗಗಳನ್ನು ಮಾಡುತ್ತಾರೆ. ಅವು ಯಾವವೆಂದರೆ:— (೧) ಆಚಾರಲಿಂಗ (೨) ಗುರುಲಿಂಗ (೩) ಶಿವಲಿಂಗ (೪) ಜಂಗಮಲಿಂಗ (೫) ಪ್ರಸಾದಲಿಂಗ (೬) ಮಹಾಲಿಂಗ. ಮನುಷ್ಯನಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿರುವವಷ್ಟೇ. ಅವುಗಳಿಗನುಸರಿಸಿಯೂ ಲಿಂಗದಲ್ಲಿ ಮೂರು ವಿಭಾಗಗಳನ್ನು ಮಾಡುತ್ತಾರೆ. ಆಗ ಅವಕ್ಕೆ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂದು ಅನುಕ್ರಮವಾಗಿ ಹೆಸರುಗಳಿವೆ. ಇಷ್ಟಲಿಂಗಕ್ಕೆ ಕ್ರಿಯಾಲಿಂಗವೆಂಬ ಹೆಸರೂ ಇದೆ. ಈ ಇಷ್ಟಲಿಂಗವು ಕ್ರಿಯೆಗೆ ಸಂಬಂಧಪಡುತ್ತಿದೆ. ಪ್ರಾಣಲಿಂಗವು ಮನಸ್ಸಿಗೆ ಸಂಬಂಧಪಡುತ್ತಿದೆ. ಭಾವಲಿಂಗವು ಜ್ಞಾನಕ್ಕೆ ಸಂಬಂಧಪಡುತ್ತಿದೆ. ಈ ಕಡೆಯ ಲಿಂಗಕ್ಕೆ ಜ್ಞಾನಲಿಂಗ, ಸುಜ್ಞಾನಲಿಂಗ ಅಥವಾ ತೃಪ್ತಿಲಿಂಗ ಎಂಬ ಹೆಸರುಗಳೂ ಉಂಟು. ವೀರಶೈವನು ತನ್ನಲ್ಲಿಯೇ ಈ ಲಿಂಗವನ್ನರಿಯತಕ್ಕದ್ದು. ಆದ್ದರಿಂದ ಬಾಹ್ಯಲಿಂಗಗಳು ಅಂದರೆ ಸ್ಥಾವರ ಲಿಂಗಗಳು ಅವನಿಗೆ ಅರ್ಹವಾದುವಲ್ಲ. ಲಿಂಗದ



ವಿವೇಚನೆಯಲ್ಲಿ ಯಾವತರದ ಅಶ್ಲೀಲ ವಿಚಾರಗಳನ್ನು ವಚನಕಾರರು ಪ್ರಕಟಮಾಡುವದಿಲ್ಲ. ಅಷ್ಟಾವರಣಗಳಲ್ಲಿ ಲಿಂಗವೆಂಬ ಹೆಸರು ಬರುವದುಂಟು. ಅದು ಪರಮಾತ್ಮನ ಗುರುತು (*Symbol*) ಮಾತ್ರ ಇರುತ್ತದೆ. ಅದಕ್ಕೆ ಇಷ್ಟಲಿಂಗವೆಂಬ ಹೆಸರು. ಆದರೆ ಅದರ ಅಲ್ಲಿಯ ವಿವೇಚನೆಗಳು ಕೇವಲ ಆಚಾರಕ್ಕೆ ಸಂಬಂಧಿಸುತ್ತವೆ. ಆದರೆ ೬ ಸ್ಥಲಗಳು ಮತ್ತು ೩ಸ್ಥಲಗಳು ಯಾವಾಗಲೂ ತಾತ್ವಿಕ ವಿವೇಚನೆಗೆ ಸಂಬಂಧಪಟ್ಟವು. ಆದ್ದರಿಂದ ಅಲ್ಲಿ ಲಿಂಗದ ವಿಚಾರಗಳನ್ನು ಷಟ್‌ಸ್ಥಲದ ತತ್ವಗಳನುಸರಿಸಿ ವಚನಕಾರರು ತಾತ್ವಿಕವಾಗಿ ನಿರೂಪಿಸುವದುಂಟು.

(೧೭) ಸ್ಥಲಗಳು:— ಸ್ಥಲ ಇದು ವೀರಶೈವ ಗ್ರಂಥಗಳಲ್ಲಿ ಕಂಡುಬರುವ ವಿಶಿಷ್ಟ ಶಬ್ದವಾಗಿದೆ ವೀರಶೈವರು ತಮ್ಮ ವಿಷಯ ವಿವೇಚನೆಯನ್ನು ಕೆಲವೊಂದು ಸ್ಥಲವನ್ನನುಸರಿಸಿ ಮಾಡುವದುಂಟು. ಅವರು ಮನುಷ್ಯನಲ್ಲಿರುವ ಗುಣಗಳು, ಇಂದ್ರಿಯಗಳು, ಶಕ್ತಿಗಳು ಇವೇ ಮೊದಲಾದವುಗಳಲ್ಲಿ ಅನೇಕ ವಿಭಾಗಗಳನ್ನು ಮಾಡುತ್ತಾರೆ. ಈ ಪ್ರಕಾರ ಮಾಡಿ ಅವರು ಅವುಗಳನ್ನು ಕೆಲವೊಂದು ಸ್ಥಳಕ್ಕೆ ಸಂಬಂಧಿಸುತ್ತಾರೆ. ಹೀಗೆ ಸಂಬಂಧಿಸುವಲ್ಲಿ ಅವರು ಅವುಗಳಲ್ಲಿರುವ ಕೆಲವು ವಿಶಿಷ್ಟ ಗುಣಗಳನ್ನು ಕಂಡು ಹಿಡಿಯಬೇಕಾಗುತ್ತದೆ. ಹೀಗೆ ಕಂಡುಹಿಡಿದು ಅವುಗಳ ವಿವೇಚನೆ ಮಾಡುವಲ್ಲಿ ಅವು ಇಂಥದೊಂದು ಸ್ಥಳಕ್ಕೆ ಸಂಬಂಧಿಸಿರುತ್ತವೆಂದು ಹೇಳುತ್ತಾರೆ. ಈ ರೀತಿ ಅವರು ವಿವೇಚನೆ ಮಾಡುವದರಿಂದ ವೀರಶೈವ ಧರ್ಮಕ್ಕೆ ಒಂದು ಸಿದ್ಧಾಂತದ ಸ್ವರೂಪ ಪ್ರಾಪ್ತವಾಗಿದೆ. ಉದಾ:- ಅವರು ಮೊದಲು ಅಂಗ ಲಿಂಗ ಸ್ಥಲಗಳೆಂದು ಎರಡು ವಿಭಾಗಗಳು, ಆಮೇಲೆ ಅವುಗಳಲ್ಲಿ ಮೂರು ವಿಭಾಗಳು, ಆಮೇಲೆ ಅವುಗಳಲ್ಲಿ ಆರು, ಹದಿನೆಂಟು, ಮೂವತ್ತಾರು, ಇನ್ನೂರು ಹದಿನಾರು ಹೀಗೆ ಅನೇಕ ವಿಭಾಗಗಳನ್ನು ಮಾಡುವದುಂಟು. ಈ ವಿಭಾಗಗಳೆಲ್ಲ ಅವರು ಸ್ಥಲಗಳೆಂದು ಹೇಳುತ್ತಾರೆ. ಈ ಆಯಾ ಸ್ಥಲಗಳಿಗೆಲ್ಲ ವಿಶಿಷ್ಟ ಹೆಸರುಗಳಿವೆ. ಆದರೂ ಒಂದು ವಿಭಾಗದೊಳಗಿನ ಗುಣಗಳು ಎರಡನೆಯ ವಿಭಾಗಗಳ

ಲ್ಲಿಯೂ ಆಗಿಂದಾಗ್ಗೆ ಕಂಡುಬರುವದುಂಟು. ಆದರೂ ಒಂದು ವಿಭಾಗದ
ಲ್ಲಿಯ ವಿಶಿಷ್ಟ ಗುಣಗಳ ಮೇಲೆ ಅವರು ಹೀಗೆ ತಮ್ಮ ಸ್ಥಲಗಳನ್ನು
ವಿಂಗಡಿಸುವದುಂಟು. ಉದಾ:— ಮನುಷ್ಯನಲ್ಲಿ ಸ್ಥೂಲ, ಸೂಕ್ಷ್ಮ,
ಕಾರಣ ಶರೀರಗಳಿವೆ. ಅವುಗಳಿಗನುಸರಿಸಿ ಮೊದಲು ೩ ಸ್ಥಲ, ಆಮೇಲೆ
೬ ಸ್ಥಲಗಳು ನಿರ್ಮಿಸಲ್ಪಟ್ಟಿವೆ. ಈ ಆರು ಸ್ಥಲಗಳಲ್ಲಿ ಮೊದಲನೆಯ ಭಕ್ತ
ಮಹೇಶ್ವರ ಸ್ಥಲಗಳು ಸ್ಥೂಲ ಶರೀರಕ್ಕೆ ಸಂಬಂಧಿಸಿವೆ. ಇವೆರಡರಲ್ಲಿಯ
ಮಹೇಶ್ವರ ಸ್ಥಲವಲ್ಲಿ ಕೆಲವಂಶದಿಂದ ಅದರ ಹಿಂದಿನ ಮತ್ತು ಮುಂದಿನ
ಸ್ಥಲದ ಗುಣಗಳೂ ಬಂದಿರಬಹುದು. ಯಾಕೆಂದರೆ ಅದು ಭಕ್ತಸ್ಥಲ
ಮತ್ತು ಪ್ರಸಾದಿಸ್ಥಲ ಇವೆರಡಕ್ಕೆ ಮಧ್ಯವರ್ತಿಯಾಗಿದೆ. ಆದ್ದರಿಂದ ಈ
ಸ್ಥಲಗಳ ವಿವೇಚನೆಯಲ್ಲಿ ಸ್ಪಷ್ಟ ಭೇದಗಳು ತೋರುವದಿಲ್ಲ. ಆದರೂ
ಆಯಾ ಸ್ಥಲಗಳಲ್ಲಿ ಅವವುಗಳ ಮುಖ್ಯ ಗುಣಗಳನ್ನು ಕಂಡುಹಿಡಿಯ
ತಕ್ಕದ್ದು. ಇದರಿಂದ ವೀರಶೈವ ವಚನಕಾರರ ವಾಙ್ಮಯದಲ್ಲಿ ಅನೇಕ
ಸ್ಥಲಗಳು ಉತ್ಪನ್ನವಾಗಿವೆ. ಅವುಗಳ ಪರಸ್ಪರ ಸಂಬಂಧವನ್ನು ವಿಷಯ
ವಿವರಣೆಯ ಪ್ರಕಾರ ಕಂಡುಹಿಡಿಯಬೇಕಾಗುತ್ತದೆ.

(೧೮) ಶಿವ, ಪರವಸ್ತು, ನಿಜ, ತತ್ವ, ನಿಜತತ್ವ, ಶಿವತತ್ವ,
ಪರತತ್ವ, ಪರಶಿವ, ತತ್ವಸ್ವರೂಪ, ನಿರಾಲಂಬ, ಅನಿರ್ವಾಚ್ಯ, ನಿರಾಳ,
ಸುರಾಳ, ಪರಬ್ರಹ್ಮ ವಸ್ತು, ಪರಮಾತ್ಮ:— ಈ ಶಬ್ದಗಳೆಲ್ಲವೂ ಪರ
ಮಾತ್ಮ ಅಥವಾ ದೇವರ ದ್ಯೋತಕವಾಗಿವೆ. ಪರಮಾತ್ಮನು ಯಾವ
ಸ್ವರೂಪವುಳ್ಳವನಾಗಿದ್ದಾನೆಂಬುದನ್ನು ಅವು ವ್ಯಕ್ತಮಾಡುತ್ತವೆ. ಹಿಂದೂ
ಧರ್ಮದ ಮೇರೆಗೆ ಪರಮಾತ್ಮನು ನಿರಾಕಾರನಾಗಿದ್ದಾನೆ. ಆದರೆ ಹಿಂದು
ಗಡೆ ಅವನಿಗೆ ಅನೇಕ ತರದ ರೂಪಗಳು ಕಲ್ಪಿಸಲ್ಪಟ್ಟವು. ಆದರೆ ಇವು
ಗಳನ್ನು ಶಿವಶರಣರು ಅಲ್ಲಗಳೆದಿದ್ದಾರೆ. ಪರಮಾತ್ಮನು ಆಕಾರ ರಹಿ
ತನಾಗಿದ್ದಾನೆಂಬುದೇ ಅವರ ಅಭಿಪ್ರಾಯವು. ಶಿವ ಎಂಬ ಶಬ್ದದಿಂದ ಪರ
ಮಾತ್ಮನನ್ನು ಅವರು ಸಾಮಾನ್ಯವಾಗಿ ಕರೆಯುವದುಂಟು. ಆದರೆ
ಅವನು ಜಗತ್ತಿನಲ್ಲಿ ಕಾಣುವಂಥ ಒಂದು ಬಗೆಯ ವಸ್ತುವಲ್ಲವೆಂಬುದನ್ನು



ತಿಳುಹಲಿಕ್ಕೆ ಅವನು ಪರವಸ್ತು ಎಂದು ಸಂಬೋಧಿಸಿದ್ದಾರೆ. ಅವನು
ಮಾಯಾರಹಿತನೆಂದು ಹೇಳಲು, ನಿಜ ಎಂಬ ಶಬ್ದವನ್ನು ಅವರು ಉಪ
ಯೋಗಿಸುತ್ತಾರೆ. ಅವನು ಸತ್ಯನು, ಸುಳ್ಳಲ್ಲ ಎಂಬುದನ್ನು ಸಹ ತೋರಿಸಲು
ಈ ನಿಜ ಎಂಬ ಶಬ್ದವನ್ನೇ ಉಪಯೋಗಿಸುತ್ತಾರೆ. ಅವನನ್ನು ತತ್ವ
ಎಂತಲೂ ಕರೆದಿದ್ದಾರೆ. ಜಗತ್ತಿನ ವ್ಯಾಪಾರಗಳಲ್ಲೆಲ್ಲ ಯಾವದು
ಅಂತರ್ಭೂತವಾಗಿ ಅವುಗಳನ್ನು ಪ್ರೇರೇಪಿಸುತ್ತದೋ ಅದೇ ತತ್ವ
ವೆಂದು ಹೇಳಬಹುದು. ಇಂಥ ಈ ತತ್ವವನ್ನು ಅನುಸರಿಸಿಯೇ ಈ
ಜಗತ್ತು ನಡೆದಿರುತ್ತದೆ. ಈ ತತ್ವವೇ ಶಿವನು ಅಥವಾ ದೇವರು ಎಂಬ
ಭಾವವು ವಚನಕಾರರ ವಚನಗಳಲ್ಲಿ ದೃಗ್ಗೋಚರವಾಗುತ್ತಿದೆ. ಅದ
ರಿಂದ ದೇವರನ್ನು ನಿಜತತ್ವ, ಶಿವತತ್ವ ಎಂತಲೂ ಕರೆದಿದ್ದಾರೆ.
ಹಾಗೆಯೇ ಪರತತ್ವನೆಂತಲೂ ಕರೆದಿದ್ದಾರೆ. ಅಂದರೆ ದೃಶ್ಯ ಪದಾರ್ಥ
ಗಳಿಗೆ ಸಂಬಂಧಿಸಿದ ತತ್ವವು ಯಾವದಿದೆಯೋ ಅದು ಸ್ಥೂಲತತ್ವ
ವೆಂದು ಎನ್ನಿಸಿಕೊಳ್ಳುವದರಿಂದ, ಇಂಥ ಸ್ಥೂಲ ತತ್ವಕ್ಕೆ ಯಾವದು ಮೇಲಿ
ನದೋ ಯಾವದು ಅತ್ಯಂತ ಸೂಕ್ಷ್ಮವಾದುದೋ ಅದೇ ಶಿವನೆಂದು ಅವರು
ಹೇಳುತ್ತಾರೆ. ಈ ಭಾವದಿಂದ ಅವನು ಪರತತ್ವನೆಂತಲೂ ಹೇಳಿದ್ದಾರೆ.
ಸಾಮಾನ್ಯ ಜನರಲ್ಲಿ ಶಿವನೆಂದರೆ ಪಂಚಮುಖನು, ತ್ರಿನೇತ್ರನು, ವೃಷ
ಭವಾಹನನು, ಸರ್ಪಭೂಷನು, ಇವೇ ಮೊದಲಾದ ಅಭಿಪ್ರಾಯಗಳು
ಇರುತ್ತವೆ. ಆದರೆ ಇವೆಲ್ಲ ಪೌರಾಣಿಕ ಕಲ್ಪನೆಗಳು. ಈ ವಿಚಾರಗಳನ್ನು
ಶಿವಶರಣರು ಒಪ್ಪಿಕೊಳ್ಳುವದಿಲ್ಲ. ಇದನ್ನು ತಿಳುಹಲು, ಪರಶಿವನೆಂ
ತಲೂ ಅವರು ಪರಮಾತ್ಮನನ್ನು ಕರೆದಿದ್ದಾರೆ. ಅಂದರೆ ಇಂಥ ಶಿವನಿಗಿಂ
ತಲೂ ಮೇಲಿನವನು ಅಥವಾ ಸೂಕ್ಷ್ಮನೆಂದು ಅವರ ಅಭಿಪ್ರಾಯವು. ಅವನು
ನಿರಾಲಂಬನೆಂತಲೂ ಹೇಳಿದ್ದಾರೆ. ಎಂದರೆ ಅವನಿಗೆ ಯಾವ ಆಧಾರಗ
ಳಿಲ್ಲ, ಆದರೆ ಅವನೇ ಎಲ್ಲರಿಗೂ ಆಧಾರನು ಎಂಬರ್ಥವಿದೆ. ಅವನು ನಿರಾ
ಳನೆಂತಲೂ ಹೇಳಿದ್ದಾರೆ. ಅಂದರೆ ಸ್ವಚ್ಛವಾದ, ತಿಳಿಯಾದ ವಸ್ತುವು
ಎಂಬ ಅರ್ಥವು. ಬ್ರಹ್ಮ, ಪರಬ್ರಹ್ಮ, ಪರಬ್ರಹ್ಮವಸ್ತು ಈ ಶಬ್ದಗಳು
ಉಪನಿಷತ್ತುಗಳು ಮತ್ತು ಬೇರೆ ವೇದಾಂತ ಗ್ರಂಥಗಳಲ್ಲಿವೆ. ಅವು

ಶಿವಶರಣರ ವಾಕ್ಯಗಳಲ್ಲಿಯೂ ಕೂಡ ಬರುತ್ತವೆ. ಆದರೆ ಅವರು ಅವುಗಳನ್ನು ಅಷ್ಟು ವಿಪುಲವಾಗಿ ಉಪಯೋಗಿಸುವದಿಲ್ಲ. ಆದರೆ ಈ ಶಬ್ದಗಳು ಅವರ ದೃಷ್ಟಿಯಿಂದ ಸಮಾನಾರ್ಥವುಳ್ಳವಾಗಿವೆ. ವಚನಕಾರರಲ್ಲಿ ಶಿವ, ಪರಶಿವ, ದೇವರು ಎಂಬುದು ಶೂನ್ಯ ಸ್ಥಿತಿಗಳ ತರುವಾಯ ಪ್ರಕಟವಾಗುವದೆಂಬ ಅಭಿಪ್ರಾಯವಿದೆ. ಶೂನ್ಯ ಸ್ಥಿತಿಯಲ್ಲಿ ನಾಲ್ಕು ಬಗೆಗಳಿವೆ (ಮುಂದೆ ೨೦ನೇ ನಂಬರು ನೋಡಿರಿ). ಇವುಗಳ ತರುವಾಯ ಈ ಪರಶಿವನು ಪ್ರಕಟನಾಗುತ್ತಾನೆ. ಆಗ ಅವನು ಶರಣ, ಜಂಗಮ ಎಂಬ ಶಬ್ದಗಳಿಂದಲೂ ಅನೇಕ ವಚನಗಳಲ್ಲಿ ಸಂಬೋಧಿಸಲ್ಪಟ್ಟದ್ದುಂಟು. ಮೊದಲು ಶರಣನು ಉದಯನಾಗುವನೆಂದು ವಚನಕಾರರು ಹೇಳುತ್ತಾರೆ. ಒಮ್ಮೊಮ್ಮೆ ಅವರು ಜಂಗಮನ ವರ್ಣನೆಮಾಡುವಲ್ಲಿಯೂ ಜಂಗಮನು ಜಗದ್ಭರಿತನಾಗಿರುತ್ತಾನೆಂದು ಅನೇಕ ವಿಶೇಷಣಗಳಿಂದ ಅತ್ಯಂತ ಭಾವನಾಮಯವಾಗಿ ಹೇಳುವದೂ ಉಂಟು. ಆಗ ಪರಶಿವ ಎಂಬ ಅಭಿಪ್ರಾಯದಿಂದ ಈ ಶಬ್ದಗಳನ್ನು ಅವರು ಉಪಯೋಗಿಸುತ್ತಾರೆ. ಸಾಂಖ್ಯ ಶಾಸ್ತ್ರದಲ್ಲಿ, ಪುರುಷ ಪ್ರಕೃತಿ, ಎಂಬ ಶಬ್ದಗಳಿವೆ. ಈ ಶಬ್ದಗಳನ್ನು ಸಹ ವಚನಕಾರರೂ ಉಪಯೋಗಿಸುವದುಂಟು. ಆದರೆ ಈ ಶಬ್ದಗಳು ಅಂದರೆ (೧) ಪುರುಷ ಮತ್ತು ಪರಶಿವ, (೨) ಪ್ರಕೃತಿ ಮತ್ತು ಅಂಗ ಇವೆರಡೂ ಗುಂಪುಗಳು ಸಮಾನಾರ್ಥವುಳ್ಳವು. ಆದರೆ ಪ್ರಕೃತಿ ಪುರುಷ ಈ ಶಬ್ದಗಳು ವಚನಗಳಲ್ಲಿ ಆಗಿಂದಾಗ್ಗೆ ಬರುವದಿಲ್ಲ ಕ್ವಚಿತ್ತಾಗಿ ಬರುತ್ತವೆ. ಬಸವನು ತನ್ನ ಕೆಲವು ವಚನಗಳಲ್ಲಿ ಪರಮಾತ್ಮನನ್ನು ಪುರುಷ ಎಂಬ ಹೆಸರಿನಿಂದಲೂ ಕರೆದಿದ್ದಾನೆ. ಉದಾಹರಣಾರ್ಥವಾಗಿ,

"ಸಹಸ್ರ ಶೀರ್ಷನಾದಿ ಪುರುಷನು, ತ್ರಿಪಾದೂರ್ಧ್ವ ಪುರುಷನೊಬ್ಬ ಪುರುಷನು, ಉದನ್ಮುಖನೊಬ್ಬ ಪುರುಷನು, ಉದಯ ಪುರುಷನೊಬ್ಬ ಪುರುಷನು, ವಿರಾಟ್ ಪುರುಷನೊಬ್ಬ ಪುರುಷನು" ಇತ್ಯಾದಿ.

(೧೯) ಚಿತ್, ಮೂಲಚಿತ್ತು, ಚಿದ್ಬ್ರಹ್ಮಾಂಡ, ಚಿದ್ರೂಪ, ಚಿತ್ ಸ್ವರೂಪ, ಚಿನ್ಮಯ, ಜ್ಞಾನಚಿತ್ತು:— ಶೂನ್ಯ ಸ್ಥಿತಿಗಳಾದ ಬಳಿಕ ಚಿತ್ತು



ಉದ್ಭವಿಸುತ್ತದೆ. ಆಗ ಅದು ಮೂಲಚಿತ್ತುವೆಂತಲೂ ಹೇಳಲ್ಪಡುತ್ತದೆ. ಜ್ಞಾನಚಿತ್ತುವೆಂತಲೂ ಅದಕ್ಕೆ ಬೇರೆ ಹೆಸರು ಇದೆ. ಒಮ್ಮೊಮ್ಮೆ ಬರೀ ಚಿತ್ತುವೆಂತಲೂ ಅದಕ್ಕೆ ಅನ್ನುವದುಂಟು. ಆದರೆ ಈ ಮೂಲಚಿತ್ತುವಿನಕಿಂತಲೂ ಸ್ಥೂಲತರವಾದುದು ಈ ಚಿತ್ತು. ಈ ಎರಡೂ ಶಬ್ದಗಳು ವಚನಗಳಲ್ಲಿರುವದು ತೋರಿಬರುತ್ತಿದೆ. ಆದ್ದರಿಂದ ಮೂಲಚಿತ್ತು ಯಾವುದು, ಚಿತ್ತು ಯಾವುದು ಎಂಬುದನ್ನು ಸಂದರ್ಭಾನುಸಾರವಾಗಿ ಕಂಡು ಹಿಡಿಯಬೇಕು. ಪರಮಾತ್ಮನಲ್ಲಿ ಲೀಲೆಯುಂಟಾಗಲು ಈ ಮೂಲ ಚಿತ್ತು ಉಗಮಿಸುತ್ತದೆ. ಈ ಲೀಲೆಯೆಂದರೆ ಜಗತ್ತು ಹುಟ್ಟಿಸಬೇಕೆಂಬ ಒಂದು ಬಗೆಯ ಅಪೇಕ್ಷೆ ಅಥವಾ ನೆನಹು ಇದೆ ಎಂದು ಹೇಳಬಹುದು. ಈ ಮೂಲಚಿತ್ತು ಎಲ್ಲ ಪದಾರ್ಥಗಳಲ್ಲಿ ಅವ್ಯಕ್ತವಾಗಿ ವಾಸಿಸುತ್ತದೆ. ಆ ಮೇಲೆ ಅದರೊಳಗಿಂದ ನಾದಬಿಂದುಕಲೆಗಳು ಪ್ರಕಟವಾಗುತ್ತವೆ. ಅವಾದರೂ ಆಗ ಚಿತ್ಸ್ವರೂಪ ಅಂದರೆ ಅತ್ಯಂತ ಸೂಕ್ಷ್ಮತರ ಸ್ಥಿತಿಯಲ್ಲಿರುತ್ತವೆ. ಅವುಗಳಿಗೆ ಚಿನ್ನಾದ, ಚಿದ್ಬಿಂದು, ಚಿತ್ಕಲೆಗಳೆಂಬ ಹೆಸರುಗಳು ಇವೆ. ಅವುಗಳೊಡನೆ ಮೂಲ ಚಿತ್ತು ಬೆರೆಯಲು ಓಂಕಾರರೂಪವಾದ ಪ್ರಣವವು ಉತ್ಪನ್ನವಾಗುತ್ತದೆ. ಅದೇ ಮಹಾಲಿಂಗವೆನಿಸಿಕೊಳ್ಳುತ್ತಿದೆ. ಈ ಮೂಲ ಚಿತ್ತುವಿನ ಮುಂದಿನ ಸ್ವರೂಪಿಗೆ ಬರೀ ಚಿತ್ತು ಎಂಬ ಹೆಸರಿದೆ. ಅದು ಪುನಃ ನಾದ ಬಿಂದು ಕಲೆಗಳೊಡನೆ ಕೂಡಲು ಈ ದೃಶ್ಯ ಜಗತ್ತು ತಲೆದೋರುತ್ತದೆ. ಹೀಗೆ ತಲೆದೋರಿದ ಜಗತ್ತಿನಲ್ಲಿ ಶಕ್ತಿಯು ವ್ಯವಹರಿಸಹತ್ತುತ್ತಿದೆ. ಈ ಶಕ್ತಿಯಲ್ಲಿ ಅನೇಕ ಪ್ರಕಾರಗಳಿರುತ್ತವೆ. ಹೀಗೆ ಇವೆಲ್ಲವೂ ಮೊದಲು ಮೂಲಚಿತ್ತುವಿನಿಂದಲೇ ಹೊರಟಿರುತ್ತವೆ. ಈ ಮೂಲ ಚಿತ್ತು ಓಂಕಾರದ ಮೂಲಕ ಬ್ರಹ್ಮಾಂಡದಲ್ಲೆಲ್ಲ ವ್ಯಾಪಿಸಿರುತ್ತದೆ. ಅದನ್ನು ಈ ಸ್ಥಿತಿಯಲ್ಲಿ (*ether*) ಎಂದು ಆಧುನಿಕವಿಜ್ಞಾನ ಶಾಸ್ತ್ರದ ಶಬ್ದದಿಂದ ಕರೆಯಬಹುದು. ಚಿದ್ಬ್ರಹ್ಮಾಂಡ, ಚಿದ್ರೂಪ, ಚಿತ್ಸ್ವರೂಪ ಚೈತನ್ಯಸ್ವರೂಪ ಎಂದು ಹೇಳಿಸಿಕೊಳ್ಳುವುಗಳೆಲ್ಲವೂ ಈ ಮೂಲಚಿತ್ತುವಿನಿಂದ ಕೂಡಿಕೊಂಡಿವೆ. ಈ ಮೂಲಚಿತ್ತು ಅವುಗಳಲ್ಲಿ ಬೆರೆದು ಪ್ರಕಾಶಿಸದೆ ಇದ್ದಲ್ಲಿ ಅವು ತೋರಲಾರವು. ಆದುದರಿಂದ ಮೂಲಚಿತ್ತು ಪರಮಾತ್ಮನ ಪ್ರಕಾಶ

ವೇದು ಆಗಿಂದಾಗ್ಗೆ ವಚನಗಳಲ್ಲಿ ವರ್ಣಿಸಲ್ಪಡುವದುಂಟು. ಅದು ಬೆಳಗು ಎಂತಲೂ ಹೇಳುತ್ತಾರೆ. ಆಗ ಅದನ್ನು ಚಿತ್‌ಪ್ರಕಾಶವೆಂತಲೂ ಕರೆಯು ತ್ತಾರೆ. ಚಿದಾನಂದವೆಂತಲೂ ಹೇಳುತ್ತಾರೆ. ನೆನಹು ಎಂತಲೂ ಒಮ್ಮೊಮ್ಮೆ ಕರೆಯುವದುಂಟು. ಅಂದರೆ ಈ ಮೂಲಚಿತ್ತುವು ಅತ್ಯಂತ ಆನಂದಮ ಯವಾದದ್ದು, ಅತ್ಯಂತ ಪ್ರಕಾಶಮಾನವಾದದ್ದು, ಅತ್ಯಂತ ಜ್ಞಾನಮಯ ವಾದದ್ದು ಎಂದು ಅದರ ಅತ್ಯುತ್ಕೃಷ್ಟತೆಯನ್ನು ವಚನಕಾರರು ವರ್ಣಿಸು ತ್ತಾರೆ. ಆದರೆ ಇಂಥ ಶಬ್ದಗಳನ್ನು ಉಪಯೋಗಿಸುವಲ್ಲಿ ವಚನಕಾರರು ಸೃಷ್ಟಿಯಲ್ಲಿ ಕಾಣುವಂಥ ಈ ಗುಣಗಳೇ ಮೂಲಚಿತ್ತುವೆಂದು ಭಾವಿ ಸಬಾರದು. ಸಾಮಾನ್ಯ ಜನರಿಗೆ ತಿಳಿಯುವ ಉದ್ದೇಶದಿಂದ ಆನಂದ, ಪ್ರಕಾಶ ಇವೇ ಮೊದಲಾದ ಶಬ್ದಗಳನ್ನು ಅವರು ಉಪಯೋಗಿಸುತ್ತಾರೆ. ಆದರೆ ನಿಜವಾಗಿ ಮೂಲಚಿತ್ತು ಆಕಾರ ರಹಿತವಾದದ್ದು ನಿಷ್ಕ್ರಿಯೆಯು ಳ್ಳದ್ದು ಅಗವ್ಯವಾದದ್ದು ಇದೆ.

(೨೦) (ಅ) ನಿಶ್ಶೂನ್ಯ; (ಬ) ಸರ್ವಶೂನ್ಯ, ಮಹಾಶೂನ್ಯ, ಸರ್ವ ಶೂನ್ಯ ನಿರಾಲಂಬ; (ಕ) ಶೂನ್ಯಲಿಂಗ (ಡ) ನಿಃಕಲಲಿಂಗಃ— ವಚನ ಕಾರರು ಶೂನ್ಯದಲ್ಲಿ ಕೆಲವು ವಿಭಾಗಗಳನ್ನು ಮಾಡುತ್ತಾರೆ. ಅವೆಲ್ಲವೂ ಏನೂ ಇಲ್ಲದಂಥ ಸ್ಥಿತಿಗಳು. ಅವುಗಳಲ್ಲಿ ನಾಲ್ಕು ಮುಖ್ಯವಾದವುಗಳು. ಸರ್ವಶೂನ್ಯ, ಮಹಾಶೂನ್ಯ, ಸರ್ವಶೂನ್ಯನಿರಾಲಂಬ ಇವೆಲ್ಲಗಳೂ ಒಂದೇ ಅರ್ಥವನ್ನು ಸೂಚಿಸುತ್ತವೆ. ಇದರ ತರುವಾಯ ಶೂನ್ಯಲಿಂಗವು ಉದ್ಭವಿಸುತ್ತದೆ. ಅದರ ತರುವಾಯ ನಿಃಕಲಲಿಂಗವು ಉದ್ಭವಿಸುತ್ತದೆ. ಈ ಕಡೆಯ ಎರಡೂ ಸ್ಥಿತಿಗಳೂ ಕೂಡ ಶೂನ್ಯವಿರುತ್ತವೆ. ಆದರೆ ನಿಃಕಲ ಲಿಂಗದಕಿಂತಲೂ ಹೆಚ್ಚು ಶೂನ್ಯವಾದದ್ದು ಶೂನ್ಯಲಿಂಗವು. ಈ ಶೂನ್ಯ ಲಿಂಗಕ್ಕಿಂತಲೂ ಹೆಚ್ಚು ಶೂನ್ಯವಾದುದು ಸರ್ವಶೂನ್ಯನಿರಾಲಂಬವು ಎಂದು ಭಾವಿಸಬೇಕು. ಇವೆಲ್ಲವೂ ಮನುಷ್ಯನ ಇಂದ್ರಿಯಗಳಿಗೆ ಮತ್ತು ವಿಚಾರಕ್ಕೆ ನಿಲುಕದಂಥವು ಇರುತ್ತವೆ. ವಚನಕಾರರು ಈ ಮೂರೂ ಸ್ಥಿತಿಗಳನ್ನು ದಾಟಿದರೂ ಮತ್ತೂ ಇಲ್ಲ ಎಂಬುದನ್ನು ಸೂಚಿಸುವದಕ್ಕೋ ಸ್ಕರ ನಿಶ್ಶೂನ್ಯವೆಂತಲೂ ನಾಲ್ಕನೆಯದಾಗಿ ಒಮ್ಮೊಮ್ಮೆ ಹೇಳುವದುಂಟು.



ವಚನಕಾರರು ಯಾವದೂ ಇಲ್ಲ, ಇಲ್ಲ, ಇಲ್ಲ, ಎಂದು ಹೇಳುತ್ತ ಈ ಎಲ್ಲ ಸ್ಥಿತಿಗಳನ್ನು ವರ್ಣಿಸುತ್ತ ಹೋಗುತ್ತಾರೆ. ಅವು ಅನಿರ್ವಾಚ್ಯ ಅಂದರೆ ಹೇಳಲು ಬಾರದಂಥವು ಎಂತಲೂ, ನಿರಾಲಂಬ ಎಂದರೆ ಆಶ್ರಯವಿಲ್ಲದೆ ಸ್ವತಂತ್ರವಾಗಿ ಇರುವಂಥನೆಂತಲೂ ಅವರು ಹೇಳುವದುಂಟು.

(೨೧) ಮೋಕ್ಷ, ಮುಕ್ತಿ, ಸಾಮರಸ್ಯ, ಐಕ್ಯ, ಲಿಂಗಾಂಗ ಸಾಮ ರಸ್ಯ, ಕೈವಲ್ಯ, ಅದ್ವೈತ, ಸಮರಸ, ಸಮರಸಭಾವಃ—

ಪರಮಾತ್ಮನು ಮನುಷ್ಯನಿಂದ ಬೇರೆಯಾದ ಒಂದು ವಸ್ತುವಿದ್ದಾನೆ ಎಂಬ ಕಲ್ಪನೆಯು ಜನರಲ್ಲಿರುತ್ತದೆ. ಆದ್ದರಿಂದ ಮನುಷ್ಯನ ಅಂತಿಮಧ್ಯೇ ಯವು ಅವನನ್ನು ಭಜಿಸಿ ಅವನಪ್ರೀತಿಯನ್ನು ಸಂಪಾದಿಸಿ ಅವನ ಸನ್ನಿಧಾ ನದಲ್ಲಿ ಇರುವದಿದೆಂದು ಭಾವಿಸಿರುತ್ತಾರೆ. ಬೇರೆ ಕೆಲವರು ಅವನಲ್ಲಿ ಬೆರೆದು ಹೋಗುವದಿರುತ್ತದೆಂದು ಭಾವಿಸಿರುತ್ತಾರೆ. ಅಂದರೆ ತಾನು ಮತ್ತು ಪರ ಮಾತ್ಮ ಇವೆರಡೂ ವಸ್ತುಗಳು ಬೇರೆ ಬೇರೆ ಇವೆ ಎಂದು ಅವರ ವಿಚಾರಗ ಳದ್ದ ಹಾಗಾಯಿತು. ಆದರೆ ವೀರಶೈವರಲ್ಲಿ ಇಂಥ ವಿಚಾರಗಳಿಲ್ಲ. ಪರಮಾ ತ್ಮನು ಜಗತ್ತಿನಲ್ಲೆಲ್ಲ ಹರಡಿರುತ್ತಾನೆ. ಹಾಗೆಯೇ ಅವನು ತನ್ನಲ್ಲಿಯೂ ಕೂಡ ಇದ್ದಾನೆ ಎಂದು ಅವರು ತಿಳಿದಿರುತ್ತಾರೆ. ಆದರೆ ಅವನು ಇನ್ನೂ ಅವ ನಲ್ಲಿ ಪ್ರಕಟವಾಗಿರುವದಿಲ್ಲ. ಆದ್ದರಿಂದ ಅವನನ್ನು ಮನುಷ್ಯನು ತನ್ನಲ್ಲಿ ಪ್ರಕಟಮಾಡಿಕೊಳ್ಳಬೇಕು. ಹೀಗೆ ಪರಮಾತ್ಮನು ತನ್ನಲ್ಲಿ ಪ್ರಕಟವಾಗು ವಂತೆ ಮನುಷ್ಯನ ವರ್ತನೆ ಇರಬೇಕು. ಇಂಥ ವರ್ತನೆಯಿಂದ ಮನುಷ್ಯನ ಶಕ್ತಿಗಳು ವಿಕಾಸಹೊಂದುವವು. ಅಂದರೆ ಅವುಗಳಲ್ಲಿ ಲಿಂಗದ ಕಳೆಯು ಸ್ಥಾಪನೆಹೊಂದುವದು. ಮನುಷ್ಯನ ಶುದ್ಧ ವೃತ್ತಿಗಳು ಸ್ಥಿರಗೊಂಡ ಹಾಗೆ ಲಿಂಗವೂ ಕೂಡ ಅವನ ಮನ ವಚನ ಕಾಯಗಳಲ್ಲಿ ನೆಲಿಸುವದು. ಇದೇ ಲಿಂಗದ ನಡೆ, ಲಿಂಗದ ನುಡಿ, ಎಂದು ವಚನಕಾರರು ಹೇಳುವ ದುಂಟು. ವೀರಶೈವರು ಕೈಲಾಸ, ವೈಕುಂಠ, ಸ್ವರ್ಗ, ಇಂಥ ಯಾವದೋ ಒಂದು ಸ್ಥಲದಲ್ಲಿ ಪರಮಾತ್ಮನು ವಾಸಿಸುತ್ತಾನೆ ಎಂದು ಭಾವಿಸಲ್ಲ. ಅವರ ಪ್ರಕಾರ ಪಾರ್ವತೀ, ಷಣ್ಮುಖ, ಗಣಪತಿ, ಇವರೆಲ್ಲರೂ ಕಾಲ್ಪನಿಕ ದೇವತೆಗಳು. ಅವೆಲ್ಲವೂ ಪೌರಾಣಿಕ ಕಾಲದಲ್ಲಿ ಜನರು ಕಲ್ಪಿಸಿದವುಗಳಿವೆ.

ವೀರಶೈವರು ಅವುಗಳನ್ನು ನಂಬಬಾರದು. ವೀರಶೈವರಲ್ಲಿ ಪರಮಾತ್ಮನ ವಿಷಯವಾಗಿ ಇಂಥ ಕಲ್ಪನೆಗಳಿರುವದರಿಂದ ಅವರು ದೇವಾಲಯಗಳನ್ನು ನಂಬುವದಿಲ್ಲ. ಅವರಿಗೆ ತಮ್ಮ ದೇಹವೇ ದೇವಾಲಯವು. ಈ ಅಭಿಪ್ರಾಯದ ವಚನಗಳು ಅವರಲ್ಲಿ ಹೇರಳವಾಗಿ ದೊರಕುತ್ತವೆ. ಆಕಾಶದಲ್ಲಿ ಇಂದ್ರಧನುಸ್ಸು ಉತ್ಪನ್ನವಾಗಿ ಅದು ಅಲ್ಲಿಯೇ ಅಡಗುವಂತೆ, ಶಿವತತ್ವದಲ್ಲಿ ಮನುಷ್ಯನು ಉಗಮಹೊಂದಿ ಅಲ್ಲಿಯೇ ಅವನು ಕಡೆಗೆ ಲಯವಾಗುತ್ತಾನೆ. ಇದೇ ಸಾಮರಸ್ಯವು ಅಥವಾ ಮೋಕ್ಷವು. ಮನುಷ್ಯನು ತನ್ನ ಈ ಧ್ಯೇಯವನ್ನು ತಾನೇ ಸಾಧಿಸಿಕೊಳ್ಳತಕ್ಕದ್ದು. ಅದು ಅವನ ಪ್ರಯತ್ನದಿಂದಲೇ ಜರಗಬೇಕು. ಹೊರಗಿನವರು ಅವನಿಗೆ ಕೇವಲ ಮಾರ್ಗದರ್ಶಕರಾಗಿದ್ದಾರೆ. ಅವನು ಹೀಗೆ ನಡೆಯುತ್ತ ಹೋದಲ್ಲಿ ಅವನ ಎಲ್ಲ ಶಕ್ತಿಗಳು ವಿಕಾಸಹೊಂದುತ್ತವೆ. ಈ ವಿಕಾಸವೇ ಲಿಂಗಪ್ರಾಪ್ತಿ ಎಂದೆನಿಸಿಕೊಳ್ಳುತ್ತಿದೆ. ಆಗ ಈ ಲಿಂಗವು ಅವನ ಚಕ್ರಗಳಲ್ಲಿ ಮತ್ತು ಅವನ ಶಕ್ತಿಗಳಲ್ಲಿ ವ್ಯವಹರಿಸಹತ್ತುತ್ತಿದೆ. ಇದರಿಂದ ವೀರಶೈವರಲ್ಲಿ ಸಮರಸಾಚರಣೆಯು ಇದೆ. ಅವರಲ್ಲಿ ಭಿನ್ನಾಚಾರವಿಲ್ಲ. ಎಂದರ ತನ್ನಲ್ಲಿ ಲಿಂಗವಿದೆ, ಎಂಬ ಭಾವನೆಯಿಂದಲೇ ಮನುಷ್ಯನು ತನ್ನ ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡಬೇಕು. ಅಂದರೆ ಅವನಲ್ಲಿ ಅದ್ವೈತಾಚಾರ ಉಂಟು. ಹೀಗೆ ಮನುಷ್ಯನು ಮೆಲ್ಲ ಮೆಲ್ಲನೆ ಏರುತ್ತ ಮೋಕ್ಷವನ್ನು ಹೊಂದಬೇಕು. ಇದೇ ಮುಕ್ತಿಯು, ಸಾಮರಸ್ಯವು, ಐಕ್ಯತೆಯು, ಕೈವಲ್ಯವು, ಲಿಂಗಾಂಗ ಸಾಮರಸ್ಯವು, ಸಮರಸವು, ಸಮರಸಭಾವವು. ಇವೆಲ್ಲವೂ ಪರ್ಯಾಯ ಶಬ್ದಗಳಾಗಿವೆ.

(೨೨) ಮಹಾಲಿಂಗ, ಪರಂಜ್ಯೋತಿರ್ಲಿಂಗ, ಜ್ಯೋತಿರ್ಲಿಂಗ:— ಶೂನ್ಯ ಸ್ಥಿತಿಗಳ ತರುವಾಯ ಮಹಾಲಿಂಗವು ಉದ್ಭವಿಸುತ್ತದೆ. ಇದು ಓಂಕಾರವೆಂಬ ಪ್ರಣವ ಸ್ವರೂಪವು. ತೇಜೋಮೂರ್ತಿಯಾಗಿದೆ. ಅದು ಜಗತ್ತಿನಲ್ಲೆಲ್ಲ ತುಂಬಿಕೊಂಡಿದೆ. ಅಣುವಿಗೆ ಅಣುವಾಗಿದೆ. ಮಹತ್ತಿಗೆ ಮಹತ್ತಾಗಿದೆ. ಸಂಪೂರ್ಣ ಚೈತನ್ಯಮಯವಾಗಿದೆ. ಸರ್ವವ್ಯಾಪಕವಾಗಿದೆ. ಅಖಂಡವಾಗಿದೆ. ಇದು ಶೂನ್ಯಸ್ಥಿತಿ ಮತ್ತು ಜಗತ್ತು ಪ್ರಕಟವಾಗಿ



ಸ್ಥಿತಿ ಇವುಗಳ ನಡುವಿನದೆಂದು ಹೇಳಬಹುದು. ಇಲ್ಲಿಂದಲೇ ದೃಶ್ಯ ಜಗತ್ತಿನ ಉದಯವು. ಇದು ಗೋಳಕಾಕಾರವೆಂದು ವರ್ಣಿಸಲ್ಪಡುತ್ತಿದೆ.

(೨೩) ಸಾದಾಖ್ಯಗಳು:— ಇವು ಮೇಲೆ ನಂ॥ ೨೨ನೆಯದರಲ್ಲಿ ವಿವರಿಸಿದ ಮಹಾಲಿಂಗದೊಳಗಿಂದ ಉದ್ಭವಿಸುತ್ತವೆ. ಮಹಾಲಿಂಗದಲ್ಲಿ ಜಗತ್ತು ಇನ್ನೂ ಪ್ರಕಟವಾಗಿರುವುದಿಲ್ಲ. ಆದರೆ ಪ್ರಕಟವಾಗಲು ಬೇಕಾಗುವ ಪರಿಸ್ಥಿತಿಯು ಅದರೊಳಗುಂಟಾಗಿರುತ್ತದೆ. ಈ ಮಹಾಲಿಂಗದೊಳಗಿಂದ ಸಾದಾಖ್ಯಗಳು ಜಗತ್ತಿನಲ್ಲಿ ಕ್ರಮೇಣ ತೋರಹತ್ತುತ್ತವೆ. ಈ ಸಾದಾಖ್ಯಗಳಲ್ಲಿ ಜಗತ್ತು ಪ್ರಕಟವಾಗಲು ಬೇಕಾಗುವ ಸಾಧನ ಸಾಮಗ್ರಿಗಳೆಲ್ಲ ಹೊರಪಡುತ್ತವೆ. ದೃಶ್ಯ ಪದಾರ್ಥಗಳಿಗೆಲ್ಲ ಬೇಕಾಗುವ ಸಾಮಗ್ರಿಗಳು ಸ್ವಾಭಾವಿಕವಾಗಿ ಅಸಂಖ್ಯವಾಗಿರುತ್ತವೆ. ಯಾಕೆಂದರೆ ಒಂದೊಂದು ಪದಾರ್ಥಕ್ಕೆ ಅನೇಕ ಬಗೆಯ ಸಾಮಗ್ರಿಗಳು ಬೇಕು. ಹೀಗೆ ಇಂಥ ಪದಾರ್ಥಗಳು ಅಗಣಿತವಾಗಿದ್ದರೂ ಕೂಡ ಅವುಗಳಿಗೆ ಬೇಕಾಗುವ ವಸ್ತುಗಳಲ್ಲಿ ವಚನಕಾರರು ಐದೇ ಮುಖ್ಯ ವರ್ಗಗಳನ್ನು ಮಾಡುವದುಂಟು. ಇವುಗಳೆಲ್ಲವೂ ಐದು ಸಾದಾಖ್ಯಗಳಲ್ಲಿಯೇ ಇರುತ್ತವೆ. ಈ ಸಾದಾಖ್ಯಗಳು ಮಹಾ ಸಾದಾಖ್ಯ, ಶಿವಸಾದಾಖ್ಯ, ಅಮೂರ್ತಿ ಸಾದಾಖ್ಯ, ಮೂರ್ತಿ ಸಾದಾಖ್ಯ, ಕರ್ತೃ ಸಾದಾಖ್ಯ, ಕರ್ಮ ಸಾದಾಖ್ಯ ಎಂದು ಇವೆ. ಅವು ಅನುಕ್ರಮವಾಗಿ ಒಂದರ ತರುವಾಯ ಒಂದು ಹೊರಡುತ್ತವೆ. ಮಹಾ ಸಾದಾಖ್ಯದಲ್ಲಿ ಹೊರಪಡುವ ಸಾಮಗ್ರಿಗಳು ಅತ್ಯಂತ ಸೂಕ್ಷ್ಮವಾದವುಗಳು. ಆ ಮೇಲೆ ಕ್ರಮವಾಗಿ ಹೊರಹೊರಡುವ ಸಾದಾಖ್ಯಗಳೊಳಗಿಂದ ಕ್ರಮೇಣ ಹೆಚ್ಚು ಹೆಚ್ಚು ಸ್ಥೂಲತರವಾದ ಸಾಮಗ್ರಿಗಳು ಉಂಟಾಗುತ್ತವೆ. ಈ ಸಾಮಗ್ರಿಗಳೆಂದರೆ ಶಕ್ತಿಗಳು, ಪಂಚಮಹಾಭೂತಗಳು, ಕಲೆಗಳು, ಪ್ರಣವಗಳು, ತತ್ವಗಳು ಇವೇ ಮುಖ್ಯವಾದವುಗಳಿರುತ್ತವೆ. ಇವುಗಳಲ್ಲಿ ಆವ ಆವವು, ಆವ ಆವ ಸಾದಾಖ್ಯಗಳಲ್ಲಿ ಪ್ರಕಟವಾಗುತ್ತವೆಂಬುದನ್ನು ವಚನಕಾರರು ತಮ್ಮ ವಚನಗಳಲ್ಲಿ ವಿವರಿಸುತ್ತಾರೆ. ಉದಾಹರಣಾರ್ಥವಾಗಿ, ಮಹಾಲಿಂಗವು ಓಂಕಾರ ಸ್ವರೂಪವಾಗಿರುತ್ತದೆ. ಈ ಓಂಕಾರದಿಂದ ಬೇರೆ ೫ ಪ್ರಣವಾಕ್ಷರಗಳು ಉಂಟಾಗುತ್ತವೆ. ಈ

ಅಕ್ಷರಗಳಿಂದ ಪಂಚಕಲೆಗಳು ಉದ್ಭವಿಸುತ್ತದೆ. ಈ ಕಲೆಗಳಲ್ಲಿ ಪಂಚ ಶಕ್ತಿಗಳು ಪ್ರಕಟವಾಗುತ್ತವೆ. ಪಂಚಭೂತಗಳು ಒಂದು ಬಗೆಯ ಶಕ್ತಿಗಳಿದ್ದು ಇವು ಕೂಡ ಇವುಗಳೊಳಗಿಂದ ಹೊರಡುತ್ತವೆ. ಇವೆಲ್ಲವು ಜಗತ್ತು ನಿರ್ಮಾಣವಾಗಲು ಬೇಕಾಗುವ ಸಾಧನಸಾಮಗ್ರಿಗಳೇ ಇರುತ್ತವೆ. ಇವುಗಳೆಲ್ಲ ಕ್ರಮವಾಗಿ ಮೇಲೆ ಹೇಳಿದ ಪಂಚ ಸಾದಾಖ್ಯಗಳಲ್ಲಿ ತಲೆದೋರುತ್ತವೆ. ಮೊದಲಿನ ಮೂರು ಸಾದಾಖ್ಯಗಳಾದ ಮಹ, ಶಿವ, ಅಮೂರ್ತಿ ಇವು ಅತ್ಯಂತ ಸೂಕ್ಷ್ಮವಾದವುಗಳು. ಮುಂದಿನ ಮೂರು ಸಾದಾಖ್ಯಗಳಾದ ಮೂರ್ತಿ, ಕರ್ತೃ, ಕರ್ಮ ಇವು ಹೆಚ್ಚಿಗೆ ಸ್ಥೂಲವಾದವುಗಳು. ಇವುಗಳು ಲಿಂಗಗಳ ಪ್ರಕಾಶಗಳೆಂತಲೂ ಹೇಳಲ್ಪಡುತ್ತವೆ. ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಈ ಲಿಂಗಗಳ ಪ್ರಕಾಶವೇ ಸಾದಾಖ್ಯಗಳೆಂತಲೂ ವರ್ಣಿಸಲ್ಪಡುವದುಂಟು.

ಈ ಸಾದಾಖ್ಯಗಳು ಶಿವಾಗಮಗಳಲ್ಲಿ ಉಲ್ಲೇಖವಾಗಿರುತ್ತವೆ. ವಚನಕಾರರು ಅವುಗಳನ್ನೇ ತಮ್ಮ ವಚನಗಳಲ್ಲಿ ಪ್ರತಿಪಾದಿಸುತ್ತಾರೆ. ಈ ಸಾದಾಖ್ಯಗಳು ಬ್ರಹ್ಮಾಂಡದಲ್ಲಿರುವಂತೆಯೇ ವ್ಯಕ್ತಿಯಲ್ಲಿಯೂ ಅಂದರೆ ಪಿಂಡಾಂಡದಲ್ಲಿಯೂ ಇರುತ್ತವೆ. ಆಗ ಅವುಗಳ ವಿವರಣೆಯನ್ನು ಷಟ್‌ಸ್ಥಲಾತ್ಮಕವಾಗಿ ವಚನಕಾರರು ಮಾಡುವದುಂಟು. ಅವುಗಳು ಆಗ ಸ್ಥಲ, ಚಕ್ರ, ಲಿಂಗ ಈ ಮೊದಲಾದ ಶಬ್ದಗಳಿಂದ ವಿವೇಚಿಸಲ್ಪಡುತ್ತವೆ. ಆದರೆ ಸಾದಾಖ್ಯ ಈ ಶಬ್ದವನ್ನು ವಿಶ್ವಕ್ಕೆ ಸಂಬಂಧಿಸಿ ವಚನಕಾರರು ತಮ್ಮ ವಚನಗಳಲ್ಲಿ ಬಹುತರವಾಗಿ ನಿರೂಪಿಸುವದುಂಟು.

(೨೪) ಪ್ರಣವಃ— ಪ್ರಣವವು ಅಂದರೆ ಓಂಕಾರವು. ಇದು ಮೇಲೆ ನಂ॥ ೨೨ ಇವರಲ್ಲಿ ಹೇಳಿದಂತೆ ಮಹಾಲಿಂಗವಾಗಿರುತ್ತದೆ. ಮೇಲೆ ೧೧ನೆಯದರಲ್ಲಿ ನಾದ ಬಿಂದು ಕಲೆಗಳು ವಿವರಿಸಲ್ಪಟ್ಟಿವೆ. ಇವುಗಳು ದೃಶ್ಯಪದಾರ್ಥಗಳಿಗೆ ಕಾರಣವಾದವುಗಳು. ಇವುಗಳ ಅತ್ಯಂತ ಆರಂಭದ ಸ್ವರೂಪಗಳು ಅಂದರೆ ಚಿತ್‌ಸ್ವರೂಪಗಳು. ಇವುಗಳು ಚಿನ್ನಾದ ಚಿದ್ಬಿಂದು ಚಿತ್ಕಲೆಗಳೇ—ಇದ್ದು ಅವು ಅನುಕ್ರಮವಾಗಿ ಅಕಾರ, ಉಕಾರ, ಮಕಾರಗಳೆಂದು ಹೇಳಲ್ಪಡುತ್ತವೆ. ಇವುಗಳಿಗೆ ಬೀಜಾಕ್ಷರಗಳೆಂಬ



ಹೆಸರೂ ಇದೆ. ಇವುಗಳೊಡನೆ ಮೂಲಚಿತ್ತು (ಮೇಲೆ ನಂ॥ ೧೯ ನೋಡಿರಿ) ಬೆರೆತೊಡನೆಯೇ ಓಂಕಾರವು ಅಂದರೆ ಪ್ರಣವವು ಉದ್ಭವಿಸುತ್ತದೆ. ಆದುದರಿಂದ ಅ, ಉ, ಮ ಇವುಗಳ ಬೆರಿಕೆಯೇ ಓಂಕಾರವೆಂದು ಹೇಳಲ್ಪಡುತ್ತದೆ. ನಾದ ಬಿಂದು ಕಲೆಗಳು ಜಗತ್ತಿನಲ್ಲೆಲ್ಲ ವ್ಯವಹರಿಸುತ್ತವೆಂದು ಹೇಳಿದ್ದರಿಂದ ಈ ಅ ಉ ಮ ಅಕ್ಷರಗಳಿಂದ ಕೂಡಿದ ಓಂಕಾರವು ಅಥವಾ ಮೂಲ ಪ್ರಣವವಾದರೂ ಈ ಜಗತ್ತಿನಲ್ಲೆಲ್ಲ ತುಂಬಿಕೊಂಡಿರುತ್ತದೆ. ಅದು ಅತ್ಯಂತ ಸೂಕ್ಷ್ಮವಾದುದರಿಂದ ಸ್ಥೂಲ ಶರೀರ ಗೂಡ ಮಾನವನ ಶ್ರೋತ್ರಕ್ಕೆ ಕೇಳಬರುವುದಿಲ್ಲ. ಹಾಗೆ ಕೇಳಬರದಿದ್ದರೂ ಅದು ವಿಶ್ವವನ್ನು ಆವರಿಸಿದೆ. ಈ ಅ, ಉ, ಮ ಅಕ್ಷರಗಳು ಬೀಜಾಕ್ಷರಗಳೆಂಬ ಹೆಸರಿನಿಂದ ಹೇಳಲ್ಪಡುವವಲ್ಲದೆ ಅವು ಅನುಕ್ರಮವಾಗಿ ರುದ್ರ, ಈಶ್ವರ, ಸದಾಶಿವ, ಎಂಬ ಅಧಿದೇವತೆಗಳ ಸ್ಥಾನಗಳೆಂತಲೂ ಹೇಳಲ್ಪಡುವದುಂಟು. ಅಲ್ಲದೆ ಅವು ಅನುಕ್ರಮವಾಗಿ ಬ, ಸ, ವ, ಈ ಮೂರು ಅಕ್ಷರಗಳಿಂದ ಸಹ ಉಚ್ಚರಿಸಲ್ಪಡುವದುಂಟು. ಆಗ ಇವಾದರೂ ಪ್ರಣವಾಕ್ಷರ ಅಥವಾ ಬೀಜಾಕ್ಷರಗಳೆಂದು ವಚನಕಾರರು ಹೇಳಿರುವರು. ಆದರೆ ಇಲ್ಲಿ ಬಸವ ಎಂದರೆ ಬಿಜ್ಜಳನ ಮಂತ್ರಿಯಾದ ಬಸವನು ಎಂಬ ಭಾವವಿರದೆ ಯಾವ ಅ, ಉ, ಮ ಬೀಜಾಕ್ಷರಗಳನ್ನು ಉಚ್ಚರಿಸುವಲ್ಲಿ ಯಾವ ಭಾವವಿರಬೇಕೋ, ಆ ಭಾವವೇ ಮುಖ್ಯವಾಗಿದ್ದುಕೊಂಡು ಈ ಮೂರು ಬ, ಸ, ವ ಅಕ್ಷರಗಳನ್ನು ಉಚ್ಚರಿಸಿದಲ್ಲಿ ಪರಿಣಾಮದಲ್ಲಿ ಮೂಲ ಅ, ಉ, ಮ ಈ ಬೀಜಾಕ್ಷರಗಳಷ್ಟೇ ಇವಾದರೂ ಪರಿಣಾಮಕಾರಿಗಳು ಮತ್ತು ಅರ್ಥಬೋಧಕವಾದವುಗಳು ಎಂದು ತಿಳಿಯಬೇಕು.

(೨೫) ಷಟ್‌ಸ್ಥಲ ಬ್ರಹ್ಮಮೂರ್ತಿಗಳುಃ— ಒಂದೊಂದು ಸಾದಾಖ್ಯಕ್ಕೆ ಒಬ್ಬೊಬ್ಬ ಅಧಿದೇವತೆಗಳಿರುತ್ತಾರೆ. ಪರಶಿವನ ಸ್ವರೂಪಗಳೇ ಇವರು ಎಂದು ಹೇಳಬಹುದು. ಸಾದಾಖ್ಯಗಳಲ್ಲಿ ಹೊರಡುವ ಶಕ್ತಿಗಳು, ತತ್ವಗಳು, ಮೊದಲಾದವುಗಳನ್ನು ನಿಯಂತ್ರಣ ಮಾಡುವ ಕಾರ್ಯವನ್ನು ಈ ಅಧಿದೇವತೆಗಳು ಮಾಡುತ್ತಾರೆ. ಅವರ ಹೆಸರುಗಳು ಅನುಕ್ರಮ

ಗಳನ್ನು ಮಾಡಿದ್ದು ಕಂಡುಬರುತ್ತಿದೆ. ಈ ವಿಷಯಗಳು ವಚನಶಾಸ್ತ್ರಸಾರ ಭಾಗ ೨ ಅನುಬಂಧ ೨ ಇದರಲ್ಲಿ ಹೆಚ್ಚಾಗಿ ನಿರೂಪಿಸಲ್ಪಟ್ಟಿವೆ.

(೨೭) ಪಂಚಮಹಾಭೂತಗಳು:— ಇವು ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಎಂಬಿವುಗಳು ಇವೆ. ಇವು ನಮಗೆ ಪ್ರತ್ಯಕ್ಷ ಕಾಣುವ ಮಣ್ಣು, ನೀರು, ಬೆಂಕಿ, ಗಾಳಿ, ಮುಗಿಲು ಎಂದು ತಿಳಿಯಬಾರದು. ಅವುಗಳಿಗೆ ಈ ಅರ್ಥವು ಶಿವಾನುಭವ ಶಾಸ್ತ್ರದಲ್ಲಿಲ್ಲ. ಜಗತ್ತಿನಲ್ಲಿರುವ ಎಲ್ಲ ವಸ್ತುಗಳಿಗೆ ವಿಶಿಷ್ಟ ಕ್ರಿಯೆಗಳು, ಗುಣ ಧರ್ಮ ಕರ್ಮಗಳು ಇರುವವಷ್ಟೇ. ಅವುಗಳನ್ನುಂಟು ಮಾಡಲು ಯಾವ ತತ್ವಗಳು ಕಾರಣವಾಗುತ್ತವೋ ಅವುಗಳಲ್ಲಿ ವಚನಕಾರರು ೫ ವಿಭಾಗಗಳನ್ನು ಮಾಡಿ ಅವುಗಳು ಪೃಥ್ವೀ ತತ್ವ, ಅಪ್ಪು ತತ್ವ, ಅಗ್ನಿ ತತ್ವ, ವಾಯುತತ್ವ, ಆಕಾಶತತ್ವ ಇವುಗಳಿಂದ ಉಂಟಾಗುವವೆಂದು ಹೇಳುವದುಂಟು. ಉದಾ:— ಪೃಥ್ವಿಗೆ ಭಾರತಳೆಯುವದು, ಅಪ್ಪುವಿಗೆ ದ್ರವದಿಂದ ಮುದ್ದೆ ಮಾಡುವದು, ಅಗ್ನಿಗೆ ಸುಡುವುದು, ವಾಯುವಿಗೆ ಸ್ಥಳಾಂತರ ಮಾಡುವುದು, ಆಕಾಶಕ್ಕೆ ಚಲಿಸುವುದಕ್ಕೆ ತೆರವುಗುಡುವುದು, ಹೀಗೆ ಗುಣಗಳೆಂದು ಅವರು ಹೇಳುತ್ತಾರೆ. ಈ ಗುಣಗಳೆಲ್ಲ ಜಗತ್ತಿನಲ್ಲಿಯ ಪದಾರ್ಥಗಳಲ್ಲೆಲ್ಲ ಹೆಚ್ಚು ಕಡಿಮೆ ಪ್ರಮಾಣಗಳಿಂದ ಇರುತ್ತವೆ. ಅಲ್ಲದೆ ಪೃಥ್ವಿಗೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿವೆ. ಅಪ್ಪುವಿಗೆ ಶಬ್ದ, ಸ್ಪರ್ಶ, ರೂಪ, ರಸ ಎಂದು ೪ ಗುಣಗಳಿವೆ. ಅಗ್ನಿಗೆ ಶಬ್ದ, ಸ್ಪರ್ಶ, ರೂಪು ಮಾತ್ರಗಳಿವೆ. ವಾಯುವಿಗೆ ಶಬ್ದ ಸ್ಪರ್ಶಗಳಿವೆ. ಆಕಾಶಕ್ಕೆ ಶಬ್ದ ಮಾತ್ರವಿದೆ. ಇವುಗಳ ನಾನಾವಿಧ ಮಿಶ್ರಣಗಳಿಂದ ವಿಧವಿಧವಾದ ಗುಣ ಧರ್ಮಗಳು ಪದಾರ್ಥಗಳಲ್ಲಿ ಉಂಟಾಗುತ್ತವೆ. ಇವೆಲ್ಲವುಗಳು ಈ ಪಂಚಮಹಾಭೂತಗಳ ಮೂಲಕವಾಗಿಯೇ ಉತ್ಪನ್ನವಾಗುತ್ತವೆಂದು ವಚನಕಾರರು ಬಗೆಯುತ್ತಾರೆ. ಆದ್ದರಿಂದ ಯಾವ ಯಾವ ವಸ್ತುಗಳಲ್ಲಿ ಯಾವ ಯಾವ ಗುಣಗಳಿರುತ್ತವೋ ಅವೆಲ್ಲವೂ ಆ ಗುಣಗಳಿಗೆ ಸಂಬಂಧಿಸಿದ ಮಹಾಭೂತಗಳಿಂದ ಉಂಟಾಗುತ್ತವೆಂದು ತಿಳಿಯಲ್ಪಟ್ಟಿದೆ. ಒಂದು ವಸ್ತುವಿನಲ್ಲಿ ಅನೇಕ ತರದ ಗುಣಗಳಿರಬಹುದು. ಈ ಎಲ್ಲ ಗುಣಗಳಿಗೆ ಕಾರಣವಾದವುಗಳು ಈ ಪಂಚಮಹಾಭೂತಗಳೇ ಇರುತ್ತವೆ. ಆದರೆ ಇವುಗಳು ಹೆಚ್ಚು ಕಡಿಮೆ ಪ್ರಮಾ



ಣದ ಪರಸ್ಪರ ಕೂಡುವದರಿಂದ ಪದಾರ್ಥಗಳ ವೈಶಿಷ್ಟ್ಯಗಳು ಉಂಟಾಗುತ್ತವೆ. ಉದಾ: ಒಂದು ಪದಾರ್ಥವು ಅತ್ಯಂತ ಬಿರಿಸು, ಮತ್ತೊಂದು ಅದಕ್ಕೂ ಕಡಿಮೆ ಬಿರಿಸು, ಅಥವಾ ಪ್ರವಾಹಿ, ಅಥವಾ ಉಗೆ ರೂಪು ಇದ್ದು ಇರಬಹುದು. ಪಂಚಮಹಾ ಭೂತಗಳು ಬೇರೆ ಬೇರೆ ಪ್ರಮಾಣಗಳಿಂದ ಆಯಾ ವಸ್ತುಗಳಲ್ಲಿ ಪರಸ್ಪರ ಕೂಡುವದರಿಂದ ಈ ವಿವಿಧತೆಯು ಅವುಗಳಲ್ಲಿ ಉಂಟಾಗುತ್ತದೆ. ಈ ಪಂಚಮಹಾಭೂತಗಳು ಪಂಚಸಾದಾಖ್ಯಗಳಲ್ಲಿಯೇ ಅನುಕ್ರಮವಾಗಿ ಹುಟ್ಟುತ್ತವೆ. ಅಥವಾ ಅವೇ ಭಾವವುಳ್ಳ ಶಿವನ ಪಂಚ ಮುಖಗಳಿಂದಲೂ ಹುಟ್ಟುತ್ತವೆಂದು ಹೇಳಲ್ಪಡುವದುಂಟು.

(೨೮) ಪಂಚೀಕರಣ: ಪಂಚಮಹಾಭೂತಗಳಲ್ಲಿಯ ಪ್ರತಿಯೊಂದು ತತ್ವವು ಈ ಎಲ್ಲ ಐದು ತತ್ವಗಳಲ್ಲಿ ಕೂಡುತ್ತದೆ. ಉದಾ:— ಪೃಥ್ವಿಯಲ್ಲಿ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ತತ್ವಗಳು ಕೂಡುತ್ತವೆ. ಅಪ್ಪು ತತ್ವದಲ್ಲಿ ಪೃಥ್ವಿ, ಅಪ್ಪು ತೇಜ, ವಾಯು, ಆಕಾಶ ತತ್ವಗಳು ಕೂಡುತ್ತವೆ. ಹೀಗೆ ಕೂಡುವದರಿಂದ ಮನುಷ್ಯನ ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು, ವಾಯುಗಳು, ಪಂಚವಿಷಯಗಳು, ಕರಣಚತುಷ್ಟಯಗಳು ಹುಟ್ಟುತ್ತಿವೆ. ಇದಕ್ಕೆ ಮಹಾಭೂತಗಳ ಪಂಚೀಕರಣವೆಂದು ಹೇಳಲ್ಪಡುತ್ತಿದೆ. ಪೃಥ್ವಿಯ ಪಂಚೀಕೃತಿ, ಉದಕದ ಪಂಚೀಕೃತಿ, ಅಗ್ನಿಯ ಪಂಚೀಕೃತಿ, ವಾಯುವಿನ ಪಂಚೀಕೃತಿ, ಆಕಾಶದ ಪಂಚೀಕೃತಿ, ಎಂದು ಹೇಳಲ್ಪಡುವದುಂಟು. ಒಂದೊಂದು ಪಂಚೀಕೃತಿಯಲ್ಲಿ ಮನುಷ್ಯನ ಅವಯುವಗಳೂ, ಇಂದ್ರಿಯಗಳೂ, ಅವನ ಕರಣಗಳೂ ಉಂಟಾಗುತ್ತವೆ. ಪೃಥ್ವಿಯ ಪಂಚೀ ಕೃತಿಯಿಂದ ಪಾಯು, ಗಂಧ, ಘ್ರಾಣೇಂದ್ರಿಯ, ಪ್ರಾಣವಾಯು. ಅಹಂಕಾರ ಇವು ಹುಟ್ಟುತ್ತವೆ. ಉದಕದ ಪಂಚೀ ಕೃತಿಯಿಂದ ಗುಹ್ಯೇಂದ್ರಿಯ, ರಸ, ಜಿಹ್ವೇಂದ್ರಿಯ, ಅಪಾನವಾಯು, ಚಿತ್ತ, ಇವು ಹುಟ್ಟುತ್ತವೆ. ಅಗ್ನಿಯ ಪಂಚೀಕೃತಿಯಿಂದ ಪಾದೇಂದ್ರಿಯ, ರೂಪು, ನೇತ್ರೇಂದ್ರಿಯ, ಉದಾನವಾಯು, ಬುದ್ಧಿ ಇವುಗಳು ಹುಟ್ಟುತ್ತವೆ. ವಾಯುವಿನ ಪಂಚೀಕೃತಿಯಿಂದ ಪಾಣೇಂದ್ರಿಯ, ಸ್ಪರ್ಶನ, ತ್ವಗಿಂದ್ರಿಯ, ವ್ಯಾನವಾಯು, ಮನಸ್ಸು ಹುಟ್ಟುತ್ತವೆ. ಆಕಾಶದ ಪಂಚೀ ಕೃತಿಯಿಂದ

ವಾಗಿಂದ್ರಿಯ, ಶಬ್ದ, ಶ್ರೋತ್ರೇಂದ್ರಿಯ, ಸಮಾನವಾಯು, ಜ್ಞಾತೃ ತತ್ವ ಇವುಗಳು ಉಂಟಾಗುತ್ತವೆ.

(೨೯) ತತ್ವಗಳು:– ಇವು ೩೬ ಇವೆ. ಇವುಗಳ ಜ್ಞಾನದಿಂದ ಮನುಷ್ಯನು ತಾನಾರೆಂಬುದನ್ನು ಅರಿತು ತನ್ನ ಅಂತಃ ಶಕ್ತಿಗಳನ್ನು ಬೆಳಸಿಕೊಂಡು ಸಾಮರಸ್ಯವನ್ನು ಹೊಂದುವನು. ೩೬ ತತ್ವಗಳಲ್ಲಿ ೨೫ ತತ್ವಗಳಿದ್ದು ಅವುಗಳ ಜ್ಞಾನದಿಂದ ಮನುಷ್ಯನು ತನ್ನನ್ನು ತಾನು ತಿಳಿಯಲು ಶಕ್ತನಾಗುತ್ತಾನೆ. ಇವು ಐದು ಕರ್ಮೇಂದ್ರಿಯಗಳು ಐದು ಜ್ಞಾನೇಂದ್ರಿಯಗಳು ಐದು ಪ್ರಾಣಾದಿವಾಯುಗಳು ಐದು ಶಬ್ದಾದಿ ವಿಷಯಗಳು ನಾಲ್ಕು ಚಿತ್ತ ಮನ ಬುದ್ಧಿ ಅಹಂಕಾರಗಳು ಮತ್ತು ಜೀವನು ೧ ಹೀಗೆ ೨೫ ತತ್ವಗಳಿವೆ. ಇವುಗಳಿಗೆ ಆತ್ಮ ತತ್ವಗಳೆಂದು ಹೆಸರು. ಇವುಗಳನ್ನು ಅರಿತಾಗಲೇ ಮನುಷ್ಯನು ತಾನು ಹೇಗೆ ಆಚರಿಸಬೇಕೆಂಬುದನ್ನು ತಿಳಿಯುತ್ತಾನೆ. ಇವುಗಳಲ್ಲದೆ ಲಿಂಗ ತತ್ವಗಳು ೧೦ ಇವೆ. ಇವುಗಳಿಗೆ ವಿದ್ಯಾತತ್ವಗಳೆಂತಲೂ ಹೆಸರು ಇದೆ. ಇವು ಪಂಚ ಸಾದಾಖ್ಯಗಳು ಮತ್ತು ಪಂಚ ಕಲೆಗಳು ಇವೆ ಪಂಚ ಸಾದಾಖ್ಯಗಳು ಹಿಂದೆ ನಂ॥ ೨೩ ರಲ್ಲಿ ಹೇಳಲ್ಪಟ್ಟಿವೆ. ಪಂಚಕಲೆಗಳು ಮುಂದೆ ನಂ॥ ೩೦ ರಲ್ಲಿ ಹೇಳಲ್ಪಡುವವು. ಇವುಗಳ ಜ್ಞಾನದ ಮೂಲಕವೇ ಮನುಷ್ಯನು ಉತ್ಕ್ರಾಂತಿಯನ್ನು ಹೇಗೆ ಹೊಂದಬೇಕೆಂಬುದು ತಿಳಿಯುತ್ತಿದೆ. ಕಲೆಗಳು ಶಾಂತ್ಯಾತೀತ, ಶಾಂತಿ, ವಿದ್ಯಾ, ಪ್ರತಿಷ್ಠೆ, ನಿವೃತ್ತಿ ಇವುಗಳು ಇರುತ್ತವೆ. ಇವುಗಳಿಗೆ ತೂರ್ಯ ತತ್ವಗಳೆಂತಲೂ ಬೇರೊಂದು ಹೆಸರು ಇದೆ. ಇನೆಲ್ಲಕ್ಕೆ ಉತ್ತರವಾಗಿ ಶಿವ ತತ್ವವು ಇದೆ. ಮನುಷ್ಯನು ಈ ೧೦ ತತ್ವಗಳ ಸಹಾಯದಿಂದಲೂ ಕೂಡ ಶಿವತತ್ವದಲ್ಲಿ ಬೆರೆಯಬೇಕು. ಇದೇ ಲಿಂಗಾಂಗ ಸಾಮರಸ್ಯವು. ಬೆರೆಯುವ ಕ್ರಮವು ಹೇಗೆಂದರೆ:– ನಿವೃತ್ತಿಕಲೆಯನ್ನು ಹೊಂದಿ ವಾಗಾದಿ ಕರ್ಮೇಂದ್ರಿಯಗಳು ಕರ್ಮಸಾದಾಖ್ಯವನ್ನು ಒಡಗೂಡಬೇಕು. ಆಗ ಪೃಥ್ವಿ ತತ್ವವು ಬಯಲಾಗುತ್ತದೆ. ಪ್ರತಿಷ್ಠಾ ಕಲೆಯನ್ನು ಹೊಂದಿ ಶಬ್ದವಿಷಯಗಳು ಐದು ಕರ್ತೃ ಸಾದಾಖ್ಯವನ್ನು ಕೂಡಿದಲ್ಲಿ ಅಪ್ಪುತತ್ವ ಬಯಲಾಗುತ್ತದೆ. ವಿದ್ಯಾಕಲೆಯನ್ನು ಹೊಂದಿ ಶ್ರೋತ್ರಾದಿ ಜ್ಞಾನೇಂದ್ರಿಯಗಳು ಮೂರ್ತಿಸಾದಾಖ್ಯವನ್ನು ಕೂಡಿದಲ್ಲಿ ತೇಜತತ್ವವು ಬಯಲಾಗು



ತ್ತವೆ. ಶಾಂತಿಕಲೆಯನ್ನು ಹೊಂದಿ ಪ್ರಾಣಾದಿ ವಾಯುಗಳು ಅಮೂರ್ತಿ ಸಾದಾಖ್ಯವನ್ನು ಒಡಗೂಡಿದಲ್ಲಿ ವಾಯು ತತ್ವವು ಬಯಲಾಗುತ್ತದೆ. ಶಾಂತ್ಯಾತೀತ ಕಲೆಯನ್ನು ಕೂಡಿ ಮನ ಬುದ್ಧಿ ಚಿತ್ತ ಅಹಂಕಾರ ಜೀವಗಳು ಶಿವಸಾದಾಖ್ಯವನ್ನು ಕೂಡಿದಲ್ಲಿ ಆಕಾಶತತ್ವ ಬಯಲಾಗುತ್ತದೆ. ಹೀಗೆ ೨೫ ತತ್ವಗಳು ಲಿಂಗೈಕ್ಯವಾದಲ್ಲಿ ಆ ಲಿಂಗತತ್ವಗಳು ಹನ್ನೊಂದು ತಾವು ಪರಸ್ಪರ ಕೂಡಿಕೊಂಡು ಹೋಗುವವು. ಹೀಗೆ ಕೂಡಿದಲ್ಲಿ ಸರ್ವಶೂನ್ಯಸ್ಥಿತಿಯು ಪ್ರಾಪ್ತವಾಗುವದು.

(೩೦) ಕಲೆಗಳು:— ಇವು ಐದು ಇವೆ. ಅವು ಯಾವವೆಂದರೆ ಶಾಂತ್ಯಾತೀತ, ಶಾಂತಿ, ವಿದ್ಯಾ, ಪ್ರತಿಷ್ಠಾ, ಮತ್ತು ನಿವೃತ್ತಿ. ಅಲ್ಲದೆ ಶಾಂತ್ಯಾತೀತೋತ್ತರ ಎಂತಲೂ ಬೇರೊಂದು ಕಲೆಯನ್ನು ಹೇಳುವದುಂಟು. ಅದು ಓಂಕಾರ ರೂಪವಾದ ಮಹಾಲಿಂಗದಲ್ಲಿ ಶೂನ್ಯಸ್ಥಿತಿಯಲ್ಲಿರುತ್ತದೆ. ಆದ್ದರಿಂದ ಅದನ್ನು ಬಿಟ್ಟು ಪಂಚಕಲೆಗಳೆಂತಲೇ ಹೇಳುವ ವಾಡಿಕೆಯೂ ಉಂಟು. ನಾದ ಬಿಂದು ಕಲೆಗಳು ಮೂಲಚಿತ್ತುವಿನೊಡನೆ ಕೂಡಿಕೊಂಡು ಪ್ರಣವವಾಗುತ್ತದಷ್ಟೇ (ನಂ॥ ೨೪ ಪ್ರಣವ ನೋಡಿರಿ.) ಈ ಪ್ರಣವದಲ್ಲಿ ಯ, ವ, ಶಿ, ಮ, ನ ಎಂಬ ಮಂತ್ರಾಕ್ಷರಗಳು ಕ್ರಮೇಣ ಉತ್ಪನ್ನವಾಗುತ್ತವೆ. 'ಯ' ಇದು ಅತ್ಯಂತ ಸೂಕ್ಷ್ಮವು. ಮುಂದೆ ಅದರ ಸ್ಥೂಲರೂಪಗಳು ಕ್ರಮೇಣ ವ, ಶಿ, ಮ, ನ ಎಂದು ಇರುತ್ತವೆ. ಈ ಪಂಚಾಕ್ಷರಗಳಿಂದ ಶಾಂತ್ಯಾತೀತ, ಶಾಂತಿ, ವಿದ್ಯಾ, ಪ್ರತಿಷ್ಠಾ ಮತ್ತು ನಿವೃತ್ತಿ ಈ ಕಲೆಗಳು ಅನುಕ್ರಮವಾಗಿ ಉದಯವಾಗುತ್ತವೆ. ಈ ಐದು ಕಲೆಗಳಿಂದ ಐದು ಶಕ್ತಿಗಳು ಅಂದರೆ ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಮತ್ತು ಕ್ರಿಯಾಶಕ್ತಿ ಇವುಗಳು ಉದಯವಾಗುತ್ತವೆ. ಈ ಐದು ಶಕ್ತಿಗಳೇ ಜಗತ್ತಿನ ದೃಶ್ಯ ಪದಾರ್ಥಗಳನ್ನು ಉಂಟು ಮಾಡುತ್ತವೆ. ಈ ಪ್ರಕಾರ ಇವೆಲ್ಲವುಗಳ ಕ್ರಮವಿರುತ್ತದೆ. ಅಂದರೆ ಮೂಲಪ್ರಣವದಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ಪ್ರಣವಾಕ್ಷರಗಳಲ್ಲಿ ಜಗತ್ತಿಗೆ ಕಾರಣವಾಗಿರುವ ಕಲೆಗಳೂ ಶಕ್ತಿಗಳೂ ಹುದುಗಿರುತ್ತವೆ. ಹೀಗೆ ಈ ಎಲ್ಲಕ್ಕೆ ಮೂಲ ಆಧಾರವಾದವುಗಳು ಮಂತ್ರಗಳೇ. ನಿವೃತ್ತಿಕಲೆಯ ಕಾರ್ಯವು

ಜಗತ್ತಿನ ಪ್ರಗತಿಯು ಆಗುವಲ್ಲಿ ಅದನ್ನು ಪರಮಾತ್ಮನತ್ತ ಒಯ್ಯು
ವದು ಇರುತ್ತದೆ. ಅಂದರೆ ಮಾಲಿನ್ಯವನ್ನು ತೊಳೆಯುವದೇ ಅದರ
ಕಾರ್ಯವು. ಪ್ರತಿಷ್ಠಾ ಕಲೆಯ ಕಾರ್ಯವು ಪ್ರಗತಿಯಲ್ಲಿ ಸ್ಥಿರತೆಯ
ನ್ನುಂಟು ಮಾಡುವದು ಇದೆ. ಶಾಂತಿ, ಶಾಂತ್ಯಾತೀತ ಇವುಗಳು ಜಗತ್ತಿನ
ಕಾರ್ಯಗಳಲ್ಲಿ ಶಾಂತಿಯನ್ನು ಅಂದರೆ ಯಾವ ತರದ ಅವ್ಯವಸ್ಥಿತ ಚಲನೆ
ಯನ್ನುಂಟು ಮಾಡಗೊಡದೆ ಅವುಗಳನ್ನು ನಿಧಾನವಾಗಿ ಸರಿಯಾದ ಮಾರ್ಗ
ದಿಂದ ಒಯ್ಯುವ ಕಾರ್ಯಗಳನ್ನು ಮಾಡುತ್ತವೆ. ಈ ಕಲೆಗಳಿಗನುಸಾರ
ವಾಗಿ ಆಯಾ ಶಕ್ತಿಗಳೂ ಉಂಟಾಗುತ್ತವೆ. ಹೀಗೆ ಉಂಟಾದ ಶಕ್ತಿಗಳು
ಉಚ್ಚತರದ ಕಾರ್ಯಗಳಲ್ಲಿ ತೊಡಗಿಸುವಂಥವು ಇರುತ್ತವೆ. ನಿವೃತ್ತಿಯಲ್ಲಿ
ಕ್ರಿಯಾಶಕ್ತಿ, ಪ್ರತಿಷ್ಠೆಯಲ್ಲಿ ಜ್ಞಾನಶಕ್ತಿ, ವಿದ್ಯೆಯಲ್ಲಿ ಇಚ್ಛಾಶಕ್ತಿ, ಶಾಂತಿ
ಯಲ್ಲಿ ಆದಿಶಕ್ತಿ, ಶಾಂತ್ಯಾತೀತೆಯಲ್ಲಿ ಪರಾಶಕ್ತಿ. ಇವುಗಳು ಉದ್ಭವಿಸು
ತ್ತವೆ. ಶಾಂತ್ಯಾತೀತೋತ್ತರೆಯಲ್ಲಿ ಚಿತ್‌ಶಕ್ತಿಯು ಇರುತ್ತದೆ. ಅದೇ
ಮಹಾಲಿಂಗವು, ಅಥವಾ ಮೂಲ ಪ್ರಣವವು. ಈ ಕಲೆಗಳು, ಶಕ್ತಿಗಳು,
ನ, ಮ, ಶಿ, ವಾ, ಯ ಎಂಬ ಪ್ರಣವಾಕ್ಷರಗಳೊಳಗಿಂದಲೇ ವ್ಯಕ್ತ
ವಾಗುತ್ತವೆ. ಮನುಷ್ಯನು ಇವುಗಳನ್ನು ತಿಳಿದುಕೊಂಡು ಆಚರಿಸಿದಲ್ಲಿ
ಅವನಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ,
ಪ್ರಸಾದಲಿಂಗ ಎಂಬ ಲಿಂಗಗಳು ಕ್ರಮೇಣ ಬೆಳಗಹತ್ತುತ್ತಿವೆ. ಈ ಲಿಂಗ
ಗಳ ಅಂತಿಮ ಸ್ಥಿತಿಯು ಮಹಾಲಿಂಗವೇ ಇರುತ್ತದೆ. ಮನುಷ್ಯನು
ಅದರಲ್ಲಿ ಬೆರೆತಲ್ಲಿ ಶೂನ್ಯ ಸ್ಥಿತಿಯೊಳಗೆ ಹೋಗುತ್ತಾನೆ.

(೩೧) ಸಂಜ್ಞೆಗಳು— ಇವು ಐದು ಇವೆ. ಅವು ೧ ಪರ.
೨ ಗೂಢ. ೩ ಶರೀರಸ್ಥ. ೪ ಲಿಂಗಕ್ಷೇತ್ರ. ೫ ಅನಾದಿ ಈ ಪ್ರಕಾರ
ಇರುತ್ತವೆ. ಪರಮಾತ್ಮನ ಇರವು ಹೇಗಿರುತ್ತದೆಂಬುದನ್ನು ಇವುಗಳು
ವಿವರಿಸುತ್ತವೆ.

(೧) ಪರಮಾತ್ಮನು 'ಪರ' ಎಂದರೆ ಸೃಷ್ಟಿಸಲ್ಪಟ್ಟ ಎಲ್ಲ ವಸ್ತುಗಳಿಗೆ
ಮೀರಿದವನೆಂಬ ಅರ್ಥವು. ಅಂದರೆ ಅವೆಲ್ಲವುಗಳಿಗೂ ಮಿಗಿಲಾದವನು.
ಅವನು ವಿಚಾರಕ್ಕೆ ಮೀರಿದವನು, ಮನುಷ್ಯನ ಇಂದ್ರಿಯಗಳಿಗೆ



ಅಗೋಚರನು ಇದ್ದಾನೆ. (೨) ಅವನು ಗೂಢನಾಗಿರುತ್ತಾನೆ. ಅಂದರೆ
ಅವನು ಪ್ರಕಟವಾಗಿ ಅಥವಾ ಪ್ರತ್ಯಕ್ಷವಾಗಿ ಮನುಷ್ಯನಿಗೆ ಕಾಣಿಸಿ
ಕೊಳ್ಳನು. ಯಾಕಂದರೆ ಅವನಿಗೆ ಆಕಾರವಿಲ್ಲ, ಮತ್ತು ಯಾವ ತರ
ಹದ ಅವಯವಗಳಿಲ್ಲ. (೩) ಹೀಗಿದ್ದರೂ ಅವನು ಪದಾರ್ಥಗಳಲ್ಲಿ,
ಚರಾಚರ ವಸ್ತುಗಳಲ್ಲೆಲ್ಲ ಇದ್ದಾನೆ. ಅಂದರೆ ಅವನಿಗೆ ವಾಸಿಸಲು
ಯಾವದೇ ಒಂದು ವಿಶಿಷ್ಟ ಸ್ಥಾನವಿಲ್ಲ. ಅವನು ಸರ್ವ ವ್ಯಾಪಿಯು.
ಆದ್ದರಿಂದ ಅವನು ಎಲ್ಲವುಗಳಲ್ಲಿಯೂ ಇರುತ್ತಾನೆ. ಆದ್ದರಿಂದ ಅವನು
ಶರೀರಸ್ಥನೆಂದು ಹೇಳಲ್ಪಟ್ಟಿದ್ದಾನೆ. (೪) ಅವನು ಹೀಗೆ ಶರೀರಸ್ಥನಾಗಿ
ದ್ದರೂ ಪದಾರ್ಥಗಳಲ್ಲಿ ಅವನು ಲಿಂಗ ರೂಪನಾಗಿ ಇದ್ದಾನೆ. ಆ ರೀತಿ
ಯಾಗಿದ್ದುಕೊಂಡು ಎಲ್ಲವುಗಳಿಗೂ ಪ್ರೇರಕನಾಗಿ ವರ್ತಿಸುತ್ತಾನೆ. ಅಂ
ದರೆ ಅವನು ಪ್ರತ್ಯಕ್ಷವಾಗಿ ಪ್ರಾಣಿಗಳಂತೆ ಕಾರ್ಯಗಳನ್ನು ಮಾಡುವದಿಲ್ಲ.
ಅವನು ಮಾಡುವದಿದ್ದರೆ ಈ ಲಿಂಗಚೈತನ್ಯ ಮೂಲಕ ಮನುಷ್ಯನ ಅಥವಾ
ಪದಾರ್ಥಗಳ ವ್ಯವಹರಣೆಗೆ ಕಾರಣನಾಗುತ್ತಾನೆ. ಈ ವ್ಯವಹರಣೆಯು
ಯೋಗ್ಯ ಮಾರ್ಗದಲ್ಲಿದ್ದರೆ ಅದು ಲಿಂಗವಶದಿಂದ ಉಂಟಾದುದೆಂದು
ತಿಳಿಯಬೇಕು. ಇಲ್ಲದಿದ್ದರೆ ಅದು ಮಾಯಾ ವಶವಾದುದು. ಆದ್ದರಿಂದ
ಅವನು ಲಿಂಗಕ್ಷೇತ್ರನೆಂದು ಹೇಳಲ್ಪಡುತ್ತಾನೆ. (೫) ಪರಮಾತ್ಮನು
ಅನಾದಿಯಾಗಿದ್ದಾನೆ. ಅಂದರೆ ಅವನಿಗೆ ಆದಿ ಎಂದರೆ ಹುಟ್ಟು ಎಂಬು
ದಿಲ್ಲ. ಹುಟ್ಟು ಇಲ್ಲದ್ದರಿಂದ ಅವನಿಗೆ ಅಂತ್ಯ ಎಂದರೆ ಮರಣವೂ ಇಲ್ಲ.
ಹೀಗೆ ಈ ಐದು ಗುಣಗಳಿಂದ ಅವನನ್ನು ನಾವು ಗುರುತಿಸಬೇಕು.
ಈ ಗುರುತುಗಳಿಗೆ ಸಂಜ್ಞೆ ಎಂಬ ಹೆಸರು.

(೩೨) ಲಕ್ಷಣಗಳು:— ಇವು ಐದು ಇವೆ. ಅವು ೧ ಸತ್
೨ ಚಿತ್ ೩ ಆನಂದ ೪ ನಿತ್ಯ ೫ ಪರಿಪೂರ್ಣ ಈ ಪ್ರಕಾರ
ಇರುತ್ತವೆ. ಇವು ಪರಮಾತ್ಮನ ಸ್ವರೂಪವನ್ನು ಹೇಳುತ್ತವೆ. (೧) ಪರ
ಮಾತ್ಮನು ಸತ್ ಸ್ವರೂಪನಾಗಿದ್ದಾನೆ. ಅಂದರೆ ಅವನಿಗೆ ಅಸ್ತಿತ್ವವು
ಇದೆ. ನಾಸ್ತಿಕರು ಪರಮಾತ್ಮನು ಇಲ್ಲೆಂದು ಪ್ರತಿಪಾದಿಸುತ್ತಾರೆ.
ಆದರೆ ವೀರಶೈವರು ಪರಮಾತ್ಮನು ಇದ್ದಾನೆಂದು ಭಾವಿಸುವದುಂಟು.

(೨) ಪರಮಾತ್ಮನು ಚಿತ್‌ಸ್ವರೂಪನಾಗಿದ್ದಾನೆ. ಚಿತ್ ಎಂದರೆ ಚೈತ
ನ್ಯವು. ಇದು ಇಡೀ ಬ್ರಹ್ಮಾಂಡದಲ್ಲೆಲ್ಲ ವ್ಯಾಪಿಸಿರುತ್ತದೆ. ಇದಕ್ಕೆ
ಚಿತ್ ಶಕ್ತಿ ಎಂತಲೂ ಹೆಸರಿದೆ. (೩) ಪರಮಾತ್ಮನು ಆನಂದ ಸ್ವರೂ
ಪನು. ಇಲ್ಲಿ ಆನಂದವೆಂದರೆ ಜ್ಞಾನ ಅಥವಾ ಅರಿವು ಎಂದು ತಿಳಿ
ಯಬೇಕು. ಇದಕ್ಕೆ ಚ್ಯುತಿಯು ಅಥವಾ ಕೊರತೆಯು ಇಲ್ಲ. ಈ
ಆನಂದವು ಜ್ಞಾನ, ಅರಿವು, ಬೆಳಗು, ಸಾಮರಸ್ಯ, ಪ್ರಕಾಶ, ಪರ
ಸುಖ, ಪ್ರಭೆ, ಜ್ಞಾನಾನಂದ ಈ ಮೊದಲಾದ ಶಬ್ದಗಳಿಂದಲೂ ಕರೆ
ಯಲ್ಪಡುವದುಂಟು. ಈ ಆನಂದವು ಮನುಷ್ಯನ ಇಂದ್ರಿಯಾನಂದಕ್ಕೆ
ನಿಲುಕದಂಥಾದ್ದು. (೪) ಪರಮಾತ್ಮನು ನಿತ್ಯನಾಗಿದ್ದಾನೆ. ಅಂದರೆ
ಅವನು ನಾಶರಹಿತನು. ಅವನಿಗೆ ಮರಣವಿಲ್ಲ. (೪) ಅವನು ಪರಿಪೂ
ರ್ಣನಾಗಿದ್ದಾನೆ. ಜಗತ್ತಿನಲ್ಲಿಯ ಮಿಕ್ಕ ವಸ್ತುಗಳೆಲ್ಲವೂ ಅಪೂರ್ಣವಾ
ದವುಗಳು. ಅವುಗಳಲ್ಲಿ ಆವುದಾದರೊಂದು ಕೊರತೆಯು ಇದ್ದೇ ಇರು
ತ್ತವೆ. ಇಂಥ ಕೊರತೆಯು ಪರಮಾತ್ಮನಲ್ಲಿರುವದಿಲ್ಲ.

(೩೩) ಪ್ರಣವಗಳು— ನ, ಮ, ಶಿ, ವಾ, ಯ ಇವು ಪ್ರಣ
ವುಗಳೆಂದು ಹೇಳಲ್ಪಡುತ್ತಿವೆ. ಅವು ಓಂಕಾರದಿಂದ ಉದ್ಭವಿಸುತ್ತವೆ.
ಇವು ಜಗತ್ತಿನಲ್ಲಿಯ ಎಲ್ಲ ಪದಾರ್ಥಗಳಲ್ಲೆಲ್ಲ ತುಂಬಿವೆ. ಓಂಕಾರವು
ಆಯಾ ಪದಾರ್ಥಗಳ ಪ್ರಗತಿಯ ಮೇರೆಗೆ ಈ ಪಂಚ ಪ್ರಣವುಗಳ
ಮೂಲಕ ಜಗತ್ತನ್ನು ಆವರಿಸಿರುತ್ತದೆ. ಇವುಗಳು ಪದಾರ್ಥಗಳಲ್ಲಿ
ಅವವುಗಳ ವಿಶಿಷ್ಟ ಚೈತನ್ಯವನ್ನು ಉಂಟುಮಾಡುತ್ತವೆ. ನ, ಮ,
ಶಿ, ವಾ, ಯ, ಇವುಗಳಲ್ಲಿ ನ ಕಾರಕ್ಕಿಂತಲೂ ಮ ಕಾರವು ಹೆಚ್ಚು
ಸೂಕ್ಷ್ಮವು. ಮ ಕಾರಕ್ಕಿಂತಲೂ ಶಿ ಕಾರವು, ಶಿ ಕಾರಕ್ಕಿಂತಲೂ ವ
ಕಾರವು, ವ ಕಾರಕ್ಕಿಂತಲೂ ಯ ಕಾರವು ಹೆಚ್ಚು ಹೆಚ್ಚು ಸೂಕ್ಷ್ಮತರ
ವಾಗಿ ಇರುತ್ತವೆ. ಈ ಪ್ರಣವುಗಳು ಆಯಾ ಪದಾರ್ಥಗಳ ವಿಶೇಷ
ಶಕ್ತಿಗೆ ಮತ್ತು ಕಾರ್ಯಗಳಿಗೆ ಕಾರಣಗಳಾಗಿರುತ್ತವೆ.

ಓಂಕಾರಕ್ಕೆ ಮೂಲ ಪ್ರಣವವೆಂತಲೂ ಉಳಿದ ಐದು ಪ್ರಣವುಗಳಿಗೆ
ಬರೇ ಪ್ರಣವುಗಳೆಂತಲೂ ಪ್ರಣವಾಕ್ಷರಗಳೆಂತಲೂ ಹೆಸರುಗಳಿವೆ. ವೀರ



ಶೈವರಲ್ಲಿ ಈ ಪ್ರಣವುಗಳ ಮೂಲಕ ಅನೇಕ ಬಗೆಯ ಜಪಗಳುಂಟಾ
ಗಿವೆ. ಅವುಗಳ ಜಪಗಳನ್ನು ಮಾಡುವಲ್ಲಿ ಆ ಪ್ರಣವುಗಳ ಅರ್ಥವನ್ನು
ತಿಳಿದುಕೊಂಡು ಜಪಮಾಡುವದನ್ನು ಗೊತ್ತುಮಾಡಿಕೊಳ್ಳಬೇಕು. ಹೀಗೆ
ಜಪಿಸಿದಲ್ಲಿ ಅವು ಪರಿಣಾಮಕಾರಿಗಳು. ಆ ಅರ್ಥಗಳು ಆಯಾ ಪ್ರಣ
ವುಗಳಲ್ಲಿ ಗರ್ಭಿತನಾಗಿದ್ದು, ಅವುಗಳ ರೀತಿಯನ್ನು ಗುರುಮುಖದಿಂದ
ಅರಿಯಬೇಕೆಂಬ ಸಾಂಪ್ರದಾಯವಿದೆ.

ಈ ಪ್ರಣವುಗಳು ಪಂಚಸಾದಾಖ್ಯಗಳನ್ನು ಸೂಚಿಸುತ್ತವೆ. ಜಗತ್ತಿನ
ಆರಂಭದಲ್ಲಿ ಈ ಸಾದಾಖ್ಯಗಳಲ್ಲಿ ಉತ್ಪನ್ನವಾಗುವ ಶಕ್ತಿ ಮೊದಲಾದವುಗ
ಳಿಗೆ ಈ ಪ್ರಣವುಗಳೇ ಮೂಲಕಾರಣಗಳು. ಜಗತ್ತಿನಲ್ಲಿದ್ದಂತೆಯೇ ದೇಹದ
ಲ್ಲಿಯೂ ಕೂಡ ಇವು ಇರುತ್ತವೆ. ಇವು ಅಲ್ಲಿ ಇರುವ ಮುಖ್ಯ ಸ್ಥಾನಗಳೆಂದರೆ
ಷಟ್ ಚಕ್ರಗಳು. ಅವುಗಳಲ್ಲಿದ್ದುಕೊಂಡು ಅವು ಮನುಷ್ಯನ ವ್ಯಾಪಾರ
ಗಳಿಗೆ ಪ್ರೇರಣೆಮಾಡುತ್ತವೆ. ಪ್ರಣವುಗಳ ಮೂಲಕ ಈ ವ್ಯಾಪಾರಗಳು
ಸನ್ಮಾರ್ಗದಲ್ಲಿ ಸಾಗುತ್ತವೆ. ಹೀಗೆ ಸನ್ಮಾರ್ಗದಲ್ಲಿ ಹೋದದ್ದಾದರೆ
ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ
ಮಹಾಲಿಂಗ ಇವುಗಳು ಆಯಾ ಚಕ್ರಗಳಲ್ಲಿ ಬೆಳಗಹತ್ತುತ್ತಿವೆ. ಈ ಪ್ರಣ
ವುಗಳನ್ನು ಸರಿಯಾಗಿ ಧ್ಯಾನಿಸಿದಲ್ಲಿ ಈ ಲಿಂಗಗಳು ಆಯಾ ಚಕ್ರಗಳಲ್ಲಿ
ದೃಢಪಡುತ್ತಿವೆ. ಆದರೆ ಭಕ್ತಿ ಪೂರ್ವಕವಾಗಿ ಮತ್ತು ಅವುಗಳ ಅರ್ಥ
ಗಳನ್ನು ತಿಳಿದುಕೊಂಡು ಅವುಗಳನ್ನು ಧ್ಯಾನಿಸತಕ್ಕದ್ದು. ಈ ತರದ
ಧ್ಯಾನವು ಶಿವಯೋಗಕ್ಕೆ ಮುಖ್ಯ ಸಾಧನವು.

'ಓಂ ನಮಶ್ಶಿವಾಯ' ಇದು ಷಡಕ್ಷರ ಮಂತ್ರವೆಂದು ಹೇಳಲ್ಪಡು
ತ್ತಿದೆ. ಮೂಲ ಪ್ರಣವುವನ್ನು ಬಿಟ್ಟು ಉಚ್ಚರಿಸಿದರೆ, ಅದು ಪಂಚಾ
ಕ್ಷರೀ ಮಂತ್ರವೆಂದೆನಿಸಿಕೊಳ್ಳಲ್ಪಡುತ್ತದೆ. ಓಂಕಾರವು ಅವ್ಯಕ್ತವಾದುದು.
ಆದರೂ ಅದರ ಭಾವವನ್ನಿಟ್ಟುಕೊಂಡು ಅದನ್ನು ಉಚ್ಚರಿಸಿದಲ್ಲಿ ಅದು
ಷಡಕ್ಷರ ಮಂತ್ರವಾಗುವದು. ದೀಕ್ಷಾ ಕಾಲದಲ್ಲಿ ಈ ಮಂತ್ರವನ್ನು
ಗುರುವು ಉಪದೇಶಿಸುತ್ತಾನೆ. ಹೀಗೆ ಉಪದೇಶಿಸಿ ಅವನು ಮಂತ್ರದ ಅರ್ಥ
ವನ್ನೂ ತಿಳಿಸಿ ಕೊಡುವನು. ಅದನ್ನು ದೀಕ್ಷೆ ಹೊಂದುವವನು ತಿಳಿದು

ಕೊಂಡು ಅದರಂತೆ ಆಚರಿಸತಕ್ಕದ್ದು. ಈ ಆಚರಣೆಯೇ ಶಿವಯೋಗಕ್ಕೆ ಮುಖ್ಯಾಂಗವಾಗಿರುತ್ತದೆ. ಆದ್ದರಿಂದ ವೀರಶೈವರಲ್ಲಿ ಈ ಪಂಚಾಕ್ಷರೀ ಮಂತ್ರದ ಮಹತ್ವವು ಬಹಳವಿರುತ್ತದೆ. ಎಲ್ಲ ಮಂತ್ರಗಳ ಸಾರವೆಂತಲೂ ಅದು ಹೇಳಲ್ಪಡುತ್ತದೆ.

ಪ್ರಣಮಗಳು ಪರಶಿವನ ಪಂಚಮುಖಗಳ ದ್ಯೋತಕಗಳಾಗಿವೆ. ದೀಕ್ಷೆ, ಲಗ್ನ, ಮೊದಲಾದ ಕಾಲಗಳಲ್ಲಿ ಪಂಚಕಲಶಗಳನ್ನು ಸ್ಥಾಪಿಸುವದುಂಟಷ್ಟೇ. ಆಗ ಅವು ಪರಶಿವನ ಪಂಚ ಮುಖಗಳೆಂದು ಭಾವಿಸಲ್ಪಡುತ್ತವೆ. ಆಗ ಈ ಪ್ರಣಮಗಳು ಆಯಾ ಸ್ಥಾನಗಳಲ್ಲಿ ಸ್ಥಾಪಿಸಲ್ಪಡುವದುಂಟು.

ಪ್ರಣಮಗಳು ದೇಹದಲ್ಲಿಯೂ ಕೂಡ ಸ್ಥಾಪಿಸಲ್ಪಡುತ್ತವೆ. ಇಂದ್ರಿಯಗಳಲ್ಲಿಯೂ ಅವುಗಳು ಸ್ಥಾಪಿಸಲ್ಪಡುವದುಂಟು. ವೀರಶೈವರಲ್ಲಿ ಉದ್ಧರಣೆಗಳೆಂಬವುಗಳಿವೆ. ಅವು ಷಟ್‌ಸ್ಥಲ ಶಾಸ್ತ್ರ ತತ್ವ ಬೋಧಕಗಳಾಗಿರುತ್ತವೆ. ಅವುಗಳಲ್ಲಿ ಪ್ರಣಮಗಳ ಮೂಲಕವಾಗಿಯೇ ಈ ತತ್ವಗಳು ಹೇಳಲ್ಪಟ್ಟಿರುತ್ತವೆ.

(೩೪) ಆತ್ಮ:— ಎಲ್ಲ ಶರೀರಗಳಲ್ಲಿ ಆತ್ಮನು ಪ್ರತ್ಯೇಕವಾಗಿ ವಾಸಿಸುತ್ತಾನೆ. ಈ ಆತ್ಮನು ಪರಶಿವನ ಅಂಶವೇ ಇರುತ್ತದೆ. ಅದು ಪರಶಿವನಿಂದ ಉಗಮವಾಗಿ ಸೃಷ್ಟ ಪದಾರ್ಥಗಳಲ್ಲೆಲ್ಲ ಇದ್ದರೂ ಕಾಣದಂತಿರುತ್ತದೆ. ಮನುಷ್ಯನು ಮಾಯಾವಶನಾದಲ್ಲಿ ಪರಶಿವನ ಪೂರ್ಣ ಸ್ಥಿತಿಯು ಈ ಆತ್ಮನಲ್ಲಿ ತೋರಲಾರದು. ಆದರೆ ಮನುಷ್ಯನು ಸನ್ಮಾರ್ಗಿಯಾದಲ್ಲಿ ಪರಶಿವನ ಜ್ಯೋತಿಯು ಲಿಂಗ ರೂಪವಾಗಿ ಮನುಷ್ಯನಲ್ಲಿ ಕಾಣಹತ್ತುವದು. ಆಗ ಆತ್ಮನು ಪ್ರಕಟವಾಗಹತ್ತುವನು. ಜಡ ಪದಾರ್ಥಗಳಲ್ಲಿ ಈ ಪ್ರಗತಿಯು ಅತ್ಯಲ್ಪವಾದುದು. ಆದರೆ ಉಚ್ಚತರದ ಪ್ರಾಣಿ ಜಾತಿಗಳಲ್ಲಿ ಈ ಆತ್ಮನ ಪರಿಸ್ಥಿತಿಯು ಹೆಚ್ಚುವಿಕೆಯನ್ನು ಹೊಂದುತ್ತ ಹೋಗುತ್ತದೆ. ಹೀಗೆ ಆತ್ಮನು ಶಿವಾಂಶಿಕನಾಗಿರುತ್ತಾನೆ. ಅವನು ಪರಮಾತ್ಮನಿಗೆ ಸಂಬಂಧಪಟ್ಟವನು. ಆದರೆ ಶರೀರದಲ್ಲಿ ಮನಸ್ಸು, ಬುದ್ಧಿ, ಇಂದ್ರಿಯಗಳು, ಪ್ರಾಣ ಇವುಗಳಲ್ಲಿ ಅವನನ್ನು ಗುರುತಿಸಲಿಕ್ಕೆ ಬಾರದಿದ್ದರೂ ಇವೆಲ್ಲವುಗಳು ಅವನಿಗೆ



ಸಂಬಂಧಿಸಿಕೊಂಡು ತಮ್ಮ ತಮ್ಮ ಕ್ರಿಯೆಗಳನ್ನು ಮಾಡುತ್ತವೆ. ಆತ್ಮನು ಸಾಯುವದಿಲ್ಲ. ಅವನು ಮರಣರಹಿತನಾದವನು. ಅವನು ಕಡೆಗೆ ಪರಶಿವನಲ್ಲಿಯೇ ಅಡಗುವನು. ಆ ವರೆಗೆ ಅವನು ಜನ್ಮಾಂತರಗಳನ್ನು ಎತ್ತುತ್ತ ಹೋಗುತ್ತಾನೆ.

(೩೫) ಆತ್ಮತ್ರಯಗಳು:— ಇವು ಜೀವಾತ್ಮ, ಅಂತರಾತ್ಮ ಮತ್ತು ಪರಮಾತ್ಮಗಳೆಂದು ಇರುತ್ತವೆ. (೧) ಜೀವಾತ್ಮನು ಸಂಸಾರದಿಂದ ತುಂಬಿಕೊಂಡವನು. ಇದರಲ್ಲಿಯೇ ಅವನು ತೊಳಲಿ ಬಳಲಿ ಕಷ್ಟ ಪಡುತ್ತಾನೆ. ತಾನಾರೆಂಬುದನ್ನು ಅವನು ಅರಿಯನು. ತಾಮಸ ಭಾವಕ್ಕೆ ಒಳಗಾಗಿ ವ್ಯವಹರಿಸುತ್ತಾನೆ. (೨) ಆದರೆ ಅಂತರಾತ್ಮನು ಜೀವಾತ್ಮನಕಿಂತಲೂ ಉಚ್ಚಸ್ಥಿತಿಯನ್ನು ಹೊಂದಿದವನು. ತಾಮಸ ಸ್ವಭಾವವನ್ನು ಬಹುಮಟ್ಟಿಗೆ ತೊಲಗಿಸಿದವನು. ತೊಲಗಿಸಿದರೂ ಕೂಡ ಸಂಸಾರವನ್ನು ಸಂಪೂರ್ಣವಾಗಿ ಬಿಟ್ಟವನಲ್ಲ. ಒಂದು ವೇಳೆ ಅದನ್ನು ಬಿಡದಿದ್ದರೂ ಕೂಡ ಅದರಲ್ಲಿ ಇಲ್ಲದ ಹಾಗೆ ಇರುತ್ತಾನೆ. ಯಾಕಂದರೆ ಪರಮಾತ್ಮನ ಅರಿವು ಅವನಲ್ಲಿ ಉಂಟಾಗಿರುತ್ತದೆ. ಆತನು ಆತ್ಮ ವಿವೇಕಿಯು. ಹೀಗೆ ಅಂತರಾತ್ಮನ ಸ್ಥಿತಿಯು ಇರುತ್ತದೆ. (೩) ಪರಮಾತ್ಮನು ಈ ಅಂತರಾತ್ಮನಕಿಂತಲೂ ಉಚ್ಚತರದ ಸ್ಥಿತಿಯನ್ನು ಹೊಂದಿರುತ್ತಾನೆ. ಅವನು ಕಾರಣ ಶರೀರಿಯಾಗಿ ಅಲ್ಲಿ ಪ್ರಕಟತರ ಲಿಂಗ ಸ್ಥಿತಿಯನ್ನು ಹೊಂದಿ ಶರೀರದ ಎಲ್ಲ ವ್ಯಾಪಾರಗಳಲ್ಲಿ ಲಿಂಗ ಚೈತನ್ಯವನ್ನು ಉಂಟುಮಾಡಲು ಶಕ್ತನಾಗಿರುತ್ತಾನೆ. ಅವನು ನಿಃಕಲನು. ಯಾಕಂದರೆ ಅವನಲ್ಲಿ ಜ್ಞಾನವು ನಿರ್ಧಾರವಾಗಿರುತ್ತದೆ. ಅವನು ಇಹಲೋಕದ ಮತ್ತು ಪರಲೋಕದ ಸಕಲ ಸಂಸೃತಿಗಳನ್ನು ತೊಲಗಿಸಿದವನು.

ಜೀವಾತ್ಮನಿಗೆ ಬಹಿರಂಗ ಸ್ಥಿತಿಯು ಮಾತ್ರ ಇದೆ. ಆದರೆ ಅಂತರಾತ್ಮನಿಗೆ ಅಂತರಂಗ ಸ್ಥಿತಿಯು ಇದೆ. ಇವುಗಳ ಪ್ರಗತಿಯ ಮೂಲಕವೇ ಪರಮಾತ್ಮನು ಮನುಷ್ಯನಲ್ಲಿಲ್ಲ ಉಚ್ಚತರದ ಸ್ಥಿತಿಯನ್ನು ಐದಿಸುತ್ತಾನೆ. ಜೀವಾತ್ಮ ಅಂತರಾತ್ಮರು ಪರಸ್ಪರಾವಲಂಬಿಗಳಾಗಿದ್ದಾರೆ. ಇವುಗಳ ಶ್ರೇಷ್ಠತರ ಸ್ಥಿತಿಯ ಮೂಲಕವೇ ಪರಮಾತ್ಮನು ಮನುಷ್ಯನಲ್ಲಿ ತೋರುತ್ತಾನೆ.

ಜೀವಾತ್ಮ ಅಂತರಾತ್ಮ ಪರಮಾತ್ಮರ ಪ್ರಗತಿ ಎಂದರೆ ಸ್ಥೂಲ, ಕಾರಣ ಶರೀರಗಳಲ್ಲಿ ಅನುಕ್ರಮವಾಗಿ ಸಂಬಂಧಿಸಿದ ಇಷ್ಟಲಿಂಗ, ಪ್ರಾಣಲಿಂಗ ಭಾವಲಿಂಗ ಇವುಗಳು ಪ್ರಕಟವಾಗುವದೇ ಇರುತ್ತದೆ. ಇವೆಲ್ಲವು ಪ್ರಕಟ ಹೊಂದಿದ ಕೂಡಲೆ ಆತ್ಮನು ಪರಶಿವನಲ್ಲಿ ಬೆರೆಯುವನು. ಅದೇ ಲಿಂಗಾಂಗ ಸಾಮರಸ್ಯವು.

(೩೬) ಕೋಶಗಳು:— ಇವು ಅನ್ನಮಯಕೋಶ, ಪ್ರಾಣಮಯ ಕೋಶ. ಮನೋಮಯಕೋಶ, ವಿಜ್ಞಾನಮಯ ಕೋಶ, ಮತ್ತು ಆನಂದ ಮಯ ಕೋಶ, ಎಂದಿರುತ್ತವೆ. (೧) ಸ್ಥೂಲ ದೇಹವೇ ಅನ್ನಮಯ ಕೋಶವೆನಿಸಿಕೊಳ್ಳುತ್ತದೆ. ಅನ್ನದಿಂದ ಇದು ಪುಷ್ಟಿಯನ್ನುಹೊಂದುತ್ತದೆ. (೨) ಶರೀರದಲ್ಲಿ ಜ್ಞಾನೇಂದ್ರಿಯಗಳೂ ಕರ್ಮೇಂದ್ರಿಯಗಳೂ ಉಂಟು. ಇವುಗಳ ಮೂಲಕ ಅದರ ವ್ಯಾಪಾರಗಳು ನಡೆಯುತ್ತವೆ. ಈ ಇಂದ್ರಿಯ ಗಳ ಮೂಲಕ ಮನುಷ್ಯನಿಗೆ ಮುಟ್ಟಿದರೆ ತಿಳಿಯುತ್ತದೆ. ಕರೆದರೆ ಅವನಿಗೆ ಕೇಳುತ್ತದೆ. ಶರೀರದಲ್ಲಿ ಪ್ರಾಣವಿದೆಂಬುದಕ್ಕೆ ಈ ವ್ಯಾಪಾರಗಳೇ ಚಿನ್ಹವು. ಇದೇ ಪ್ರಾಣಮಯ ಕೋಶವು. (೩) ಮನುಷ್ಯನಲ್ಲಿ ಚಿತ್ತ, ಬುದ್ಧಿ, ಅಹಂಕಾರಗಳೆಂಬುವು ಇವೆ. ಇವುಗಳ ವ್ಯಾಪಾರವೇ ಮನೋಮಯ ಕೋಶವು. (೪) ಮೇಲೆ ವಿವರಿಸಿದ ಕೋಶಗಳ ಮೂಲಕ ಮನುಷ್ಯನು ನಿರ್ಧರಿಸುತ್ತಾನೆ, ತಿಳಿಯುತ್ತಾನೆ, ಪದಾರ್ಥಗಳ ನಿಜ ಸ್ವರೂಪವನ್ನು ಗ್ರಹಿಸು ತ್ತಾನೆ. ಇದೇ ವಿಜ್ಞಾನಮಯ ಕೋಶವು. (೫) ಆದರೆ ಈ ಎಲ್ಲ ವ್ಯಾಪಾ ರಗಳು ಅಳಿದು ಹೋಗಿ ಬಾಹ್ಯವೇನೂ ತೋರದೆ ಇರಲು ಮನುಷ್ಯನಲ್ಲಿ ನಿಜ ಸುಖವು ತಲೆದೋರುತ್ತದೆ. ಇದು ಶಾಶ್ವತವಾದುದು. ಇದೇ ಆನಂದ ಮಯಕೋಶವು. ಮನುಷ್ಯನ ಪ್ರಗತಿಯು ಈ ಎಲ್ಲ ಕೋಶಗಳಲ್ಲಿ ಉಂ ಟಾಗಬೇಕು. ಆದರೆ ಮನುಷ್ಯನ ಆಚರಣೆಗಳ ಪ್ರಕಾರ ಈ ಸ್ಥಿತಿಯು ಕ್ರಮೇಣ ಜರಗುತ್ತಿದೆ. ಅದು ಪೂರ್ಣತೆಯನ್ನು ಹೊಂದಿದ ಕೂಡಲೆ ಅವನಲ್ಲಿ ಶಾಶ್ವತ ಸುಖವು ತಲೆದೋರುತ್ತದೆ.

(೩೭) ಶಕ್ತಿಗಳು— ಇವು ಕ್ರಿಯಾಶಕ್ತಿ, ಜ್ಞಾನ ಶಕ್ತಿ, ಇಚ್ಛಾ ಶಕ್ತಿ, ಆದಿಶಕ್ತಿ, ಪರಾಶಕ್ತಿ ಮತ್ತು ಚಿತ್‌ಶಕ್ತಿ ಎಂದು ಆರು ಇರು



ತ್ತವೆ. ಹಿಂದೆ ಕ್ರಮಾಂಕ ೧೨ ನೆಯದರಲ್ಲಿ ಶಕ್ತಿ ಎಂಬುದು ಹೇಳಲ್ಪ ಟ್ಟಿದೆ. ಇದರ ಆರು ಸ್ವರೂಪಗಳೇ ಇವು ಇರುತ್ತವೆ. (೧) ಕರ್ಮೇಂ ದ್ರಿಯಗಳಾದ ವಾಕ್, ಪಾದ, ಪಾಣಿ, ಪಾಯು, ಗುಹ್ಯ ಇವುಗಳ ವ್ಯಾಪಾರಗಳು ಈ ಕ್ರಿಯಾ ಶಕ್ತಿಯಿಂದ ಜರಗುತ್ತವೆ. ಬಾಹ್ಯ ಕ್ರಿಯೆ ಗಳು ಈ ಶಕ್ತಿಯಿಂದಲೇ ನಡಿಯುತ್ತವೆ (೨) ಆದರೆ ಈ ಕರ್ಮೇಂ ದ್ರಿಯಗಳು ಸ್ವತಂತ್ರವಾಗಿ ವ್ಯವಹರಿಸಲಾರವು. ಅವುಗಳಿಗೆ ಜ್ಞಾನ ಶಕ್ತಿಯ ಸಹಾಯವು ಬೇಕು. ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ ಇವುಗಳು ಜ್ಞಾನೇಂದ್ರಿಯಗಳು. ಈ ಜ್ಞಾನೇಂದ್ರಿಯಗಳಿಂದಲೇ ಜ್ಞಾನ ಶಕ್ತಿಯು ಬಲಪಡುವದು. ಕ್ರಿಯಾ ಶಕ್ತಿಗೆ ಈ ಜ್ಞಾನ ಶಕ್ತಿಯ ಸಹಾ ಯವು ಅತ್ಯವಶ್ಯವಾಗಿ ಬೇಕು. ಇಲ್ಲದಿದ್ದರೆ ಮನುಷ್ಯನ ಕ್ರಿಯೆಗಳು ತಪ್ಪಿ ಹೋಗುವವು. (೩) ಕ್ರಿಯಾ ಶಕ್ತಿ ಮತ್ತು ಜ್ಞಾನ ಶಕ್ತಿ ಇವುಗಳ ಚಲನೆಗೆ ಇಚ್ಛಾ ಶಕ್ತಿಯೂ ಅವಶ್ಯವಾದುದು. ಮನುಷ್ಯನಿಗೆ ಇಚ್ಛೆ ಇಲ್ಲದಿದ್ದರೆ, ಕ್ರಿಯಾ ಶಕ್ತಿಯೂ ಜ್ಞಾನಶಕ್ತಿಯೂ ಕುಂಠಿತವಾಗುವವು. ಈ ಮೂರು ಶಕ್ತಿಗಳ ತರುವಾಯ ಆದಿಶಕ್ತಿ, ಪರಾಶಕ್ತಿ, ಮತ್ತು ಚಿತ್ ಶಕ್ತಿ ಎಂಬಿವು ಕ್ರಮವಾಗಿ ಬರುತ್ತವೆ. ಇವು ಉಳಿದವುಗಳಿಗಿಂತಲೂ ಸೂಕ್ಷ್ಮವಾದವುಗಳು (೪) ಆದಿಶಕ್ತಿಯು ಇಚ್ಛಾಶಕ್ತಿಗಿಂತ ಸೂಕ್ಷ್ಮವಾ ದುದು. ಇಚ್ಛೆಗೆ ಅದು ಪ್ರೇರಣೆ ಮಾಡುವಂತಹದು. ಅದು *Intuition* ಎಂದರೆ ಪ್ರೇರಣಾಶಕ್ತಿ ಎಂದು ಹೇಳಬಹುದು. ಇಚ್ಛೆಯೂ ಕೂಡ ಸ್ಥೂಲ ತರವಾದುದು. ಇವಕ್ಕೆ ಸಹ ಈ ಆದಿಶಕ್ತಿಯು ಪ್ರೇರಕವಾಗಿರುತ್ತದೆ. (೫) ಇವರ ತರುವಾಯ ಪರಾಶಕ್ತಿಯು ಇದೆ. ಇದು ಆದಿಶಕ್ತಿಗಿಂತಲೂ ಸೂಕ್ಷ್ಮವಾದುದು. ಈ ಶಕ್ತಿಯು ಶರಣ ಸ್ಥಲದಲ್ಲಿರುವವನಲ್ಲಿ ಜಾಗ್ರತ ವಾಗಿ ವ್ಯವಹರಿಸುತ್ತದೆ. ಇದು ಎಲ್ಲಕ್ಕೂ ಮಿಗಿಲಾದದ್ದು (೬) ಚಿತ್ ಶಕ್ತಿಯು ಪರಾಶಕ್ತಿಗಿಂತಲೂ ಸೂಕ್ಷ್ಮವು. ಇದು ಮಿಕ್ಕ ಎಲ್ಲ ಶಕ್ತಿಗಳನ್ನು ಗರ್ಭೀಕರಿಸಿಕೊಂಡಿರುತ್ತದೆ. ಇದು ಐಕ್ಯ ಸ್ಥಲದಲ್ಲಿರುವವನಲ್ಲಿ ಜಾಗ್ರತ ವಾಗಿರುತ್ತದೆ.

ಈ ಪ್ರಕಾರ ಚಿತ್‌ಶಕ್ತಿಯಿಂದ ಪರಾಶಕ್ತಿ, ಪರಾಶಕ್ತಿಯಿಂದ ಆದಿಶಕ್ತಿ ಆ ಮೇಲೆ ಅನುಕ್ರಮವಾಗಿ ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ಇವುಗಳು

ಪ್ರಾದುರ್ಭವಿಸಿ ಮನುಷ್ಯನ ಬೇರೆ ಬೇರೆ ಶರೀರಗಳಲ್ಲಿ ಅವುಗಳ ಸ್ವಭಾವದಂತೆ ವ್ಯವಹರಿಸುತ್ತವೆ. • ಇವೆಲ್ಲವುಗಳು ಪರಸ್ಪರಾವಲಂಬಿಗಳು. ಅವು ಒಂದನ್ನು ಬಿಟ್ಟು ಮತ್ತೊಂದು ವ್ಯವಹರಿಸಲಾರವು. ಮೇಲಿನ ಶಕ್ತಿಯು ಅದರ ಕೆಳಗಿನವಕ್ಕೆ ಪ್ರಾಣಸ್ವರೂಪವಾಗಿರುತ್ತದೆ. ಮತ್ತು ಮೇಲಿನದಕ್ಕೆ ಅದರ ಕೆಳಗಿನದು ಅಂಗ ಸ್ವರೂಪವಾಗಿರುತ್ತದೆ. ಹೀಗೆ ಮನುಷ್ಯನು ತನ್ನಲ್ಲಿ ಎಲ್ಲ ಶಕ್ತಿಗಳನ್ನು ಚೈತನ್ಯಗೊಳಿಸಿ ಸನ್ಮಾರ್ಗದಲ್ಲಿ ನಡೆದಲ್ಲಿ ಅವನಲ್ಲಿ ಪ್ರಗತಿಯುಂಟಾಗುತ್ತ ಹೋಗುತ್ತದೆ ಮತ್ತು ಕಡೆಗೆ ಪರಮಾತ್ಮನಲ್ಲಿ ಅವನು ಸಾಮರಸ್ಯವನ್ನು ಹೊಂದುವನು.

(೩೮) ಚಕ್ರಗಳು:— ಇವು ಮೂಲ ಚಿತ್ತುವಿನ ಮೂಲಕ ಮಿದುಳಿನಲ್ಲಿ ಉಂಟಾಗುವ ಚೈತನ್ಯಕ್ಕೆ ಕೇಂದ್ರಸ್ಥಾನಗಳೆಂದು ಹೇಳಬಹುದು. ಇವು ಒಟ್ಟು ೯ ಇವೆ. ಮಿದುಳಿನಲ್ಲಿ ಮೂರು ಮತ್ತು ಶರೀರದ ಉಳಿದ ಭಾಗಗಳಲ್ಲಿ ಆರು ಹೀಗೆ ಇವೆ. ಗುದದಲ್ಲಿ ಆಧಾರ ಚಕ್ರ, ಗುಹ್ಯದಲ್ಲಿ ಸ್ವಾಧಿಷ್ಠಾನ ಚಕ್ರ, ಉದರ ಅಥವಾ ನಾಭಿಸ್ಥಾನದಲ್ಲಿ ಮಣಿಪೂರಕಚಕ್ರ, ಹೃದಯದಲ್ಲಿ ಅನಾಹತಚಕ್ರ, ಕಂಠದಲ್ಲಿ ವಿಶುದ್ಧಿಚಕ್ರ, ಲಲಾಟದಲ್ಲಿ ಆಜ್ಞಾಚಕ್ರ ಹೀಗೆ ಇವೆ. ಮಿದುಳಿನ ಮಧ್ಯಭಾಗದಲ್ಲಿ ಅಂದರೆ ನೆತ್ತಿಯಲ್ಲಿ ಬ್ರಹ್ಮಚಕ್ರ, ಇದರ ತರುವಾಯ ಮಸ್ತಕಾಗ್ರದಲ್ಲಿ ಶಿಖಾಚಕ್ರ ಮತ್ತು ಇದಕ್ಕೂ ಮುಂದೆ ತಲೆಯ ಹಿಂಭಾಗದಲ್ಲಿ ಪಶ್ಚಿಮಚಕ್ರ. ಮಿದುಳಿನಲ್ಲಿ ಮೊದಲು ಚಲನೆಗಳುಂಟಾಗುತ್ತವೆ. ಈ ಚಲನೆಗಳು ಸ್ನಾಯು (*nerves*) ಗಳ ಮೂಲಕ ಶರೀರದಲ್ಲೆಲ್ಲ ಹರಡುತ್ತವೆ. ಹೀಗೆ ಪಸರಿಸುವಲ್ಲಿ ನರಗಳು ಅಥವಾ ಸ್ನಾಯುಗಳೊಳಗಿಂದ ಅವು ಮೊದಲು ಬೆನ್ನೆಲುವಿನ ರಂಧ್ರದೊಳಗೆ ಪ್ರವೇಶ ಮಾಡುತ್ತವೆ. ಅಲ್ಲಿಂದ ಅವು ಮೇಲ್ಕಂಡ ಚಕ್ರಗಳಲ್ಲಿಗೆ ಹೋಗಿ ಅಲ್ಲಿಂದ ಶರೀರದಲ್ಲೆಲ್ಲ ಪಸರಿಸಿ ಅದರ ಅನೇಕ ಕ್ರಿಯೆಗಳಿಗೆ ಕಾರಣವಾಗುತ್ತವೆ. ಈ ಚಲನೆಗಳಿಗೋಸ್ಕರ ಈ ಚಕ್ರಗಳು ರೇಲ್ವೆಯ ಜಂಕ್ಶನ್ನುಗಳೆಂದು ಹೇಳಬಹುದು. ಇಲ್ಲಿಗೆ ಹೇಗೆ ಅನೇಕ ದಿಕ್ಕುಗಳಿಂದ ರೇಲ್ವೆಗಳು ಬಂದು ಮುಟ್ಟುತ್ತವೋ ಮತ್ತು ಅಲ್ಲಿಂದ ಅವು ಬೇರೆ ಬೇರೆ ಸ್ಥಾನಗಳಿಗೆ ಹೋಗುತ್ತವೋ, ಹಾಗೆಯೇ ಈ ಚಕ್ರಗಳ ಕಾರ್ಯಗಳಿರು



ತ್ತವೆ. ಮಿದುಳಿನಿಂದ ಬರುವ ಚಲನೆಗಳು ಈ ಚಕ್ರಗಳಿಗೆ ಮೊದಲು ಬರುತ್ತವೆ. ಮಿದುಳಿನಲ್ಲಿರುವ ಬ್ರಹ್ಮಚಕ್ರವು ಆಧಾರಸ್ವಾಧಿಷ್ಠಾನಚಕ್ರಗಳಿಗೆ, ಶಿಖಾಚಕ್ರವು ಮಣಿಪೂರಕ ಅನಾಹತ ಚಕ್ರಗಳಿಗೆ ಮತ್ತು ಪಶ್ಚಿಮ ಚಕ್ರವು ವಿಶುದ್ಧಿ, ಆಜ್ಞಾ ಚಕ್ರಗಳಿಗೆ ಪ್ರತ್ಯಕ್ಷ ಸಂಬಂಧಪಡುತ್ತವೆ. ಮಿದುಳಿನಲ್ಲಿ ಉತ್ಪನ್ನವಾಗುವ ಈ ಚಲನೆಗಳು ಆಯಾ ಚಕ್ರಗಳ ದ್ವಾರಾ ಬೇರೆ ಬೇರೆ ಅವಯವಗಳಿಗೆ ಪಸರಿಸುತ್ತವೆ. ಹೀಗೆ ಚಕ್ರಗಳು ಶಕ್ತಿಯನ್ನು ವ್ಯವಸ್ಥೆಗೊಳಿಸುವ ಕಾರ್ಯವಮಾಡುತ್ತವೆ.

ಈ ಚಕ್ರಗಳಿಗೆ ಅನುಕ್ರಮವಾಗಿ ೪, ೬, ೧೦, ೧೨, ೧೬, ೨ ದಳಗಳಿವೆ. ಈ ದಳಗಳಲ್ಲಿ ೫೦ ಅಕ್ಷರಗಳಿರುತ್ತವೆ. ಆಧಾರಚಕ್ರದ ದಳಗಳಲ್ಲಿ ವ ಶ ಷ ಸ ಅಕ್ಷರಗಳು, ಸ್ವಾಧಿಷ್ಠಾನದ ದಳಗಳಲ್ಲಿ ಬ ಭ ಯ ರ ಲ ಅಕ್ಷರಗಳು, ಮಣಿಪೂರಕದಲ್ಲಿ ಡ ಢ ಣ ತ ಥ ದ ಧ ನ ಪ ಫ ಅಕ್ಷರಗಳು, ಅನಾಹತ ಚಕ್ರದಲ್ಲಿ, ಕ ಖ ಗ ಘ ಙ ಚ ಛ ಜ ಝ ಞ ಟ ಠ ಅಕ್ಷರಗಳು, ವಿಶುದ್ಧಿ ಚಕ್ರದಲ್ಲಿ, ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ ಅಕ್ಷರಗಳು ಇವೆ. ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರದಲ್ಲಿ ೨ ದಳಗಳಿವೆ. ಅವುಗಳಲ್ಲಿ ಹಂ ಸಂ ಎಂಬ ಅಕ್ಷರಗಳು ಇವೆ. ಬ್ರಹ್ಮಚಕ್ರವು ಸಹಸ್ರದಳವುಳ್ಳದ್ದು. ಅದು ಸಹಸ್ರಾಕ್ಷರ ಅನಂತವೇದಗಳನ್ನೊಳಕೊಂಡಿದೆ. ಮಸ್ತಕಾಗ್ರದಲ್ಲಿರುವ ಶಿಖಾಚಕ್ರಕ್ಕೆ ೩ ದಳಗಳು ಇವೆ. ಪಶ್ಚಿಮಚಕ್ರದಲ್ಲಿ ಒಂದು ದಳವಿದೆ. ಈ ಯಾವತ್ತು ಚಕ್ರಗಳಲ್ಲಿ ಶಕ್ತಿಗಳಿಗೆ ಕಾರಣವಾದ ಪ್ರಣವಾಕ್ಷರಗಳಿರುತ್ತವೆ. ಆಧಾರಚಕ್ರದಲ್ಲಿ ನಕಾರವು, ಸ್ವಾಧಿಷ್ಠಾನದಲ್ಲಿ ಮಕಾರವು, ಮಣಿಪೂರಕದಲ್ಲಿ ಶಿಕಾರವು, ಅನಾಹತದಲ್ಲಿ ವಕಾರವು, ವಿಶುದ್ಧಿಯಲ್ಲಿ ಯಕಾರವು, ಆಜ್ಞೆಯಲ್ಲಿ ಓಂಕಾರವು ಇರುತ್ತವೆ. ಬ್ರಹ್ಮಚಕ್ರದಲ್ಲಿ ಬಕಾರವು, ಶಿಖಾಚಕ್ರದಲ್ಲಿ ಕ್ಷಕಾರವು, ಪಶ್ಚಿಮ ಚಕ್ರದಲ್ಲಿ ಹಕಾರವು ಇರುತ್ತವೆ. ಈ ಪ್ರಣವಾಕ್ಷರಗಳ ಮೂಲಕವೇ ಮಿದುಳಿನ ಚಲನೆಗಳು ಸ್ನಾಯುಗಳೊಳಗಿಂದ ಶರೀರದಲ್ಲಿ ಸಂಚರಿಸುತ್ತವೆ. ಅವು ಶಕ್ತಿಗಳ ರೂಪದಲ್ಲಿ ತೋರುತ್ತವೆ. ೫೦ ಅಕ್ಷರಗಳಿಗೆ ಮೂಲವಾದುದು ಲಲಾಟ ಚಕ್ರದಲ್ಲಿರುವ ಓಂಕಾರವೇ ಇರುತ್ತದೆ. ಮಿದುಳಿ

ನಲ್ಲಿ ಉಂಟಾಗುವ ಚಲನೆಗಳು ಈ ಪ್ರಣವಾಕ್ಷರಗಳ ಮೂಲಕ ನಾಡಿಗಳ ದ್ವಾರಾ ಶರೀರದಲ್ಲಿರುವ ಆಯಾ ಚಕ್ರಗಳಿಗೆ ತಲ್ಪಿ ಅಲ್ಲಿಂದ ಶರೀರದ ಆಯಾ ಅವಯವಗಳ ಕಡೆಗೆ ಹರಿದುಹೋಗುತ್ತಿವೆ.

ಯೋಗಾಭ್ಯಾಸಿಗಳು ಈ ಚಕ್ರಗಳ ಜ್ಞಾನವನ್ನು ಮಾಡಿಕೊಳ್ಳಬೇಕು. ಹೀಗೆ ಮಾಡಿಕೊಂಡು ಅವುಗಳನ್ನು ಲಿಂಗಸಾಧನೆಯ ಮೂಲಕ ಉತ್ತೇಜನಗೊಳಿಸಬೇಕು. ಈ ರೀತಿಯನ್ನು ವೀರಶೈವರು ಒಪ್ಪಿಕೊಂಡಿದ್ದಾರೆ. ಹೀಗೆ ಮಾಡಿದಲ್ಲಿ ಮನುಷ್ಯನಿಗೆ ಸಿದ್ಧಿಗಳು ಪ್ರಾಪ್ತವಾಗುವವು. ಆದರೆ ಲಿಂಗನಿಷ್ಠರಾದ ವೀರಶೈವರು ಈ ಸಿದ್ಧಿಗಳನ್ನು ಮಾಡಕೂಡದು. ಅವರು ಚಕ್ರಗಳ ಮೂಲಕ ಹರಿಯುವ ನಾನಾಬಗೆಯ ಶಕ್ತಿಗಳನ್ನು ಲಿಂಗಮುಖವನ್ನಾಗಿ ಮಾಡಿ ತಮ್ಮ ಕ್ರಿಯೆಗಳನ್ನು ಮಾಡತಕ್ಕದ್ದು. ಶಿವಯೋಗಿಗಳಿಗೂ ಇತರಯೋಗಿಗಳಿಗೂ ಇರುವ ಭೇದವು ಇದೇ ಇದೆ. ಶಿವಯೋಗಿಯು ಆಯಾ ಚಕ್ರಗಳಲ್ಲಿ ಆಯಾ ಲಿಂಗಗಳನ್ನು ಬರಮಾಡಿಕೊಳ್ಳತಕ್ಕದ್ದು. ಈ ರೀತಿಯನ್ನು ಅವನು ಷಟ್‌ಸ್ಥಲಾಚರಣೆ, ಅಷ್ಟಾವರಣಗಳು ಇವುಗಳ ಮೂಲಕ ಸಾಧಿಸತಕ್ಕದ್ದು. ಕಷ್ಟಕರವಾದ ಹಠಯೋಗ ಮೊದಲಾದವುಗಳ ಮೂಲಕವಲ್ಲ. ಹೀಗೆ ಲಿಂಗಮುಖ ಮಾಡಿದಲ್ಲಿ ಆಧಾರದಲ್ಲಿ ಆಚಾರಲಿಂಗವು, ಸ್ವಾಧಿಷ್ಠಾನದಲ್ಲಿ ಗುರುಲಿಂಗವು, ಮಣಿಪೂರಕದಲ್ಲಿ ಶಿವಲಿಂಗವು, ಅನಾಹತದಲ್ಲಿ ಜಂಗಮಲಿಂಗವು, ವಿಶುದ್ಧಿಯಲ್ಲಿ ಪ್ರಸಾದಲಿಂಗವು, ಆಜ್ಞೆಯಲ್ಲಿ ಮಹಾಲಿಂಗವು ನೆಲೆಗೊಳ್ಳುತ್ತವೆ. ಬ್ರಹ್ಮರಂಧ್ರದಲ್ಲಿ ನಿಷ್ಕಲ ಲಿಂಗವು, ಶಿಖಿಯಲ್ಲಿ ನಿಶ್ಶೂನ್ಯಲಿಂಗವು, ಪಶ್ಚಿಮದಲ್ಲಿ ನಿರಂಜನಲಿಂಗವು ಪ್ರಕಟವಾಗುವವು. ಈ ಲಿಂಗಗಳ ಪ್ರಕಾಶದಿಂದ ಕರ್ಮೇಂದ್ರಿಯ ಜ್ಞಾನೇಂದ್ರಿಯ ಮೊದಲಾದವುಗಳ ಕ್ರಿಯೆಗಳು ಶರೀರದಲ್ಲಿ ನಡಿಯುವವು.

ಈ ಲಿಂಗಗಳ ಸಾಧನೆಗೋಸ್ಕರ ಹಿಂದೆ ಹೇಳಿದಂತೆ ಷಟ್‌ಸ್ಥಲದ ಆಚರಣೆಯು ಮನುಷ್ಯನಿಗೆ ಅವಶ್ಯವಾದುದು. ಅದರ ಆಚರಣೆಗಳ ಮೇರೆಗೆ ಅವನು ಜಗತ್ತಿನಲ್ಲಿಯ ತನ್ನ ವ್ಯಾಪಾರಗಳನ್ನು ನಿರ್ವರ್ತಿಸತಕ್ಕದ್ದು. ಅವುಗ

ಕನ್ನಡ ವಿ. ವಿ. ಹಂಪಿಯಿಂದ ಮಾನ್ಯತೆ ಪಡೆದ
ವಚನ ಪಿತಾಮಹ ಡಾ || ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ವಿಜಯಪುರ

ಳಂತೆಯೇ ಅವನು ಸಾಧನೆಗಳನ್ನು ಮಾಡತಕ್ಕದ್ದು. ಈ ಸಾಧನೆಗೆ ಅಷ್ಟಾವರಣಗಳು ಸಹಾಯಕಾರಿಗಳು. ಅಷ್ಟಾವರಣಗಳಲ್ಲಿ ಗುರುಲಿಂಗಜಂಗಮಗಳು ಮುಖ್ಯವಾದವುಗಳು. ಇವುಗಳ ಸಾಧನೆಯನ್ನು ಸಾಧಿಸತಕ್ಕದ್ದು. ಇವುಗಳನ್ನು ಅವನು ಅನುಕ್ರಮವಾಗಿ ಇಷ್ಟ ಪ್ರಾಣ ಭಾವಲಿಂಗಗಳ ಮೂಲಕ ತನ್ನಲ್ಲಿ ಸಾಧಿಸತಕ್ಕದ್ದು. ಇಷ್ಟಲಿಂಗದಿಂದ ಗುರುವನ್ನೂ ಪ್ರಾಣಲಿಂಗದಿಂದ ಲಿಂಗವನ್ನೂ ಭಾವಲಿಂಗದಿಂದ ಜಂಗಮವನ್ನೂ ಸಾಧಿಸತಕ್ಕದ್ದು. ಗುರುಕೊಟ್ಟದ್ದೇ ಇಷ್ಟಲಿಂಗವು. ಈ ಇಷ್ಟಲಿಂಗದ ಧ್ಯಾನದಿಂದ ಹೃದಯಕಮಲದಲ್ಲಿದ್ದ ಪ್ರಾಣಲಿಂಗವು ಅರಳುತ್ತದೆ. ಈ ಹೃದಯಕಮಲದಲ್ಲಿ ಜೀವನು ವಾಸವಾಗಿರುತ್ತಾನೆ. ಅವನು ಪ್ರಾಣಲಿಂಗದೊಡನೆ ಬೆರೆಯಲು ಭಾವಲಿಂಗವು ಪ್ರಜ್ವಲಿಸಹತ್ತುತ್ತದೆ. ಇದು ಹಣೆಗಣ್ಣಿನಲ್ಲಿದೆ. ಅದು ಓಂಕಾರ ರೂಪವಾದುದು. ಅದುವೆ ಆಜ್ಞಾಚಕ್ರವು. ಈ ಭಾವಲಿಂಗದಿಂದ ಮುಂದೆ ಮಿದುಳಿನಲ್ಲಿ ತ್ರಿವೇಣೀ ಸಂಗಮವಿದ್ದು ಅಲ್ಲಿಗೆ ಹೋಗತಕ್ಕದ್ದು. ಅದು ಸಂಗಮ ಕ್ಷೇತ್ರವೆಂತಲೂ ಹೇಳಲ್ಪಡುತ್ತದೆ. ಅಲ್ಲಿ ಎಡಕ್ಕೆ ಬಲಕ್ಕೆ ಎರಡು ದಾರಿಗಳಿವೆ. ಅವುಗಳಲ್ಲಿ ಹೋಗದೆ ಮಧ್ಯ ಮಾರ್ಗವನ್ನು ಹಿಡಿಯಬೇಕು. ಅದು ಬಹು ಸೂಕ್ಷ್ಮವಾದುದು. ಅದು ತಲೆವಾಗಿಲವೆಂತಲೂ ಹೇಳಲ್ಪಡುವದು. ಅಲ್ಲಿಂದ ಮುಂದೆ ಹೋಗಲು ನಿಷ್ಕಲಲಿಂಗವು ತೋರುವದು. ಅದು ನಿರುಪಾಧಿಕಜ್ಯೋತಿಯು. ನಿರಾಳ ಲಿಂಗವು. ಅದನ್ನು ಪೂಜೆಮಾಡಬೇಕು. ಅಂದರೆ ಪರಶಿವನಲ್ಲಿ ಬೆರೆಯುತ್ತಾನೆ. ಇದನ್ನು ಸಾಧಿಸುವದೇ ಶಿವಯೋಗವು.

ಈ ಸಾಧನೆಯನ್ನು ಯೋಗ್ಯ ಆಸನ, ಪ್ರಾಣಾಯಾಮ, ಮತ್ತು ಲಿಂಗಧ್ಯಾನದಿಂದ ಸಾಧಿಸಬೇಕು. ಲಿಂಗಪೂಜೆಯನ್ನು ಈ ಧ್ಯೇಯವನ್ನಿಟ್ಟುಕೊಂಡು ಭಕ್ತನು ನಿತ್ಯ ಆಚರಿಸಬೇಕು. ಆದ್ದರಿಂದ ವೀರಶೈವನ ಲಿಂಗಪೂಜೆಯು ಆ ಶಿವಯೋಗಕ್ಕೆ ಸಾಧಕವಾಗಿದೆ.

ವೀರಶೈವರು ಈ ಪ್ರಕಾರ ಯೋಗಾಭ್ಯಾಸದ ಮುಖ್ಯ ತತ್ವಗಳನ್ನು ಸ್ವೀಕರಿಸಿದ್ದಾರೆ. ಆದರೆ ಸಾಧನೆಯಲ್ಲಿ ಹಠಯೋಗಿಗಳ ಕ್ಲೇಶಕರವಾದ ಮಾರ್ಗವನ್ನು ಅವರು ಕೈಕೊಳ್ಳುವದಿಲ್ಲ. ಅಂದರೆ ಇಂದ್ರಿಯಗಳನ್ನು

ಕ್ಲೇಶಪಡಿಸಬಾರದು. ಅಥವಾ ನಿರ್ಜನ ಪ್ರದೇಶಗಳಿಗೆ ಹೋಗಬಾರದು. ನಿತ್ಯದ ತನ್ನ ಆಚರಣೆಗಳನ್ನು ಷಟ್‌ಸ್ಥಲಶಾಸ್ತ್ರದ ತತ್ವಗಳಂತೆ ಜರು ಸಬೇಕು. ಈ ಷಟ್‌ಸ್ಥಲದ ಆಚರಣೆಗಳಂತೆ ನಡೆದರೆ ಚಕ್ರಗಳಲ್ಲಿ ಲಿಂಗಜ್ಯೋತಿಯು ತಾನಾಗಿಯೇ ಬೆಳಗಹತ್ತುತ್ತದೆ. ಈ ಆಚರಣೆಗಳ ವವೆಂಬುದು ವಚನಶಾಸ್ತ್ರಸಾರ ಭಾಗ ೨ ಪುಟ ೧೭೩ ರಲ್ಲಿ ಹೇಳಲ್ಪ ಟ್ಟಿದೆ. ಇದು 'ಶಬ್ದಕೋಶ' ಮಾತ್ರ ಇರುವದರಿಂದ ಅವುಗಳನ್ನು ಇಲ್ಲಿ ಸವಿಸ್ತಾರವಾಗಿ ನಿರೂಪಿಸುವದು ಅನಾವಶ್ಯಕವು.

ಈ ರೀತಿಯಾಗಿ ವರ್ತಿಸಿದಲ್ಲಿ ಲಿಂಗಾಂಗ ಸಾಮರಸ್ಯವು ಪ್ರಾಪ್ತವಾಗುತ್ತದೆ. ಇದರಲ್ಲಿ ಶುದ್ಧ ನೈತಿಕಾಚಾರ, ವೀರಶೈವಾಚರಣೆಗಳು, ಮಂತ್ರಗಳ ಮೂಲಕ ಧ್ಯಾನ. ಇವೇ ಮೊದಲಾದವುಗಳು ಮುಖ್ಯವಾಗಿರುತ್ತವೆ. ಇವುಗಳಿಂದ ಮನುಷ್ಯನು ಲಿಂಗ ಶರೀರಿಯಾಗುವನು. ಆಗ ಆಯಾ ಚಕ್ರಗಳಲ್ಲಿ ಲಿಂಗವು ಬೇರೆ ಬೇರೆ ರೂಪದಿಂದ ಬೆಳಗಹತ್ತುವದು. ವಿಶ್ವವೆಲ್ಲ ಲಿಂಗಮಯವಾಗಿ ತೋರಹತ್ತುವದು ಮತ್ತು ಕಡೆಗೆ ಪರಶಿವನಲ್ಲಿ ಬೆರೆಯುವನು.

ಈ ಚಕ್ರಗಳಿಗೆ ವರ್ಣಗಳಿವೆ. ಅವು ಅನುಕ್ರಮವಾಗಿ ಪೀತವರ್ಣ ಶ್ವೇತವರ್ಣ, ಹರಿತವರ್ಣ, ಮಾಂಜಿಷ್ಠವರ್ಣ, ಕಪೋತವರ್ಣ. ಮಾಣಿಕ್ಯವರ್ಣ, ಇವುಗಳಿವೆ. ಕಡೆಯ ೩ ಚಕ್ರಗಳಿಗೆ ಜ್ಯೋತಿರ್ವರ್ಣ, ಮಹಾಜ್ಯೋತಿರ್ವರ್ಣ, ಅಗಣಿತ ಮಹಾಜ್ಯೋತಿರ್ವರ್ಣ ಇವುಗಳಿವೆ.

ಈ ಚಕ್ರಗಳಿಗೆ ಅಧಿದೇವತೆಗಳಿದ್ದಾರೆ. ಅವರು ಅನುಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹೇಶ್ವರ ಇವರು ಇರುವರು. ಮತ್ತು ಕಡೆಯ ಮೂರು ಚಕ್ರಗಳಲ್ಲಿ ಪರಮೇಶ್ವರ ಸರ್ವೇಶ್ವರ ಮತ್ತು ಮಹಾದೇವ ಎಂದು ಹೇಳಲ್ಪಡುತ್ತಾರೆ.

ಈ ಚಕ್ರಗಳು ಸಾದಾಖ್ಯಗಳೆಂತಲೂ ಹೇಳಲ್ಪಡುತ್ತವೆ. ಅವು ಅನುಕ್ರಮವಾಗಿ ಕರ್ಮ, ಕರ್ತೃ, ಮೂರ್ತಿ, ಅಮೂರ್ತಿ, ಶಿವ ಮತ್ತು ಮಹಾಸಾದಾಖ್ಯಗಳು ಮತ್ತು ಕಡೆಯ ಸಾದಾಖ್ಯಗಳು ಅಗಮ್ಯ, ಅಗೋಚರ, ಅಪ್ರಮಾಣವೆಂದಿವೆ.



ಆತ್ಮನ ವಿಕಾಸವೂ ಅದರಂತೆಯೇ ಹೆಚ್ಚುತ್ತ ಹೋಗುತ್ತದೆ. ವಿಕಾಸ ಹೊಂದಿದ ಹಾಗೆ ಆತ್ಮನು ಅನುಕ್ರಮವಾಗಿ ಜೀವಾತ್ಮ, ಅಂತರಾತ್ಮ, ಪರಮಾತ್ಮ, ನಿರ್ಮಲಾತ್ಮ, ಶುದ್ಧಾತ್ಮ, ಜ್ಞಾನಾತ್ಮ, ಎಂದು ಹೇಳಲ್ಪಡುತ್ತಾನೆ. ಮತ್ತು ಕಡೆಯ ಮೂರು ಆತ್ಮನ ಸ್ಥಿತಿಗಳು ಮಹಾತ್ಮ, ದಿವ್ಯಾತ್ಮ, ಮತ್ತು ಚಿನ್ಮಯಾತ್ಮ ಎಂದು ಹೇಳಲ್ಪಡುತ್ತವೆ.

ಈ ಚಕ್ರಗಳಿಗೆ ಆಕೃತಿಗಳೂ ಉಂಟು. ಅವು ಯಾವವೆಂದರೆ ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧ ಚಂದ್ರಾಕೃತಿ, ದರ್ಪಣಾಕೃತಿ, ಜ್ಯೋತಿರಾಕೃತಿ, ಇವುಗಳಿವೆ. ಮತ್ತು ಕಡೆಯ ಚಕ್ರಗಳಿಗೆ ಅನುಕ್ರಮವಾಗಿ ನಿಷ್ಕಳಾಕೃತಿ, ನಿಶ್ಶೂನ್ಯಾಕೃತಿ, ನಿರಂಜನಾಕೃತಿ ಎಂಬ ಹೆಸರುಗಳಿವೆ.

ಕಲೆಗಳು ಇವೆ. ಅವು ಯಾವವೆಂದರೆ, ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ. ಶಾಂತ್ಯಾತೀತ, ಶಾಂತ್ಯಾತೀತೋತ್ತರ ಇವು ಇವೆ. ಕಡೆಯವುಗಳು ಅನುಕ್ರಮವಾಗಿ ಅನಾದಿ, ನಿರಾಮಯ, ಅನಿರ್ವಾಚ್ಯ ಎಂಬವುಗಳಿವೆ.

ಆಯಾ ಚಕ್ರಗಳನ್ನು ಒಳಕೊಂಡ ಹಾಗೆ ಶಿವಯೋಗಿಗೆ ನಾದಗಳು ಕೇಳಿಸುತ್ತವೆ. ಅವು ಅನುಕ್ರಮವಾಗಿ ಭ್ರಮರ, ವೇಣು, ಘಂಟಾ, ಭೇರಿ, ಮೇಘ ಮತ್ತು ಪ್ರಣವ ಇವುಗಳು ಮತ್ತು ಕಡೆಯ ಮೂರು ನಾದಗಳು ದಿವ್ಯನಾದ, ಸಿಂಹನಾದ ಮತ್ತು ಮಹಾನಾದ ಎಂದು ಇವೆ.

ಆದರೆ ಮೇಲೆ ಹೇಳಿದ ಕಲೆಗಳು, ಪ್ರಣವಾಕ್ಷರಗಳು, ಪಂಚಾಕ್ಷರಗಳು, ಚಕ್ರಗಳು, ಚಕ್ರಗಳಿಗೆ ಸಂಬಂಧಿಸಿದ ದಳಗಳು, ದಳಗಳಲ್ಲಿರುವ ಅಕ್ಷರಗಳು, ವರ್ಣಗಳು, ಬೆಳಕುಗಳು, ಆಕೃತಿಗಳು, ನಾದಗಳು ಅಧಿ ದೇವತೆಗಳು, ಇವುಗಳನ್ನು ಶರೀರದಲ್ಲಿ ಹುಡುಕಲಿಕ್ಕೆ ಹೋದರೆ ಅಲ್ಲಿ ದೊರೆಯಲಾರವು. ಅಲ್ಲಿ ಬರೀ ರಕ್ತ, ಮಾಂಸ ಇವುಗಳೇ ಕಾಣಬರುವದು ನಿಶ್ಚಯವು. ಇವುಗಳನ್ನು ಕಾಣಲಿಕ್ಕೆ, ಮುಟ್ಟಲಿಕ್ಕೆ, ಕೇಳಲಿಕ್ಕೆ ಅಂತರ್ಜ್ಞಾನವೇ ಬೇಕು. ಈ ಜ್ಞಾನವು ಆತ್ಮನಿಗೆ ಸಂಬಂಧಿಸಿರುತ್ತದೆ. ಪ್ರಯೋಗದಿಂದ ಅಥವಾ ಅನುಭಾವದಿಂದ ಅಥವಾ ಪರಿಣಾಮ

ದಿಂದ ಅವುಗಳನ್ನು ಮನುಷ್ಯನು ತಿಳಿಯಬೇಕು. ಆದರೆ ಮುಂದೆ ಹೇ
ತಕ್ಕ ನಾಡಿಗಳು ಮತ್ತು ವಾಯುಗಳು ಇವುಗಳಿಗಿಂತಲೂ ಹೆಚ್ಚ
ಸ್ಥೂಲವಾಗಿರುತ್ತವೆ. ಅವುಗಳ ಕ್ರಿಯೆಗಳಾದರೂ ಹೆಚ್ಚಿಗೆ ಸ್ಥೂಲತ
ವಾದವುಗಳು.

(೩೯) ನಾಡಿಗಳು:— ನಾಡಿಗಳು ದೇಹದಲ್ಲೆಲ್ಲ ಪಸರಿಸಿರುತ್ತವೆ.
ಅವು ಜೀರ್ಣವಾದ ಅರಳಿಯ ಪರ್ಣದಂತೆ ಇರುತ್ತವೆಂದು ವಚನಕಾರರು
ವರ್ಣಿಸುವದುಂಟು. ಅವು ಅಸಂಖ್ಯಾತವಾಗಿವೆ. ಆದರೂ ಅವುಗಳಲ್ಲಿ
ಮುಖ್ಯವಾದವುಗಳು ೭೨ ಸಾವಿರ. ಅವುಗಳಲ್ಲಿ ೧೫೦೦ ನಾಡಿಗಳು ಕಾರಣ
ನಾಡಿಗಳೆಂದು ಹೇಳಲ್ಪಡುತ್ತವೆ. ಅವುಗಳಲ್ಲಿ ೭೦೦ ನಾಡಿಗಳು ಮುಖ್ಯ
ವಾದವುಗಳು. ಅವುಗಳಲ್ಲಿ ೧೦೦ ನಾಡಿಗಳು ಮುಖ್ಯ ನಾಡಿಗಳು. ಅವು
ಗಳಲ್ಲಿ ೫೦ ನಾಡಿಗಳು ಪ್ರಧಾನವಾದವುಗಳು. ಅವುಗಳಲ್ಲಿ ೨೮ ನಾಡಿ
ಗಳು ಪ್ರಯೋಜನನಾಡಿಗಳೆಂದು ಹೇಳಲ್ಪಡುತ್ತವೆ. ಅವುಗಳಲ್ಲಿ ೧೦
ನಾಡಿಗಳು ಅತ್ಯಧಿಕವಾದವುಗಳು. ಅವು ಈಡಾ, ಪಿಂಗಳ, ಸುಷುಮ್ನ
ಗಾಂಧಾರಿ, ಹಸ್ತಿ ಜಿಹ್ವೆ, ಪೂಷ, ಪಯಸ್ವಿನೀ, ಲಕುಹ, ಅಲಂಬು,
ಶಂಕಿನೀ ಹೀಗೆ ಇವೆ. ಇವುಗಳಲ್ಲಿ ಈಡಾ ಪಿಂಗಳ ಸುಷುಮ್ನಗಳೇ
ಅತ್ಯಂತ ಬೀಜನಾಡಿಗಳೆಂದು ಭಾವಿಸಲ್ಪಟ್ಟಿರುತ್ತವೆ. ಈ ನಾಡಿಗಳ ಕ್ರಿಯೆ
ಗಳು ಶರೀರದಲ್ಲಿರುವ ನರಗಳೊಳಗಿಂದ (Nerves) ನಡೆಯುತ್ತಿವೆ.
ಶರೀರವು ಉಸುರಾಡಿಸುವದು, ನಿರೀಕ್ಷಿಸುವದು. ಕೇಳುವದು, ಹಸಿವೆ
ಯಾಗುವದು, ಆಹಾರದಿಂದ ಅದಕ್ಕೆ ಶಾಂತಿಯಾಗುವದು ಇವು ಅತ್ಯಂ
ತ ಅವಶ್ಯವಾದವುಗಳಷ್ಟೇ. ಇವು ಈ ನಾಡಿಗಳ ಮೂಲಕವೇ ಚಲನೆ
ಹೊಂದುತ್ತವೆ. ಈಡಾ ಇದು ನಾಸಾಪುಟದ ಎಡಭಾಗ. ಅದು ವಾಯು
ವನ್ನು ಹೊರಗೆ ಹಾಕುತ್ತದೆ ಪಿಂಗಳ ಇದು ನಾಸಾಪುಟದ ಬಲ
ಭಾಗ. ಇದು ವಾಯುವನ್ನು ಒಳಕ್ಕೆ ಎಳೆದುಕೊಳ್ಳುತ್ತಿದೆ. ಸುಷುಮ್ನವು
ಇವುಗಳಿಗೆ ಮಧ್ಯವಾಗಿದ್ದುಕೊಂಡು ತಲೆ ಮಿದುಳಿನಲ್ಲಿ ಪ್ರವೇಶಿಸುತ್ತದೆ.
ಅದು ವಾಯುವನ್ನು ಕುಂಭದಂತೆ ತಡೆಯುತ್ತದೆ. ಗಾಂಧಾರೀ ಇದು
ಬಲದ ನೇತ್ರ. ನಿರೀಕ್ಷಣ ಕೃತ್ಯವನ್ನು ಮಾಡುತ್ತದೆ. ಹಸ್ತಿ ಜಿಹ್ವೆ ಇದು



ಕಾರಣವಾಗಿದೆ. ಪೂಷ ಇದು ಬಲದ
ಎಡದ ನೇತ್ರ. ನಿದ್ರಾವ್ಯಸನಕ್ಕೆ ಕೇಳಿಸುತ್ತದೆ. ಪಯಸ್ವಿನೀ ಇದು
ಕರ್ಣ. ನಾದಾದಿ ಶಬ್ದಗಳನ್ನು ಕೇಳಿಸುತ್ತದೆ. ಲಕುಹ ಇದು ಗುದ
ಎಡದ ಕರ್ಣ. ವಾದ್ಯಾದಿಗಳನ್ನು ಕೇಳಿಸುತ್ತದೆ. ಅಲಂಬು ಇದು ಮೇಢ್ರ
ದಲ್ಲಿದ್ದು ದೇಹದ ಭಾರಣೆಯನ್ನು ಹೊರುತ್ತದೆ. ಶಂಕಿನೀ ಇದು
ದಲ್ಲಿದ್ದು ಕ್ಷುಧಾದಿಗಳನ್ನು ಉಂಟು ಮಾಡುತ್ತದೆ. ಇವುಗ
ನಾಭಿಯಲ್ಲಿದ್ದು ಕ್ಷುಧಾದಿಗಳನ್ನು ಉಪಶಮನ ಮಾಡುತ್ತದೆ
ಳಿಗೂ ಬೇರೆ ಬೇರೆ ಅಧಿದೇವತೆಗಳು ಇರುತ್ತಾರೆ. ಇವುಗಳಲ್ಲಿ ಸುಷುಮ್ನಾ
ನಾಡಿಯ ಮಹತ್ವವು ವಿಶೇಷವಿದೆ. ಅದು ಗುದಸ್ಥಾನದಿಂದ ಬೆನ್ನೆಲು
ಬಿನ ನಡುವೆ ತಂತಿಯಂತೆ ಕಪಾಲ ಪರಿಯಂತರ ಉದ್ದವಾಗಿ ಇರು
ತ್ತದೆ. ಇದಕ್ಕೆ ಬಲಗಡೆ ಇರುವದು ಪಿಂಗಳ ನಾಡಿ. ಅದು ಸಹ
ಕಪಾಲ ಪರಿಯಂತರ ಬಂದು ಅಲ್ಲಿಂದ ಮಿದುಳಿನಲ್ಲಿ ಸೂರ್ಯ ಮಂಡ
ಲವನ್ನು ವ್ಯಾಪಿಸಿಕೊಂಡು ಬಲಮೂಗಿನಿಂದ ಹೊರಟು ಹೋಗುತ್ತದೆ.
ಈಡೆಯು ಸುಷುಮ್ನ ನಾಡಿಯ ಎಡಗಡೆಯಿಂದ ಮೂಲಾಧಾರದಿಂದ
ಕಪಾಳಪರಿಯಂತರ ಹೋಗಿ ಮಿದುಳಿನಲ್ಲಿ ಚಂದ್ರಮಂಡಲವನ್ನು ವ್ಯಾಪಿ
ಸಿರುತ್ತದೆ. ಅದರ ಮೂಲಕ ಎಡಮೂಗಿನಿಂದ ಉಸುರು ಹೊರಟು
ಹೋಗುತ್ತದೆ. ಸುಷುಮ್ನ ನಾಡಿಯ ಅಗ್ನೇಯದಲ್ಲಿ ಸೂಕ್ಷ್ಮವಾದ ರಂಧ್ರ
ವಿರುತ್ತದೆ. ಅದೇ ಬ್ರಹ್ಮರಂಧ್ರ. ಈ ಸುಷುಮ್ನ ನಾಡಿಯನ್ನು ಚೈತ
ನ್ಯಗೊಳಿಸುವದರಿಂದ ಮನುಷ್ಯನ ಯೋಗ ಸಾಮರ್ಥ್ಯವು ಹೆಚ್ಚುವದು.
ಆಸನ ಮತ್ತು ಪ್ರಣಾಯಾಮ ಇವುಗಳೊಡನೆ ಕೂಡಿದ ಯೋಗ ಸಾಧ
ನೆಯಿಂದ ಈ ನಾಡಿಯು ಉತ್ತೇಜಿತವಾಗುವದು. ೯ ವಿಧ ಚಕ್ರಗಳಿಗೂ
ಈ ನಾಡಿಗಳಿಗೂ ನಿಕಟ ಸಂಬಂಧವಿರುತ್ತದೆ. ಚಕ್ರಗಳೊಳಗಿಂದ ಹೊರ
ಡುವ ಶಕ್ತಿಗಳು ಅತ್ಯಂತ ಸೂಕ್ಷ್ಮ ಸ್ಥಿತಿಯಲ್ಲಿದ್ದು ಅವು ನಾಡಿಗಳ
ಮೂಲಕವೇ ಶರೀರದಲ್ಲಿ ಪ್ರಕಟವಾಗುತ್ತವೆ. ಆದ್ದರಿಂದ ಈ ನಾಡಿಗಳನ್ನು
ಬಲಪಡಿಸಿ ಅವುಗಳನ್ನು ಅಂಕಿತದಲ್ಲಿಟ್ಟುಕೊಳ್ಳತಕ್ಕದ್ದು. ಇದರಿಂದ
ಶರೀರದ ಬಾಹ್ಯ ಕ್ರಿಯೆಗಳೂ ಚಕ್ರಗಳೂ ಪರಸ್ಪರವಾಗಿ ಸುವ್ಯವಸ್ಥೆ
ಯಿಂದ ನಡೆಯುವವು.

(೪೦) ವಾಯುಗಳು:— ಇವು ಪ್ರಾಣ, ಅಪಾನ, ವ್ಯಾನ,
ಉದಾನ, ಸಮಾನ, ಮತ್ತು ನಾಗ; ಕೂರ್ಮ, ಕೃಕರ, ದೇವದತ್ತ,
ಧನಂಜಯ ಎಂದು ಹತ್ತು ಇವೆ. ಮೊದಲಿನ ಐದು ಪ್ರಾಣ ವಾಯುಗಳೆಂದು
ಹೇಳಲ್ಪಡುತ್ತವೆ. ಈ ಎಲ್ಲ ವಾಯುಗಳು ಶರೀರದ ರಕ್ಷಣೆಗೋಸ್ಕರ
ಅವಶ್ಯಕವಾದವುಗಳು. ಇವಿಲ್ಲದಿದ್ದರೆ ಮನುಷ್ಯನು ಮೃತನಾಗುತ್ತಾನೆ.
ಮನುಷ್ಯನು ಉಸಿರಾಡಿಸುವದು ಶರೀರದಲ್ಲಿಯ ಕಶ್ಮಲಗಳನ್ನು ಹೊರ
ದೂಡುವದು ಅನ್ನವನ್ನು ಜೀರ್ಣಿಸಿ ಅದು ಶರೀರದಲ್ಲೆಲ್ಲ ಹಂಚಿಹೋ
ಗುವಂತೆ ಮಾಡುವದು ಇವೇ ಮೊದಲಾದ ಕಾರ್ಯಗಳು ದೇಹ
ಪುಷ್ಟಿಗೆ ಅವಶ್ಯವಾದವುಗಳು. ಶರೀರದಲ್ಲಿ ಉಗಮ ಹೊಂದುವ ಆಯಾ
ಶಕ್ತಿಗಳು ನಾಡಿಗಳ ಮುಖಾಂತರ ನರಗಳಲ್ಲಿ ಪಸರಿಸುತ್ತಲೂ ಮುಂದೆ ಈ
ವಾಯುಗಳ ಮೂಲಕ ಶರೀರದ ಆಯಾ ಭಾಗಗಳಲ್ಲಿ ಚಲನೆಗಳ
ನ್ನುಂಟುಮಾಡುತ್ತಲೂ ಇರುತ್ತವೆ ಈ ವಾಯುಗಳು ಚೈತನ್ಯವನ್ನುಂಟು
ಮಾಡಿದ ಕೂಡಲೆ ಮೇಲ್ಕಂಡ ಕ್ರಿಯೆಗಳು ಜರಗುತ್ತವೆ.

ಪ್ರಾಣವಾಯುವು ಎಲ್ಲ ನಾಡಿಗಳನ್ನು ಸುತ್ತಿಕೊಂಡು ಮೂಲಾಧಾರ
ದಲ್ಲಿ ಹೊಂಟು ನಾಭಿಚಕ್ರವನ್ನು ತಾಕಿ, ಈಡಾಪಿಂಗಳದಲ್ಲಿ ಹೋಗಿ
ಕಪಾಳದಲ್ಲಿ ಸುತ್ತಿಕೊಂಡು ಅಲ್ಲಿಂದ ಮೂಗಿನಿಂದ ಹೊರಟು ಉಶ್ವಾಸನಿಶ್ವಾ
ಸವನ್ನುಂಟು ಮಾಡುತ್ತಿದೆ. ಅಪಾನವಾಯುವು ಗುದಸ್ಥಾನದಲ್ಲಿದ್ದು ದೇಹ
ದಲ್ಲಿಯ ಕಶ್ಮಲಗಳು ಹೊರಗೆಹೋಗುವಂತೆ ಮಾಡುತ್ತಿದೆ. ಮತ್ತು ಅನ್ನ
ರಸವ್ಯಾಪ್ತಿಯನ್ನು ಮಾಡುತ್ತಿದೆ. ವ್ಯಾನವಾಯುವು ಚರ್ಮದಲ್ಲಿದ್ದು ತನ್ನ
ಸೊಂಕಿದ್ದನ್ನು ಅರಿಯುವಂತೆ ಮಾಡುತ್ತಿದೆ. ಅನ್ನವನ್ನು ಭಕ್ಷಿಸುವಂತೆ
ಅದು ಮಾಡಿ ೭೨ ಸಾವಿರ ನಾಡಿಗಳನ್ನು ಸಂಬಂಧಿಸಿಕೊಂಡು ಶರೀರವನ್ನು
ಅನ್ನಪಾನದಿಂದ ರಕ್ಷಿಸುತ್ತದೆ. ಉದಾನವಾಯು ಕಂಠದಲ್ಲಿದ್ದು ಅನ್ನ
ರಸದ ಸ್ಥಾಪನೆ ಮಾಡುತ್ತಿದೆ. ಅದು ಸ್ವಪ್ನಾವಸ್ಥೆಯನ್ನುಂಟು ಮಾಡು
ತ್ತಿದೆ. ಸೀನುವಂತೆ ಮಾಡುತ್ತಿದೆ. ಸಮಾನವಾಯು ನಾಭಿಯಲ್ಲಿದ್ದು
ಅನ್ನರಸವನ್ನು ರೋಮನಾಳಗಳಲ್ಲಿ ಹಂಚಿಹಾಕುತ್ತಿದೆ. ನಾಗವಾಯು
ಮುಖ ಮಾಡುವದನ್ನು ಉಮ್ಮಳಿಸುವದನ್ನು ಮಾಡಿಸುತ್ತದೆ. ಕೂರ್ಮ



ವಾಯು ಉದರಲಲಾಟದಲ್ಲಿ ಇದ್ದು ನೋರೆಯನ್ನು ನೋಲೆ ಕೆಳಗುಮಾಡು
ವದು, ಮನುಷ್ಯನು ನಗುವುದು, ಕಣ್ಣುಗಳನ್ನು ಮುಚ್ಚುವದು, ತೆರೆಯು
ವದು ಆಕಳಿಕೆ ಬರುವದು ಇವುಗಳನ್ನು ಮಾಡಿಸುತ್ತಿದೆ. ಕೃಕರವಾಯು
ನಾಸಿಕಾಗ್ರದಲ್ಲಿದ್ದು ಕ್ಷುಧೆಯನ್ನು ಮಾಡಿಸಿ ಗಮನಾಗಮನವನ್ನು ಮಾಡಿ
ಸುತ್ತಿದೆ. ದೇವದತ್ತವಾಯು ಗುಹ್ಯ ಮತ್ತು ಕಟಿಯಲ್ಲಿದ್ದು ಏಳುವದು,
ಕುಳ್ಳಿರುವದು, ಮಾತನಾಡುವದು, ಸುತ್ತಿಕೊಂಡು ಬೀಳುವದು, ಹೀಗೆ
ಚೈತನ್ಯವನ್ನು ಮಾಡಿಸುತ್ತದೆ. ಧನಂಜಯ ವಾಯುವು ಬ್ರಹ್ಮರಂಧ್ರ
ದಲ್ಲಿದ್ದು ಸಮುದ್ರದಂತೆ ಘೋಷವನ್ನು ಮಾಡಿಸಿ ಮರಣ ಕಾಲದಲ್ಲಿ
ಸ್ತಬ್ಧವಾಗುವದು. ಬಾಹ್ಯದಲ್ಲಿ ಈ ಕಾರ್ಯಗಳಾಗುವದು ವಾಯುಗ
ಳಿಂದಲೇ. ಇಲ್ಲಿ ವಾಯು ಎಂದರೆ ವಾತಾವರಣದಲ್ಲಿ ನಾವು ಉಸುರಾ
ಡಿಸುವ ವಾಯುವೆಂಬ ಅರ್ಥವಲ್ಲ. ಇವುಗಳು ಚಕ್ರಗಳೊಳಗಿಂದ ನಾಡಿಗ
ಳಲ್ಲಿ ಹರಿಯುತ್ತಿರುವ ಚೈತನ್ಯವನ್ನು ಶರೀರದ ಆಯಾ ಭಾಗಗಳಿಗೆ ಒಯ್ಯುವ
ಸಾಧನಗಳೆಂದು ಹೇಳಬಹುದು.

(೪೧) ಅವಸ್ಥೆಗಳು:— ಜಾಗ್ರತ್, ಸ್ವಪ್ನ, ಸುಷುಪ್ತಿ, ತೂರ್ಯ,
ತೂರ್ಯಾತೀತ ಎಂದು ೫ ಅವಸ್ಥೆಗಳಿರುತ್ತವೆ. ಮನುಷ್ಯನ ಪ್ರಗತಿ
ಯನ್ನು ಇವುಗಳ ಮೂಲಕ ವಿವರಿಸುವ ವಾಡಿಕೆಯುಂಟು. ಮನುಷ್ಯನಿಗೆ
ಅಂತರಂಗ ಬಹಿರಂಗವೆಂಬವೆರಡು ಇರುತ್ತವೆ. ಇವುಗಳಲ್ಲಿ ಬಹಿರಂಗದ
ಕ್ರಿಯೆಗಳು ಜಾಗ್ರಾವಸ್ಥೆಯನ್ನು ಸೂಚಿಸುತ್ತವೆ. ಇದು ಸ್ಥೂಲವು ಅಂತರಂ
ಗವು ವಿಕಾಸಹೊಂದುವಾಗ ಬಾಹ್ಯಕ್ರಿಯೆಗಳ ಮೇಲಿನ ಲಕ್ಷ್ಯವು ಹೊರಟು
ಹೋಗಿ ಅದು ಜಾಗ್ರತವಾಗುತ್ತದೆ. ಇದು ಸ್ವಪ್ನಾವಸ್ಥೆಯು. ಮುಂದೆ
ಬಾಹ್ಯ ಕ್ರಿಯೆಗಳೂ ಅಂತರಂಗ ಕ್ರಿಯೆಗಳೂ ನಷ್ಟವಾಗಿ ಮನುಷ್ಯನು
ಯಾವಾಗಲೂ ಪರಮಾತ್ಮನ ಧ್ಯಾನದಲ್ಲಿ ಮಗ್ನನಾಗುತ್ತಾನೆ. ಇದು
ಅತ್ಯಂತ ಉಚ್ಚತರ ಸ್ಥಿತಿಯು ಎಂದು ಹೇಳಲ್ಪಡುತ್ತದೆ. ಇದು ಸುಷುಪ್ತಾ
ವಸ್ಥೆಯು. ಇದರಲ್ಲಿ ಮನುಷ್ಯನಿಗೆ ನಿಜ ಸುಖವು ತಲೆದೋರುತ್ತದೆ. ಆಗ
ಅವನಿಗೆ ಅಂತರಂಗ ಬಹಿರಂಗವೆಂಬ ಭೇದಗಳು ಉಳಿಯುವದಿಲ್ಲ. ಇದೇ
ತೂರ್ಯಾವಸ್ಥೆಯು. ಇದರ ಮುಂದೆ ಪ್ರಗತಿಯುಂಟಾದಲ್ಲಿ ಈ ಸುಖವೂ

ಅಸ್ತಿತ್ವದಲ್ಲಿ ಉಳಿಯುವದಿಲ್ಲ. ಇದು ತೂರ್ಯಾತೀತಾವಸ್ಥೆ
ಆದರೆ ವೀರಶೈವರು ತಮ್ಮ ಪ್ರಗತಿಯನ್ನು ಈ ರೀತಿಯಾಗಿ ಭಾವಿ
ದಿಲ್ಲ. ಮೇಲ್ಕಂಡ ಶಬ್ದಗಳು ವಚನಗಳಲ್ಲಿ ಆಗಿಂದಾಗ್ಗೆ ಬರು
ವಚನಕಾರರು ಅಂತರಂಗ ಬೇರೆ, ಬಹಿರಂಗ ಬೇರೆ ಎಂದು ಅವುಗ
ಭೇದ ಎಣಿಸುವದಿಲ್ಲ ಯಾಕಂದರೆ ಅಂತರಂಗದಲ್ಲಿ ಯಾವ ಶಕ್ತಿಗ
ವಿಕಾಸ ಹೊಂದುತ್ತವೋ ಅವುಗಳ ಉಪಯೋಗವನ್ನು ಮನುಷ್ಯನು ಬ
ರಂಗದಲ್ಲಿಯೂ ಕೂಡ ಮಾಡಬೇಕೆಂದು ಅವರ ಮುಖ್ಯ ತತ್ವವಿದೆ. ಅಂ
ಮನುಷ್ಯನಿಗೆ ಬಹಿರಂಗವನ್ನು ಅಂದರೆ ಬಾಹ್ಯ ಕ್ರಿಯೆಗಳನ್ನು ಬಿಡಲಿಕ್ಕೆ
ಲಾರದು. ಇಷ್ಟೇ ಅಲ್ಲ, ಈ ಬಹಿರಂಗದ ಕ್ರಿಯೆಗಳ ಸಹಾಯದಿಂದ
ಅವನು ಅಂತರಂಗದ ಗುಣಗಳನ್ನು ಅಂದರೆ ಇಂದ್ರಿಯ, ಮನಸ್ಸು, ಬು
ಈ ಮೊದಲಾದವುಗಳನ್ನು ವಿಕಾಸಮಾಡಿಕೊಳ್ಳತಕ್ಕದ್ದು. ಹೀಗೆ ಅಂತರಂ
ಬಹಿರಂಗಗಳು ಪರಸ್ಪರಾವಲಂಬಿಗಳಾಗಿವೆ. ಆದ್ದರಿಂದ ಅವರು ಜಾಗ್ರತ್
ಸ್ವಪ್ನ, ಸುಷುಪ್ತಿ ಎಂಬ ಅವಸ್ಥೆಗಳಲ್ಲಿ ಭೇದ ಮಾಡುವದಿಲ್ಲ. ತೂರ್ಯ
ಎಂಬ ಶಬ್ದವನ್ನು ಅವರು 'ಲಿಂಗಸುಖ' ಎಂಬ ಭಾವದಲ್ಲಿ ಆಗಿಂದಾಗ್ಗೆ
ಉಪಯೋಗಿಸುವದುಂಟು. ಇದು ವಚನಗಳಲ್ಲಿ ಬರುತ್ತದೆ.. ತೂರ್ಯಾ
ತೀತ ಈ ಶಬ್ದವನ್ನು ಅವರು ಶೂನ್ಯ ಎಂಬ ಅರ್ಥದಲ್ಲಿ ಉಪಯೋಗಿಸು
ದುಂಟು. ಆದರೆ ಮನುಷ್ಯನ ವಿಕಾಸವನ್ನು ಅವರು ಮೇಲ್ಕಂಡ ಅವಸ್ಥೆ
ಸೂಚಕ ಶಬ್ದಗಳಿಂದ ಹೇಳುವದಿಲ್ಲ. ಆದರೆ ಅವರು ಆಚಾರಲಿಂಗ, ಗುರು
ಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ
ಶಬ್ದಗಳಿಂದ ಹೇಳುವದುಂಟು. ಮೊದಲಿನ ಎರಡು ಶಬ್ದಗಳಿಂದ ಅಂದರೆ
ಆಚಾರಲಿಂಗ, ಗುರುಲಿಂಗ ಇವುಗಳಿಂದ ಮನುಷ್ಯನ ಬಾಹ್ಯ ಕ್ರಿಯೆಗಳ
ವಿಕಾಸತೆಯನ್ನು ಅವರು ನಿರ್ದೇಶಿಸುತ್ತಾರೆ. ಮುಂದಿನ ಎರಡು ಶಬ್ದ
ಗಳು ಅಂದರೆ ಶಿವಲಿಂಗ, ಜಂಗಮಲಿಂಗ ಇವುಗಳಿಂದ ಮನುಷ್ಯನ
ಅಂತರಂಗದ ವಿಕಾಸತೆಯನ್ನು ಹೇಳುತ್ತಾರೆ. ಮತ್ತು ಕಡೆಯ ಶಬ್ದ
ಗಳಾದ ಪ್ರಸಾದಲಿಂಗ, ಮಹಾಲಿಂಗ ಇವುಗಳಿಂದ ಮನುಷ್ಯನ ತೂರ್ಯಾ
ವಸ್ಥೆಯನ್ನು ಅವರು ಹೇಳುತ್ತಾರೆ. ಮತ್ತು ಈ ಲಿಂಗಗಳ ತರುವಾಯ
ಶೂನ್ಯ ಲಿಂಗಗಳೆಂಬುವಿವೆ. ಇವುಗಳ ಮೂಲಕ ಅವರು ತೂರ್ಯಾತೀತಾ



ವಸ್ಥೆಯನ್ನು ಹೇಳುತ್ತಾರೆ. ಈ ಪ್ರಕಾರ ಲಿಂಗಶಬ್ದದಿಂದ ಅವರು ಬೇರೆ ಬೇರೆ
ಅವಸ್ಥೆಗಳನ್ನು ಸೂಚಿಸುತ್ತಾರೆ.

(೪೩) ಶಾಂಭವಯೋಗ:— ಶಿವನಲ್ಲಿ ಮನಸ್ಸನ್ನು ಏಕಾಗ್ರತೆಯಾ
ಗಿರಿಸುವದೇ ಶಾಂಭವಯೋಗವೆಂದು ಹೇಳಲ್ಪಡುತ್ತದೆ. ಈ ಮನಸ್ಸ
ಪರಮಾತ್ಮನಲ್ಲಿ ದೃಢಪಡಬೇಕು. ಇದೇ ಈ ಶಾಂಭವ ಯೋಗದ
ಉದ್ದೇಶವಿರುತ್ತದೆ. ಆಗ ತಾನು ನಿಜವಸ್ತುವಲ್ಲ, ಆದರೆ ಶಿವನೇ
ನಿಜವಸ್ತುವು ಮತ್ತು ಸತ್ಯನು ಎಂಬ ಭಾವವು ಬಲಿಯಬೇಕು. ಭಕ್ತನು
ಇದರಲ್ಲಿ ಪ್ರಾಣಾಯಾಮವನ್ನು ಆಚರಿಸಿ ಆಸನವನ್ನು ಬಲಿದು ಏಕಾಗ್ರ
ಚಿತ್ತನಾಗಬೇಕು. ಆ ಮೇಲೆ ತನ್ನ ಕರದಲ್ಲಿಯ ಇಷ್ಟಲಿಂಗವನ್ನು ಧ್ಯಾನಿ
ಸಬೇಕು. ಅದು ಅರುಹಿನ ಕುರುಹೆಂದು ಅವನು ಅದನ್ನು ಭಾವಿಸಬೇಕು.
ಅಂದರೆ ಈ ಲಿಂಗವು ಚಿದ್ಘನಲಿಂಗವೆಂತಲೇ ಅವನು ತಿಳಿಯಬೇಕು. ಸಾಧ
ಕನು ಹೀಗೆ ಹೃತ್ಕಮಲದಲ್ಲಿ ಅದನ್ನು ಸರಿಯಾಗಿ ನೆಲೆಗೊಳಿಸಬೇಕು.
ಈ ಕಮಲಕ್ಕೆ ೧೨ ದಳಗಳಿವೆ. ಪೂರ್ವದಳವನ್ನೇರಲು ಗುಣಿಯಾಗಿ
ರುವನು. ಆಗ್ನಿದಳವನ್ನೇರಲು ಹಸಿವೆಯಾಗುವದು. ದಕ್ಷಿಣದಳವನ್ನೇರಲು
ಕ್ರೋಧಿಯಾಗುವನು. ನೈಋತ್ಯದಳವನ್ನೇರಲು ಅಸತ್ಯವಂತನಾಗುವನು.
ವರುಣದಳವನ್ನೇರಲು ನಿದ್ರೆಗೆಯ್ಯುವನು. ವಾಯುದಳವನ್ನೇರಲು ಚಂಚ
ಲನಾಗುವನು. ಉತ್ತರ ದಳವನ್ನೇರಲು ಧರ್ಮಿಷ್ಠನಾಗುವನು. ಈಶಾನ್ಯ
ದಳವನ್ನೇರಲು ಕಾಮಾತುರನಾಗಿರುವನು. ಈ ೮ ದಳಗಳ ಮೇಲೆ
ಹರಿದಾಡುವ ಜೀವನ ಸ್ಥಿತಿಯನ್ನು ತೊಲಗಿಸಿ ಅದನ್ನು ನಡು ಮಧ್ಯ
ದಲ್ಲಿ ತಂದಿರಿಸಲು ಸಂಸಾರ ರಹಿತನಾಗುವನು. ಹೀಗೆ ನೆಲೆಗೊಂಡ
ಕೂಡಲೇ ಆ ಜೀವನಲ್ಲಿ ಲಿಂಗ ಕಳೆಯು ಬೇಗುವದು. ಅದೇ ಪ್ರಾಣ
ಲಿಂಗವೆನಿಸುವದು. ಆ ಮೇಲೆ ಸಾಧಕನು ಅದನ್ನು ಮಸ್ತಕದಲ್ಲಿರುವ
ಕಳೆಯಲ್ಲಿ ಅಂದರೆ ಭಾವಲಿಂಗದಲ್ಲಿಟ್ಟರೆ ಅದು ಶಾಂಭವಯೋಗವೆಂದೆ
ನಿಸುವದು. ಆಗ ಅರಿವಾತನು, ಅರಿವು, ಮತ್ತು ಅರಿಯತಕ್ಕ ಪರಶಿ
ವನು, ಇವರಲ್ಲಿ ಪರಸ್ಪರ ಐಕ್ಯತೆಯುಂಟಾಗುವದು. ಹಾಗೆಯೇ ನೆನೆವಾ
ತನು, ನೆನಹು, ಮತ್ತು ನೆನೆಯತಕ್ಕ ಶಿವನು, ಮತ್ತು ನೋಡುವಾತನು,

ನೋಟ, ಮತ್ತು ನೋಡತಕ್ಕ ವಸ್ತು; ಇವೆಲ್ಲವೂ ಏಕಾಕಾರವಾಗುವವು. ಇದನ್ನು ಸಾಧಿಸಿದಲ್ಲಿ ಅದೇ ಶಾಂಭವ ಯೋಗವು.

(೪೩) ಮುದ್ರೆಗಳು:— ಇವು ಧ್ಯಾನ ಮುದ್ರೆ, ಖೇಚರ ಮುದ್ರೆ, ಷಣ್ಮುಖ ಮುದ್ರೆ. ಶಾಂಭವ ಮುದ್ರೆ ಎಂದು ನಾಲ್ಕು ಇರುತ್ತವೆ. ಇವು ಪರಮಾತ್ಮ ದರ್ಶನಕ್ಕೆ ಸಹಾಯಕಾರಿಗಳೆಂದು ಭಾವಿಸಲ್ಪಟ್ಟವೆ. ಒಬ್ಬನು ಶುಚಿಯಾಗಿ ಒಂದು ಸ್ಥಳದಲ್ಲಿ ಪದ್ಮಾಸನದಲ್ಲಿ ಕುಳಿತು ನಾಸಿಕಾಗ್ರದಲ್ಲಿ ದೃಷ್ಟಿಯನ್ನಿಟ್ಟು ಪಂಚಾಕ್ಷರೀ ಮಂತ್ರ ಜಪವನ್ನು ಶಿವಾರ್ಪಣ ಬುದ್ಧಿಯಿಂದ ಮಾಡುವುದು ಧ್ಯಾನಮುದ್ರೆ ಎಂದೆನಿಸುವುದು. ನಾಸಿಕಾಗ್ರವನ್ನು ನೋಡುತ್ತ ಧ್ಯಾನಾಸಕ್ತನಾದರೆ ಘಂಟೆ, ಶಂಖ, ವೇಣು, ತಾಳ ಮದ್ದಳೆ, ಭೇರಿ, ಮೇಘ ಹೀಗೆ ಅನೇಕ ತೆರನಾದ ನಾದಗಳು ಕೇಳಬರುವವು. ಇದರಲ್ಲಿ ಕಡೆಯ ನಾದವನ್ನು ಕೇಳುತ್ತಲಿರಲು ಪ್ರಣವದ ಮಹಾಧ್ವನಿಯಾಗುವದು. ಅದರ ಅನುಸಂಧಾನವೇ ಖೇಚರಿ ಮುದ್ರೆ ಎನಿಸುವದು. ಪ್ರಾಣಾಯಾಮವನ್ನು ಮಾಡಿ ಆಸನವನ್ನು ಬಲಿದು ಸುಷುಮ್ನಾನಾಡಿಯು ಸಂಗಡ ಸಹಸ್ರದಳದ ಪರಿಯಂತರ ಬರಲು ಅಲ್ಲಿ ಜ್ಯೋತಿಸ್ವರೂಪವನ್ನು ನೋಡುವುದು ಷಣ್ಮುಖ ಮುದ್ರೆ ಎನಿಸುವದು. ಶಾಂಭವ ಮುದ್ರೆಯಲ್ಲಿ ಶುದ್ಧ ಮನಸುಳ್ಳವನಾಗಿ ನಿಶ್ಚಲ ಚಿತ್ತನಾಗಿರಲು ಕೋಟಿ ಸೂರ್ಯ ಪ್ರಕಾಶವಾಗಿ ಹೊಳೆಯುವ ಪರಮಾತ್ಮನನ್ನು ಕಾಣುತ್ತ ಇರುವನು. ಇದು ಎಲ್ಲಕ್ಕೂ ಶ್ರೇಷ್ಠವಾದುದೆಂದು ಭಾವಿಸಬೇಕು.

(೪೪) ಶಿವಯೋಗ:— ಅಷ್ಟಾಂಗ ಯೋಗದ ರೀತಿಯಾಗಿ ಈ ವಿಷಯವನ್ನು ಹೇಳುವದುಂಟು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಇವು ಯೋಗದ ಅಷ್ಟಾಂಗಗಳಾಗಿವೆ. ಆದರೆ ಶಿವಯೋಗದಲ್ಲಿ ಈ ಅಂಗಗಳಿಗೆ ವೀರಶೈವಾಚಾರಕ್ಕನುಗುಣವಾಗಿ ಕ್ರಿಯೆಗಳು ಹೇಳಲ್ಪಡುವದುಂಟು. ಈ ಕ್ರಿಯೆಗಳಂತೆ ಆಚರಿಸಲು ಅದು ಶಿವಯೋಗವೆಂದು ಹೇಳಲ್ಪಡುತ್ತಿದೆ. ಅನೃತ, ಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ ಇವೈದನ್ನು ಬಿಟ್ಟು ಲಿಂಗಪೂಜೆ ಘನಸ್ಕ ಮಾಡುವುದೇ ಯಮಯೋಗವು. ನಿರಪೇಕ್ಷನಾಗಿ ಶಿವಧರ್ಮ



ದಿಂದ ನಡೆಯುತ್ತ ಪ್ರಣವ ಪಂಚಾಕ್ಷರಿಯ ಜಪಮಾಡುತ್ತ ಅಶುಚಿತ್ವವನ್ನು ಬಿಟ್ಟುಕೊಟ್ಟು ಪಾಪಕ್ಕೆ ಭೀತನಾಗಿ ಶಿವಲಿಂಗಾರ್ಚಕನಾಗಿರುವುದೇ ನಿಯಮ ಯೋಗವು. ಸಿದ್ಧಾಸನ, ಪದ್ಮಾಸನ, ಸ್ವಸ್ತಿಕಾಸನ, ಅರ್ಧ ಚಂದ್ರಾಸನ, ಪರ್ಯಂಕಾಸನ ಇವುಗಳಲ್ಲೊಂದನ್ನು ಸ್ವೀಕರಿಸಿ ಸ್ಥಿರಚಿತ್ತನಾಗಿ ಶಿವಲಿಂಗಾರ್ಚನೆಯನ್ನು ಮಾಡುವುದು ಆಸನಯೋಗವು. ಇಡಾ ಪಿಂಗಳದಲ್ಲಿ ಚರಿಸುವ ರೇಚಕಪೂರಕಗಳ ಭೇದವನ್ನು ತಿಳಿದು ಮನಪವನ ಪ್ರಾಣಗಳ ಮೇಲೆ ಲಿಂಗವನ್ನು ಸಂಬಂಧಿಸಿ ಅವುಗಳನ್ನು ಲಿಂಗಸ್ವರೂಪವನ್ನಾಗಿ ಮಾಡಿ ಹೃದಯ ಕಮಲ ಮಧ್ಯದಲ್ಲಿ ಪ್ರಣವವನ್ನುಚ್ಚರಿಸುತ್ತ ಪರಶಿವನ ಧ್ಯಾನದಲ್ಲಿರುವುದೇ ಪ್ರಾಣಾಯಾಮವಾಗಿರುವದು. ಮನುಷ್ಯನು ವಿಷಯಗಳಿಗೆ ಒಳಗಾಗದೆ ಜ್ಞಾನಿಯೂ ಧರ್ಮಿಷ್ಠನೂ ಆಗಿ ಸರ್ವೇಂದ್ರಿಯಗಳನ್ನು ಲಿಂಗಮುಖದಿಂದ ಸಾವಧಾನ ಮಾಡಿಕೊಂಡಿರುವುದು ಪ್ರತ್ಯಾಹಾರವಾಗಿರುವುದು. ಅಂತರಂಗದ ಶುದ್ಧ ಪರಮಾತ್ಮಲಿಂಗವನ್ನು ಶಿವಲಿಂಗ ಸ್ವರೂಪವನ್ನಾಗಿ ಮಾಡಿ ಕರಸ್ಥಲದ ಲಿಂಗವೇ ಪರಮಾತ್ಮ ಚಿನ್ಹವೆಂದರಿಂದು, ಅದನ್ನು ಆರು ಚಕ್ರಗಳಲ್ಲಿ ಅಂದರೆ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ, ಇವುಗಳಲ್ಲಿ ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳಾಗಿ ಧ್ಯಾನಿಸುವುದು ಧ್ಯಾನಯೋಗವೆನಿಸುವದು. ಹೀಗೆ ಧ್ಯಾನಿಸಿದಲ್ಲಿ ಆಯಾ ಲಿಂಗಗಳು ಆಯಾ ಚಕ್ರಗಳಲ್ಲಿ ಸ್ಥಾಪ್ಯವಾಗುವವು. ಇದರಿಂದ ಭಾವ, ಕರಣ ಮನ ಮುಖ್ಯವಾದ ಸರ್ವಾಂಗದಲ್ಲಿ ಆ ಲಿಂಗವು ತೊಳಗಿ ಬೆಳಗಹತ್ತಲು ಆ ಲಿಂಗದೊಡನೆ ಆಚರಣೆಗಳುಂಟಾಗುವವು. ಇದೇ ಧಾರಣಯೋಗವು. ಈ ಆರು ಲಿಂಗಗಳು ಇಷ್ಟ ಪ್ರಾಣ ಭಾವಲಿಂಗದೊಳಗಿನವಿದ್ದುದರಿಂದ ಅವುಗಳಲ್ಲಿಯೇ ಬೆರೆದು, ಆ ಮೇಲೆ ಈ ತ್ರಿವಿಧ ಲಿಂಗಗಳನ್ನು ಪುನಃ ಏಕಾಕಾರ ಮಾಡಿ, ಅಖಂಡ ಪರಿಪೂರ್ಣ ಕೇವಲ ಪರಂಜ್ಯೋತಿ ಸ್ವರೂಪವಾಗಿರುವ ಮಹಾಲಿಂಗದೊಡನೆ ಸಂಯೋಗವಾಗಬೇಕು. ಇದೇ ಸಮಾಧಿ ಯೋಗವು. ಇತರ ಯೋಗಗಳಲ್ಲಿ ಈ ತೆರದ ಲಿಂಗ ಸಂಬಂಧವಿರುವದಿಲ್ಲ. ಅವು ಕೇವಲ ಕರ್ಮಕೌಶಲಗಳಾಗಿವೆ. ಆದರೆ ಶಿವಯೋಗಿಯು ತನಗೆ

ಗುರುವಿತ್ತ ಇಷ್ಟಲಿಂಗವನ್ನು ದೃಷ್ಟಿಯಿಂದ ಗ್ರಹಿಸುವನು. ಹೀಗೆ ಗ್ರಹಿ ಪ್ರಾಣಲಿಂಗವನ್ನು ತನ್ನ ಮನಸ್ಸಿನಿಂದ ದೃಢವಾಗಿ ಹಿಡಿದು ಮುಂ ಭಾವಲಿಂಗವನ್ನು ತನ್ನ ಭಾವದಿಂದ ಅರಿಯುವನು. ಹೀಗೆ ತ್ರಿವಿಧ ಲಿಂಗಗಳೊಡನೆ ಆಚರಿಸಿ, ಲಿಂಗದೊಡನೆ ಕೂಡಿ, ಲಿಂಗವೇ ತಾನು ತಾನಾಗಿ ಬಯಲಾಗುವನು. ಇದಕ್ಕೆ ಯಾವುದು ಸಾಧನವೋ ಅದೇ ಶಿವಯೋಗವು.

(೪೫) ಪಂಚಕರ್ಮೇಂದ್ರಿಯಗಳು:— ಇವು ವಾಕ್, ಪಾಣಿ, ಪಾದ, ಗುದ, ಗುಹ್ಯ ಎಂದು ಐದು ಇವೆ. ಇವು ಕ್ರಿಯಾ ರೂಪವಾಗಿರುತ್ತವೆ. ಇವು ಸ್ವತಂತ್ರವಾಗಿರದೆ ಜೀವನಿಗೆ ಅಧೀನವಾಗಿರುತ್ತವೆ. ಜೀವನು ಮನಸ್ಸನ್ನು ಇಂದ್ರಿಯಗಳೊಡನೆ ಬೆರಿಸಲು ಅವು ವಾಯುವಿನ ಚೈತನ್ಯ ಬಲದಿಂದ ವ್ಯವಹರಿಸುತ್ತವೆ. ವಾಗಿಂದ್ರಿಯವು ಮಾತು ಕಥೆಯಾಡುತ್ತಿದೆ. ಪಾಣೇಂದ್ರಿಯವು ಕೊಡುವದು, ತೆಗೆದುಕೊಳ್ಳುವದು, ಹಿಡಿಯುವದು ಮೊದಲಾದ ಕಾರ್ಯಗಳನ್ನು ಮಾಡುತ್ತಿದೆ. ಪಾದೇಂದ್ರಿಯವು ಹೋಗುವದು, ಬರುವದು ಈ ಮೊದಲಾದ ಕಾರ್ಯಗಳನ್ನು ಮಾಡುತ್ತಿದೆ. ಗುದೇಂದ್ರಿಯವು ಮಲ ವಿಸರ್ಜನ ಕಾರ್ಯವನ್ನು ಮಾಡುತ್ತಿದೆ. ಗುಹ್ಯೇಂದ್ರಿಯವು ಮೈಥುನ ಕಾರ್ಯ ಮಾಡುತ್ತಿದೆ. ಇವೆಲ್ಲವೂ ಕರ್ಮೇಂದ್ರಿಯಗಳು. ಗುದಕ್ಕೆ ಪಾಯುವೆಂತಲೂ ಹೆಸರಿದೆ.

(೪೬) ಪಂಚಜ್ಞಾನೇಂದ್ರಿಯಗಳು:— ಇವು ಶ್ರೋತ್ರ, ತ್ವಕ್ಕು, ನೇತ್ರ ಜಿಹ್ವೆ, ಘ್ರಾಣ ಇವು ಇವೆ. ಇವುಗಳಿಗೆ ಬುದ್ಧೀಂದ್ರಿಯಗಳೆಂಬ ಹೆಸರೂ ಇದೆ. ಶ್ರೋತ್ರೇಂದ್ರಿಯ ಅಥವಾ ಶ್ರವಣೇಂದ್ರಿಯಕ್ಕೆ ಆಕಾಶ ತತ್ವವು ಮೂಲ ಚೈತನ್ಯವು. ಶಬ್ದವನ್ನು ಈ ಇಂದ್ರಿಯವು ಗ್ರಹಿಸುತ್ತದೆ. ತ್ವಗಿಂದ್ರಿಯಕ್ಕೆ ವಾಯು ತತ್ವವು ಮೂಲ ಚೈತನ್ಯವು. ಇದು ಸ್ಪರ್ಶನ ವಿಷಯವನ್ನುಳ್ಳದ್ದು. ನಯನೇಂದ್ರಿಯಕ್ಕೆ ಅಗ್ನಿ ತತ್ವವು ಮೂಲ ಚೈತನ್ಯವು. ಇದಕ್ಕೆ ರೂಪು ವಿಷಯವಾಗಿರುತ್ತದೆ. ಜಿಹ್ವೇಂದ್ರಿಯಕ್ಕೆ ಅಪ್ಪು ತತ್ವವು ಮೂಲ ಚೈತನ್ಯವು. ಇದು ರಸ ವಿಷಯವನ್ನು ಗ್ರಹಿಸಿ ಸುರುಚಿ ಕುರುಚಿಗಳನ್ನು ಗ್ರಹಿಸುವದು. ಘ್ರಾಣೇಂದ್ರಿಯಕ್ಕೆ ಪೃಥ್ವಿ ತತ್ವವು ಮೂಲ



ಚೈತನ್ಯವು. ಅಲ್ಲಿ ಗಂಧ ವಿಷಯವಿದ್ದು ಅದು ಸುಗಂಧ ದುರ್ಗಂಧವನ್ನರಿಯುವದು.

(೪೭) ಪಂಚ ವಿಷಯಗಳು:— ಇವುಗಳಿಗೆ ತನ್ಮಾತ್ರೆಗಳು ಎಂಬ ಹೆಸರೂ ಇದೆ. ಇವು ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳಿರುತ್ತವೆ. ಇವುಗಳು ಅನುಕ್ರಮವಾಗಿ ಶ್ರೋತ್ರೇಂದ್ರಿಯ, ತ್ವಗಿಂದ್ರಿಯ, ನಯನೇಂದ್ರಿಯ, ಜಿಹ್ವೇಂದ್ರಿಯ, ಘ್ರಾಣೇಂದ್ರಿಯ ಇವುಗಳಿಗೆ ಸಂಬಂಧಪಡುತ್ತವೆ.

(೪೮) ಕರಣ ಚತುಷ್ಟಯಗಳು:— ಇವು ಮನ, ಬುದ್ಧಿ, ಚಿತ್ತ, ಅಹಂಕಾರ ಇವುಗಳಿರುತ್ತವೆ. ಮನಸ್ಸಿಗೆ ವಾಯುವು ಮೂಲ ಚೈತನ್ಯವು. ಮನಸ್ಸು ಸಂಕಲ್ಪ ವಿಕಲ್ಪಗಳನ್ನು ಮಾಡಿಸುತ್ತದೆ. ಬುದ್ಧಿಗೆ ಅಪ್ಪು ಮೂಲ ಚೈತನ್ಯವು. ನಿಶ್ಚೈಸುವದೇ ಅದರ ಕಾರ್ಯವು. ಚಿತ್ತಕ್ಕೆ ಪೃಥ್ವಿಯೇ ಮೂಲ ಚೈತನ್ಯವು. ಅದು ಸಂಸಾರ ವಿಷಯಕವಾದ ಕಾರ್ಯಗಳನ್ನು ಮಾಡಿಸುತ್ತದೆ. ಅಹಂಕಾರಕ್ಕೆ ಅಗ್ನಿಯೇ ಮೂಲ ಚೈತನ್ಯವು. ಅದು ಅಹಂಭಾವದಿಂದ ಅಹಂಕರಿಸುತ್ತಿದೆ. ಇವು ನಾಲ್ಕು ಕರಣ ಚತುಷ್ಟಯಗಳು. ಇವೆಲ್ಲವೂ ಆತ್ಮನಿಗೆ ಸಂಬಂಧಪಟ್ಟವುಗಳಿರುತ್ತವೆ.

(೪೯) ತ್ಯಾಗಾಂಗ, ಭೋಗಾಂಗ, ಯೋಗಾಂಗಗಳು:- ಇವು ಭಕ್ತನ ಆಚರಣೆಗಳು. ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿಗೆ ಅನುಕ್ರಮವಾಗಿ ಸಂಬಂಧಿಸಿರುತ್ತವೆ. ತ್ಯಾಗಾಂಗ, ಭೋಗಾಂಗ, ಯೋಗಾಂಗಗಳಿಂದ ಈ ಮೂರು ಶರೀರಗಳಲ್ಲಿ ಇಷ್ಟ ಪ್ರಾಣ ಭಾವಲಿಂಗಗಳು ಅನುಕ್ರಮವಾಗಿ ನೆಲೆಗೊಳ್ಳುತ್ತವೆ. ಸಂಸಾರದಲ್ಲಿ ಕೆಡಕಾದುದು ಅವುದೋ ಅದನ್ನು ಬಿಡುವುದೇ ತ್ಯಾಗಾಂಗವು. ಕೆಡಕಿನ ಕಡೆಗೆ ತನುಗುಣಗಳ ಪ್ರವೃತ್ತಿ ಇರುತ್ತದೆ. ಈ ಪ್ರವೃತ್ತಿಯನ್ನು ತೊಲಗಿಸಿ ಸದಾಚಾರದ ಕಡೆಗೆ ಮನುಷ್ಯನು ಒಲಿಯಬೇಕು. ಇದೇ ಅವನಲ್ಲಿಯ ತ್ಯಾಗಾಂಗವು. ಲಿಂಗದೊಡನೆ ಮನುಷ್ಯನು ತನ್ನ ಎಲ್ಲ ಸುಖಗಳನ್ನು ಭೋಗಿಸುವದೇ ಭೋಗಾಂಗವು. ಅಂದರೆ ಅವನು ಶಿವಾರ್ಪಣ ಬುದ್ಧಿಯಿಂದ ತನ್ನ ಕೃತ್ಯಗಳನ್ನು

ಮಾಡಬೇಕು. ಈ ಬಗೆಯ ಅರ್ಪಣದಿಂದ ಅವನು ಶಿವಪ್ರಸಾದವನ್ನು ಪಡೆದು ಜಗತ್ತಿನಲ್ಲಿ ವ್ಯವಹರಿಸುತ್ತಾನೆ. ಅವನು ಲಿಂಗ ಭೋಗೋಪಭೋಗಿ ಎಂದೆನಿಸಿಕೊಳ್ಳುತ್ತಾನೆ. ಇದೇ ಭೋಗಾಂಗವು. ಮನುಷ್ಯನು ತನ್ನ ನಿಜದಲ್ಲಿ ಬೆರೆಯಲು ಅದು ಯೋಗಾಂಗವು. ತ್ಯಾಗಾಂಗ, ಭೋಗಾಂಗಗಳಿಂದ ಮನುಷ್ಯನಲ್ಲಿ ಅವನ ನಿಜವು ಅಳವಡುತ್ತದೆ. ಈ ನಿಜದಲ್ಲಿ ಏಕರೂಪವಾಗಲು ಅದೇ ಯೋಗಾಂಗವೆನಿಸಿಕೊಳ್ಳುತ್ತದೆ.

(೫೦) ಇಷ್ಟಪ್ರಾಣಭಾವಲಿಂಗಗಳು:— ತ್ಯಾಗಾಂಗ, ಭೋಗಾಂಗ, ಯೋಗಾಂಗಗಳಿಂದ ಮನುಷ್ಯನ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಪರಮಾತ್ಮನ ಕಳೆಯು ಪ್ರಜ್ವಲಿಸಹತ್ತುತ್ತದೆ. ಈ ಕಳೆಯೇ ಲಿಂಗವೆನಿಸಿಕೊಳ್ಳುತ್ತದೆ. ಇದೇ ಆ ಮೂರು ಶರೀರಗಳಲ್ಲಿ ಅನುಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂಬ ಹೆಸರುಗಳನ್ನು ತಾಳಿ ಪ್ರಕಟವಾಗುತ್ತದೆ. ಇಷ್ಟಲಿಂಗವು ಸತ್‌ಕ್ರಿಯಾ ಸ್ವರೂಪುಳ್ಳದ್ದಾಗಿರುತ್ತದೆ. ಈ ಕ್ರಿಯೆಗಳಿಗೆ ಸಾಧನವಾಗಿರುವಂಥವು ಇಂದ್ರಿಯಗಳು. ಈ ಇಂದ್ರಿಯಗಳಿಗೆ ಚೈತನ್ಯವಾಗಿರುವದು ಪ್ರಾಣವು. ಈ ಪ್ರಾಣದಲ್ಲಿಯೇ ಪ್ರಾಣಲಿಂಗವು ನೆಲೆಗೊಳ್ಳುತ್ತದೆ. ಈ ಪ್ರಾಣಲಿಂಗಕ್ಕೆ ಪುನಃ ಮೂಲವಾಗಿರುವದು ಭಾವಲಿಂಗವು. ಭ್ರಮೆಗಳು ಮನುಷ್ಯನಲ್ಲಿ ನಷ್ಟವಾಗಿ ಶಿವಾನುಭವವು ನೆಲೆಗೊಳ್ಳಲು ಈ ಭಾವಲಿಂಗವು ಕಾರಣ ಶರೀರದಲ್ಲಿ ಪ್ರಜ್ವಲಿಸಹತ್ತುತ್ತದೆ. ಈ ಪ್ರಕಾರ ಇಷ್ಟಲಿಂಗವು ಅಂಗದಲ್ಲಿ ಅಳವಡುತ್ತದೆ, ಪ್ರಾಣಲಿಂಗವು ಮನದಲ್ಲಿ ಅಳವಡುತ್ತದೆ, ಭಾವಲಿಂಗವು ಭಾವದಲ್ಲಿ ಅಳವಡುತ್ತದೆ. ಅಂದರೆ ಇಷ್ಟ ಲಿಂಗವು ಬಾಹ್ಯಶರೀರದಲ್ಲಿ ತೋರುತ್ತದೆ. ಪ್ರಾಣ ಲಿಂಗವು ಪ್ರಾಣದಲ್ಲಿ ತೋರುತ್ತದೆ. ಭಾವಲಿಂಗವು ಇವೆಲ್ಲವುಗಳಿಗೂ ಮೇಲಿರುವ ಕಾರಣ ಶರೀರದಲ್ಲಿ ನೆಲೆಗೊಂಡಿರುತ್ತದೆ.

(೫೧) ಭಕ್ತಿಗಳು:— ಇವು ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಸುಜ್ಞಾನ ಮತ್ತು ಸಮರಸ ಎಂದು ಆರು ವಿಧವಾಗಿವೆ. ಶ್ರದ್ಧೆ ಎಂದರೆ ನಂಬಿಗೆ, ಅಥವಾ ವಿಶ್ವಾಸವು ದೃಢವಾದ ನಂಬಿಗೆಯೇ ನಿಷ್ಠೆ



ಯಾಗಿದೆ. ವಿಶ್ವಾಸವು ಬಲಿಯಲು ನಿಷ್ಠೆ ಎಂದೆನಿಸಿಕೊಳ್ಳುತ್ತದೆ. ವಿಶ್ವಾಸವುಳ್ಳವನೇ ಭಕ್ತಸ್ಥಲದವನು. ನಿಷ್ಠೆಯುಳ್ಳವನು ಮಹೇಶ್ವರಸ್ಥಲದವನು. ಇವೆರಡೂ ಸ್ಥೂಲ ಶರೀರಕ್ಕೆ ಸಂಬಂಧಿಸಿವೆ. ಮನಸ್ಸಿಗೆ ಸಂಬಂಧಿಸಿದುದು ಅವಧಾನ ಭಕ್ತಿಯು. ಅವಧಾನವೆಂದರೆ ಮನಸ್ಸಿನ ಏಕಾಗ್ರತೆಯು. ಇದು ಪ್ರಸಾದಿಸ್ಥಲಕ್ಕೆ ಸಂಬಂಧಿಸಿದುದು. ಮನಸ್ಸಿನಲ್ಲಿ ಏಕಾಗ್ರತೆಯುಂಟಾಗಲು ಅಂತರಂಗದ ಕ್ರಿಯೆಗಳನ್ನು ಸರಿಯಾಗಿ ಜರಗಿಸುವ ಯೋಗ್ಯತೆಯುಂಟಾಗುವದು. ಜೀವನ ಈ ಸ್ಥಿತಿಯೇ ಅನುಭಾವ ಭಕ್ತಿಯು. ಇದು ಪ್ರಾಣಲಿಂಗಿಗೆ ಸಂಬಂಧಿಸಿದುದು. ಇವನಲ್ಲಿ ಅಂತರಂಗ ಬಹಿರಂಗವೆರಡೂ ಪರಸ್ಪರತ್ವವನ್ನು ಹೊಂದಿ ಕಾರ್ಯ ಮಾಡುತ್ತವೆ. ಅವಧಾನ ಭಕ್ತಿ ಮತ್ತು ಅನುಭಾವ ಭಕ್ತಿ ಇವೆರಡೂ ಸೂಕ್ಷ್ಮಶರೀರಕ್ಕೆ ಸಂಬಂಧಿಸಿದವು. ಸುಜ್ಞಾನಭಕ್ತಿ ಮತ್ತು ಸಮರಸಭಕ್ತಿಗಳು ಕಾರಣಶರೀರಕ್ಕೆ ಸಂಬಂಧಿಸಿದವು. ಇವುಗಳಲ್ಲಿ ಸುಜ್ಞಾನಭಕ್ತಿಯು ಶರಣಸ್ಥಲಕ್ಕೆ ಸಂಬಂಧಿಸಿರುತ್ತದೆ. ಕಾರ್ಯಗಳ ರೀತಿ, ಅವುಗಳ ಮರ್ಮ ಅಥವಾ ಹದವನ್ನು ಅರಿತು ಮಾಡುವುದೇ ಸುಜ್ಞಾನಭಕ್ತಿ ಎನಿಸಿಕೊಳ್ಳುತ್ತದೆ. ಈ ಭಕ್ತಿಯುಳ್ಳವನು ಪೂರ್ಣ ಅನುಭವವನ್ನು ಹೊಂದಿದವನಿರುತ್ತಾನೆ. ಇವನಲ್ಲಿ ಕ್ರಿಯಾಜ್ಞಾನಗಳ ಭೇದ ಉಳಿಯುವದಿಲ್ಲ. ಸಮರಸ ಭಕ್ತಿಯು ಐಕ್ಯಸ್ಥಲಕ್ಕೆ ಸಂಬಂಧಿಸಿದುದು. ಇದು ಮನುಷ್ಯನ ಎಲ್ಲ ಶರೀರಗಳಲ್ಲಿ ಉಂಟಾಗುವ ಎಲ್ಲ ತರದ ಅನುಭವಗಳಲ್ಲಿ ಸಾಮರಸ್ಯವನ್ನುಂಟು ಮಾಡುತ್ತದೆ.

(೫೨) ಹಸ್ತಗಳು:— ಇವು ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ ಎಂದು ಆರು ಇರುತ್ತವೆ. ಸುಚಿತ್ತವು ಸಂಸಾರ ಲೋಲುಪತೆಯನ್ನು ದೂರಮಾಡಿ ವಿಶ್ವಬಂಧುತ್ವಭಾವವನ್ನುಂಟು ಮಾಡುತ್ತದೆ. ಇದು ನೈತಿಕಾಚಾರಕ್ಕೆ ಕಾರಣವಾದುದು. ಸುಬುದ್ಧಿಯು ಮನಸ್ಸಿನ ಚಾಂಚಲ್ಯವನ್ನು ಹೋಗಲಾಡಿಸಿ ತಿಳುವಳಿಕೆಯನ್ನು ಹುಟ್ಟಿಸುವದು. ನಿರಹಂಕಾರವು ಅಹಂಭಾವವನ್ನು ಹೋಗಲಾಡಿಸಿ ಅರ್ಪಣ ಬುದ್ಧಿಯಿಂದ ಆಚರಿಸುವಂತೆ ಮಾಡುವದು. ಸುಮನವು

ಶುದ್ಧಾಂತಃಕರಣವನ್ನುಂಟು ಮಾಡುತ್ತದೆ. ಸುಜ್ಞಾನವು ಇಂದ್ರಿಯಗಳ ದುಷ್ಟ ಪ್ರವೃತ್ತಿಗಳನ್ನು ದೂರಮಾಡುತ್ತದೆ. ಲಿಂಗಪ್ರಸಾದವಾಗಿ ಲಿಂಗ ಸಂಸಾರಿಯಾಗಿ ಆಚರಿಸುವಂತೆ ಮಾಡುತ್ತದೆ. ಸದ್ಭಾವವು ಲಿಂಗದಲ್ಲಿ ತಾ ಕೂಡಿ ತನ್ನಲ್ಲಿ ಲಿಂಗವು ಕೂಡಿ ತಾನು ಮತ್ತು ಲಿಂಗ ಎಂಬ ಉಭಯ ಭಾವವಳಿದು ತಾನು ತಾನಾಗಿರುವಂತೆ ಮಾಡುತ್ತದೆ. ಇವೆಲ್ಲವು ಮನುಷ್ಯನಿಗೆ ಹಸ್ತಗಳಂತೆ ಇರುತ್ತವೆ. ಅಂದರೆ ಇವುಗಳ ಸಹಾಯದಿಂ ದಲೇ ಅವನು ಆಚರಿಸಿ ಆರು ಸ್ಥಲಗಳ ಪ್ರಕಾರ ಪ್ರಗತಿಯನ್ನು ಹೊಂದುತ್ತಾ ಹೋಗುತ್ತಾನೆ.

(೫೩) ಅಂಗಸ್ಥಲಗಳುಃ– ಇವು ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣ ಲಿಂಗಿ, ಶರಣ, ಐಕ್ಯ ಎಂದಿರುತ್ತವೆ. ಇವೇ ಮುಖ್ಯ ಷಟ್‌ಸ್ಥಲ ವಿಭ ವಗಳು. ಭಕ್ತನು ವಿಶ್ವಾಸವುಳ್ಳವನು. ನೀತಿವಂತನು, ಸದಾಚಾರಿಯು. ಮಹೇಶ್ವರನು ದೃಢಚಿತ್ತನು, ಶೂರನು, ಹಿಡಿದುದನ್ನು ಬಿಡುವವನಲ್ಲ, ವ್ರತನಿಷ್ಠನು, ಧೈರ್ಯವಂತನು, ಏಕಲಿಂಗ ನಿಷ್ಠಾಪರನು, ಸತ್‌ಶೀಲನು ಅನ್ಯಾಯವನ್ನು ನಿಗ್ರಹಿಸುವವನು, ಸಾಮರ್ಥ್ಯವಂತನು. ಕಷ್ಟಗಳನ್ನು ಲೆಕ್ಕಿಸುವವನಲ್ಲ. ಪ್ರಸಾದಿಯು ಆತ್ಮಾರ್ಪಣ ಭಾವದಿಂದ ವರ್ತಿಸುವ ವನು, ನಿಷ್ಕಾಮ ಕರ್ಮಿಯು, ಏಕಾಗ್ರಚಿತ್ತನು, ಅಹಂಕಾರ ವಿರಹಿತನು, ತಾನೆಂಬುದನ್ನು ಬಿಟ್ಟವನು. ಪ್ರಾಣಲಿಂಗಿಯು ಇಂದ್ರಿಯಗಳನ್ನು ಅಂಕಿ ತದಲ್ಲಿಟ್ಟುಕೊಂಡವನು, ಲಿಂಗದಲ್ಲಿ ಆಸಕ್ತಿಯುಳ್ಳವನು, ಲಿಂಗದೊಡನೆ ಆಚರಿಸುವವನು, ಪ್ರಾಣವೇ ಲಿಂಗವಾಗಿರುವವನು. ಶರಣನು ಶಿವಾನು ಭವವನ್ನು ಹೊಂದಿದವನು, ಲಿಂಗದ ಅರಿವುಳ್ಳವನು. ಲಿಂಗದ ಪ್ರಕಾಶ ದಲ್ಲಿಯೇ ಆಚರಿಸುವವನು, ವಿಶ್ವಕುಟುಂಬಿಯಾಗಿರುವವನು, ತನ್ನದೆಂಬು ದನ್ನು ಸಂಪೂರ್ಣ ತೊರೆದವನು, ವಿನಯ ಪೂರ್ಣನು, ಶರಣು ಭಾವವುಳ್ಳವನು. ಐಕ್ಯನಲ್ಲಿ ಆವ ತೆರದ ಭೇದಭಾವವು ಇರುವದಿಲ್ಲ. ತಾನೂ, ತನ್ನ ಕ್ರಿಯೆಗಳೂ, ಜಗತ್ತೂ ಇವುಗಳಲ್ಲೆಲ್ಲ ಸಾಮರಸ್ಯ ಭಾವವುಳ್ಳವ ನಾಗಿರುತ್ತಾನೆ. ಅವನು ಮನುಷ್ಯನ ಶ್ರೇಷ್ಠತ್ವದ ಪರಮಾವಧಿ ಸ್ಥಿತಿ ಯನ್ನು ಹೊಂದಿರುತ್ತಾನೆ. ಭಕ್ತನಿಗೆ ಕ್ರಿಯೆ, ಮಹೇಶ್ವರನಿಗೆ ನಿಶ್ಚಯವು,



ಪ್ರಸಾದಿಗೆ ಅರ್ಪಣವು, ಪ್ರಾಣಲಿಂಗಿಗೆ ಯೋಗವು, ಶರಣನಿಗೆ ನಿಜ್ಬೆರಗು, ಐಕ್ಯನಿಗೆ ನಿರ್ಲೇಪವೆಂದು ಬೇರೊಂದು ವಿಧವಾಗಿ ಹೇಳಬಹುದು. ಭಕ್ತನಿಗೆ ಕಿಂಕರತ್ವವು, ಮಹೇಶ್ವರನಿಗೆ ಸಾರಾಸಾರ ವಿಚಾರವು, ಪ್ರಸಾ ದಿಗೆ ತನುಗುಣಲೋಪವು, ಪ್ರಾಣಲಿಂಗಿಗೆ ಅಂತರ್ಲಕ್ಷ್ಯವು, ಶರಣನಿಗೆ ನಿಸ್ಸಂಗತ್ವವು, ಐಕ್ಯಂಗೆ ಬಯಲು ಎಂತಲೂ ಹೇಳಬಹುದು. ಷಟ್ ಸ್ಥಲ ಶಾಸ್ತ್ರದಲ್ಲಿ ಈ ಸ್ಥಲಗಳ ವಿಷಯವಾಗಿ ವಿಸ್ತೃತ ವಿವೇಚನೆಗಳಿ ರುತ್ತವೆ.

(೨೪) ಉಪಾಂಗಗಳುಃ– ಇವು ಭಕ್ತಿ, ಕರ್ಮಕ್ಷಯ, ಬುದ್ಧಿ, ವಿಚಾರ, ದರ್ಪಸಂಕ್ಷಯ, ಸಮ್ಯಜ್ಞಾನ ಎಂದು ಆರು ಇರುತ್ತವೆ. ಭಕ್ತಿ ಮತ್ತು ಕರ್ಮಕ್ಷಯ ಇವು ಸ್ಥೂಲ ಶರೀರಕ್ಕೆ ಸಂಬಂಧವಾದವು ಗಳು. ಸೂಕ್ಷ್ಮ ಶರೀರಕ್ಕೆ ಸಂಬಂಧವಾದವುಗಳು ಬುದ್ಧಿ ಮತ್ತು ವಿಚಾರ. ಮತ್ತು ಕಾರಣಶರೀರಕ್ಕೆ ಸಂಬಂಧವಾದವುಗಳು ದರ್ಪಸಂಕ್ಷಯ ಮತ್ತು ಸಮ್ಯಜ್ಞಾನ. ಇವು ಆರು ಉಪಾಂಗಗಳು ಇವು ವಚನಶಾಸ್ತ್ರದಲ್ಲಿ ಬಹು ಕ್ವಚಿತ್ತಾಗಿ ಉಲ್ಲೇಖಿಸಲ್ಪಡುತ್ತವೆ. ಆದರೆ ಕೆಲವು ಆಗಮ ಗ್ರಂಥ ಗಳಲ್ಲಿ ಬರುವದುಂಟು.

(೫೫) ಅಂಗಗಳುಃ – ಇವು ಸರ್ವಜ್ಞತಾ, ತೃಪ್ತಿ, ಅನಾದಿಬೋಧ, ಸ್ವತಂತ್ರತಾ, ಅಲುಪ್ತಾಶಕ್ತಿ, ಅನಂತಶಕ್ತಿ ಎಂದು ಆರು ಇವೆ. ಇವು ಮೇಲೆ ಹೇಳಿದ ಉಪಾಂಗಗಳಿಂದ ಆಯಾ ಸ್ಥಲಗಳಲ್ಲಿ ಆಗುವ ಪರಿಣಾ ಮಗಳೆಂದು ಹೇಳಬಹುದು. ಇವಾದರೂ ವಚನಶಾಸ್ತ್ರ ಗ್ರಂಥಗಳಲ್ಲಿ ಕ್ವಚಿತ್ತಾಗಿ ಬರುತ್ತವೆ. ಆದರೆ ಕೆಲವು ಆಗಮಗ್ರಂಥಗಳಲ್ಲಿ ಇವು ಉಲ್ಲೇ ಖಿಸಲ್ಪಡುವದುಂಟು. ಭಕ್ತಿಯ ಮೂಲಕ ಸರ್ವಜ್ಞತೆಯು, ಕರ್ಮಕ್ಷ ಯದ ಮೂಲಕ ಅನಾದಿ ಬೋಧವು, ವಿಚಾರದ ಮೂಲಕ ಸ್ವತಂತ್ರ ತೆಯು, ದರ್ಪ ಸಂಕ್ಷಯದ ಮೂಲಕ ಅಲುಪ್ತಾಶಕ್ತಿಯು, ಸಮ್ಯಜ್ಞಾನದ ಮೂಲಕ ಅನಂತಶಕ್ತಿಯು, ಮನುಷ್ಯನಲ್ಲಿ ಅಳವಡುತ್ತವೆಂಬ ಭಾವವು ಇವುಗಳಲ್ಲಿದೆ.

(೫೬) ಷಡ್ಲಿಂಗಗಳು:— ಇವು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದಿವೆ. ಇವು ಅನುಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇವುಗಳಿಗೆ ಸಂಬಂಧಪಡುತ್ತವೆ. ಅಂದರೆ ಈ ಆರು ಸ್ಥಲಗಳಲ್ಲಿ ಆಯಾ ಲಿಂಗಗಳು ಮನುಷ್ಯನಲ್ಲಿ ಅಳವಡುತ್ತವೆ. ಭಕ್ತಸ್ಥಲದಲ್ಲಿ ಶ್ರದ್ಧಾ ಭಕ್ತಿಯ ಮೂಲಕ ಆಚಾರಲಿಂಗವಳವಡುತ್ತದೆ. ನೈತಿಕ ಉನ್ನತಿಯೇ ಆಚಾರಲಿಂಗವಾಗಿರುತ್ತದೆ. ಆಚಾರಲಿಂಗವು ನಿಷ್ಠೆಯಿಂದ ಒಲಪಡಲು ಅದು ಮಹೇಶ್ವರ ಸ್ಥಲದಲ್ಲಿ ಗುರುಲಿಂಗವೆನಿಸಿಕೊಳ್ಳುತ್ತದೆ. ಅವಧಾನ ಭಕ್ತಿಯಿಂದ ಲಿಂಗದಲ್ಲಿ ಮನ ಮಗ್ನವಾಗಲು ಹೃದಯದಲ್ಲಿ ಶಿವಲಿಂಗವು ತೋರುವದು. ಮುಂದೆ ಆ ಲಿಂಗದೊಡನೆ ವ್ಯವಹರಿಸಲಾಗಿ ಅದು ಚೈತನ್ಯಾತ್ಮಕವಾದ ಜಂಗಮಲಿಂಗವು ಮನುಷ್ಯನಲ್ಲೆಲ್ಲ ತಲೆದೋರುವದು. ಶರಣನಲ್ಲಿ ಪ್ರಸಾದಲಿಂಗವಿರುತ್ತದೆ. ಮತ್ತು ಐಕ್ಯನಲ್ಲಿ ಮಹಾಲಿಂಗವಿರುತ್ತದೆ. ಮನುಷ್ಯನಲ್ಲಿ ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ, ಮತ್ತು ಭಾವಗಳಿರುತ್ತವೆ. ಇವುಗಳಿಂದಲೇ ಮನುಷ್ಯನ ಕ್ರಿಯೆಗಳು ನಡೆಯುತ್ತವೆ. ಲಿಂಗವಶದಿಂದ ಆಚರಿಸುವ ಮನುಷ್ಯನಲ್ಲಿ ಚಿತ್ತಕ್ಕೆ ಆಚಾರಲಿಂಗವು, ಬುದ್ಧಿಗೆ ಗುರುಲಿಂಗವು, ಅಹಂಕಾರಕ್ಕೆ ಶಿವಲಿಂಗವು, ಮನಕ್ಕೆ ಜಂಗಮಲಿಂಗವು, ಜ್ಞಾನಕ್ಕೆ ಪ್ರಸಾದಲಿಂಗವು, ಭಾವಕ್ಕೆ ಮಹಾಲಿಂಗವು ಸಂಬಂಧಪಡುತ್ತವೆ. ಆವುದಾನೊಂದು ಕ್ರಿಯೆಯನ್ನು ಮಾಡುವಲ್ಲಿ, ಮನುಷ್ಯನು ಮೊದಲು ಅದಕ್ಕೆ ಎಳಸಲ್ಪಡುವನು, ಆ ಮೇಲೆ ಅದಕ್ಕೆ ಮೋಹಿಸಲ್ಪಡುವನು, ಆ ಮೇಲೆ ಅದರಲ್ಲಿ ಕೂಡುವನು, ಕೂಡಿದ ಬಳಿಕ ಅದರಲ್ಲಿ ಸುಖ ಪಡುವನು, ಸುಖಪಡೆದು ಪರಿಣಾಮತೆಯನ್ನು ಹೊಂದುವನು, ಆ ಮೇಲೆ ಆ ವಿಷಯದಲ್ಲಿ ಏಕಾಕಾರ ಹೊಂದುವನು, ಹೀಗೆ ಕ್ರಮವಿದೆ. ಈ ಕಾರ್ಯಗಳೆಲ್ಲ ಆಯಾ ಲಿಂಗಗಳಲ್ಲಿ ಸಂಬಂಧಪಡುತ್ತವೆ. ಎಳಸಲ್ಪಡುವದು ಆಚಾರಲಿಂಗದ ವಿಷಯ. ಎಳಸಿ ಮೋಹಿಸುವದು ಗುರುಲಿಂಗವಿಷಯ. ಮೋಹಿಸಿ ಕೂಡುವದು ಶಿವಲಿಂಗ ವಿಷಯ. ಕೂಡಿ ಸುಖಬಡುವದು ಜಂಗಮಲಿಂಗವಿಷಯ. ಸುಖಬಡೆದು ಪರಿಣಾಮಿಸುವದು ಪ್ರಸಾದ ಲಿಂಗ ವಿಷಯ. ಪರಿಣಾಮಿಸಿ ಏಕಾಕಾರ ಹೊಂದುವದು ಮಹಾಲಿಂಗ ವಿಷಯ. ಶ್ವಾಸೋಚ್ಛ್ವಾಸಕ್ಕೆ ಸಂಬಂಧಿಸಿದ ಈಡಾಪಿಂಗಳನಾಡಿಯ ದೆಸೆಯಿಂದ ಶರೀರದಲ್ಲಿ ಚೈತನ್ಯ ಉಂಟಾಗುವದರಿಂದ ನಾಸಿಕಕ್ಕೆ ಆಚಾರಲಿಂಗವು. ಗುರುವು ಮಂತ್ರ ಮೂರ್ತಿಯಾಗಿ ಭಕ್ತನಲ್ಲಿ ನೆಲೆಗೊಳ್ಳುತ್ತಾನೆ. ಆದರೆ ಈ ಮಂತ್ರವು ಜಿಹ್ವೆಗೆ ಸಂಬಂಧಪಡುವದರಿಂದ ಜಿಹ್ವೆಯಲ್ಲಿ ಗುರುಲಿಂಗವು. ಸ್ವಯಂಪ್ರಕಾಶವು ಶಿವ. ಇದು ನೇತ್ರದಲ್ಲಿ ನೆಲೆಸಿರುವದರಿಂದ ನೇತ್ರಕ್ಕೆ ಶಿವಲಿಂಗವು. ತ್ವಕ್ಕು ಸರ್ವಾಂಗದಲ್ಲಿರುವದರಿಂದ ಅದರಲ್ಲಿ ಸರ್ವ ವ್ಯಾಪಿಯಾದ ಜಂಗಮಲಿಂಗವಿದೆ. ಶರಣನಿಗೆ ಮಹಾನಾದವೇ ಪ್ರಸಾದವಾದ ಕಾರಣ ಅದು ಶ್ರೋತ್ರಕ್ಕೆ ಸಲ್ಲುತ್ತದೆ. ಆ ಕಾರಣ ಶ್ರೋತ್ರದಲ್ಲಿ ಪ್ರಸಾದಲಿಂಗವಿರುತ್ತದೆ. ಆತ್ಮನಲ್ಲಿ ಮಹಾಲಿಂಗವಿರುತ್ತದೆ. ಹೀಗೆ ಷಡ್ಲಿಂಗಗಳು ಮನುಷ್ಯನ ಶರೀರ ಮತ್ತು ಕ್ರಿಯೆಗಳಲ್ಲಿ ಅನೇಕ ವಿಧವಾಗಿ ತಲೆದೋರುತ್ತವೆ.



(೫೭) ತ್ರಿವಿಧ ಆಚಾರಲಿಂಗ:— ಇವು ಸದಾಚಾರ, ನಿಯತಾಚಾರ, ಗಣಾಚಾರ ಎಂದಿವೆ. ಎಲ್ಲ ಜನರು ಅಹುದೆಂಬುವೇ ಸದಾಚಾರವೆಂದು ವಚನಕಾರರ ವ್ಯಾಖ್ಯೆ ಇದೆ. ಕೆಲವೊಂದು ಉದ್ದೇಶ ಅಥವಾ ಧ್ಯೇಯವನ್ನಿಟ್ಟುಕೊಂಡು ಮಾಡುವದು ನಿಯತಾಚಾರವಾಗಿದೆ. ಕೈಕೊಂಡ ಕಾರ್ಯದಲ್ಲಿ ಎಷ್ಟು ಬಿಕ್ಕಟ್ಟುಗಳು ಬಂದರೂ ಕೂಡ ಅವುಗಳನ್ನು ಎದುರಿಸಿ ಧೈರ್ಯದಿಂದ ಕಾರ್ಯ ಮಾಡುವದು ಗಣಾಚಾರವು. ಗಣಾಚಾರದಲ್ಲಿ ಮನುಷ್ಯನು ಅವಶ್ಯವಿದ್ದಲ್ಲಿ ವಿರೋಧಿಗಳನ್ನು ಪ್ರತಿಭಟಿಸಲು ಸಿದ್ಧನಾಗಿರಬೇಕು. ಪ್ರಸಂಗ ಬಂದರೆ ತನ್ನ ಪ್ರಾಣವನ್ನು ಕೊಡಲೂ ಸಿದ್ಧನಾಗಿರಬೇಕು.

(೫೮) ತ್ರಿವಿಧ ಗುರುಲಿಂಗ:— ಇವು ದೀಕ್ಷೆ, ಶಿಕ್ಷೆ, ಅನುಭಾವ ಎಂಬಿವೆ. ಆಚರಿಸುವಲ್ಲಿ ತಿಳಿದವರಿಂದ ಮೊದಲು ಹೇಳಿಸಿಕೊಳ್ಳಬೇಕು. ಇದು ದೀಕ್ಷೆ ಎನಿಸುವದು. ಹೀಗೆ ಹೇಳಿಸಿಕೊಂಡ ಬಳಿಕ ಅದನ್ನು ಮನನ ಮಾಡಬೇಕು. ಇದು ಶಿಕ್ಷೆ ಎನಿಸುವದು. ಮನನ ಮಾಡಿಕೊಂಡ ಬಳಿಕ ಅದರ ಜ್ಞಾನವು ಅವನಿಗೆ ಆಗುವದು. ಇದು ಅನುಭಾವವು.

(೫೯) ತ್ರಿವಿಧ ಶಿವಲಿಂಗಃ— ಇವು ಇಷ್ಟಲಿಂಗ, ಪ್ರಾಣಲಿಂಗ, ಭಾವ ಲಿಂಗವಿರುತ್ತವೆ. ಕೆಡಕನ್ನು ತ್ಯಜಿಸಿ ಉತ್ತಮವಾದುದು ಆವುದೋ ಅವರಂತೆ ವರ್ತಿಸುವದು ಮನುಷ್ಯನಿಗೆ ಇಷ್ಟಲಿಂಗವು ಸಾಧ್ಯವಾದದ್ದರ ಗುರುತು ಇರುತ್ತದೆ. ಪ್ರಾಣಲಿಂಗವು ತನುಗುಣಗಳನ್ನು ಹೋಗಲಾಡಿಸಿಕೊಂಡು ಆತ್ಮಾರ್ಪಣದಿಂದ ತನ್ನಲ್ಲಿ ಲಿಂಗಗುಣಗಳನ್ನು ಬರಮಾಡಿಕೊಳ್ಳುವುದು. ಮೂರನೆಯದಾದ ಭಾವಲಿಂಗದಲ್ಲಿ ಲಿಂಗವಲ್ಲದೆ ಬೇರೊಂದಾವುದನ್ನೂ ಭಾವಿಸದೆ ಇರುವದು.

(೬೦) ತ್ರಿವಿಧ ಜಂಗಮಲಿಂಗಃ— ಇವು ಸ್ವಯಂ ಚರ ಪರವೆಂದಿರುತ್ತವೆ. ಸ್ವಯಂ ಎಂದರೆ ತಾನು. ಇಲ್ಲಿ ಭಕ್ತನು ಶ್ರೇಷ್ಠತರಗತಿಯವನಾಗಿ ಸ್ವಾವಲಂಬಿಯಾಗಿ ಆಚರಿಸುವವನು. ಚರವೆಂದರೆ ತನಗೆ ಸಂಬಂಧಿಸಿದವರನ್ನು ತನ್ನಂತೆ ಮಾಡುವ ಉದ್ದಿಶ್ಯವಾಗಿ ಅವರೊಡನೆ ವ್ಯವಹರಿಸುವವನು. ಪರವೆಂದರೆ ಯಾವಾಗಲೂ ಅರಿವು ಮುಂತಾಗಿ ಆಚರಿಸುವವನು.

(೬೧) ತ್ರಿವಿಧ ಪ್ರಸಾದಲಿಂಗಃ— ಇವು ಶುದ್ಧ ಸಿದ್ಧ ಪ್ರಸಿದ್ಧವೆಂದು ಮೂರು ಇವೆ. ಸದಾಚಾರದಿಂದ ಶುದ್ಧತೆಯನ್ನು ಹೊಂದಿ ಗುರುಮುಖದಿಂದ ಎಂದರೆ ಜ್ಞಾನಿಗಳಿಂದ ಮಲತ್ರಯಗಳನ್ನು ಹೇಗೆ ಕಳೆಯಬೇಕೆಂಬುದನ್ನು ತಿಳಿದು ಅದರಂತೆ ಆಚರಿಸಲಾಗಿ ಕೆಡಕಾದುದಾವುದೋ ಅದು ಕಳೆದು ಹೋಗುತ್ತದೆ. ಹೀಗೆ ದೇಹದಲ್ಲಿಯ ಮಾಲಿನ್ಯವು ಕಳೆದು ಹೋಗಿ ಉಳಿದ ಶೇಷವೇ ಶುದ್ಧ ಪ್ರಸಾದವು. ಹೀಗೆ ದೇಹದಲ್ಲಿಯ ಅಶುದ್ಧತೆಯು ಹೋಗುತ್ತಿರಲಾಗಿ ಮನುಷ್ಯನ ಕರಣ ಅಥವಾ ಇಂದ್ರಿಯಗಳಲ್ಲಿಯ ಮಾಲಿನ್ಯವು ಸಹ ಹೊರಟುಹೋಗಹತ್ತುವದು. ಆಗ ಅವುಗಳಲ್ಲಿಯ ಲಿಂಗದ ಗುಣಗಳ ಬಲಗೊಂಡು ತೋರಹತ್ತುವವು. ಹೀಗೆ ಕರಣಗಳಲ್ಲಿಯ ದುಷ್ಟಪ್ರವೃತ್ತಿಗಳನ್ನು ಹೋಗಲಾಡಿಸಿ ಉಳಿದ ಶೇಷವೇ ಸಿದ್ಧ ಪ್ರಸಾದವೆನಿಸಿಕೊಳ್ಳುತ್ತದೆ. ಹೀಗೆ ಸಿದ್ಧಪ್ರಸಾದವು ಎಡೆಗೊಳ್ಳಹತ್ತಲು ಜಗತ್ತಿಗೋಸ್ಕರ ಬಾಹ್ಯದಲ್ಲಿ ಇರುವ ಖಂಡಿತ ಭಾವ ಅಥವಾ ಭಿನ್ನಭಾವವು ಹೊರಟು



ಹೋಗಿ ಅಭಿನ್ನಭಾವವು ಅಥವಾ ವಿಶ್ವಬಂಧುತ್ವಭಾವವು ಉಂಟಾಗುತ್ತದೆ. ಆಗ ತಾನೂ ಹೊರಗಿನದೂ ಎಂಬುಭಯಭಾವವು ಹೊರಟು ಹೋಗುತ್ತದೆ. ಇದೇ ಜಂಗಮವನ್ನು ಅಳವಡಿಸಿಕೊಳ್ಳುವದು. ಹೀಗೆ ಅಭಿನ್ನತೆಯನ್ನು ಹೋಗಲಾಡಿಸಲು ಉಳಿದ ಶೇಷವೇ ಪ್ರಸಿದ್ಧಪ್ರಸಾದವು. ಇವೆಲ್ಲವೂ ಪ್ರಸಾದಲಿಂಗವೆನಿಸಿಕೊಳ್ಳುತ್ತವೆ. ಮನುಷ್ಯನಲ್ಲಿ ಯಾವುದು ಭೇದವನ್ನುಂಟುಮಾಡುತ್ತದೋ ಅದನ್ನು ಹೋಗಲಾಡಿಸುವುದೇ ಪ್ರಸಾದದ ಕಾರ್ಯವಾಗಿದೆ. ಹೀಗೆ ಹೋಗಲಾಡಿಸಿದ ಬಳಿಕ ಮನುಷ್ಯನ ಕ್ರಿಯೆ, ಕರಣ, ಜ್ಞಾನಗಳಲ್ಲಿ ಯಾವುದು ಉಳಿಯುತ್ತದೋ ಅದೇ ಅನುಕ್ರಮವಾಗಿ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದಗಳೆಂದೆನಿಸಿಕೊಳುತ್ತವೆ.

(೬೨) ತ್ರಿವಿಧಮಹಾಲಿಂಗಃ— ಇವು ಪಿಂಡಜ, ಅಂಡಜ, ಬಿಂದುಜ, ಎಂದಿರುತ್ತವೆ. ಮಹಾಲಿಂಗವು 'ಅರಿವು' ಇದರ ಒಂದು ಬಗೆಯ ಪ್ರಕಾಶವಾಗಿರುತ್ತದೆ. ತನ್ನ ಸುತ್ತಲಿನ ದೃಶ್ಯ ಪದಾರ್ಥಗಳೇ ಪಿಂಡ, ಜಗತ್ತಿನಲ್ಲಿಯವು ಅಂಡ ಮತ್ತು ಇವುಗಳಿಗೆ ಮೀರಿದವುಗಳೇ ಬಿಂದು. ಹೀಗೆ ಪದಾರ್ಥಗಳಲ್ಲಿ ಮೂರು ವಿಭಾಗಗಳು ಇರುತ್ತವೆ. ಮಹಾಲಿಂಗವು ತನ್ನ ಸುತ್ತಲಿನ ದೃಶ್ಯ ಪದಾರ್ಥಗಳಿಗೆ ಸಂಬಂಧಿಸಿ ತನ್ನಲ್ಲಿ ಅಳವಟ್ಟಲ್ಲಿ ಅದು ಪಿಂಡಜವು. ಇದಕ್ಕೂ ಸೂಕ್ಷ್ಮವಾಗಿರುವ ಜಗತ್ತಿನಲ್ಲೆಲ್ಲ ಸಂಬಂಧಿಸಿಕೊಂಡು ತನ್ನಲ್ಲಿ ಅಳವಡಲು ಅಂದು ಅಂಡಜವು. ಮುಂದೆ ಈ ಜಗತ್ತಿಗೂ ಕೂಡ ಮೇಲಿರುವ ಮಹತ್ತಿನಲ್ಲಿ ಸಂಬಂಧಿಸಿಕೊಂಡಲ್ಲಿ ಅದು ಬಿಂದುಜವು. ಇಲ್ಲಿ ನಾವು ನಾದ ಬಿಂದು, ಕಲೆಗಳಲ್ಲಿ ಯಾವುದನ್ನು ಬಿಂದುವೆಂದು ಉಲ್ಲೇಖಮಾಡಿರುತ್ತೇವೆಯೊ ಅದೇ ಈ ಬಿಂದುವಿದೆ. ಈ ಬಿಂದುವಿಗೆ ಸಂಬಂಧಿಸಿಕೊಂಡು ತನ್ನಲ್ಲಿ ಈ ಮಹಾಲಿಂಗದ ಪ್ರಕಾಶವು ಎಡೆಗೊಳ್ಳಬೇಕು. ಇದು ಬಿಂದುಜ ಮಹಾಲಿಂಗವು. ಇದು ಐಕ್ಯ ಸ್ಥಿತಿಯಲ್ಲಿರುವವನ ಉತ್ಕೃಷ್ಟ ಸ್ಥಿತಿಯು. ಈ ಬಿಂದುಜ ಸ್ಥಿತಿಯನ್ನು ಹೊಂದಿದ ತರುವಾಯ ಮನುಷ್ಯನು ಶೂನ್ಯದ ಮೂರು ಸ್ಥಿತಿಗಳಲ್ಲಿ ಪ್ರವೇಶ ಹೊಂದಲು ಅರ್ಹನಾಗುತ್ತಾನೆ. ಮತ್ತು ಕಡೆಗೆ ನಿರವಯ ಅಥವಾ ಬಯಲು ಎಂಬುದರಲ್ಲಿ ಅಡಗುತ್ತಾನೆ.

ಹೀಗೆ ಆರು ಅಂಗಗಳಲ್ಲಿ ಹಿಂದೆ ನಂ॥ ೫೭ ರಿಂದ ೬೨ ರ ವರೆ... ಪ್ರತಿಯೊಂದರಲ್ಲಿ ಮೂರು ಮೂರು ಭಾಗಗಳಂತೆ ಒಟ್ಟು ೧೮ ವಿಭಾಗ...ಳನ್ನು ಷಟ್‌ಸ್ಥಲ ಜ್ಞಾನಿಗಳು ಕಲ್ಪಿಸಿರುತ್ತಾರೆ. ಹೀಗೆಯೇ ೬ ಅಂ...ಗಳಲ್ಲಿ ಪ್ರತಿಯೊಂದು ಸ್ಥಲದಲ್ಲಿ ಮೂರು ಮೂರರಂತೆ ಒಟ್ಟು ೧೮ರಿಂದ... ಗಳನ್ನು ಪುನಃ ಮಾಡಿರುತ್ತಾರೆ. ಅವುಗಳ ವಿವರಣೆ ಏನಂದರೆ:—

(೬೩) ತ್ರಿವಿಧಭಕ್ತಃ— ಇವು ಗುರುಭಕ್ತ, ಲಿಂಗಭಕ್ತ, ಜಂಗಮಭಕ್ತ ಎಂದಿರುತ್ತವೆ. ತನುಕ್ರಿಯೆಯಿಂದ ತನುಮನಧನವನ್ನರ್ಪಿಸುವವನು ಗುರುಭಕ್ತನು. ಮನಕ್ರಿಯೆಯಿಂದ ಇವುಗಳನ್ನರ್ಪಿಸುವವನು ಲಿಂಗಭಕ್ತನು. ಧನಕ್ರಿಯೆಯಿಂದ ತನುಮನಧನಗಳನ್ನರ್ಪಿಸುವವನು ಜಂಗಮಭಕ್ತನು. ಇವುಗಳಲ್ಲಿ ಧನಕ್ರಿಯೆಯಿಂದ ಧನವನ್ನು ಅರ್ಪಿಸುವದೇ ಭಕ್ತನ ಅತ್ಯಂತ ಉತ್ಕೃಷ್ಟ ಸ್ಥಿತಿಯನ್ನು ತೋರಿಸುತ್ತದೆ. ಸದಾಚಾರವೇ ತನುಕ್ರಿಯೆ ಎನಿಸಿಕೊಳ್ಳುತ್ತದೆ. ಅದನ್ನು ಒಳಕೊಂಡು ಅರ್ಪಿಸುವವನೇ ಗುರುಭಕ್ತನು. ಲಿಂಗಾನುಭಾವಿಯು ಮನಕ್ರಿಯೆಯುಳ್ಳವನು. ಹೀಗೆ ಅರ್ಪಣ ಮಾಡುವವನೇ ಲಿಂಗಭಕ್ತನು. ತನ್ನದೆಂಬುದೆಲ್ಲವೂ ಧನವೆಂದೆನಿಸಿಕೊಳ್ಳುತ್ತದೆ. ಈ ಧನವನ್ನು ಕ್ರಮಾನುಸಾರವಾಗಿ ಅರ್ಪಣ ಮಾಡುವವನು ಜಂಗಮಭಕ್ತನು. ಈ ಎಲ್ಲ ಕಾರ್ಯಗಳಲ್ಲಿ ಶ್ರದ್ಧಾಭಕ್ತಿಯುಳ್ಳವನಾಗಿರಬೇಕು. ಹೀಗೆ ಭಕ್ತನಲ್ಲಿ ಮೂರು ವಿಧಗಳಿವೆ.

(೬೪) ತ್ರಿವಿಧ ಮಹೇಶ್ವರಃ— ಇವುಗಳು ಇಹಲೋಕ ವೀರ, ಪರಲೋಕ ವೀರ, ಲಿಂಗ ವೀರ ಎಂದು ಮೂರಿವೆ. ಮಹೇಶ್ವರನು ನಿಷ್ಠೆಯುಳ್ಳವನು. ಹಿಡಿದ ಕಾರ್ಯಗಳನ್ನು ಬಿಡುವುದಿಲ್ಲ. ಮರಣವನ್ನೂ ಕೂಡ ಲೆಕ್ಕಿಸನು. ನಿಂದಕರನ್ನೂ ತನ್ನ ಕಾರ್ಯಗಳಲ್ಲಿ ಪ್ರತಿರೋಧಿಸುವವರನ್ನೂ ಶಿಕ್ಷಿಸಲು ಸನ್ನದ್ಧನಾಗಿರುವನು. ಇವನು ಇಹಲೋಕ ವೀರನು. ಮಾನಸಿಕ ಧೈರ್ಯವುಳ್ಳವನಾಗಿ ಧರ್ಮಾರ್ಥ ಕಾಮ ಮೋಕ್ಷಗಳನ್ನು ಸಹ ಹಿಂದಕ್ಕಿಟ್ಟು ನಿಷ್ಕಾಮಿಯಾಗಿ ಶಿವಕಾರ್ಯದಲ್ಲಿ ಸನ್ನದ್ಧನಾದವನು ಪರಲೋಕ ವೀರನು. ಶೂರರು ಅನೇಕರು ಇದ್ದಾರೆ. ಆದರೆ ಹೀಗೆ ಮಾನಸಿಕ ಧೈರ್ಯವುಳ್ಳವರು ದೊರೆಯುವದು ದುರ್ಲಭ. ಇವರು



ಪರಲೋಕ ವೀರರೆಂದು ಹೇಳಲ್ಪಡುತ್ತಾರೆ. ಆ ಮೇಲೆ ಯಾವನು ಅಂಗದಲ್ಲಿ ಲಿಂಗವುಳ್ಳವನಾಗಿ ಸರ್ವ ಕರಣಗಳನ್ನು ತನ್ನಲ್ಲಿರಿಸಿಕೊಂಡು ವರ್ತಿಸುತ್ತಿನೋ ಅವನು ಲಿಂಗವೀರನು. ಕರಣಗಳನ್ನು ಗೆಲ್ಲುವದಕ್ಕೆ ಬಹು ಕಡುತರವಾದ ಸ್ಥೈರ್ಯವು ಬೇಕು. ಹೀಗೆ ಇದ್ದವನು ಲಿಂಗವೀರನು.

(೬೫) ತ್ರಿವಿಧ ಪ್ರಸಾದಿಃ— ಇವು ಅರ್ಪಿತ ಪ್ರಸಾದಿ, ಅವಧಾನ ಪ್ರಸಾದಿ, ಪರಿಣಾಮ ಪ್ರಸಾದಿ ಎಂದಿವೆ. ಅರ್ಪಣ, ಅವಧಾನ, ಪರಿಣಾಮ ಎಂದು ಕಾರ್ಯಗಳಲ್ಲಿಯು ಮೂರು ತರಗತಿಗಳಿರುತ್ತವೆ. ಅರ್ಪಣ ಬುದ್ಧಿಯಿಂದ ಮೊದಲು ಕಾರ್ಯವನ್ನು ಕೈಕೊಳ್ಳಬೇಕು. ಹೀಗೆ ಕೈಕೊಂಡಲ್ಲಿ ಅವನಲ್ಲಿ ಅವಧಾನ ಭಾವವು ಅಥವಾ ಏಕಾಗ್ರತೆಯು ಆ ಕಾರ್ಯ ಕ್ಕೋಸ್ಕರ ಉಂಟಾಗುವದು. ಹೀಗೆ ಕಾರ್ಯ ಮಾಡಿದಲ್ಲಿ ಅದರ ಸುಪರಿಣಾಮಗಳು ಅವನಲ್ಲಿ ಎಡೆಗೊಂಡು ಅದರಲ್ಲಿ ಅವನು ಏಕಾಕಾರ ಹೊಂದುತ್ತಾನೆ. ಈ ಮೂರು ಕ್ರಿಯೆಗಳಲ್ಲಿ ಅನುಕ್ರಮವಾಗಿ ಅರ್ಪಿತ ಪ್ರಸಾದಿ, ಅವಧಾನ ಪ್ರಸಾದಿ, ಪರಿಣಾಮ ಪ್ರಸಾದಿ ಎಂದು ಮೂರು ವಿಧಗಳು ಉಂಟಾಗುತ್ತವೆ. ಉದಾಹರಣಾರ್ಥವಾಗಿ, ಕಾಯದ ಕೈಯ್ಯಲ್ಲಿ ಇಷ್ಟ ಲಿಂಗಕ್ಕೆ ಅರ್ಪಿಸುವವನು ಅರ್ಪಿತ ಪ್ರಸಾದಿಯಾಗುವನು. ಇಂದ್ರಿಯಗಳಲ್ಲಿ ಐದು ಲಿಂಗಗಳನ್ನು ಸ್ಥಾಪಿಸಿ ಅವುಗಳ ಅನುಭವವನ್ನು ಮನದ ಕೈಯಲ್ಲಿ ಕೊಟ್ಟು ಕೊಳ್ಳುವವನು ಅವಧಾನ ಪ್ರಸಾದಿಯು. ಅಂಗವೆಲ್ಲವು ಲಿಂಗಮಯವಾಗಿ ಭಾವ ಭರಿತನಾದವನು ಪರಿಣಾಮ ಪ್ರಸಾದಿಯು.

(೬೬) ತ್ರಿವಿಧ ಪ್ರಾಣಲಿಂಗಿಃ— ಇವು ಆಚಾರಪ್ರಾಣಿ, ಲಿಂಗಪ್ರಾಣಿ, ಜಂಗಮಪ್ರಾಣಿ, ಎಂದಿರುತ್ತವೆ. ಪ್ರಸಾದಿಯಾಗಿ ಏಕಾಗ್ರಚಿತ್ತನಾದಲ್ಲಿ ಅವನಲ್ಲಿ ಲಿಂಗವು ಅನುಗೊಳ್ಳಹತ್ತುತ್ತಿದೆ. ಮನುಷ್ಯನ ಬಾಹ್ಯದಲ್ಲಿ ಆಚಾರ, ಅವನ ಅಂತರಂಗದಲ್ಲಿ ಲಿಂಗ ಮತ್ತು ಭಾವದಲ್ಲಿ ಜಂಗಮ ಇವುಗಳು ಇರುತ್ತವೆ. ಇವುಗಳ ತಿರುಳು ಅಥವಾ ಸಾರ ಅವನ ಪ್ರಾಣದಲ್ಲಿ ಅನುಕ್ರಮವಾಗಿ ಬೆರೆಯಲು ಅವನು ಆಚಾರಪ್ರಾಣಿ, ಲಿಂಗಪ್ರಾಣಿ, ಮತ್ತು ಜಂಗಮಪ್ರಾಣಿ ಎಂದು ಮೂರು ವಿಧಗಳು ಆಗುತ್ತವೆ. ಇವು ಪ್ರಾಣಲಿಂಗಿಯು ಮೂರು ವಿಧಗಳಾಗಿವೆ. ಹೀಗಿರುವವನೇ ಶಿವಯೋ

ಗಿಯು. ಮತ್ತು ಅವನ ಅಂತಿಮ ಸ್ಥಿತಿಯಲ್ಲಿ ಜಂಗಮಪ್ರಾಣಿ ಎಂ ಹೇಳಬಹುದು. ಅಂದರೆ ಬಾಹ್ಯದಲ್ಲಿ ಆಚಾರವನ್ನು ಗ್ರಹಿಸುವವ ಆಚಾರ ಪ್ರಾಣಿಯು. ಹೀಗೆ ಸತ್ ಕ್ರಿಯೆಗಳನ್ನು ಮಾಡುತ್ತ ಲಿ ದೊಡನೆ ಪ್ರಾಣವು ಏಕಾಕಾರಹೊಂದಿ ಪ್ರವಹಿಸಹತ್ತಲು ಅವನು ಲಿಂ ಪ್ರಾಣಿಯು. ಇವರ ಮುಂದೆ ಜಗತ್ತಿನಲ್ಲಿ ತುಂಬಿಕೊಂಡಿರುವ ಜೈ ನ್ಯಕ್ಕೆ ತನ್ನದೆಲ್ಲವನ್ನು ನಿವೇದಿಸಿ, ಅವರಲ್ಲಿ ತಾನೇ ತಾನಾಗಿರುವವನು ಜಂಗಮಪ್ರಾಣಿಯು.

(೬೭) ತ್ರಿವಿಧ ಶರಣಃ— ಇವು ಇಷ್ಟಲಿಂಗಾರ್ಚಕ, ಪ್ರಾಣ ಲಿಂಗಾರ್ಚಕ, ತೃಪ್ತಿಲಿಂಗಾರ್ಚಕ ಎಂದಿವೆ. ಪ್ರಸಾದದ ಶೇಷವೇ ಶರಣನೆನಿಸಿಕೊಳ್ಳುತ್ತಾನೆ. ಅವನಲ್ಲಿ ಪ್ರಸಾದಲಿಂಗವು ನೆಲೆಗೊಂಡಿರು ತ್ತವೆ. ಅವನ ಬಾಹ್ಯದಲ್ಲಿ ಇಷ್ಟಲಿಂಗವು ಅಂತರಂಗದಲ್ಲಿ ಪ್ರಾಣಲಿಂಗವು ಭಾವದಲ್ಲಿ ತೃಪ್ತಿಲಿಂಗವು ಅಥವಾ ಭಾವಲಿಂಗವು ಇವುಗಳಿದ್ದು ಅವನ ಬಾಹ್ಯದ ಇಷ್ಟಲಿಂಗಾಚಾರಗಳನ್ನು ಮಾಡುವಲ್ಲಿ ಯಾವ ತರದ ಅನಿಷ್ಟ ಗಳು ಅಂದರೆ ತಡೆಗಳುಂಟಾಗುವದಿಲ್ಲ. ಆದ್ದರಿಂದ ಅನಿಷ್ಟ ನಷ್ಟವಾ ಯಿತ್ತಾಗಿ ಇಷ್ಟಲಿಂಗಾರ್ಚಕನೆಂದು ಹೇಳಲ್ಪಡುತ್ತಾನೆ. ಅವನು ತಾನು ಮತ್ತು ತನ್ನ ಸುತ್ತಲಿನ ಪರಿಸ್ಥಿತಿ ಇವುಗಳಲ್ಲಿ ಯಾವ ತರದ ಭೇದ ಬುದ್ಧಿಯುಳ್ಳವನಿರುವದಿಲ್ಲಾದ್ದರಿಂದ ಅವನು ಪ್ರಾಣಲಿಂಗಾರ್ಚಕನು. ಈ ಅಭೇದ ಭಾವವು ಅವನ ಇಹ ಪರದಲ್ಲಿಯೂ ಕೂಡ ಇರುವದಿಲ್ಲ. ಆದ್ದರಿಂದ ಅವನು ತೃಪ್ತಿಲಿಂಗಾರ್ಚಕನು. ಶರಣನು ಸುಜ್ಞಾನ ಭಕ್ತಿ ಯುಳ್ಳವನು. ಭೇದ ಭಾವವಿಲ್ಲದಿರುವುದೇ ಈ ಸುಜ್ಞಾನ ಭಕ್ತಿಯು. ಈ ಭೇದವು ಬಾಹ್ಯದಲ್ಲಿರದಿದ್ದರೆ ಅವನು ಇಷ್ಟ ಲಿಂಗಾರ್ಚಕನು. ಇದು ಸುತ್ತ ಲಿನ ಜಗತ್ತಿನೊಡನೆಯೂ ಇರದಿದ್ದರೆ ಅವನು ಪ್ರಾಣಲಿಂಗಾರ್ಚಕನು. ಇಹ ಪರಗಳೆರಡರಲ್ಲಿಯೂ ಇರದಿದ್ದರೆ ಅವನು ಭಾವಲಿಂಗಾರ್ಚಕನು.

(೬೮) ತ್ರಿವಿಧ ಐಕ್ಯಃ— ಈ ಭೇದಗಳು ಕಾಯ ಲಿಂಗೈಕ್ಯ, ಜೀವ ಲಿಂಗೈಕ್ಯ, ಭಾವಲಿಂಗೈಕ್ಯ ಎಂದಿರುತ್ತವೆ. ಐಕ್ಯನಲ್ಲಿ ಮಹಾಲಿಂಗದ ಪ್ರಕಾ ಶವು ಬೆಳಗುತ್ತಿರುತ್ತದೆ. ಈ ಪ್ರಕಾಶವು ಬಾಹ್ಯ ಕ್ರಿಯೆಗಳಲ್ಲಿ ತಲೆದೋರಲು,



ಇದೇ ಕಾಯಲಿಂಗೈಕ್ಯವು. ಆಗ ಆ ಕ್ರಿಯೆಗಳು ಪ್ರಕಾಶಮಯವಾಗು ತ್ತವೆ. ಮಹಾಲಿಂಗದ ಪ್ರಕಾಶವು ಅನುಭಾವದಲ್ಲಿ ತೋರಲು ಅನುಭಾವವು ಪ್ರಕಾಶಮಯವಾಗುತ್ತದೆ. ಇದೇ ಜೀವಲಿಂಗೈಕ್ಯವು. ಮಹಾಲಿಂಗದ ಪ್ರಕಾಶವು ಅರಿವು ಇದರಲ್ಲಿ ತೋರಲು ಈ ಅರಿವು ಪ್ರಕಾಶಮಯವಾಗು ತ್ತದೆ. ಇದೇ ಭಾವಲಿಂಗೈಕ್ಯವು. ಪ್ರಕಾಶವೆಂದರೆ ಚರ್ಮ ಚಕ್ಷುವಿಗೆ ಕಾಣುತ್ತಿರುವ ಬೆಳಕು ಅಲ್ಲ. ಅದು ಲಿಂಗದೊಡನೆ ಬೆರೆದಂಥ ಒಂದು ಬಗೆಯ ಶಿವಾನುಭವದ ಅತ್ಯುಚ್ಚ ಸ್ಥಿತಿ ಎಂದು ಹೇಳಬಹುದು.

ಹೀಗೆ ಆರು ಅಂಗಗಳಲ್ಲಿ ಹಿಂದೆ ನಂ. ೬೩ ರಿಂದ ೬೮ರ ವರೆಗೆ ಹೇಳಿದಂತೆ ಮೂರು ಮೂರು ವಿಭಾಗಗಳಾಗಿ ೧೮ ವಿಭಾಗಳನ್ನು ಷಟ್ ಸ್ಥಲ ಜ್ಞಾನಿಗಳು ಮಾಡಿರುತ್ತಾರೆ. ಲಿಂಗಸ್ಥಲಗಳು ೧೮, ಅಂಗಸ್ಥಲಗಳು ೧೮, ಹೀಗೆ ೩೬ ಸ್ಥಲಗಳು ಆಗುತ್ತವೆ.

(೬೯) ಮೂವತ್ತಾರು ಲಿಂಗಸ್ಥಲಗಳು (೧ನೇ ವಿಧ):— ಮುಂದೆ ಲಿಂಗಸ್ಥಲಗಳು ೩೬ ಮತ್ತು ಅಂಗಸ್ಥಲಗಳು ೩೬ ಹೀಗೆ ಬೇರೆ ಸ್ಥಲಗಳು ಉಂಟಾಗುತ್ತವೆ. ಷಟ್ ಸ್ಥಲಗಳಲ್ಲಿಯ ಪ್ರತಿಯೊಂದು ಸ್ಥಲದಲ್ಲಿ ಮನು ಷ್ಯನು ಆ ಒಂದೇ ಸ್ಥಲದ ಅನುಭವ ಮಾತ್ರವಲ್ಲದೆ ಉಳಿದ ಐದು ಸ್ಥಲಗಳ ಅನುಭವವನ್ನೂ ಹೊಂದಬೇಕು. ಹೀಗೆ ಹೊಂದದೆ ಹೋದಲ್ಲಿ ಅವನು ಪ್ರಗ ತಿಯನ್ನು ಹೊಂದಲಾರನು. ಉದಾ:— ಭಕ್ತನು ಸದಾ ಭಕ್ತಸ್ಥಲದಲ್ಲಿ ಉಳಿದರೆ ಅವನು ಮೋಕ್ಷವನ್ನು ಹೊಂದಲಾರನು. ಅವನು ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಸ್ಥಲಗಳ ಅನುಭವವನ್ನು ಹೊಂದ ಲೇಬೇಕು. ಇನ್ನೊಬ್ಬನು ಪ್ರಾಣಲಿಂಗಿ ಸ್ಥಲದವನಿರುತ್ತಾನೆ. ಅವನು ಅದರ ಅಭ್ಯಾಸದಲ್ಲಿಯೇ ಉಳಿದರೆ ಅವನಲ್ಲಿ ಪ್ರಗತಿಯಾಗಲಾರದು. ಅವನು ಭಕ್ತ, ಮಹೇಶ್ವರ, ಪ್ರಸಾದಿ, ಶರಣ, ಐಕ್ಯ ಇವುಗಳ ಅನುಭವವನ್ನು ಹೊಂದಲೇ ಬೇಕು. ಇವುಗಳ ಅನುಭವವು ಅವನು ಆಯಾ ಶರೀರಗಳ ಕ್ರಿಯೆಗಳ ಮತ್ತು ಆಯಾ ಇಂದ್ರಿಯುಗಳ ಜ್ಞಾನವನ್ನು ಮಾಡಿಕೊಂಡಲ್ಲಿ ಸಾಧ್ಯವಾಗು ತ್ತದೆ. ಈ ಎಲ್ಲ ಅನುಭವಗಳು ಲಿಂಗಸ್ಥಲದಲ್ಲಿ ೩೬ ಮತ್ತು ಅವುಗಳಿಗನು

ಸಾರವಾಗಿಯೇ ಅಂಗಸ್ಥಲದಲ್ಲಿ ೩೬ ಹೀಗೆ ಇರುತ್ತವೆ. ಅವುಗಳ ವಿವ ಣೆಗಳು ಕೆಳಗೆ ಕೊಡಲ್ಪಟ್ಟಿವೆ.

(೭೦) ಷಡ್ವಿಧ ಆಚಾರಲಿಂಗಃ— ಇವು ಕ್ರಿಯೆ, ಮಂತ್ರ, ನಿರೀಕ್ಷಣ, ಯಜನ, ಈಳನ, ವೇಧಾ ಎಂದಿರುತ್ತವೆ. ಆಚಾರಲಿಂಗನ ಆರು ವಿಧದ ಪ್ರಗತಿಗಳು ಇಲ್ಲಿ ಹೇಳಲ್ಪಟ್ಟಿವೆ.

ಆಚಾರ ಲಿಂಗವು ಆರಂಭದಲ್ಲಿ ಸತ್ಕ್ರಿಯೆಯುಳ್ಳದ್ದು. ಸದಾಚಾರ, ಗಣಾಚಾರ, ಶಿವಾಚಾರ, ಭೃತ್ಯಾಚಾರ, ಲಿಂಗಾಚಾರ ಹೀಗೆ ಪಂಚಾಚಾರ ಸ್ವರೂಪುಳ್ಳದ್ದು. ಹೀಗೆ ವರ್ತಿಸುವದು ಆಚಾರಲಿಂಗದೊಳಗಣ ಆಚಾರ ಲಿಂಗವು.

ಈ ಮೆಟ್ಟಲಿನ ತರುವಾಯ ಮಂತ್ರ ಸ್ವರೂಪವಾದ ಗುರು ಲಿಂಗವಿದೆ. ಅಲ್ಲಿ ಆಚಾರಲಿಂಗವು ಮಂತ್ರಾತ್ಮಕವಾಗಿದ್ದು ಪಂಚಾಕ್ಷರೀ ಮಂತ್ರ ಸ್ಮರಣ ಮಾಡುವದೇ ಇದರ ಲಕ್ಷಣವಾಗಿರುತ್ತದೆ. ಹೀಗೆ ವರ್ತಿ ಸುವದೇ ಆಚಾರಲಿಂಗದೊಳಗಣ ಗುರುಲಿಂಗವು.

ಈ ಗುರುಲಿಂಗದ ತರುವಾಯ ನಿರೀಕ್ಷಣ ಸ್ವರೂಪವಾದ ಶಿವ ಲಿಂಗವಿದೆ. ಇಲ್ಲಿ ಎವೆ ಹಳಚದೆ ಇಷ್ಟಲಿಂಗ ನಿರೀಕ್ಷಣ ಮಾಡುವದೇ ಈ ಆಚಾರಲಿಂಗದ ಕಾರ್ಯವಾಗಿದೆ. ಇದು ಆಚಾರ ಲಿಂಗದೊಳಗಣ ಶಿವಲಿಂಗವು.

ಶಿವಲಿಂಗದ ತರುವಾಯ ಯಜನ ಸ್ವರೂಪವಾದ ಜಂಗಮಲಿಂಗ ವಿದೆ. ಇಲ್ಲಿ ಆಚಾರ ಲಿಂಗದ ಕಾರ್ಯಗಳು ಯಜನ, ಅಷ್ಟವಿಧಾ ರ್ಚನೆ ಷೋಡಶೋಪಚಾರಗಳನ್ನು ಮಾಡುವದೇ ಇರುತ್ತವೆ. ಇದು ಆಚಾರಲಿಂಗದೊಳಗಣ ಜಂಗಮಲಿಂಗವು.

ಜಂಗಮಲಿಂಗದ ತರುವಾಯ ಈಳನ ಎಂದರೆ ಸ್ತೋತ್ರ ಸ್ವರೂ ಪವಾದ ಪ್ರಸಾದಲಿಂಗವಿದೆ. ಇಲ್ಲಿ ಆಚಾರಲಿಂಗದ ಕಾರ್ಯವು ಪರ ಮಾತ್ಮನನ್ನು ಭಕ್ತಿ ಪೂರ್ವಕನಾಗಿ ಸ್ತೋತ್ರ ಮಾಡುವದೇ ಇರುತ್ತದೆ. ಇದು ಆಚಾರಲಿಂಗದೊಳಗಣ ಪ್ರಸಾದ ಲಿಂಗವು.



ಪ್ರಸಾದ ಲಿಂಗದ ತರುವಾಯ ವೇಧಾ ಅಂದರೆ ಜ್ಞಾನ ಸ್ವರೂ ಪವಾದ ಮಹಾಲಿಂಗವಿದೆ. ಇಲ್ಲಿ ಮನುಷ್ಯನು ಇಷ್ಟಲಿಂಗ ಧ್ಯಾನ ದಲ್ಲಿ ಸುಜ್ಞಾನ ಭಕ್ತಿಯೊಡನೆ ಮಗ್ನನಾಗಿರಬೇಕು. ಇದೇ ಇಲ್ಲಿಯ ಕಾರ್ಯವು. ಇದು ಆಚಾರ ಲಿಂಗದೊಳಗಣ ಮಹಾಲಿಂಗವು.

ಹೀಗೆ ಆಚಾರ ಲಿಂಗದ ಬಾಹ್ಯ ಕ್ರಿಯೆಗಳು ಮೇಲಿನ ಆಯಾ ಸ್ಥಲ ಗಳಿಗನುಸಾರವಾಗಿ ಪ್ರಗತಿಯನ್ನು ಹೊಂದುತ್ತ ಹೋಗುತ್ತವೆ. ಮೊದಲು ಸತ್‌ಕ್ರಿಯೆ, ಆ ಮೇಲೆ ಮಂತ್ರಜಪ, ಆ ಮೇಲೆ ಅವಧಾನಪೂರ್ವಕ ವಾಗಿ ಮಾಡಿದ ಲಿಂಗ ನಿರೀಕ್ಷಣೆ, ಆ ಮೇಲೆ ಅನುಭಾವಭಕ್ತಿ ಪೂರ್ವ ಕವಾಗಿ ಮಾಡಿದ ಆಚರಣೆಗಳು, ಆ ಮೇಲೆ ಶರಣುಭಾವದಿಂದ ಮಾಡಿದ ಪರಮಾತ್ಮನ ಪ್ರಾರ್ಥನೆಗಳು, ಮತ್ತು ಕಡೆಗೆ ಇಷ್ಟಲಿಂಗದ ಧ್ಯಾನ, ಇವುಗಳು ಆಚಾರಲಿಂಗದ ಆರು ವಿಧದ ಸ್ಥೂಲ ಕ್ರಿಯೆಗಳ ತರಗತಿಗಳಾ ಗಿರುತ್ತದೆ. ಇವೇ ಆಚಾರ ಲಿಂಗದ ಷಡ್ವಿಧಗಳು.

(೭೧) ಷಡ್ವಿಧ ಗುರುಲಿಂಗಃ— ಇವು ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧಾ ದೀಕ್ಷೆ, ಬೋಧಾದೀಕ್ಷೆ, ಪ್ರಸನ್ನದೀಕ್ಷೆ, ನಿರ್ವಾಣದೀಕ್ಷೆ ಎಂದಿರು ತ್ತವೆ.

ಗುರುಲಿಂಗವು ಮಂತ್ರದಿಂದ ತುಂಬಿದ್ದಾಗಿರುತ್ತದೆ. ಇದೇ ಇದರ ಮುಖ್ಯ ಲಕ್ಷಣವು. ಅದು ಆಚಾರಲಿಂಗದೊಡನೆ ಬೆರೆಯಲು ಅಲ್ಲಿ ಆ ಗುರುಲಿಂಗದ ಶಕ್ತಿಯು ಅಂಗದ ವರ್ತನೆಯನ್ನು ನಷ್ಟಮಾಡು ವದು. ಮತ್ತು ಸತ್‌ಕ್ರಿಯಾನುಗ್ರಹ ಮಾಡುವದು. ಹೀಗೆ ಮಾಡಿ ಇಷ್ಟ ಲಿಂಗದ ಕಳೆಯನ್ನು ಅದು ಮನುಷ್ಯನ ಕ್ರಿಯೆಗಳಲ್ಲಿ ಪ್ರತಿಷ್ಠಿಸುವದು. ಇದೇ ಗುರುಲಿಂಗದೊಳಗಣ ಆಚಾರಲಿಂಗವು.

ಮುಂದೆ ಗುರುಲಿಂಗವು ಗುರುಲಿಂಗದೊಳಗೆ ಬೆರೆಯಲಾಗಿ ಅಲ್ಲಿ ಆ ಗುರುಲಿಂಗವು ಪಂಚಾಕ್ಷರೀಮಂತ್ರಪ್ರಭಾವದಿಂದ ಪ್ರಾಣದ ದುಷ್ಟ ಪ್ರವೃತ್ತಿಗಳನ್ನು ಅಳಿಯುವದು. ಮತ್ತು ಅದನ್ನು ಚಿತ್‌ಪ್ರಾಣವನ್ನಾಗಿ ಮಾಡುವದು. ಆಗ ಮಂತ್ರಾನುಗ್ರಹ ಸ್ವರೂಪವಾದ ಪ್ರಾಣಲಿಂಗವು

ಮನುಷ್ಯನಲ್ಲಿ ನೆಲೆಗೊಳ್ಳುವದು. ಹೀಗಾದಲ್ಲಿ ಅದು ಗುರುಲಿಂಗದೊಳಗಣ ಗುರುಲಿಂಗವು.

ಗುರುಲಿಂಗವು ಶಿವಲಿಂಗದಲ್ಲಿ ಬೆರೆಯಲು ಆತ್ಮನ ವರ್ತನೆಯು ನಷ್ಟವಾಗುವದು. ಇದು ಗುರುವಿನ ಹಸ್ತಮಸ್ತಕ ಸಂಯೋಗದಿಂದ ಉಂಟಾಗುತ್ತದೆ. ಆಗ ಭಾವಲಿಂಗದ ಕಳೆಯು ಮನುಷ್ಯನಲ್ಲಿ ಪ್ರಾದುರ್ಭವಿಸುವದು. ಇದೇ ವೇಧಾ ದೀಕ್ಷೆಯನ್ನು ಉಂಟುಮಾಡುವಂತಹದು. ಇದೇ ಗುರುಲಿಂಗದೊಳಗಣ ಶಿವಲಿಂಗವು.

ವೇಧಾ ದೀಕ್ಷೆಯ ತರುವಾಯ ತ್ರಿವಿಧಲಿಂಗದ ಜ್ಞಾನವನ್ನುಂಟು ಮಾಡಿಕೊಂಡು ಅದರ ಅನುಭಾವದಲ್ಲಿರುವುದೇ ಬೋಧಾ ದೀಕ್ಷೆ ಎನಿಸುವದು. ಇದೇ ಬೋಧಾನುಗ್ರಹವುಳ್ಳ ಜಂಗಮಲಿಂಗವು. ಇದೇ ಗುರುಲಿಂಗದೊಳಗಣ ಜಂಗಮಲಿಂಗವು.

ಇದರ ತರುವಾಯ ಪ್ರತ್ಯಕ್ಷ ನಿರ್ಮಲ ವಸ್ತುವೇ ನೀನೆಂದು ಅನುಗ್ರಹಿಸುವುದೇ ಪ್ರಸನ್ನದೀಕ್ಷೆ ಎನಿಸುವದು. ಇದೇ ಪ್ರತ್ಯಕ್ಷಾನುಗ್ರಹ ಸ್ವರೂಪವಾದ ಪ್ರಸಾದಲಿಂಗವು. ಇದೇ ಗುರುಲಿಂಗದೊಳಗಣ ಪ್ರಸಾದಲಿಂಗವು.

ಇದರ ತರುವಾಯ ಮೋಕ್ಷಸ್ವರೂಪವಾದ ವಸ್ತುವೇ ತಾನೆಂದು ಅನುಗ್ರಹಿಸುವಂತಹದೇ ನಿರ್ವಾಣ ದೀಕ್ಷೆಯಾಗಿದೆ. ಇದೇ ಮೋಕ್ಷಾನುಗ್ರಹ ಸ್ವರೂಪವಾದ ಮಹಾಲಿಂಗವು. ಇದೇ ಗುರುಲಿಂಗದೊಳಗಣ ಮಹಾಲಿಂಗವು.

ಹೀಗೆ ಗುರುಲಿಂಗದ ಕ್ರಿಯೆಗಳು ಆಯಾ ಸ್ಥಲಗಳಿಗನುಸಾರವಾಗಿ ಪ್ರಗತಿಯನ್ನು ಹೊಂದುತ್ತ ಹೋಗುತ್ತವೆ. ಮೊದಲು ಕ್ರಿಯೆ, ಮಂತ್ರ, ವೇಧಾ ದೀಕ್ಷೆಗಳನ್ನು ಮೊದಲಿನ ಮೂರು ಸ್ಥಲಗಳಲ್ಲಿ ಹೊಂದಿ, ಮುಂದೆ ಶಿವಾನುಭವವು ಉತ್ಪನ್ನವಾದಂತೆ ಬೋಧೆ, ಆಮೇಲೆ ಪ್ರಸನ್ನತೆ, ಕಡೆಗೆ ನಿರ್ವಾಣ, ಈ ಸ್ಥಿತಿಗಳು ಪ್ರಾಪ್ತವಾಗುವವು. ಇವೇ ಗುರುಲಿಂಗದೊಳಗಣ ಷಡ್ವಿಧಗಳು.



(೨೨) ಷಡ್ವಿಧ ಶಿವಲಿಂಗಃ— ಇವು ಕರಸ್ಥಲ, ನಯನ ಸ್ಥಲ, ಹೃದಯಸ್ಥಲ, ಮಂತ್ರಸ್ಥಲ, ತ್ರಿಕೂಟಸ್ಥಲ, ಲಯಸ್ಥಲ ಎಂದು ಇರುತ್ತವೆ. ಶಿವಲಿಂಗವು ನಿರೀಕ್ಷಣಾ ಸ್ವರೂಪವಾದುದೆಂದು ಹೇಳಲ್ಪಡುತ್ತಿದೆ. ಇದಕ್ಕೆ ಅವಧಾನ ಭಕ್ತಿ ಅಂದರೆ ಏಕಾಗ್ರಚಿತ್ತವು ಇದೆ. ಆದರೆ ಈ ಏಕಾಗ್ರಚಿತ್ತಕ್ಕೋಸ್ಕರ ಒಂದು ವಸ್ತುವು ಅವಶ್ಯವಾದುದು. ಈ ವಸ್ತುವು ಲಿಂಗವೇ ಆಗಿದ್ದು ಇದರ ಪ್ರಕಾಶಮಯವಾದ ನಿರೀಕ್ಷಣೆಗೋಸ್ಕರ ದೇಹದಲ್ಲಿ ಬೇರೆ ಬೇರೆ ಆರು ಸ್ಥಳಗಳಿರುತ್ತವೆ. ಅವು ಅನುಕ್ರಮವಾಗಿ ಇಲ್ಲಿ ಹೇಳಲ್ಪಟ್ಟಿವೆ. ಅವು ಯಾವವೆಂದರೆ—

ಈ ಸ್ಥಳದಲ್ಲಿ ಹೇಳಲ್ಪಟ್ಟಿರುವ ಕರಸ್ಥಲವು ಸುಚಿತ್ತವೆಂದು ಭಾವಿಸಬೇಕು. ಇದಕ್ಕೆ ಇಷ್ಟಲಿಂಗವಿದೆ. ಈ ಇಷ್ಟಲಿಂಗವೇ ಶಿವಲಿಂಗದೊಳಗಣ ಆಚಾರಲಿಂಗವಾಗಿರುತ್ತದೆ. ಇದರ ಮುಂದಿನದು ನಯನಸ್ಥಲವು. ಈ ನಯನವು ಸುಬುದ್ಧಿಗೆ ಹಸ್ತವಾದುದೆಂದು ಭಾವಿಸಿ ಕರಸ್ಥಲದ ಇಷ್ಟಲಿಂಗವನ್ನು ನಯನದಲ್ಲಿ ಎವೆ ಹಳಚದೆ ಅನಿಮಿಷ ದೃಷ್ಟಿಯಿಂದ ನಿರೀಕ್ಷಿಸುವನು. ಇದೇ ಶಿವಲಿಂಗದೊಳಗಣ ಗುರುಲಿಂಗವು.

ನಯನಸ್ಥಲದ ಮುಂದಿನದು ಹೃದಯಸ್ಥಲವು. ಈ ಹೃದಯವು ನಿರಹಂಕಾರಕ್ಕೆ ಹಸ್ತವೆಂದು ಭಾವಿಸಿ, ಇಲ್ಲಿ ಇಷ್ಟಲಿಂಗವು ಪ್ರಾಣಲಿಂಗವಾಗಿ ವ್ಯವಹರಿಸುವುದು. ಇದೇ ಶಿವಲಿಂಗದೊಳಗಣ ಶಿವಲಿಂಗವು.

ಹೃದಯಸ್ಥಲದ ಮುಂದಿನದು ಮಂತ್ರಸ್ಥಲವು. ಈ ಮಂತ್ರಕ್ಕೆ ಸುಮನವೇ ಹಸ್ತವಾಗಿರುತ್ತದೆ. ಈ ಹಸ್ತದಲ್ಲಿ ಇಷ್ಟ, ಪ್ರಾಣ, ಭಾವ ಈ ಮೂರು ಲಿಂಗಗಳನ್ನು ಒಳಕೊಂಡು ತೋರುವ ಮಹಾಲಿಂಗವು ಪಂಚಾಕ್ಷರೀ ಮಂತ್ರಸ್ವರೂಪವಾಗಿ ವ್ಯವಹರಿಸುತ್ತದೆ. ಇದೇ ಶಿವಲಿಂಗದೊಳಗಣ ಜಂಗಮಲಿಂಗವು.

ಈ ಮಂತ್ರಸ್ಥಲದ ಮುಂದಿನದು ತ್ರಿಕೂಟಸ್ಥಲವು. ಈ ಸ್ಥಲಕ್ಕೆ ಹಸ್ತವಾಗಿರುವದು ಸುಜ್ಞಾನವು. ಈ ಸುಜ್ಞಾನ ಹಸ್ತದಲ್ಲಿ ಅರಿವು ಎಂಬ ಶಿವತತ್ವವು ಮುಂದುಗೊಳ್ಳಲು, ಅಲ್ಲಿ ಇಷ್ಟಲಿಂಗಕ್ಕೆ ಮಾಡು

ವಾತ, ಕೈಕೊಳ್ಳುವಾತ, ಮತ್ತು ಪೂಜಾದ್ರವ್ಯ ಇವೆಲ್ಲವೂ ಒಂದೆ ಎಂದು ಭಾವಿಸಿ ಆಚರಿಸುವನು. ಇದೇ ಶಿವಲಿಂಗದೊಳಗಣ ಪ್ರಸಾದಲಿಂಗವಿರುತ್ತದೆ.

ಈ ಮಂತ್ರಸ್ಥಲದ ಮುಂದಿನದು ಲಯಸ್ಥಲವಿರುತ್ತದೆ. ಇದರಲ್ಲಿ ಹಸ್ತವಾಗಿರುವುದು ಸದ್ಭಾವವು. ಈ ಕರಣಗಣದಲ್ಲಿ ತನ್ನಂಗವನ್ನು ಅಡಗಿಸಿ ವಿಶ್ರಾಂತಿಯನ್ನು ಹೊಂದಬೇಕು. ಇದೇ ಶಿವಲಿಂಗದೊಳಗಣ ಮಹಾಲಿಂಗವು.

ಈ ಪ್ರಕಾರ ಶಿವಲಿಂಗವು ಮೊದಲು ಕರಸ್ಥಲ, ನಯನಸ್ಥಲ, ಹೃದಯಸ್ಥಲ, ತ್ರಿಕೂಟಸ್ಥಲ, ಮತ್ತು ಕಡೆಗೆ ಲಯಸ್ಥಲ, ಹೀಗೆ ಆಯಾಸ್ಥಲಗಳಲ್ಲಿ ವ್ಯವಹರಿಸುತ್ತ ಕಡೆಗೆ ಲಯಸ್ಥಲವನ್ನು ಹೊಂದುವದು. ಹೀಗೆ ಶಿವಲಿಂಗದ ಷಡ್ವಿಧಗಳಿವೆ.

(೭೩) ಷಡ್ವಿಧ ಜಂಗಮಲಿಂಗಃ — ಇವು ಸ್ವಯ, ಚರ ಪರ, ಪರಿಣಾಮಿ, ನಿರುಪಾಧಿಕ, ಪರಿಪೂರ್ಣ, ಎಂದಿರುತ್ತವೆ. ಜಂಗಮಲಿಂಗವು ಇಲ್ಲಿ ಪ್ರಾಣಲಿಂಗಿಸ್ಥಲಕ್ಕೆ ಸಂಬಂಧಿಸಿದುದು. ಇದು ಆಚಾರಲಿಂಗದಲ್ಲಿ ಯಜನಸ್ವರೂಪುಳ್ಳುದು. ಆದರೆ ಮುಂದೆ ಅದು ಪ್ರಗತಿಯನ್ನು ಹೊಂದುತ್ತ ಬೋಧಾ ದೀಕ್ಷೆಯಲ್ಲಿ ಬೋಧೆಯನ್ನು ಹೊಂದಿ ಆಮೇಲೆ ಪಂಚಾಕ್ಷರೀ ಮಂತ್ರರೂಪವಾಗಿ ಮುಂದೆ ಇಲ್ಲಿ ಅರಿವಿನ ಆಚರಣೆಯುಳ್ಳದ್ದಾಗಿರುತ್ತದೆ. ಆದರೆ ಈ ಆಚರಣೆಗೆ ಮೀರಿದ ಕ್ರಿಯೆ ಎಂಬ ಹೆಸರು. ಆದರ ಹಿಂದಿನ ಕ್ರಿಯೆಗಳಿಗೆ ಮಾರ್ಗಕ್ರಿಯೆಗಳೆಂಬ ಹೆಸರು.

ಈ ಅರಿವಿನ ಆಚರಣೆಗಳ ಮೂಲಕ ಅನುಕ್ರಮವಾಗಿ ಸ್ವಯಜಂಗಮ, ಚರಜಂಗಮ, ಪರಜಂಗಮ, ಪರಿಣಾಮಿ ಜಂಗಮ, ನಿರುಪಾಧಿಜಂಗಮ, ಪರಿಪೂರ್ಣಜಂಗಮ; ಎಂದು ಹೇಳಲ್ಪಡುವನು. ಇಲ್ಲಿ ಜಂಗಮಲಿಂಗವು ಅನೇಕ ಬಗೆಯ ಬೋಧಾರೂಪುಳ್ಳುದಾಗಿ ವ್ಯವಹರಿಸುತ್ತದೆ.



ಸ್ವಯಜಂಗಮನು ಶಿವಾನುಭವವನ್ನು ಬೋಧಿಸುತ್ತ ಸ್ವಸ್ಥಾನದಲ್ಲಿ ಇರುವನು. ಅನ್ಯಾಧೀನನಾಗಿರುವದಿಲ್ಲ. ಶಿವಧ್ಯಾನಪರಾಯಣನಾಗಿರುತ್ತಾನೆ. ಇದು ಜಂಗಮಲಿಂಗದೊಳಗಿನ ಆಚಾರಲಿಂಗವು.

ಚರಜಂಗಮನು ಪಂಚಮುದ್ರಾಸಮೇತನಾಗಿ ತನಗೆ ದೊರಕಿದ್ದನ್ನು ಜಂಗಮಕ್ಕೆ ನೀಡಿ ಅವನು ಹೇಳಿದ ಜ್ಞಾನಾನುಭವ ಪ್ರಸಾದವನ್ನು ತೆಗೆದುಕೊಂಡು ಅನುಭವಿಸುತ್ತಾನೆ. ಹೀಗೆ ಅನುಭವಿಸುತ್ತ ಪಾವನ ಮೂರ್ತಿಯಾಗಿ ಧರ್ಮೋದ್ಧಾರ ಮಾಡುತ್ತ ಚರಿಸುತ್ತಾನೆ. ಇದು ಜಂಗಮಲಿಂಗದೊಳಗಣ ಗುರುಲಿಂಗವು.

ಪರಜಂಗಮನು ಭಕ್ತಿ ಜ್ಞಾನ ವೈರಾಗ್ಯವಿಡಿದು ಆಚರಿಸುವನು. ಪರಾಪರವಾದ ಮೋಕ್ಷ ಸ್ವರೂಪನಾಗಿರುತ್ತಾನೆ. ಸ್ಥಾವರ ಜಂಗಮಕ್ಕೆಲ್ಲ ಅಧಿಷ್ಠಾನಕರ್ತನಾಗಿ ಆಚರಿಸುತ್ತಾನೆ. ಇದು ಜಂಗಮಲಿಂಗದೊಳಗಣ ಶಿವಲಿಂಗವು.

ಪರಿಣಾಮಿ ಜಂಗಮದಲ್ಲಿ ಸುಖದುಃಖಗಳು ಎರಡೂ ಇರುವದಿಲ್ಲ. ಮತ್ತು ಮಹಾಜ್ಞಾನವೇ ಪರಿಣಾಮವಾಗಿ ಅದರ ಆನಂದದಲ್ಲಿರುತ್ತಾನೆ. ಇದು ಜಂಗಮಲಿಂಗದೊಳಗಣ ಪ್ರಸಾದಲಿಂಗವು.

ನಿರುಪಾಧಿಕ ಜಂಗಮನು ಯಾರನ್ನೂ ಯಾಚಿಸನು. ದೊರೆತಷ್ಟರಲ್ಲಿಯೇ ಸಂತುಷ್ಟನಾಗಿ ಯಾವ ತರದ ಉಪಾಧಿಗಳು ಇಲ್ಲದೆ ವ್ಯವಹರಿಸುತ್ತಾನೆ. ಇದು ಜಂಗಮಲಿಂಗದೊಳಗಣ ಪ್ರಸಾದಲಿಂಗವು.

ಪರಿಪೂರ್ಣ ಜಂಗಮನು ಸರ್ವಾಚಾರ ಸಂಪತ್ತಿನ ಆಚರಣೆಯಲ್ಲಿ ವ್ಯಾಪಿಸಿದ ಅರಿವುಳ್ಳಾತನಾಗಿರುತ್ತಾನೆ. ಇದು ಜಂಗಮಲಿಂಗದೊಳಗಣ ಮಹಾಲಿಂಗವು.

ಹೀಗೆ ಜಂಗಮಲಿಂಗವು ಬೇರೆ ಬೇರೆ ಸ್ಥಲಗಳಲ್ಲಿದ್ದುಕೊಂಡು ಅಲ್ಲಿಯ ಅನುಭವಗಳನ್ನು ಹೊಂದುತ್ತ ಪರಿಪೂರ್ಣ ಸ್ಥಿತಿಯನ್ನು ಹೊಂದುತ್ತಾನೆ.

(೭೪) ಷಡ್ವಿಧಪ್ರಸಾದಲಿಂಗಃ— ಇವು ಇಂದ್ರಿಯಾನಂದ, ಪ್ರಾಣಾನಂದ, ಜ್ಞಾನಾನಂದ, ಭಾವಾನಂದ, ತೂರ್ಯಾನಂದ, ಮಹದಾನಂದ, ಎಂದಿರುತ್ತವೆ. ಇವು ಶರಣಸ್ಥಲದಲ್ಲಿ ಪ್ರಕಟವಾದ ಉಚ್ಚಪರಿಸ್ಥಿತಿಯ ಸ್ವರೂಪಗಳು ಇರುತ್ತವೆ. ಇಲ್ಲಿ ಸುಜ್ಞಾನ ಭಕ್ತಿಯು ಇದ್ದು ಇದು ಇಲ್ಲಿ ಆನಂದದ ಸ್ವರೂಪದಲ್ಲಿರುತ್ತದೆ. ಈ ಆನಂದವು ಭಕ್ತನ ಮನ, ಕರಣ, ಇಂದ್ರಿಯ, ಜ್ಞಾನ ಮೊದಲಾದವುಗಳಲ್ಲೆಲ್ಲ ತೋರುತ್ತದೆ.

ಆಚಾರಲಿಂಗದಲ್ಲಿ ಪ್ರಸಾದಲಿಂಗವು ಪರಮಾತ್ಮನ ಸ್ತುತಿರೂಪವಾಗಿಯೂ, ಗುರುಲಿಂಗದಲ್ಲಿ ಅದು 'ಪರಮಾತ್ಮನು ನೀನೇ ಎಂಬ ಅನುಗ್ರಹ ಉಂಟಾಗುವದರಿಂದ ಅದು ಪ್ರಸನ್ನದೀಕ್ಷೆಯಾಗಿಯೂ, ಶಿವಲಿಂಗದಲ್ಲಿ ಅದು ಸಾಮರಸ್ಯಾಚಾರವುಳ್ಳದಾಗಿಯೂ, ಜಂಗಮಲಿಂಗದಲ್ಲಿ ಅದು ಸದಾ ಸಮಾಧಾನವೃತ್ತಿಯುಳ್ಳದಾಗಿಯೂ, ಪ್ರಕಟವಾಗಿ ಪ್ರಸಾದಲಿಂಗಸ್ಥಲದಲ್ಲಿ ಅದು ಕೇವಲ ಆನಂದ ಸ್ವರೂಪದಲ್ಲಿ ಇರುತ್ತದೆ. ಹೀಗೆ ಇದರ ಪ್ರಗತಿಯು ಇರುತ್ತಿದೆ.

ಇಂದ್ರಿಯಾನಂದದಲ್ಲಿ ಅದು ಮೊದಲು ಪರಿಣಮಿಸುತ್ತದೆ. ಇಲ್ಲಿ ಅವನಿಗೆ ಯಾವ ಉಪಾಧಿಗಳಿಲ್ಲ. ಅವನ ಇಂದ್ರಿಯಗಳಲ್ಲೆಲ್ಲ ಆನಂದವು ತುಂಬಿಕೊಂಡಿರುತ್ತದೆ. ಪ್ರಸಾದಲಿಂಗದೊಳಗಿನ ಆಚಾರಲಿಂಗವು ಇದು ಇರುತ್ತದೆ.

ಮುಂದೆ ಅವನ ಪ್ರಾಣದಲ್ಲಿ ಅದರಂತೆಯೇ ಆನಂದವು ತುಂಬಿಕೊಂಡಿರುವದರಿಂದ ಅದು ಪ್ರಾಣಾನಂದವು. ಇದು ಇಂದ್ರಿಯಾನಂದಕ್ಕಿಂತ ಹೆಚ್ಚಿಗೆ ಸೂಕ್ಷ್ಮವಾದುದು. ಇದು ಪ್ರಸಾದಲಿಂಗದೊಳಗಣ ಗುರುಲಿಂಗವು.

ಮುಂದೆ ಅವನ ಜ್ಞಾನದಲ್ಲಿಯೂ ಕೂಡ ಆನಂದವು ತುಂಬುವದು. ಆಗ ಶಿವತತ್ವದಲ್ಲಿ ಸ್ಥಿರಗೊಂಡಿರುವ ಆಸ್ತಿಕ್ಯಜ್ಞಾನವು ಅವನಲ್ಲಿ ತುಂಬಿರುತ್ತದೆ. ಇದು ಜ್ಞಾನಾನಂದವು. ಈ ಆನಂದವು ಪ್ರಾಣಾನಂದಕ್ಕಿಂತಲೂ ಸೂಕ್ಷ್ಮವಾದುದು. ಇದು ಪ್ರಸಾದಲಿಂಗದೊಳಗಣ ಶಿವಲಿಂಗವು.



ಮುಂದೆ ಅವನಲ್ಲಿ ಭಾವಾನಂದವುಂಟಾಗುತ್ತದೆ. ಇಲ್ಲಿ ಅವನು ಶಿವಭಾವದಲ್ಲಿ ಏಕಧ್ಯಾನಪೂರ್ವಕವಾಗಿ ಆನಂದಿಸುತ್ತಾನೆ. ಇದು ಪ್ರಸಾದಲಿಂಗದೊಳಗಣ ಜಂಗಮಲಿಂಗವು.

ಮುಂದೆ ಅವನಲ್ಲಿ ಭಾವಾನಂದಕ್ಕಿಂತಲೂ ಅತ್ಯಂತ ಶ್ರೇಷ್ಠತರವಾದ ತೂರ್ಯಾನಂದದಲ್ಲಿ ಆನಂದಿಸುತ್ತಾನೆ. ಇಲ್ಲಿ ಶರಣ ಸತಿ ಲಿಂಗ ಪತಿ ಎಂಬ ಭಾವದೊಳಗೆ ಆಚರಿಸುತ್ತಾನೆ. ಇದು ಪ್ರಸಾದಲಿಂಗದೊಳಗಣ ಪ್ರಸಾದಲಿಂಗವು.

ಇದರ ಮುಂದೆ ಮಹದಾನಂದವಿದೆ. ಇಲ್ಲಿ ಭಿನ್ನ ಕ್ರಿಯಾಚಾರಗಳಿಂದ ಬಿಡುಗಡೆ ಹೊಂದುತ್ತಾನೆ. ಇಲ್ಲಿ ಈ ಆನಂದವು ಮೋಕ್ಷಾಹ್ಲಾದ ಸ್ವರೂಪವಾಗಿರುತ್ತದೆ. ಇದು ಪ್ರಸಾದಲಿಂಗದೊಳಗಣ ಮಹಾಲಿಂಗವು.

ಹೀಗೆ ಪ್ರಸಾದಲಿಂಗವು ಬೇರೆ ಬೇರೆ ಸ್ಥಲಗಳಲ್ಲಿದ್ದುಕೊಂಡು ಅಲ್ಲಲ್ಲಿ ನಾನಾ ಬಗೆಯ ಆನಂದವನ್ನು ಉತ್ಪನ್ನ ಮಾಡುತ್ತಿದೆ.

(೭೫) ಷಡ್ವಿಧ ಮಹಾಲಿಂಗಃ— ಇವು ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ, ಭಾವಗಮ್ಯ, ಸರ್ವತತ್ವಾಶ್ರಯ, ಮತ್ತು ಪರಿಪೂರ್ಣಪ್ರಕಾಶ ಎಂದು ಇರುತ್ತವೆ. ಇಲ್ಲಿ ಸಾಮರಸ್ಯ ಸ್ಥಿತಿಯು ಇರುತ್ತದೆ ಆಕಾಶವೆಂದರೆ ಮನುಷ್ಯನಿಗೆ ಸಂಬಂಧಿಸಿದ ಶಕ್ತಿ, ಪ್ರಾಣ, ಅವು ಮೊದಲಾದವೆಲ್ಲವೂ ಅತ್ಯಂತ ಪರಿಪಕ್ವತೆಯನ್ನು ಹೊಂದಿ ಲಿಂಗಕಳೆಯಿಂದ ತುಂಬಿಕೊಂಡು ಅತ್ಯಂತ ಸೂಕ್ಷ್ಮಸ್ಥಿತಿಯುಳ್ಳದಾಗಿ ಮೂಲ ಚಿತ್ತಿನಲ್ಲಿ ವ್ಯವಹರಿಸುವ ಸ್ಥಿತಿಯು ಈ ಪ್ರಕಾರವಿದ್ದು ಅವುಗಳಿಗೆ ಆಗ ಬರುವ ಸ್ವರೂಪಿಗೆ ಆರಂಭದಲ್ಲಿ ಪಿಂಡಾಕಾಶವೆಂತಲೂ, ಆಮೇಲೆ ಬಿಂದ್ವಾಕಾಶವೆಂತಲೂ, ಮುಂದೆ ಅವುಗಳಿಗೆ ಮಹದಾಕಾಶವೆಂತಲೂ ಹೇಳಲ್ಪಡುತ್ತಿದೆ. ಆಮೇಲೆ ಭಾವಗಮ್ಯ, ಆಮೇಲೆ

ಸರ್ವತತ್ವಾಶ್ರಯ, ಮತ್ತು ಕಡೆಗೆ ಪರಿಪೂರ್ಣಪ್ರಕಾಶವೆಂದು ಅನು
ಮವಾಗಿ ಹೇಳಲ್ಪಡುತ್ತವೆ. ಈ ಸ್ಥಿತಿಗಳು ಅತ್ಯಂತ ಪರಿಪೂರ್ಣ
ದವುಗಳು.

ಪಿಂಡಾಕಾಶಃ— ಇದು ಅತ್ಯಂತ ಸೂಕ್ಷ್ಮಸ್ಥಿತಿಗೆ ಹೋ
ಶ್ರದ್ಧಾ ಭಕ್ತಿಗೆ ಅವಕಾಶಸ್ಥಾನವಾಗಿರುತ್ತದೆ. ಇದು ಪಿಂಡಾಕಾಶವೆಂ
ಹೇಳಲ್ಪಡುತ್ತಿದೆ. ಇದು ಮಹಾಲಿಂಗದೊಳಗಣ ಆಚಾರಲಿಂಗವು.

ಬಿಂದ್ವಾಕಾಶಃ— ಇದು ಪಿಂಡಕ್ಕಿಂತಲೂ ಸೂಕ್ಷ್ಮವಾದುದು.
ನೈಷ್ಠಿಕಾಭಕ್ತಿಯು ಇಲ್ಲಿ ಅತ್ಯಂತ ಸೂಕ್ಷ್ಮಸ್ಥಿತಿಯನ್ನು ಹೊಂದಿ
ಅದರ ವ್ಯವಹಾರಕ್ಕೆ ಅವಕಾಶಸ್ಥಾನವಾದುದು. ಇದು ಬಿಂದ್ವಾಕಾಶ.
ಇದು ಮಹಾಲಿಂಗದೊಳಗಣ ಗುರುಲಿಂಗವು.

ಮಹದಾಕಾಶಃ— ಇದು ಆತ್ಮನು ವ್ಯವಹರಿಸಲು ಸ್ಥಾನವಾ
ದುದು. ಇದು ಹಿಂದಿನವುಗಳಗಿಂತಲೂ ಸೂಕ್ಷ್ಮವಾದುದು. ಇದು
ಮಹಾಲಿಂಗದೊಳಗಣ ಶಿವಲಿಂಗವು.

ಭಾವಗವ್ಯಃ— ಇದು ಆಕಾಶದ ಸ್ಥಿತಿಗಳಿಗಿಂತಲೂ ಅತ್ಯಂತ
ಸೂಕ್ಷ್ಮವಾದುದು. ಈ ಸ್ಥಿತಿಯು ಭಾವದಿಂದ ಮಾತ್ರ ತಿಳಿಯತ
ಕ್ಕದು. ಅನುಭಾವಭಕ್ತಿಗೆ ಗೋಚರವಾಗುವಂತಹದು. ಇದು ಮಹಾ
ಲಿಂಗದೊಳಗಣ ಪ್ರಸಾದಲಿಂಗವು.

ಸರ್ವತತ್ವಾಶ್ರಯಃ— ಇದು ಸಮಸ್ತಜ್ಞಾನತತ್ವಗಳಿಗೆ ಆಶ್ರಯ
ವಾಗಿರುತ್ತದೆ. ಇದು ಮಹಾಲಿಂಗದೊಳಗಣ ಜಂಗಮಲಿಂಗವು.

ಪರಿಪೂರ್ಣ ಪ್ರಕಾಶಃ— ಅತ್ಯಂತ ವ್ಯಾಪಕನಾದ ಮಹಾಜ್ಞಾನ
ದಲ್ಲಿ ಪ್ರಕಾಶಸ್ವರೂಪನಾಗಿ ವ್ಯವಹರಿಸಲು ಕಾರಣವಾದುದು. ಇದು
ಪರಿಪೂರ್ಣ ಪ್ರಕಾಶವೆಂದೂ ಹೇಳಲ್ಪಡುತ್ತಿದೆ. ಇದು ಮಹಾಲಿಂಗದೊ
ಗಣ ಮಹಾಲಿಂಗವು. ಇದು ಕಟ್ಟ ಕಡೆಯ ಸಾಮರಸ್ಯ ಸ್ಥಿತಿಯು.



(೬೬) ಮೂವತ್ತಾರು ಲಿಂಗಸ್ಥಲಗಳು (೨ನೇ ವಿಧ):— ಇವುಗಳ
ವ್ಯಾಖ್ಯೆಗಳು ಹಿಂದೆ ನಂ॥ ೭೦ ರಿಂದ ೭೫ರ ವರೆಗೆ ಹೇಳಲ್ಪಟ್ಟಿವೆ.
ಆದರೆ ಇವುಗಳನ್ನು ಅನ್ನುವ ಸೌಕರ್ಯಕ್ಕೋಸ್ಕರ ಆಚಾರಲಿಂಗದೊ
ಳಗಣ ಆಚಾರಲಿಂಗ, ಆಚಾರಲಿಂಗದೊಳಗಣ ಗುರುಲಿಂಗ ಎಂದು
ಮೊದಲಾಗಿ ಆಚಾರಲಿಂಗದೊಳಗಣ ಷಡ್ವಿಧವನ್ನು ಹೇಳುವದುಂಟು.
ಮುಂದೆ ಗುರುಲಿಂಗದೊಳಗಣ ಗುರುಲಿಂಗ ಆಮೇಲೆ ಗುರುಲಿಂಗ
ದೊಳಗಣ ಆಚಾರಲಿಂಗ ಎಂದು ಮೊದಲಾಗಿ ಗುರುಲಿಂಗದೊಳಗಣ
ಷಡ್ವಿಧಗಳು, ಆಮೇಲೆ ಶಿವಲಿಂಗದೊಳಗಣ ಶಿವಲಿಂಗ, ಆಮೇಲೆ
ಶಿವಲಿಂಗದೊಳಗಣ ಆಚಾರಲಿಂಗ ಎಂದು ಮೊದಲಾಗಿ ಶಿವಲಿಂಗದೊ
ಳಗಣ ಷಡ್ವಿಧಗಳು, ಹೀಗೆ ಮುಂದಿನ ಲಿಂಗಗಳೊಳಗಣ ಷಡ್ವಿಧಗಳನ್ನು
ಹೇಳುತ್ತ ಕಡೆಗೆ ಆರನೆಯದಾದ ಮಹಾಲಿಂಗದೊಳಗಣ ಮಹಾಲಿಂಗ,
ಆಮೇಲೆ ಮಹಾಲಿಂಗದೊಳಗಣ ಆಚಾರಲಿಂಗ ಹೀಗೆ ಇದರ ಷಡ್ವಿಧ
ಗಳು, ಹೀಗೆ ಹೇಳುತ್ತ ಕಡೆಗೆ ಐಕ್ಯನೊಳಗಣ ಶರಣ ಈ ಸ್ಥಿತಿಯು ಉಳಿ
ಯುತ್ತದೆ. ಹಿಂದೆ ವಿವರಿಸಿದ ಮೂವತ್ತಾರು ಲಿಂಗಸ್ಥಲ (೧ನೇ ವಿಧ)
ಗಳಲ್ಲಿಯ ಅನೇಕ ವಿಶಿಷ್ಟ ಶಬ್ದಗಳನ್ನು ಸ್ಮರಣೆಯಲ್ಲಿಟ್ಟುಕೊಂಡು
ಉಪಯೋಗಿಸುವದು ದುಸ್ತರವು. ಆದ್ದರಿಂದ ಈ ೨ನೇ ವಿಧವೊಳಗಿನಂತೆ
ಹೇಳುವ ವಾಡಿಕೆಯುಂಟು ಆದರೆ ಈ ಎರಡೂ ವಿಧಗಳ ಅರ್ಥದಲ್ಲಿ
ಯಾವ ಭೇದವೂ ಇರುವದಿಲ್ಲ.

(೬೭) ಮೂವತ್ತಾರು ಅಂಗಸ್ಥಲಗಳು (೧ನೇ ವಿಧ):— ಲಿಂಗ
ಸ್ಥಲಗಳಲ್ಲಿ ಹಿಂದೆ ವಿವರಿಸಿದಂತೆ ೩೬ ವಿಧಗಳಿವೆ. ಆ ಸ್ಥಲಗಳಲ್ಲಿ ಉಂ
ಟಾದ ಅನುಭವಗಳು ಭಕ್ತನ ಅಂಗದಲ್ಲಿ ತೋರುತ್ತವೆ. ಆದ್ದರಿಂದ ಅವು
ಗಳ ಪರಿಣಾಮಗಳು ಕೂಡ ಭಕ್ತನಲ್ಲಿ ೩೬ ಆಗಿರುತ್ತವೆ. ಇದರಿಂದ ಅಂಗ
ಸ್ಥಲದಲ್ಲಿಯೂ ಲಿಂಗಸ್ಥಲದಂತೆ ೩೬ ವಿಧಗಳಾಗುತ್ತವೆ ೩೬ ಅಂಗಸ್ಥಲ
ದಲ್ಲಿ ೩೬ ಲಿಂಗ ಸಂಬಂಧಮಾಡಿಕೊಳ್ಳತಕ್ಕದ್ದು. ಈ ಸಂಬಂಧವು ಭಕ್ತಿಯ
ಮೂಲಕ ಸಿದ್ಧಿಸುತ್ತದೆ. ಅಂಗಕ್ಕೂ ಲಿಂಗಕ್ಕೂ ಸಂಬಂಧವನ್ನುಂಟು
ಮಾಡಲು ಭಕ್ತಿಯೇ ಸಾಧನವು. ಈ ಭಕ್ತಿಯಾದರೂ ೩೬ ಅಂಗಸ್ಥಲ

ಮತ್ತು ೩೬ ಲಿಂಗಸ್ಥಲಗಳಿಗನುಸಾರವಾಗಿ ೩೬ ವಿಧವಾಗಿರುತ್ತದೆ. ಇವು ಶ್ರದ್ಧಾಭಕ್ತಿಯೊಳಗಣ ಶ್ರದ್ಧಾಭಕ್ತಿ. ಶ್ರದ್ಧಾ ಭಕ್ತಿಯೊಳಗಣ ನಿಷ್ಠಾಭಕ್ತಿ, ಶ್ರದ್ಧಾ ಭಕ್ತಿಯೊಳಗಣ ಅವಧಾನಭಕ್ತಿ ಇತ್ಯಾದಿ ಇರುತ್ತವೆ. ಉದಾಹರಣಾರ್ಥವಾಗಿ ಆಚಾರಲಿಂಗದೊಳಗಣ ಗುರುಲಿಂಗದ ಅರ್ಚನೆಯು ಶ್ರದ್ಧಾ ಭಕ್ತಿಯೊಳಗಣ ನಿಷ್ಠಾಭಕ್ತಿಯನ್ನೊಡಗೊಂಡಲ್ಲಿ ಭಕ್ತನೊಳಗಣ ಮಹೇಶ್ವರನಾಗುವನು. ಈ ಪ್ರಕಾರ ೩೬ ಲಿಂಗಸ್ಥಲದೊಳಗಣ ಅರ್ಚನೆ ಇರುತ್ತದೆ. ಈ ಪ್ರಕಾರ ೩೬ ವಿಧ ಲಿಂಗದ ಪ್ರಕಾಶವು ೩೬ ವಿಧ ಭಕ್ತಿಗಳೊಡನೆ ಕೂಡಿಕೊಳ್ಳಲು, ಆಗ ಅದು ೩೬ ವಿಧವುಳ್ಳ ಅಂಗವನ್ನು ವೇಧಿಸುತ್ತ, ತನುತ್ರಯ, ಷಡಿಂದ್ರಿಯಗಳು ಮತ್ತು ೩೬ ತತ್ವಗಳು ಇವುಗಳನ್ನು ವ್ಯಾಪಿಸುವದು. ಇದರಿಂದ ಮನುಷ್ಯನ ಸೂಕ್ಷ್ಮ ಶರೀರವು ಬಲಗೊಳ್ಳುತ್ತದೆ.

ಇದರ ತರುವಾಯ ಮನುಷ್ಯನ ಕಾರಣ ಶರೀರವು ಬಲಗೊಳ್ಳಬೇಕು. ಅದು ೨೧೬ ಸ್ಥಲಗಳಲ್ಲಿ ಆಗಬೇಕು. ಆದರೆ ಈ ೨೧೬ ಸ್ಥಲಗಳ ಆಚರಣೆಯು ಸ್ವಾನುಭವದಿಂದಲೇ ಉಂಟಾಗಬೇಕು. ಅಂದರೆ ಅದು ಅರಿವಿನಿಂದಲೇ ಆಗಬೇಕು. ಆದ್ದರಿಂದ ಇವುಗಳನ್ನು ಷಟ್‌ಸ್ಥಲ ಶಾಸ್ತ್ರದಲ್ಲಿ ಸವಿಸ್ತಾರವಾಗಿ ವಿವರಿಸುವದಿಲ್ಲ. ಆದರೆ ೩೬ ಸ್ಥಲಗಳು ಕ್ರಿಯೆಯಲ್ಲಿದ್ದುದರಿಂದ ಅವುಗಳನ್ನು ಮಾತ್ರ ಅವರು ವಿವರಿಸುತ್ತಾರೆ.

ಹೀಗೆ ೩೬ ಸ್ಥಲಗಳ ವಿವೇಚನೆಯು ೨ ವಿಧವಾಗಿರುತ್ತದೆ. ಆದರೆ ಈ ವಿಧಗಳ ಅರ್ಥದಲ್ಲಿ ಭಿನ್ನವಿಲ್ಲ. ಅನುಕೂಲತೆಗಾಗಿ ಶಬ್ದಯೋಜನೆಯಲ್ಲಿ ಮಾತ್ರ ಭಿನ್ನತೆಯಾಗಿರುತ್ತದೆ.

(೭೮) ಷಡ್ವಿಧಭಕ್ತ:— ಆಚಾರಾಂಗ, ಗೌರವಾಂಗ, ಶಿವಾಂಗ, ಚರಾಂಗ, ಪ್ರಸಾದಾಂಗ, ಮಹದಂಗವೆಂದು ಇವು ಇವೆ. ಅಂದರೆ ಯಾವ ಅಂಗವು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ, ಮಹಾಲಿಂಗ ಇವುಗಳಿಗೆ ಸಂಬಂಧಪಡುತ್ತದೋ ಅದೆ ಎಂದು ಇಲ್ಲಿ ಆ ರೀತಿ ವರ್ಗೀಕರಣ ಮಾಡಿದ್ದಾರೆ. ಇಲ್ಲಿ ಈ ಲಿಂಗಗಳಿಗೋಸ್ಕರ



ಶ್ರದ್ಧಾ ಭಕ್ತಿಯು ಸಂಬಂಧಪಡುತ್ತಿದೆ. ಇಲ್ಲಿ ಆಯಾ ಆರು ಲಿಂಗಗಳನ್ನು ಭಕ್ತ ಸ್ಥಲದಲ್ಲಿಪಡಿಸುವದು ಇರುತ್ತದೆ.

(೭೯) ಷಡ್ವಿಧ ಮಹೇಶ್ವರ:— ಇವು ಆಚಾರನಿಷ್ಠೆ, ಗುರುನಿಷ್ಠೆ, ಲಿಂಗನಿಷ್ಠೆ, ಚರನಿಷ್ಠೆ, ಪ್ರಸಾದನಿಷ್ಠೆ, ಮತ್ತು ಮಹನ್ನಿಷ್ಠೆ ಎಂದು ಇರುತ್ತವೆ. ಇಲ್ಲಿ ಬೇರೆ ಬೇರೆ ಆರು ಲಿಂಗಗಳಿಗೆ ನಿಷ್ಠಾಭಕ್ತಿಯು ಅನುಕ್ರಮವಾಗಿ ಸಂಬಂಧಪಡುತ್ತಿದೆ. ಆದ್ದರಿಂದ ಆಯಾ ಲಿಂಗಗಳಿಗೋಸ್ಕರ ಇರುವ ನಿಷ್ಠಾಭಕ್ತಿಯ ಮೂಲಕವೇ ಈ ಲಿಂಗಸ್ಥಲಗಳು ಪ್ರಕಟವಾಗುತ್ತವೆ.

(೮೦) ಷಡ್ವಿಧ ಪ್ರಸಾದಿ:— ಈ ಸ್ಥಲದ ಪ್ರಗತಿಯು ೬ ವಿಧವಾಗಿರುತ್ತದೆ. ಅದು ಆವದೆಂದರೆ, ಆಚಾರಾವಧಾನಿ, ಗೌರವಾವಧಾನಿ, ಲಿಂಗಾವಧಾನಿ, ಚರಾವಧಾನಿ, ಪ್ರಸಾದಾವಧಾನಿ, ಮಹದಾವಧಾನಿ ಎಂದಿರುತ್ತದೆ. ಪ್ರಸಾದಿಯ ಮುಖ್ಯ ವೈಶಿಷ್ಟ್ಯವು ಅವಧಾನ ಭಕ್ತಿಯು. ಆದ್ದರಿಂದ ಈ ಕ್ರಿಯೆಯ ಮೂಲಕವೇ ಪ್ರಸಾದಿಸ್ಥಲದ ತರಗತಿಗಳನ್ನು ಭಕ್ತನು ಹೊಂದತಕ್ಕದ್ದು.

(೮೧) ಷಡ್ವಿಧಪ್ರಾಣಲಿಂಗಿ:— ಸಾಧ್ಯ, ವೇದ್ಯ, ಭೇದ್ಯ, ಯೋಗ್ಯ, ಸನ್ನಿಹಿತ ಮತ್ತು ಮಹಾನುಭಾವಿ ಎಂದು ಇವು ಇರುತ್ತವೆ. ಪ್ರಾಣಲಿಂಗಿಯ ಮುಖ್ಯ ಲಕ್ಷಣವು ಅನುಭಾವ ಭಕ್ತಿಯು. ಅನುಭಾವ ಭಕ್ತಿಯ ಮೂಲಕ ಪ್ರಾಣಲಿಂಗಿಯು ಸೂಕ್ಷ್ಮ ಶರೀರದ ಮೇಲೆ ಪೂರ್ಣ ಪ್ರಭುತ್ವವುಳ್ಳವನಾಗುತ್ತಾನೆ. ಇವನು ಸೃಷ್ಟಿಯಲ್ಲಿ ವ್ಯವಹರಿಸುವ ಶಕ್ತಿಗಳನ್ನೊಳಕೊಂಡಿರುತ್ತಾನೆ. ಆದ್ದರಿಂದ ಅವನಿಂದ ಸಿದ್ಧಿಗಳು ಸಹ ಜರಗುವವು. ಪೂರ್ಣ ಸ್ಥಿತಿಯುಳ್ಳ ಪ್ರಾಣಲಿಂಗಿಯು ಮಹಾನುಭಾವಿ ಎಂದು ಇಲ್ಲಿ ಹೇಳಲ್ಪಟ್ಟಿದೆ. ಇವರ ಆರಂಭದ ತರಗತಿಗಳು ಮೇಲೆ ಹೇಳಿದಂತೆ ಸಾಧ್ಯ, ವೇದ್ಯ, ಭೇದ್ಯ, ಯೋಗ್ಯ, ಸನ್ನಿಹಿತ, ಎಂದು ಇರುತ್ತವೆ. ಸೃಷ್ಟಿಯ ನಿಯಮಗಳನ್ನು ಸಾಧಿಸಿಕೊಂಡವನು ಸಾಧ್ಯನು. ಅವುಗಳನ್ನು ಕಂಡುಕೊಂಡವನು ವೇದ್ಯನು. ಅವುಗಳ ಬೇರೆ ಬೇರೆ ರೀತಿಗಳನ್ನು ಅರಿತವನು.

ಭೇದ್ಯನು. ಅವುಗಳನು ಅರಿತು ಆಚರಿಸುವವನು ಯೋಗ್ಯನು. ಅದ
ರಿಸಿ ಅವುಗಳೊಡನೆ ಇರುವವನು ಸನ್ನಿಹಿತನು. ಮತ್ತು ಅವುಗಳೊಡನೆ
ತನ್ಮಯನಾಗಿ ವ್ಯವಹರಿಸುವವನು ಮಹಾನುಭಾವಿಯು.

(೮೨) ಷಡ್ವಿಧಶರಣ:— ಇದರ ತರಗತಿಗಳು ಆಯತ, ಸ್ವಾಯತ, ಸನ್ನಿಹಿತ, ಕಳಾಗ್ರಾಹಕ, ಮನೋಮಗ್ನತೆ, ಘನಸಾಮರಸ್ಯ ಎಂದಿರು ತ್ತವೆ. ಶರಣನಲ್ಲಿ ಲಿಂಗವಿಕಾಸತೆಯುಂಟಾಗುತ್ತದೆ. ಈ ವಿಕಾಸತೆಯ ತರಗತಿಗಳು ಇವು ಇರುತ್ತದೆ. ಆಯತ, ಸ್ವಾಯತ, ಸನ್ನಿಹಿತ, ಇವ ಶರಣಸ್ಥಲದಲ್ಲಿರುವವನ ಲಿಂಗಸಾನಿಧ್ಯವನ್ನು ಸೂಚಿಸುತ್ತವೆ. ಲಿಂಗಾ ಯತ, ಲಿಂಗಸ್ವಾಯತ, ಲಿಂಗ ಸನ್ನಿಹಿತ, ಎಂಬ ಶಬ್ದಗಳು ಷಟ್ ಸ್ಥಲ ಶಾಸ್ತ್ರದಲ್ಲಿವೆ. ಲಿಂಗಾಯತ ಎಂದರೆ ಲಿಂಗದ ಮರ್ಮವನ್ನು ಸ್ಥೂಲಕ್ರಿಯೆಗಳಲ್ಲಿ ಅರಿತವನು ಎಂಬರ್ಥವು ಇಲ್ಲಿ ಇರುತ್ತದೆ. ಆದರೆ ಲಿಂಗದ ಮರ್ಮವನ್ನು ಹೆಚ್ಚಿಗೆ ತಿಳಿದು ಆಚರಿಸುವವನು ಲಿಂಗಸ್ವಾ ಯತ, ಇದಕ್ಕೂ ಹೆಚ್ಚಿಗೆ ತಿಳಿದವನು ಲಿಂಗ ಸನ್ನಿಹಿತನು, ಎಂದು ಇವರು ಹೇಳಲ್ಪಡುತ್ತಾರೆ. ಇವುಗಳ ಮುಂದಿನ ತರಗತಿಗಳು ಕಳಾಗ್ರಾಹಕ, ಮನೋಮಗ್ನತೆ, ಘನಸಾಮರಸ್ಯ ಎಂದಿವೆ. ಇವಾದರೂ ಲಿಂಗದ ಮುಂದಿನ ವಿಕಾಸಾವಸ್ಥೆಯನ್ನು ಸೂಚಿಸುತ್ತವೆ. ಶರಣನು ತನ್ನ ಕಟ್ಟ ಕಡೆಯ ಪೂರ್ಣಸ್ಥಿತಿಯಲ್ಲಿ ಘನಸಾಮರಸ್ಯನೆಂದು ಹೇಳಲ್ಪಡುತ್ತಾನೆ. ಈ ಪ್ರಕಾರ ಶರಣನ ತರಗತಿಗಳಿರುತ್ತವೆ.

(೮೩) ಷಡ್ವಿಧ ಐಕ್ಯ:— ಇವು ಆಚಾರ ತೃಪ್ತಿ, ಗೌರವ ತೃಪ್ತಿ, ಲಿಂಗತೃಪ್ತಿ, ಚರತೃಪ್ತಿ, ಪ್ರಸಾದತೃಪ್ತಿ, ನಿಭಾ೯ವತೃಪ್ತಿ ಎಂದು ಆರು ಇರುತ್ತವೆ. ತೃಪ್ತಿ ಎಂದರೆ ಆಯಾ ಸ್ಥಲಗಳಲ್ಲಿ ಉಂಟಾದ ಅನುಭವ ಗಳು ಕಾರಣ ಶರೀರದಲ್ಲಿ ಒಟ್ಟುಗೂಡಿದ ಒಂದು ಸ್ಥಿತಿಯು. ಇದು ಅನುಭ ವವು. ಈ ಅನುಭವವು ಆಗಲು ಮನುಷ್ಯನಲ್ಲಿ ಒಂದು ವಿಧದ ಆನಂದ ಅಥವಾ ಪ್ರಕಾಶವು ಉಂಟಾಗುತ್ತದೆ. ಇದು ಮನುಷ್ಯನಲ್ಲಿ ಆದ ವಿಕಾಸ ತೆಯು ಇರುತ್ತದೆ. ಕಡೆಯ ಈ ವಿಕಾಸವು ಮನುಷ್ಯನಲ್ಲಿ ಚಿರಸ್ಥಾಯಿ



ಯಾಗಿ ಉಳಿಯುತ್ತದೆ. ಆಗ ಅದು ಅವನ ರೀತಿ, ನಡತೆ, ಶೀಲ, ಅರಿವು, ಆಚರಣೆ, ತಿಳಿವಳಿಕೆ, ಮನಸ್ಸು ಇವುಗಳ ಮೇಲೆಲ್ಲ ಒಂದು ಬೆಳಕನ್ನು ಬೀರುತ್ತದೆ. ಇದು ಸ್ವಾನುಭವವು. ಈ ಅನುಭವದಿಂದ ಮನು ಷ್ಯನ ಕಾರ್ಯಗಳು ಜಗತ್ತಿನಲ್ಲಿ ಸರಾಗವಾಗಿ, ಯಾವ ತಡೆಗಳಿಲ್ಲದೆ, ಸ್ವಾಭಾವಿಕವಾಗಿ, ಶಾಂತವಾಗಿ, ಹರಿಯುತ್ತ ಹೋಗುತ್ತವೆ. ಇದು ಕಾರಣ ಶರೀರದ ಪೂರ್ಣಾವಸ್ಥೆ ಎಂದು ಹೇಳಬಹುದು. ಇದಕ್ಕೆ ಷಟ್ ಸ್ಥಲ ಶಾಸ್ತ್ರಜ್ಞರು, ಜ್ಞಾನಲಿಂಗ, ತೃಪ್ತಿಲಿಂಗ, ಭಾವಲಿಂಗ ಎಂದು ಕರೆಯು ವದುಂಟು. ಈ ತೃಪ್ತಿಲಿಂಗವು ಆಯಾ ಆರು ಸ್ಥಲಗಳ ಸಂಬಂಧದ ಮೂಲಕ ಸೂಕ್ಷ್ಮ ಶರೀರದಲ್ಲಿ ಪ್ರವಹಿಸಹತ್ತಲು ಅದು ಅನುಕ್ರಮವಾಗಿ ಆಚಾರ ತೃಪ್ತಿ, ಗೌರವ ತೃಪ್ತಿ, ಲಿಂಗತೃಪ್ತಿ, ಚರತೃಪ್ತಿ, ಪ್ರಸಾದತೃಪ್ತಿ ಮತ್ತು ಕಡೆಗೆ ನಿಭಾ೯ವ ತೃಪ್ತಿ ಎಂದು ಹೇಳಲ್ಪಡುತ್ತದೆ. ಈ ಸ್ಥಲ ಗಳು ಸೂಕ್ಷ್ಮ ಶರೀರದಲ್ಲಿ ಐಕ್ಯ ಸ್ಥಲದ ಆರು ತರಗತಿಗಳು ಇರುತ್ತವೆ.

(೮೪) ಮೂವತ್ತಾರು ಅಂಗಸ್ಥಲಗಳು [೨ನೇ ವಿಧ]:— ಇವು ಗಳ ವ್ಯಾಖ್ಯೆಗಳು ಹಿಂದೆ ನಂ॥ ೭೮ ರಿಂದ ೮೩ ರ ವರೆಗೆ ಹೇಳಲ್ಪಟ್ಟಿವೆ. ಆದರೆ ಇವುಗಳನ್ನು ಅನ್ನುವ ಸೌಕರ್ಯಕ್ಕೋಸ್ಕರ ಭಕ್ತನೊಳಗಣ ಭಕ್ತ, ಭಕ್ತನೊಳಗಣ ಮಹೇಶ್ವರ, ಎಂದು ಆರಂಭವಾಗಿ ಭಕ್ತನೊಳಗಣ ಐಕ್ಯ ಈ ವರೆಗೆ ೬ ಪ್ರಕಾರವಾಗಿ ಹೇಳುವದುಂಟು. ಇವುಗಳ ಮುಂದೆ ಮಹೇ ಶನೊಳಗಣ ಮಹೇಶ, ಆ ಮೇಲೆ ಮಹೇಶನೊಳಗಣ ಭಕ್ತ, ಎಂದು ಮೊದಲಾಗಿ, ಮಹೇಶನೊಳಗಣ ಷಡ್ವಿಧಗಳಿವೆ. ಆ ಮೇಲೆ ಪ್ರಸಾದಿ ಯೊಳಗಣ ಪ್ರಸಾದಿ, ಆ ಮೇಲೆ ಪ್ರಸಾದಿಯೊಳಗಣ ಭಕ್ತ, ಈ ಪ್ರಕಾರ ಪ್ರಸಾದಿ ಸ್ಥಲದೊಳಗಣ ಷಡ್ವಿಧಗಳು, ಹೀಗೆಯೇ ಮುಂದಿನ ಸ್ಥಲಗಳೊ ಳಗಿನ ಷಡ್ವಿಧಗಳನ್ನು ಹೇಳುತ್ತ ಕಡೆಗೆ ಆರನೆಯದಾದ ಐಕ್ಯನೊಳಗಣ ಐಕ್ಯ. ಆ ಮೇಲೆ ಐಕ್ಯನೊಳಗಣ ಭಕ್ತ, ಹೀಗೆ ಇವರ ಷಡ್ವಿಧಗಳನ್ನು ಹೇಳುವರು. ಆ ಮೇಲೆ ಕಡೆಗೆ ಐಕ್ಯನೊಳಗಣ ಶರಣ ಈ ಸ್ಥಿತಿಗೆ ಬರುತ್ತಾನೆ. ಇದು ಸೂಕ್ಷ್ಮ ಶರೀರದ ಪೂರ್ಣತೆಯು. ಈ ಸ್ಥಿತಿಯ

ಮುಂದೆ ಈತನು ಕಾರಣ ಶರೀರದಲ್ಲಿ ಸೋಂಗತ್ತಾನೆ. ಈ ಕಾರಣ ಶರೀರದಲ್ಲಿ ಅವನಿಗೆ ೨೫ ಅನುಭವಗಳು ಉಂಟಾಗುತ್ತವೆ. ಈ ಪ್ರಕಾರ ೩೬ ಅಂಗಸ್ಥಳಗಳ ೨ನೇ ವಿಧಗಳಿರುತ್ತವೆ.

ಹಿಂದೆ ನಾವು ವಿವರಿಸಿದ ಮೂವತ್ತಾರು ಅಂಗಸ್ಥಲಗಳು (೧ನೇ ವಿಧ) — ನಂತರ ೭೭, ಇದರಲ್ಲಿಯ ಅನೇಕ ವಿಶಿಷ್ಟ ಶಬ್ದಗಳನ್ನು ಸ್ಮರಣೆಯಲ್ಲಿಟ್ಟುಕೊಳ್ಳುವದು ದುಸ್ತರವು. ಆದ್ದರಿಂದ ಈ ೨ನೇ ವಿಧದೊಳಗಿನ ಶಬ್ದಗಳನ್ನು ಉಪಯೋಗಿಸುವ ವಾಡಿಕೆಯುಂಟು. ಆದರೆ ಈ ಎರಡೂ ವಿಧಗಳ ಅರ್ಥದಲ್ಲಿ ಭಿನ್ನತೆಯು ಇರುವದಿಲ್ಲ.

(೮೫) ಅಂಗಸ್ಥಲಗಳು ೩೬, ಲಿಂಗಸ್ಥಲಗಳು ೩೬, ಇವುಗಳ ಸಮ್ಮೇಳನ:— ಭಕ್ತ, ಮಹೇಶ್ವರ, ಪ್ರಸಾದಿ ಮೊದಲಾದ ೬ ಸ್ಥಲಗಳಿಗನುಸಾರವಾಗಿ ಷಟ್‌ಚಕ್ರಗಳಿರುತ್ತವಷ್ಟೇ. ಹಾಗೆಯೇ ಆ ಪ್ರತಿಯೊಂದು ಚಕ್ರದಲ್ಲಿ ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ ಮೊದಲಾದ ಲಿಂಗಗಳಿರುತ್ತವೆ. ಅವು ಪರಸ್ಪರ ಮಿಶ್ರ ಆಗಿ ೩೬ ಆಗುವವು. ಆಗ ಈ ಮೂವತ್ತಾರು ಸ್ಥಲಗಳಲ್ಲಿ ಶ್ರದ್ಧಾದಿ ಭಕ್ತಿಗಳೂ, ಆಚಾರಾದಿ ಲಿಂಗಗಳೂ ಕೂಡ ಮಿಶ್ರ ಆಗಿ ೩೬, ಆಗುತ್ತವೆ. ಉದಾ— ಭಕ್ತಿಯು, ಶ್ರದ್ಧಾಭಕ್ತಿಯೊಳಗಣ ನಿಷ್ಠೆ, ಶ್ರದ್ಧಾ ಭಕ್ತಿಯೊಳಗಣ ಅವಧಾನ ಹೀಗೆ ಒಂದೊಂದು ಭಕ್ತಿಯಲ್ಲಿ ಆರಾರಾಗಿ, ಒಟ್ಟು ೩೬ ಭಕ್ತಿಗಳಾಗುತ್ತವೆ. ಈ ೩೬ ಭಕ್ತಿಗಳು ಮಿಶ್ರಲಿಂಗಗಳೊಡನೆ ಅನುಕ್ರಮವಾಗಿ ಸಂಬಂಧಿಸುತ್ತವೆ. ಈ ಮಿಶ್ರಲಿಂಗಗಳೂ ೩೬ ಇರುತ್ತವೆ. ಇವು ಕೂಡುವ ವಿಧವು ಹೇಗೆಂದರೆ, ಶ್ರದ್ಧಾ ಭಕ್ತಿಯೊಳಗಣ ಶ್ರದ್ಧಾಭಕ್ತಿಯು ಆಚಾರಲಿಂಗದೊಳಗಣ ಆಚಾರಲಿಂಗದೊಳಗೆ ಕೂಡುತ್ತದೆ. ಹೀಗೆ ಕೂಡುತ್ತ ಕಡೆಗೆ ಶ್ರದ್ಧಾ ಭಕ್ತಿಯೊಳಗಣ ಸಾಮರಸ್ಯ ಭಕ್ತಿಯು ಆಚಾರಲಿಂಗದೊಳಗಣ ಮಹಾಲಿಂಗದೊಳಗೆ ಕೂಡುತ್ತದೆ. ಈ ಪ್ರಕಾರ ೩೬ ಅಂಗಗಳು ೩೬ ಭಕ್ತಿಗಳ ಮೂಲಕ ೩೬ ಲಿಂಗಗಳಲ್ಲಿ ಬೆರೆಯುತ್ತವೆ. ಈ ೩೬ ಲಿಂಗಗಳ ಪ್ರಕಾಶವು ೩೬ ಭಕ್ತಿಗಳ ಪ್ರಕಾಶದಲ್ಲಿ ಬೆರೆಯಲು ಈ ಪ್ರಕಾಶವು



ಸರ್ವಾಂಗವನ್ನು ವೇಧಿಸುತ್ತದೆ. ಹೀಗೆ ವೇಧಿಸಲು ಅದು ತನುತ್ರಯಗಳನ್ನೂ ಆರು ಇಂದ್ರಿಯಗಳನ್ನೂ ೩೬ ತತ್ವಗಳನ್ನೂ ವ್ಯಾಪಿಸುತ್ತದೆ. ಹೀಗೆ ವ್ಯಾಪಿಸಲು ಆ ಅಂಗಗಳೆಲ್ಲ ಐಕ್ಯಸ್ಥಿತಿಯನ್ನು ಹೊಂದುತ್ತವೆ. ಅಂದರೆ ಅಂಗಗಳೆಲ್ಲ ಪರಿಪೂರ್ಣತೆಯನ್ನು ಹೊಂದುತ್ತವೆ

(೮೬) ಷಡ್ಲಿಂಗ ಸಾಧನೆ (೧ನೇ ವಿಧ):— ಲಿಂಗ ಸಾಧನೆಯಲ್ಲಿ ೬ ತರಗತಿಗಳಿವೆ. ಈ ತರಗತಿಗಳು ಷಟ್‌ಸ್ಥಲಕ್ಕೆ ಅನುಸಾರವಾಗಿ ಇವೆ. ಅವು ಮೋಹೀ, ಭಕ್ತ, ವೀರ, ಪ್ರಾಣೀ, ಪ್ರಸಾದೀ, ತೃಪ್ತಿ ಎಂದಿರುತ್ತವೆ. ಲಿಂಗದಲ್ಲಿ ಮೊದಲು ಮೋಹಿಸತಕ್ಕದ್ದು. ಇದು ಮೋಹೀ ಸ್ಥಿತಿಯು. ಆ ಮೇಲೆ ಅದರಲ್ಲಿ ವಿಶ್ವಾಸಪೂರ್ಣನಾಗತಕ್ಕದ್ದು. ಆಗ ಭಕ್ತನೆನಿಸಿಕೊಳ್ಳುವನು. ಈ ವಿಶ್ವಾಸದಿಂದ ದೃಢಭಾವವು ಅವನಲ್ಲಿ ನೆಲೆಗೊಳ್ಳುವದು. ಆಗ ಅವನು ವೀರನೆನಿಸಿಕೊಳ್ಳುವನು. ಈ ದೃಢ ಭಾವದಿಂದ ಲಿಂಗದ ಶಕ್ತಿಯೇ ಅವನ ಪ್ರಾಣವಾಗುವದು. ಆಗ ಅವನು ಪ್ರಾಣೀ ಎಂದೆನಿಸಿಕೊಳ್ಳುವನು. ಆಮೇಲೆ ಅವನು ಲಿಂಗದ ಪ್ರಸಾದದಲ್ಲಿಯೇ ತಲ್ಲೀನನಾಗುವನು. ಆಗ ಅವನು ಪ್ರಸಾದಿ ಎನಿಸಿಕೊಳ್ಳುವನು. ಹೀಗೆ ತಲ್ಲೀನನಾಗಿ ಅದರಲ್ಲಿಯೇ ಆನಂದಬಡುವನು. ಆಗ ಅವನು ತೃಪ್ತಿಸ್ಥಿತಿಗೆ ಬರುವನು. ಇದು ಕಡೆಯದು. ಹೀಗೆ ಆಚಾರಲಿಂಗದಲ್ಲಿ ಆಚಾರಲಿಂಗ ಮೋಹೀ, ಆಚಾರಲಿಂಗ ಭಕ್ತ ಎಂದು ಮೊದಲಾಗಿ ಕಡೆಗೆ ಆಚಾರಲಿಂಗತೃಪ್ತಿ ಹೀಗೆ ೬ ವಿಭೇದಗಳಾಗುವವು. ಮುಂದೆ ಹಾಗೆಯೇ ಗುರುಲಿಂಗ ಮೋಹೀ, ಗುರುಲಿಂಗ ಭಕ್ತ, ಗುರುಲಿಂಗವೀರ ಮೊದಲಾಗಿ ಗುರುಲಿಂಗದ ಆರು ವಿಭೇದಗಳು, ಕಡೆಗೆ ಮಹಾಲಿಂಗ ಮೋಹೀ, ಮಹಾಲಿಂಗ ಭಕ್ತ ಮೊದಲಾಗಿ ಆರು ಮಹಾಲಿಂಗದ ವಿಭೇದಗಳು, ಹೀಗೆ ಒಟ್ಟು ೩೬ ವಿಧಗಳಾಗುತ್ತವೆ.' ಕಡೆಗೆ ಮಹಾಲಿಂಗ ತೃಪ್ತಿಯು ಉಂಟಾಗುತ್ತದೆ.

(೮೭) ಷಡ್ಲಿಂಗ ಸಾಧನೆ (೨ನೇ ವಿಧ):— ಕೆಲವು ವಚನಕಾರರು ಮೇಲಿನ ತರಗತಿಗಳನ್ನೇ ಶಬ್ದಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿ

ಹೇಳುವದುಂಟು. ಅವು ಮೋಹೀ, ಭಕ್ತ, ಪೂಜಕ, ವೀರ, ಪ್ರಸಾದಿ, ಪ್ರಾಣೀ ಎಂದಿರುತ್ತವೆ. ಅಂದರೆ ಮೊದಲು ಮೋಹಿಸತಕ್ಕದ್ದು. ಹೀಗೆ ಮೋಹಿಸಿದ ಬಳಿಕ ಅವನು ಆ ಲಿಂಗದಲ್ಲಿ ಭಕ್ತಿಭಾವಪೂರಿತನಾಗುವನು. ಆಗ ಅವನು ಭಕ್ತನಾಗುವನು. ಆಮೇಲೆ ಅವನಲ್ಲಿ ಲಿಂಗದ ಆಚರಣೆಯು ತಲೆದೋರುವದು. ಇದು ಪೂಜಕ ಸ್ಥಿತಿಯು. ಆಮೇಲೆ ವಿಶ್ವಾಸವು ಬಲಿತಲ್ಲಿ ಎಂಥ ಎಡರುಗಳು ಬಂದರೂ ಅವುಗಳನ್ನು ಎದುರಿಸಲು ಸಿದ್ಧನಾಗುವನು. ಇದು ವೀರ ಸ್ಥಿತಿಯು. ಆಗ ಅವನು ಲಿಂಗದ ಅನುಭವವನ್ನು ಹೊಂದಿ ಅದರ ಸುಪರಿಣಾಮದಲ್ಲಿ ಆನಂದಿಸಹತ್ತುವನು. ಇದು ಪ್ರಸಾದಿಯ ಸ್ಥಿತಿಯು. ಆಮೇಲೆ ಅವನು ಆ ಲಿಂಗವೇ ಪ್ರಾಣವಾಗಿ ವ್ಯವಹರಿಸುತ್ತಾನೆ. ಆಗ ಅವನು ಲಿಂಗ ಪ್ರಾಣಿ ಎಂದೆನಿಸಿಕೊಳ್ಳುವನು. ಇದು ಕಡೆಯ ಸ್ಥಿತಿಯು. ಕೆಲವು ವಚನಕಾರರು ಹೀಗೆ ಷಡ್ಲಿಂಗ ಸಾಧನೆಯ ವಿವರಗಳನ್ನು ಬೇರೆ ಶಬ್ದಗಳಿಂದ ಹೇಳುತ್ತಾರೆ. ಇವು ಕೂಡ ಮೊದಲಿನಂತೆಯೇ ೩೬ ವಿಧವಾಗಿರುವವು.

(೮೮) ೨೧೬ ಸ್ಥಲಗಳು:— ೩೬ ಸ್ಥಲಗಳ ತರುವಾಯ ಮತ್ತೊಂದು ಸ್ಥಿತಿಯು ತಲೆದೋರುತ್ತದೆ ಈ ೩೬ ಸ್ಥಲಗಳಲ್ಲಿಯ ಪ್ರತಿಯೊಂದು ಸ್ಥಲದಲ್ಲಿ ಪುನಃ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದು ೬ ವಿಭಾಗಗಳಾಗಿ ಒಟ್ಟು ೨೧೬ (೩೬×೬) ಸ್ಥಲಗಳಾಗುತ್ತವೆ. ಮನುಷ್ಯನ ಪ್ರಗತಿಯಲ್ಲಿ ಇವು ಕಡೆಯ ಸ್ಥಲಗಳು. ಇವು ಕಾರಣಶರೀರಕ್ಕೆ ಸಂಬಂಧಪಡುತ್ತವೆ. ಇದು ಕಾರಣಶರೀರದ ಪಕ್ವ ಸ್ಥಿತಿಯು. ಉದಾಃ—ಭಕ್ತಾದಿ ಸ್ಥಲಗಳು ಮೊದಲು ಸ್ಥೂಲಶರೀರಕ್ಕೆ ಸಂಬಂಧಿಸುತ್ತವೆ. ಆಗ ಒಟ್ಟು ಸ್ಥಲಗಳು ಆರಾಗುವವು. ಮುಂದೆ ಭಕ್ತನೊಳಗಣ ಭಕ್ತಸ್ಥಲವು ಉಂಟಾಗುತ್ತದೆ. ಭಕ್ತನೊಳಗಣ ಭಕ್ತಸ್ಥಲವು ಸೂಕ್ಷ್ಮಶರೀರಕ್ಕೆ ಸಂಬಂಧಿಸುತ್ತದೆ. ಇದೇ ರೀತಿ ಉಳಿದ ಸ್ಥಲಗಳೊಡನೆ ಭಕ್ತಸ್ಥಲಗಳು ೩೬ ಆಗುತ್ತವೆ. ಇದರಮುಂದೆ ಭಕ್ತನೊಳಗಣ ಭಕ್ತನೊಳಗಣ ಭಕ್ತಸ್ಥಲವು ಉಂಟಾಗುತ್ತದೆ. ಇದು ಕಾರಣಶರೀರಕ್ಕೆ ಸಂಬಂಧಿಸಿದುದು. ಆಗ ಇದೇರೀತಿ



ಒಟ್ಟು ಸ್ಥಲಗಳು ೨೧೬ ಆಗುತ್ತವೆ. ಹೀಗೆ ಸ್ಥೂಲಶರೀರಕ್ಕೆ ೬ ಸ್ಥಲಗಳು, ಸೂಕ್ಷ್ಮಶರೀರಕ್ಕೆ ೩೬ ಸ್ಥಲಗಳು, ಮತ್ತು ಕಾರಣಶರೀರಕ್ಕೆ ೨೧೬ ಸ್ಥಲಗಳು ಸಂಬಂಧಿಸುತ್ತವೆ.

ಈ ವಿಷಯವನ್ನು ವಿವೇಚಿಸಿದಲ್ಲಿ ತೋರುವದೇನೆಂದರೆ. ಭಕ್ತನೊಳಗಣ ಭಕ್ತಸ್ಥಲವು ಸೂಕ್ಷ್ಮಶರೀರಕ್ಕೆ ಸಂಬಂಧಪಡುತ್ತಿದೆ. ಹೀಗೆ ಅದು ಸಂಬಂಧಪಡಲು ಅದರ ಆರುವಿಧ ಪರಿಣಾಮಗಳು ಕಾರಣ ಶರೀರವನ್ನು ಪ್ರವೇಶಿಸುವಲ್ಲಿ ಅವು ಪುನಃ ಆರುಸ್ಥಲಗಳಿಗೆ ಸಂಬಂಧಪಡುವದರಿಂದ ಈ ಒಂದು ಭಕ್ತಸ್ಥಲಕ್ಕೆ ಕಾರಣ ಶರೀರದಲ್ಲಿ ೩೬ ಸ್ಥಲಗಳಾಗುತ್ತವೆ. ಇದರಿಂದ ಅಲ್ಲಿ ಭಕ್ತನ ಭಕ್ತನ ಭಕ್ತ. ಭಕ್ತನ ಭಕ್ತನ ಮಹೇಶ, ಭಕ್ತನ ಭಕ್ತನ ಪ್ರಸಾದಿ, ಭಕ್ತನ ಭಕ್ತನ ಪ್ರಾಣಲಿಂಗಿ, ಭಕ್ತನ ಭಕ್ತನ ಶರಣ, ಭಕ್ತನ ಭಕ್ತನ ಐಕ್ಯ ಎಂದು ಆಗುವವು. ಆಮೇಲೆ ಭಕ್ತನ ಮಹೇಶನ ಭಕ್ತ, ಭಕ್ತನ ಮಹೇಶನ ಮಹೇಶ, ಹೀಗೆ ೬ ವಿಧಗಳಾಗುವವು. ಹೀಗೆ ಎಲ್ಲ ಸ್ಥಲಗಳಲ್ಲಿ ಕೂಡಿ, ಭಕ್ತಸ್ಥಲದಲ್ಲಿ ಒಟ್ಟು ೩೬ ವಿಧಗಳಾಗುವವು. ಹೀಗೆ ಆದದ್ದೇ ಭಕ್ತಸ್ಥಲದ ಪೂರ್ಣತೆಯ ಸ್ಥಿತಿಯು. ಆಗ ಅದು ಕಾರಣಶರೀರವನ್ನು ಪ್ರವೇಶಿಸುವದು. ಅದರಂತೆಯೇ ಮಹೇಶ್ವರ ಸ್ಥಲದಲ್ಲಿ ೩೬, ಪ್ರಾಣಲಿಂಗಿ ಸ್ಥಲದಲ್ಲಿ ೩೬, ಶರಣಸ್ಥಲದಲ್ಲಿ ೩೬, ಐಕ್ಯಸ್ಥಲದಲ್ಲಿ ೩೬ ಆಗುತ್ತವೆ. ಇವೆಲ್ಲವು ಕೂಡಿ ೨೧೬ ಆಗುತ್ತವೆ. ಆಗ ಎಲ್ಲ ಸ್ಥಲಗಳ ಪೂರ್ಣತೆಯು ಉಂಟಾಗುತ್ತದೆ. ಇದರಿಂದ ಮನುಷ್ಯನ ಸರ್ವಾವಯಗಳಲ್ಲಿ, ಶಕ್ತಿಗಳಲ್ಲಿ, ಇಂದ್ರಿಯಗಳಲ್ಲಿ, ಎಲ್ಲ ಸ್ಥಲಗಳ ವಿಕಾಸವು ಉಂಟಾಗುತ್ತದೆ. ಇದೇ ಅವನ ಪೂರ್ಣತೆಯು.

ಕ್ರಿಯೆಯು ಮೊದಲು ಸ್ಥೂಲ ಸೂಕ್ಷ್ಮ ಶರೀರಗಳಲ್ಲಿ ಬೇರೆ ಬೇರೆ ಸ್ವರೂಪದ್ದಾಗಿ ಗೋಚರವಾಗುತ್ತದೆ. ಆದರೆ ಕಡೆಗೆ ಈ ಕ್ರಿಯೆಯ ಪರಿಣಾಮಗಳು ಕಾರಣ ಶರೀರದಲ್ಲಿ ಒಡಮೂಡುತ್ತವೆ. ಆಗ ಕಾರಣ ಶರೀರವು ಈ ಅನುಭವಗಳನ್ನು ಕಾದಿಡುತ್ತದೆ. ಅದು ಅನುಭವಗಳನ್ನು ಸಂಗ್ರಹಿಸುವ ಒಂದು ಕೊಟ್ಟಡಿ ಎಂದು ತಿಳಿಯಬೇಕು. ಜಗತ್ತಿನಲ್ಲಿ

ಮನುಷ್ಯನು ಮಾಡುವ ಪ್ರತಿಯೊಂದು ಕಾರ್ಯದ ಪರಿಣಾಮವು ಕ
ಕೊಟ್ಟಡಿಯಲ್ಲಿ ಸಂಗ್ರಹಿಸಲ್ಪಡುತ್ತಿದೆ. ಮತ್ತು ಹೀಗೆ ಸಂಗ್ರಹವಾ
ಅನುಭವವನ್ನು ಮನುಷ್ಯನು ತನಗೆ ಅವಶ್ಯ ಬಿದ್ದಾಗ್ಗೆ ಹೊರಗಡಿಸಿಕೊಂಡು
ಅವನ್ನು ಉಪಯೋಗಿಸುತ್ತಾನೆ. ಆದ್ದರಿಂದ ಈ ಸಂಗ್ರಹವು ಯಾವಾಗಲೂ
ಒಳ್ಳೇ ವಿಷಯಗಳಿಂದ ತುಂಬಿರಬೇಕು. ಇಂಥ ಸಂಗ್ರಹ ಮಾಡುವ ರೀತಿ
ಯನ್ನು ಷಟ್‌ಸ್ಥಲ ಶಾಸ್ತ್ರವು ಹೇಳುತ್ತಿದೆ. ಈ ರೀತಿಯಂತೆ ನಡೆದರೆ
ಸ್ಥೂಲ ಸೂಕ್ಷ್ಮ ಕಾರಣ ಶರೀರಗಳ ವ್ಯಾಪಾರಗಳು ಸರಾಗವಾಗಿ ನಡೆ
ಯುತ್ತವೆ.

ಹೀಗೆ ಸರಾಗವಾಗಿ ನಡಿದರೆ ಆರು ಸ್ಥಲಗಳ ಮೂಲಕ ಅನು
ಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳು ಮನುಷ್ಯನಲ್ಲಿ
ಪ್ರಕಟವಾಗುತ್ತವೆ.

ಭಾವಲಿಂಗಕ್ಕೆ ಜ್ಞಾನಲಿಂಗ, ಸುಜ್ಞಾನಲಿಂಗ, ತೃಪ್ತಿಲಿಂಗ ಎಂಬ
ಬೇರೆ ಹೆಸರುಗಳೂ ಉಂಟು.

ಕಾರಣ ಶರೀರದಲ್ಲಿ ಕ್ರಿಯಾದಿಗಳಿಲ್ಲ. ಈ ಕ್ರಿಯೆಗಳು ಸ್ಥೂಲ,
ಸೂಕ್ಷ್ಮ ಶರೀರಗಳಲ್ಲಿ ಮಾತ್ರ ಗೋಚರವಾಗುತ್ತವೆ. ಆದರೆ ಇವುಗಳ
ಪರಿಣಾಮಗಳು ಕಾರಣ ಶರೀರದಲ್ಲಿ ಮಾತ್ರ ಕಾದಿಡಲ್ಪಡುತ್ತವೆ. ಈ
ಪರಿಣಾಮಗಳಿಗೆ ತೃಪ್ತಿಗಳೆಂತಲೂ ವಚನಕಾರರು ಹೇಳುತ್ತಾರೆ. ಈ
ತೃಪ್ತಿರೂಪಾದ ೨೧೬ ಸ್ಥಲಗಳ ವ್ಯಾಖ್ಯೆಗಳನ್ನು ಹೇಳಲಿಕ್ಕೆ ಬರಲಾರದು.
ಆದ್ದರಿಂದ ವಚನಕಾರರು ಅವುಗಳ ನಿರ್ದೇಶವನ್ನು ಮಾತ್ರ ತಮ್ಮ
ವಚನಗಳಲ್ಲಿ ಮಾಡುತ್ತಾರೆ. ಯಾಕೆಂದರೆ ಈ ೨೧೬ ಸ್ಥಲಗಳು ಅನು
ಭವದಿಂದ ಮಾತ್ರ ತಿಳಿಯತಕ್ಕವುಗಳು.

ಮನುಷ್ಯನು ಜಗತ್ತಿನಲ್ಲಿ ಪ್ರತಿಕ್ಷಣ ನಾನಾವಿಧ ಅಸಂಖ್ಯ ಪದಾ
ರ್ಥಗಳಿಗೆ ಸಂಬಂಧಪಡುತ್ತಾನೆ. ಆದರಂತೆ ಅವುಗಳ ಅವನ ಅನುಭವಗಳು
ಅಸಂಖ್ಯಾತವಾಗಿರುತ್ತವೆ. ಅವೆಲ್ಲವೂ ಕಾರಣಶರೀರದಲ್ಲಿ ಒಡಮೂಡು



ತ್ತವೆ. ಆದರೆ ಈ ಕ್ರಿಯೆಗಳೆಲ್ಲವು ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಸ್ಥೂಲಶರೀರ
ದಲ್ಲಿ ೬ ವರ್ಗಗಳಲ್ಲಿ ಮಾತ್ರ ಬೀಳುತ್ತವೆ. ಮುಂದೆ ಇವುಗಳು ಸೂಕ್ಷ್ಮ
ಶರೀರದಲ್ಲಿ ೩೬ ವರ್ಗಗಳಲ್ಲಿ ಬೀಳುತ್ತವೆ. ಮತ್ತು ಕಾರಣ ಶರೀರದಲ್ಲಿ
೨೧೬ ವರ್ಗಗಳಲ್ಲಿ ಬೀಳುತ್ತವೆ.

ಹೀಗೆ ಮನುಷ್ಯಪ್ರಾಣಿಯ ಕ್ರಿಯೆಗಳು ಮುಖ್ಯವಾಗಿ ಆರು ವಿಧ
ವಾಗಿದ್ದರೂ ವ್ಯಕ್ತಿಯು ಸ್ವಭಾವತಃ ಒಂದೇ ಸ್ಥಲದ ಗುಣಗಳನ್ನು ವಿಶೇ
ಷವಾಗಿ ಹೊಂದಿರುವದು ಕಂಡುಬರುತ್ತದೆ. ಉದಾ:— ಒಬ್ಬನು ಭಕ್ತ
ಸ್ಥಲದವನಿರಬಹುದು, ಇನ್ನೊಬ್ಬನು ಮಹೇಶ್ವರ ಸ್ಥಲದವನಿರಬಹುದು
ಮಗದೊಬ್ಬನು ಪ್ರಾಣಲಿಂಗಿ ಸ್ಥಲದವನಿರಬಹುದು. ಹೀಗಿರುವದು ಅವ
ರವರ ಸ್ವಭಾವದ ಹುಟ್ಟುಗುಣ. ಆದರೂ ಅವರವರ ಸ್ವಭಾವದ ಪೂರ್ಣ
ವಿಕಾಸವು ಉಳಿದ ಸ್ಥಲಗಳ ಪರಿಚಯದ ಮೇಲೆ ಅವಲಂಬಿಸುತ್ತದೆ.
ಆದ್ದರಿಂದ ಭಕ್ತಸ್ಥಲದವನು ಶರಣಸ್ಥಲದ ಅರಿವನ್ನು ಹೊಂದಲೇಬೇಕು.
ಅವನು ಭಕ್ತಸ್ಥಲದಲ್ಲಿಯೇ ಯಾವಾಗಲೂ ಉಳಿಯಬಾರದು. ಹಾಗೆಯೇ
ಶರಣಸ್ಥಲಕ್ಕೆ ಸ್ವಾಭಾವಿಕವಾಗಿ ಒಲವುಳ್ಳವನು ಬೇರೊಬ್ಬನಿರಬಹುದು.
ಆದರೆ ಅವನು ಅದೇ ಒಂದು ಸ್ಥಲದಲ್ಲಿಯೇ ಇರಕೂಡದು. ಅದು
ಪ್ರಗತಿಯಲ್ಲ. ಅವನು ಭಕ್ತಸ್ಥಲದಲ್ಲಿಯೂ ಕೂಡ ಇರಬೇಕು. ಈ ತರದ
ಆಚರಣೆಯಿಂದಲೇ ಮನುಷ್ಯನ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳೆ
ಲ್ಲವು ಪೂರ್ಣತೆಯನ್ನು ಹೊಂದುತ್ತವೆ. ಈ ಪೂರ್ಣತೆಯು ೧, ೨, ೩,
೬, ೩೬, ಈ ಸ್ಥಲಗಳ ಆಚರಣೆಯಿಂದ ಉಂಟಾಗುತ್ತಿದೆ. ಇವುಗಳಲ್ಲಿ
ಮೊದಲಿನ ೩ ತಾತ್ವಿಕವಾದವು. ಉಳಿದ ೨ ಕ್ರಿಯಾಯುಕ್ತವಾದವು. ಆದ್ದರಿಂದ
ವಚನಕಾರರು ೬ ಮತ್ತು ೩೬ ಸ್ಥಲಗಳ ಮೂಲಕ ತಮ್ಮ ಶಾಸ್ತ್ರವನ್ನು
ಬೋಧಿಸುತ್ತಾರೆ. ಇವುಗಳಿಗೆ ಮುಂದಿನದಾದ ೨೧೬ ಸ್ಥಲಗಳ ಜ್ಞಾನ
ವನ್ನು ಮನುಷ್ಯನು ತನ್ನ ಅನುಭವದಿಂದಲೇ ಹೊಂದಬೇಕು. ಆದ್ದ
ರಿಂದ ಅವರು ಅವುಗಳನ್ನು ವಿವರಿಸಲಾರರು. ಯಾಕೆಂದರೆ ೩೬ ಸ್ಥಲ
ಗಳ ಪೂರ್ಣಜ್ಞಾನ ಮತ್ತು ಕ್ರಿಯೆಗಳಿಂದ ೨೧೬ ಸ್ಥಲಗಳ ಅನುಭ
ವವು ಅವನಿಗೆ ಸ್ವಾನುಭವದಿಂದ ಕೂಡಲೇ ಉಂಟಾಗುತ್ತದೆ.

ಇದು ಮನುಷ್ಯನ ಪರಿಪೂರ್ಣ

(೪೯) ಸರ್ವಾಂಗಲಿಂಗಿಸ್ಥಲಃ— ಮನುಷ್ಯನು ಬೇರೆ ಬೇರೆ ಸ್ಥಲಗಳಲ್ಲಿದು ಸ್ಥಿತಿಯನ್ನು ತೋರಿಸುತ್ತದೆ. ವಿಕಾಸಪಡಿಸತಕ್ಕದ್ದಷ್ಟೇ. ಶಕ್ತಿಯ ವಿಕಾಸ ಕೊಂಡು ತನ್ನ ಶಕ್ತಿಯನ್ನು ಬರಮಾಡಿಕೊಳ್ಳುವದೇ ಇರು ಮಾಡುವದೆಂದರೆ ಲಿಂಗದ ಗುಣಗಳನ್ನು ಪ್ರಾಣ, ಕರಣಗಳು, ತ್ತದೆ. ಈ ವಿಕಾಸವು ಅವನ ಮನ, ಇಂದ್ರಿಯ, ಅರಿವು, ಚೈತನ್ಯ, ಇವುಗಳಲ್ಲೆಲ್ಲ ಉಂಟಾಗಬೇಕು. ಆಗ ಅವನಲ್ಲಿ ಲಿಂಗದ ಗುಣಗಳು ಉಂಟಾಗುತ್ತವೆ. ಇವು ಉಂಟಾದ ಕೂಡಲೆ ಅವನ ಕ್ರಿಯೆಗಳೆಲ್ಲ ಉಚ್ಚ ಸ್ಥಿತಿಯನ್ನು ಹೊಂದುತ್ತವೆ. ಆಗ ಅವನಿಗೆ ತಾನು, ಜಗತ್ತು, ಪರಮಾತ್ಮ, ಇವುಗಳಲ್ಲಿ ಆವ ತಂಡ ಭೇದಗಳು ಗೋಚರವಾ ಗುವದಿಲ್ಲ. ಜಗತ್ತೆಲ್ಲ ಲಿಂಗಮಯುವಾಗಿ ತೋರಹತ್ತುತ್ತದೆ. ಈ ಸ್ಥಿತಿ ಯನ್ನು ಹೊಂದಿದಲ್ಲಿ ಅವನು ಜಗತ್ತಿನಲ್ಲಿ ಇದ್ದೂ ಇಲ್ಲದ ಹಾಗೆ ಇರುತ್ತಾನೆ. ಅವನು ನೀರಿನಲ್ಲಿರುವ ತಾವರೆಯಂತೆ ಅಂದರೆ ನೀರಿನಲ್ಲಿ ಇದ್ದರೂ ಕೂಡ ತಾವರೆಗೆ ಆ ನೀರು ಹೇಗೆ ಅಂಟಿಕೊಳ್ಳುವದಿಲ್ಲವೋ ಹಾಗೆ ಅವನು ಇರುವನು. ಈ ಸ್ಥಿತಿಯು ಅವನಿಗೆ ಪ್ರಾಪ್ತವಾಗಲು ಅವನು ಸರ್ವಾಂಗಲಿಂಗಿಸ್ಥಲವನ್ನು ಹೊಂದಿದವನೆಂದು ವಚನಕಾರರು ಹೇಳುವದುಂಟು.

(೫೦) ಷಟ್‌ಸ್ಥಲಶಾಸ್ತ್ರಃ— ವಚನಕಾರರು ಮನುಷ್ಯನ ಗುಣ ಗಳು, ಇಂದ್ರಿಯಗಳು, ಕ್ರಿಯೆ ಮೊದಲಾದವುಗಳಲ್ಲೆಲ್ಲ ಆರು ವಿಭಾಗಗ ಳನ್ನು ಮಾಡುವದುಂಟು ಈ ಪ್ರಕಾರ ಮಾಡಿ ಅನುಕ್ರಮವಾಗಿ ಅವು ಗಳ ವಿಕಾಸವನ್ನು ಕುರಿತು ವಿವೇಚಿಸುತ್ತಾರೆ. ಹೀಗೆ ಮಾಡಿದ ವಿವೇ ಚನೆಗೆ ಷಟ್‌ಸ್ಥಲ ಶಾಸ್ತ್ರವೆಂಬ ಹೆಸರು. ಈ ಶಾಸ್ತ್ರದಲ್ಲಿ ಆರು ವಿಭಾ ಗಗಳಿವೆ. ಒಂದೊಂದು ವಿಭಾಗಕ್ಕೆ ಸ್ಥಲವೆಂಬ ಹೆಸರು. ಈ ಆರು ಸ್ಥಲಗಳಿಗೆಲ್ಲ ಆರು ವಿಶಿಷ್ಟ ಹೆಸರುಗಳಿವೆ. ಅವು ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದು ಇರುತ್ತವೆ. ಇವೇ ಷಟ್‌ಸ್ಥಲಗಳೆಂದೆನಿಸಿಕೊಳ್ಳುತ್ತವೆ.



(೫೧) ನಿರಾಮಯ ಷಟ್‌ಸ್ಥಲ:- ಮನುಷ್ಯನು ಆರಂಭದಲ್ಲಿ ಮೇಲೆ ನಂ. ೫೦ ಇವರಲ್ಲಿ ಹೇಳಿದ ಮೇರೆಗೆ ಆರು ಸ್ಥಲಗಳ ಜ್ಞಾನವನ್ನು ಮಾಡಿಕೊಂಡು ಐಕ್ಯಸ್ಥಲವನ್ನು ಹೊಂದಬೇಕು. ಈ ಸ್ಥಲವನ್ನು ಹೊಂದಿದ ಬಳಿಕ ಅವನು ಶೂನ್ಯಸ್ಥಲವನ್ನು ಹೊಂದುವನು. ಈ ಶೂನ್ಯ ಸ್ಥಲ ದಲ್ಲಿ ಕೆಲವು ತರಗತಿಗಳಿವೆ. ಅವು ಮುಖ್ಯವಾಗಿ ಮೂರು ಇವೆ ಅವುಗಳಲ್ಲಿ ಮೊದಲನೆಯದು ನಿರಾಮಯ ಎಂಬುದಿದೆ. ಇಲ್ಲಿ ಷಟ್ ಸ್ಥಲಗಳು ನಿರಾಮಯ ಸ್ವರೂಪವನ್ನು ಹೊಂದುತ್ತವೆ. ಆದ್ದರಿಂದ ಅವು ಗಳು ನಿರಾಮಯ ಷಟ್‌ಸ್ಥಲವೆಂದು ಹೇಳಲ್ಪಡುತ್ತವೆ.

(೫೨) ನಿರಂಜನ ಷಟ್‌ಸ್ಥಲಃ— ನಿರಾಮಯವಾದ ಬಳಿಕ ನಿರಂ ಜನವೆಂಬುದಿದೆ. ಇಲ್ಲಿ ಷಟ್‌ಸ್ಥಲವು ನಿರಂಜನಷಟ್‌ಸ್ಥಲವೆಂದೆನಿಸಿಕೊ ಳ್ಳುತ್ತಿದೆ.

(೫೩) ನಿರಂಜನಾತೀತ ಷಟ್‌ಸ್ಥಲಃ— ಯಾವ ಷಟ್‌ಸ್ಥಲವು ಮೇಲೆ ಹೇಳಿದ ನಿರಂಜನಕ್ಕತೀತವಾಗಿರುತ್ತದೆಯೋ ಅದೇ ನಿರಂಜನಾತೀತ ಷಟ್‌ಸ್ಥಲವೆಂದು ಹೇಳಲ್ಪಡುತ್ತಿದೆ.

ಇದರ ತರುವಾಯ ಬಯಲು ಅಥವಾ ನಿರವಯ ಎಂಬ ಸ್ಥಿತಿಯು ಪ್ರಾಪ್ತವಾಗುತ್ತದೆ. ನೀರು ನೀರು ಬೆರೆದಂತೆ ಮನುಷ್ಯನು ಪರಮಾ ತ್ಮನಲ್ಲಿ ಆಗ ಬೆರೆದು ಹೋಗುತ್ತಾನೆ. ಆದೇ ಮನುಷ್ಯನ ಅಂತಿಮ ಸ್ಥಿತಿಯು.

(೫೪) ನಿವೃತ್ತಿ— ಮನುಷ್ಯನಿಗೆ ಸಂಪೂರ್ಣ ವಿಕಾಸಾವಸ್ಥೆಯು ಪ್ರಾಪ್ತವಾದ ಬಳಿಕ ಅವನ ಗುಣಗಳು, ಶಕ್ತಿಗಳು, ಚೈತನ್ಯಗಳು ಇವೇ ಮೊದಲಾದವುಗಳು ಯಾವುದರಿಂದ ಪ್ರಕಟವಾಗಿರುತ್ತವೆಯೋ ಅವುಗಳಲ್ಲಿ ಲಯವಾಗುವವು. ಲಯವಾಗುವ ಈ ಕ್ರಿಯೆಗೆ ನಿವೃತ್ತಿ ಎಂಬ ಹೆಸರು ಇದೆ. ಮನುಷ್ಯನಲ್ಲಿ ಚಕ್ರಗಳು, ಶಕ್ತಿಗಳು, ತತ್ವಗಳು, ಭಕ್ತಿ ಗಳು, ಲಿಂಗಗಳು, ಅಂಗಗಳು, ಕಲೆಗಳು, ನಾದಗಳು, ಮಹಾಭೂತ ಗಳು, ಇವೇ ಮೊದಲಾದವುಗಳು ಇವೆ. ನಿವೃತ್ತಿಯಲ್ಲಿ ಇವೆಲ್ಲವೂ

ಅಡಗಿಹೋಗುತ್ತವೆ. ಆಗ ಯಾವವು ಸ್ಥೂಲರೂಪವಾಗಿವೆಯೋ ಅವುಗಳಿಗೆ ಸಂಬಂಧಿಸಿದ ಸೂಕ್ಷ್ಮರೂಪಗಳಲ್ಲಿ ಅಡಗುತ್ತ ಅಡಗುತ್ತ ಕಡೆಗೆ ಪರಮಾತ್ಮನಲ್ಲಿ ಲಯವಾಗಿ ಹೋಗುತ್ತವೆ. ಇದು ನಿವೃತ್ತಿ ಎಂದೆನಿಸಿಕೊಳ್ಳಲ್ಪಡುತ್ತದೆ. ಅಂತ್ಯದಲ್ಲಿ ಲಿಂಗಗಳು, ಅಂಗಗಳು, ಶಕ್ತಿಗಳು, ಕಲೆಗಳು, ಮಹಾ ಭೂತಗಳು, ಪ್ರಣವಗಳು, ಬ್ರಹ್ಮ ವಿಷ್ಣು ರುದ್ರ ಮೊದಲಾದ ಪಂಚ ಬ್ರಹ್ಮರುಗಳು ಇವುಗಳೆಲ್ಲವು ಸಹ ಕ್ರಮೇಣ ಶೂನ್ಯದಲ್ಲಿ ಲಯವಾಗುವವು.

(೯೫) ಸಕೀಲಗಳು:— ಸ್ಥಲಗಳ ಸಂಬಂಧವನ್ನು ಯಾವುದರಿಂದ ತಿಳಿಯತಕ್ಕದ್ದೋ ಅದು ಸಕೀಲವೆನಿಸುವದು. ಸಕೀಲಗಳು ಅನೇಕವಿವೆ. ಅವುಗಳ ಮೂಲಕ ಸ್ಥಲಗಳ ಸಂಬಂಧವನ್ನು ಅರಿತುಕೊಂಡು ಆಚರಿಸಬೇಕು. ಹೇಗೆ ಎರಡು ವಸ್ತುಗಳನ್ನು ಕೂಡಿಸಲು ಒಂದು ಕೀಲವು ಸಹಾಯಕಾರಿಯೋ ಹಾಗೆ ಈ ಸಕೀಲಗಳು ಸ್ಥಳಗಳ ಸಂಬಂಧವನ್ನು ಅರಿಯಲು ಸಹಾಯಕಾರಿಗಳು. ಸಕೀಲಗಳು ಅನೇಕ ವಿಧವಾಗಿವೆ. ಅವುಗಳಲ್ಲಿ ಷಡ್ವಿಧಸಕೀಲಗಳು, ಅಷ್ಟವಿಧ ಸಕೀಲಗಳು, ೧೦೮ವಿಧ ಸಕೀಲಗಳು, ೨೧೬ ಸಕೀಲಗಳು ಮಹತ್ವವಾದವುಗಳು. ಮನುಷ್ಯನಿಗೆ ಆರಂಭದ ದಿಶೆಯಲ್ಲಿ ಕೆಲವು ವಿಷಯಗಳ ಆವಶ್ಯಕತೆಯು ಇರುತ್ತದೆ. ಆಗ ಅವನಿಗೆ ಆರು ವಿಧ ಸಕೀಲಗಳು ಸಾಕು. ಮುಂದೆ ಅವನಿಗೆ ಎಂಟು ವಿಧ ಸಕೀಲಗಳು ಬೇಕು. ಅವು ಚಕ್ರ, ಅಂಗ, ಲಿಂಗ, ಶಕ್ತಿ, ಹಸ್ತ ಮುಖ, ಪದಾರ್ಥ, ಪ್ರಸಾದ ಇವುಗಳು ಬೇಕಾಗುತ್ತವೆ. ಅವುಗಳ ಅರ್ಥವನ್ನು ಅವನು ತಿಳಿದುಕೊಂಡು, ಅವುಗಳಿಗೆ ಯಾವ ಸ್ಥಳಗಳ ಸಂಬಂಧವಿರತಕ್ಕದ್ದೋ ಅವುಗಳನ್ನು ಸಹ ಅರಿತುಕೊಂಡು ಹಾಗೆ ಆಚರಿಸಬೇಕು. ಮುಂದೆ ಅವನಲ್ಲಿ ಪ್ರಗತಿಯುಂಟಾಗಲು ಪ್ರತಿಯೊಂದು ಸ್ಥಲಕ್ಕೆ ೧೮ರಂತೆ ಆರು ಸ್ಥಲಗಳಲ್ಲಿ ಒಟ್ಟು ೧೦೮ ವಿಷಯಗಳು ಬೇಕಾಗುವವು. ಇವುಗಳ ಮರ್ಮವನ್ನು ಅವನು ಅರಿಯಬೇಕು. ಇವು ಆಗ ಆಕೃತಿ, ಪ್ರಣವ, ಚಕ್ರ, ಅಂಗ, ವರ್ಣ, ತತ್ವ, ಹಸ್ತ, ಲಿಂಗ, ಮುಖ, ಶಕ್ತಿ, ಭಕ್ತಿ ಪದಾರ್ಥ, ಪ್ರಸಾದ, ಕಲೆ, ಸಾದಾಖ್ಯ, ಲಕ್ಷಣ, ಸಂಜ್ಞೆ, ವೇದ ಇವುಗಳಿರುತ್ತವೆ. ಮುಂದೆ ಇವುಗಳಷ್ಟೇ ಅಲ್ಲ ಹೆಚ್ಚಿನ ವಿಷಯಗಳ ಜ್ಞಾನವು



ಬೇಕಾಗುತ್ತದೆ. ಇವುಗಳು ಪ್ರತಿಯೊಂದು ಸ್ಥಲಕ್ಕೆ ೩೬ರಂತೆ ಒಟ್ಟು ೨೧೬ ಆಗುವವು. ಈ ೨೧೬ರಲ್ಲಿ ಬೇರೆ ಕೆಲವರು ಇನ್ನೊಂದು ವಿಧ ವಿಚಾರಕ್ಕನುಸಂಶಿರ್ತರಗತಿಗಳನ್ನು ಮಾಡುತ್ತಾರೆ. ಆಗ ಪ್ರತಿಯೊಂದಕ್ಕೆ ೨೪ ವಿಷಯಗಳನ್ನು ಸೂಚಿಸಿ, ಒಟ್ಟು ೨೧೬ ವಿಧ ಸಕೀಲಗಳನ್ನು ಮಾಡುವದುಂಟು. ಈ ೨೧೬ ಸಕೀಲಗಳು ಯೌಗಿಕ ಸ್ವರೂಪದವಿರುತ್ತವೆ. ಇವುಗಳ ೯ ಸ್ಥಲಗಳಲ್ಲಿ ೬ ಷಟ್‌ಚಕ್ರಗಳು ಮತ್ತು ಅವುಗಳ ಮೇಲಿನ ೩ ಚಕ್ರಗಳು ಹೀಗೆ ೯ ಚಕ್ರಗಳನ್ನು ಭಾವಿಸಿ ಅವುಗಳಿಗನುಸಾರವಾಗಿ ೯ ಸ್ಥಲಗಳನ್ನು ಮಾಡುತ್ತಾರೆ. ಹೀಗೆ ಸಕೀಲಗಳಿದ್ದು ಅವುಗಳ ಜ್ಞಾನವನ್ನು ಭಕ್ತನು ಮಾಡಿಕೊಂಡು ವರ್ತಿಸತಕ್ಕದ್ದು. ಇದು ಸಕೀಲ ಜ್ಞಾನವು.

(೯೬) ಏಕೋತ್ತರ ಶತಸ್ಥಲ:— ಇವು ೧೦೧ ಸ್ಥಲಗಳಿರುತ್ತವೆ. ಇವುಗಳಲ್ಲಿ ಅಂಗಸ್ಥಲಗಳು ೪೪ ಮತ್ತು ಲಿಂಗಸ್ಥಲಗಳು ೫೭ ಹೀಗೆ ೧೦೧ ಇವೆ. ಅಂಗಸ್ಥಲಗಳಲ್ಲಿ ಭಕ್ತನು ಯಾವ ರೀತಿ ಆಚರಿಸಬೇಕೆಂಬುದರ ವಿವರಣೆ ಇರುತ್ತದೆ. ಲಿಂಗಸ್ಥಲಗಳಲ್ಲಿ ಈ ಆಚರಣೆಗಳಿಂದ ಮನುಷ್ಯನ ಮೇಲೆ ಯಾವ ಪರಿಣಾಮಗಳಾಗುವವೆಂಬದನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡು ಮಾಡಿದ ವಿವರಣೆಗಳಿರುತ್ತವೆ.

ಅಂಗಸ್ಥಲಗಳಲ್ಲಿ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ. ಐಕ್ಯ ಎಂದು ಆರು ಮುಖ್ಯ ವಿಭಾಗಗಳಿರುತ್ತವೆ. ಈ ಪ್ರತಿಯೊಂದರಲ್ಲಿಯೂ ಪುನಃ ಬೇರೆ ಬೇರೆ ವಿಭಾಗಗಳಿದ್ದು, ಅವುಗಳಿಗನುಸಾರವಾಗಿ ಸ್ಥಲಗಳು ವಿವೇಚಿಸಲ್ಪಟ್ಟಿರುತ್ತವೆ. ಈ ಪ್ರಕಾರ ಭಕ್ತ ಸ್ಥಲದಲ್ಲಿ ೧೫, ಮಹೇಶ್ವರ ಸ್ಥಲದಲ್ಲಿ ೯, ಪ್ರಸಾದಿ ಸ್ಥಲದಲ್ಲಿ ೭, ಪ್ರಾಣಲಿಂಗಿ ಸ್ಥಲದಲ್ಲಿ ೫, ಶರಣ ಸ್ಥಲದಲ್ಲಿ ೪, ಐಕ್ಯ ಸ್ಥಲದಲ್ಲಿ ೪ ಹೀಗೆ ಒಟ್ಟು ೪೪ ಸ್ಥಲಗಳಿವೆ.

ಲಿಂಗಸ್ಥಲಗಳಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಮುಖ್ಯ ಆರು ವಿಭಾ

ಗಗಳಿವೆ. ಈ ಪ್ರತಿಯೊಂದರಲ್ಲಿಯೂ ಬೇರೆ ಬೇರೆ ವಿಭಾಗಗಳಿವೆ. ಅವು ಆವವೆಂದರೆ, ಆಚಾರಲಿಂಗದಲ್ಲಿ ೯, ಗುರುಲಿಂಗದಲ್ಲಿ ೯, ಶಿವಲಿಂಗದಲ್ಲಿ ೯, ಜಂಗಮಲಿಂಗದಲ್ಲಿ ೧೨, ಪ್ರಸಾದಲಿಂಗದಲ್ಲಿ ೯, ಮಹಾಲಿಂಗದಲ್ಲಿ ೯ ಹೀಗೆ ೫೭ ಸ್ಥಲಗಳು ಹೇಳಲ್ಪಡುತ್ತವೆ.

ಇವುಗಳ ವ್ಯಾಖ್ಯೆಗಳು ಕೆಳಗೆ ಕೊಡಲ್ಪಟ್ಟಿವೆ. ಆದರೆ ಹಿಂದೆ ವಿವರಿಸಲ್ಪಟ್ಟ ವಿಷಯಗಳ ವ್ಯಾಖ್ಯೆಗಳು ಕೊಡಲ್ಪಟ್ಟಿಲ್ಲ.

(೯೭) ಏಕೋತ್ತರ ಭಕ್ತಸ್ಥಲಃ— ಇವು ೧೫ ಇವೆ. ಅವು ಯಾವವೆಂದರೆ:- ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿ ಸ್ಥಲ, ರುದ್ರಾಕ್ಷಿಸ್ಥಲ, ಪಂಚಾಕ್ಷರಿಸ್ಥಲ, ಭಕ್ತಿಸ್ಥಲ, ಉಭಯಸ್ಥಲ, ತ್ರಿವಿಧ ಸಂಪತ್ತು ಸ್ಥಲ, ಚತುರ್ವಿಧಸಾರಾಯ ಸ್ಥಲ, ಎಂದಿರುತ್ತವೆ.

(ಅ) ಪಿಂಡಸ್ಥಲಃ— ಬೀಜದೊಳಗಿನ ವೃಕ್ಷದಂತೆ ನಿರಾಕಾರದಲ್ಲಿದ್ದುಕೊಂಡು ಪ್ರಕಟವಾಗದೆ ಇರುವ ಸ್ಥಿತಿಯು ಪಿಂಡಸ್ಥಲವು.

(ಆ) ಪಿಂಡಜ್ಞಾನಸ್ಥಲ:— ನಿರಾಕಾರದಲ್ಲಿ ಪ್ರಕಟಗೊಳ್ಳದೆ ಇರುವಾಗ್ಗೆ, ಮನುಷ್ಯನಲ್ಲಿ ತಾನು ತೋರಬೇಕೆಂಬ ಜ್ಞಾನವು ಪಿಂಡದಲ್ಲಿ ಉಂಟಾಗಲು ಅದು ಪಿಂಡಜ್ಞಾನಸ್ಥಲವು.

(ಇ) ಉಭಯ ಸ್ಥಲಃ— ಮನುಷ್ಯನಿಗೆ ದೇಹ ಪ್ರಾಣಗಳೆರಡು ಇವೆ. ಈ ಎರಡರಲ್ಲಿ ಅನುಕ್ರಮವಾಗಿ ಲಿಂಗ, ಜಂಗಮಗಳನ್ನು ಸಂಬಂಧಿಸುವದು ಉಭಯಸ್ಥಲ. ಲಿಂಗಸಂಬಂಧವು ಆಚಾರದ ಮೂಲಕ ಮತ್ತು ಜಂಗಮ ಸಂಬಂಧವು ಅನುಭಾವದ ಮೂಲಕ ಉಂಟಾಗುವವು.

(ಈ) ತ್ರಿವಿಧ ಸಂಪತ್ತು ಸ್ಥಲಃ- ತನುವಿನಲ್ಲಿ ಗುರು, ಪ್ರಾಣದಲ್ಲಿ ಲಿಂಗ, ಅರಿವಿನಲ್ಲಿ ಜಂಗಮ, ಹೀಗೆ ಸಂಬಂಧಿಸುವದು ತ್ರಿವಿಧ ಸಂಪತ್ತು ಸ್ಥಲ.

(ಉ) ಚತುರ್ವಿಧ ಸಾರಾಯಸ್ಥಲಃ— ಗುರು, ಲಿಂಗ, ಜಂಗಮ, ಪ್ರಸಾದ ಇವು ನಾಲ್ಕು ಸಂಬಂಧಿಸಿದ್ದೇ ಚತುರ್ವಿಧಸಾರಾಯ ಸ್ಥಲವು.



ಅಂಗದಲ್ಲಿ ಗುರುಭಕ್ತಿ, ಮನದಲ್ಲಿ ಲಿಂಗಭಕ್ತಿ, ಅರಿವಿನಲ್ಲಿ ಜಂಗಮಭಕ್ತಿ, ಪರಿಣಾಮದಲ್ಲಿ ಪ್ರಸಾದ ಭಕ್ತಿ ಇವುಗಳು ಇರತಕ್ಕದ್ದು.

(ಊ) ಉಪಾಧಿ ಮಾಟಸ್ಥಲಃ- ಸಕಲರ ಹಿತಕ್ಕಾಗಿ ಮಾಡಿದ್ದೇ ಉಪಾಧಿಮಾಟಸ್ಥಲವು

(ಎ) ನಿರುಪಾಧಿ ಮಾಟಸ್ಥಲಃ— ಯಾವ ಬಗೆಯ ಉದ್ದೇಶವಿರದೆ ಕೇವಲ ದಾಸೋಹಭಾವದಿಂದ ಮಾಡುವದು ನಿರುಪಾಧಿ ಮಾಟಸ್ಥಲವು.

(ಐ) ಸಹಜ ಮಾಟಸ್ಥಲಃ— ಸಾಮರಸ್ಯಭಾವದಿಂದ ಮಾಡುವದು ಸಹಜ ಮಾಟಸ್ಥಲವು. ಇಲ್ಲಿ ತಾನು, ತಾನು ಮಾಡುವ ಕ್ರಿಯೆ. ಮತ್ತು ಮಾಡಿಸಿಕೊಂಬ ವಸ್ತು, ಇವುಗಳಲ್ಲೆಲ್ಲ ಸಾಮರಸ್ಯ ಭಾವವು ಉಂಟಾಗಬೇಕು.

(೯೮) ಏಕೋತ್ತರ ಮಹೇಶಸ್ಥಲಃ— ಇವು ೯ ಇವೆ. ಅವು ಯಾವವೆಂದರೆ, ಮಹೇಶ್ವರ ಸ್ಥಲ, ಲಿಂಗ ನಿಷ್ಠಾಸ್ಥಲ, ಪೂರ್ವಾಶ್ರಯ ನಿರಸನ ಸ್ಥಲ, ವಾಗದ್ವೈತ ನಿರಸನಸ್ಥಲ, ಆಹ್ವಾನ ನಿರಸನಸ್ಥಲ, ಅಷ್ಟತನುಮೂರ್ತಿ ನಿರಸನಸ್ಥಲ, ಸರ್ವಗತ ನಿರಸನಸ್ಥಲ, ಶಿವಜಗನ್ಮಯ ಸ್ಥಲ, ಭಕ್ತದೇಹಿಕಲಿಂಗಸ್ಥಲ, ಎಂದಿರುತ್ತವೆ.

(ಅ) ಪೂರ್ವಾಶ್ರಯ ನಿರಸನಸ್ಥಲಃ— ಲಿಂಗಧಾರಣವಾದ ಬಳಿಕ ಲಿಂಗಿಗಳಲ್ಲಿ ಜಾತಿಭೇದವನ್ನು ಎಣಿಸದಿರುವದು ಪೂರ್ವಾಶ್ರಯ ನಿರಸನಸ್ಥಲ.

(ಆ) ವಾಗದ್ವೈತನಿರಸನಸ್ಥಲಃ— ವ್ಯವಹಾರದಲ್ಲಿ ಅದ್ವೈತ ಭಾವದಿಂದ ಆಚರಿಸದೆ ಇರುವದು ವಾಗದ್ವೈತ ನಿರಸನಸ್ಥಲವು. ಕಾರ್ಯಗಳಲ್ಲಿ ದ್ವೈತವಿದೆ. ದ್ವೈತವಿದ್ದರೂ ಕೂಡ ಸಮರಸಾಚರಣೆಯುಳ್ಳದ್ದು.

(ಇ) ಆಹ್ವಾನ ನಿರಸನಸ್ಥಲಃ— ಲಿಂಗಾಂಗಿಗಳು ಸಮರಸಾಚಾರವುಳ್ಳವರು. ಆದ್ದರಿಂದ ಅವರ ಕ್ರಿಯೆಗಳಲ್ಲಿ ಆಹ್ವಾನ ವಿಸರ್ಜನೆಗಳಿಲ್ಲ. ಇದು ಆಹ್ವಾನ ನಿರಸನಸ್ಥಲ.

(ಈ) ಅಷ್ಟತನುಮೂರ್ತಿನಿರಸನಸ್ಥಲಃ— ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ ಇವು ಅಷ್ಟ ತನುಮೂರ್ತಿಗಳು. ಇವುಗಳಲ್ಲಿ ಆರನ್ನೂ ದೇವರೆಂದು ಪೂಜಿಸದೆ ಇರುವದು ಅಷ್ಟ ತನುಮೂರ್ತಿನಿರಸನಸ್ಥಲ.

(ಉ) ಸರ್ವಗತ ನಿರಸನಸ್ಥಲಃ— ದೃಶ್ಯವಾಗಿರುವ ಜಗತ್ತು ಪರಮಾತ್ಮನಲ್ಲವೆಂದು ತಿಳಿಯುವದು ಸರ್ವಗತ ನಿರಸನಸ್ಥಲ.

(ಊ) ಶಿವಜಗನ್ಮಯಸ್ಥಲಃ— ಪರಮಾತ್ಮನು ವಿಶ್ವವ್ಯಾಪಿಯೆಂದು ತಿಳಿಯುವದು ಶಿವಜಗನ್ಮಯ ಸ್ಥಲ.

(ಎ) ಭಕ್ತದೇಹಿಕ ಲಿಂಗಸ್ಥಲಃ— ಪರಮಾತ್ಮನು ಒಳ್ಳೆಯುದರಲ್ಲಿ ಇರುತ್ತಾನೆಂದು ಭಾವಿಸಿ ವರ್ತಿಸುವದು ಭಕ್ತದೇಹಿಕಲಿಂಗಸ್ಥಲ.

(೯೯) ಏಕೋತ್ತರ ಪ್ರಸಾದಿ ಸ್ಥಲಃ— ಇವು ಆರು ಇವೆ. ಅವು ಯಾವವೆಂದರೆ:- ಗುರು ಮಹಾತ್ಮೆ ಸ್ಥಲ, ಲಿಂಗ ಮಹಾತ್ಮೆ ಸ್ಥಲ, ಜಂಗಮ ಮಹಾತ್ಮೆಸ್ಥಲ, ಭಕ್ತ ಮಹಾತ್ಮೆಸ್ಥಲ, ಶರಣ ಮಹಾತ್ಮೆ ಸ್ಥಲ, ಪ್ರಸಾದ ಮಹಾತ್ಮೆಸ್ಥಲ ಎಂದು ಇವೆ. ಆಚರಣೆ, ಮನಸ್ಸು, ಅರಿವು ಇವುಗಳಲ್ಲಿ ಶುದ್ಧತೆಯನ್ನುಂಟುಮಾಡಿಕೊಳ್ಳುವದು ಮತ್ತು ಸದ್ವರ್ತನೆಯಿಂದ ಪರಮಾನಂದದಲಿದ್ದು ಅರ್ಪಣ ಭಾವಯುಕ್ತನಾಗಿ ಆಚರಿಸುವದು ಈ ಸ್ಥಲದ ಮತ್ತು ಅದರ ಉಪಭಾಗಗಳ ಲಕ್ಷಣಗಳು.

(೧೦೦) ಏಕೋತ್ತರ ಪ್ರಾಣಲಿಂಗಿ ಸ್ಥಲಃ— ಇವು ೫ ಇವೆ. ಅವು ಯಾವವೆಂದರೆ— ಪ್ರಾಣಲಿಂಗಿ ಸ್ಥಲ, ಪ್ರಾಣಲಿಂಗಾರ್ಚನೆಯ ಸ್ಥಲ, ಶಿವಯೋಗ ಸಮಾಧಿ ಸ್ಥಲ, ಲಿಂಗನಿಜ ಸ್ಥಲ ಮತ್ತು ಅಂಗಲಿಂಗಸ್ಥಲಗಳು ಇರುತ್ತವೆ.

(ಅ) ಲಿಂಗನಿಜಸ್ಥಲ— ಮನಸ್ಸಿನಲ್ಲಿ ಲಿಂಗವು ದೃಢಪಡಲು ಅದು ಮನೋಮೂರ್ತಿಯಾಗಿ ನಿಲ್ಲುವದು. ಅದೇ ಲಿಂಗನಿಜಸ್ಥಲ.

(ಆ) ಅಂಗಲಿಂಗಸ್ಥಲ— ಲಿಂಗವು ಮನುಷ್ಯನಲ್ಲಿ ನೆಲೆಗೊಳ್ಳಲು ಅವನ ಸರ್ವಾಂಗವು ಮತ್ತು ಅವನ ಕರಣಗಳು ಲಿಂಗಮಯವಾಗು



ವವು. ಇದು ಅಂಗಲಿಂಗಸ್ಥಲವು. ಇಲ್ಲಿ ಅತ್ಯಂತವಾದ ಪಾರಮಾರ್ಥಿಕ ಆನಂದವಿದೆ.

(೧೦೧) ಏಕೋತ್ತರ ಶರಣಸ್ಥಲ— ಇವು ನಾಲ್ಕು ಇವೆ. ಅವು ಯಾವವೆಂದರೆ— ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶಸ್ಥಲ, ಶೀಲಸಂಪಾದನೆಯ ಸ್ಥಲ.

(ಅ) ತಾಮಸ ನಿರಸನಸ್ಥಲ— ತಾಮಸಭಾವದಿಂದಲೂ ಅಹಂಕಾರದಿಂದಲೂ ವರ್ತಿಸದೆ ಇರುವದು ತಾಮಸನಿರಸನಸ್ಥಲ.

(ಆ) ನಿರ್ದೇಶ ಸ್ಥಲ— ನಿಜವನರಿದು ಸಂಶಯ ರಹಿತನಾಗಿ, ಸುಜ್ಞಾನಿಯಾಗಿ ವರ್ತಿಸುವದು ನಿರ್ದೇಶಸ್ಥಲ.

(ಇ) ಶೀಲಸಂಪಾದನೆಯ ಸ್ಥಲ— ಆಚಾರದ ಅತಿರೇಕಗಳಿಗೆ ಒಳಗಾಗದೆ ಲಿಂಗಾಂಗಿಗಳಿಗೆ ಯೋಗ್ಯವಾದ ಆಚಾರಗಳನ್ನು ಅನುವರ್ತಿಸುವದು ಶೀಲಸಂಪಾದನೆಯ ಸ್ಥಲ.

(೧೦೨) ಏಕೋತ್ತರ ಐಕ್ಯಸ್ಥಲ— ಇವು ನಾಲ್ಕು ಇರುತ್ತವೆ. ಅವು ಐಕ್ಯಸ್ಥಲ, ಸರ್ವಾಚಾರ ಸಂಪತ್ತುಸ್ಥಲ, ಏಕಭಾಜನಸ್ಥಲ ಮತ್ತು ಸಹಭೋಜನ ಸ್ಥಲ, ಎಂದು ಇವೆ.

(ಅ) ಏಕಭಾಜನಸ್ಥಲ— ಲಿಂಗವೂ ತಾನೂ ಕೂಡಿಕೊಂಡು ಸಾಮರಸ್ಯತ್ವದಿಂದ ಆಚರಿಸುವದು ಏಕಭಾಜನ ಸ್ಥಲವು.

(ಆ) ಸಹಭೋಜನಸ್ಥಲ— ಪರಮಾತ್ಮನಿಗೆ ತಾನು ಭೋಗಿಸುವದನ್ನೆಲ್ಲ ಅರ್ಪಿಸಿ ಸಮಭೋಗಿಯಾಗಿರುವದು ಸಹಭೋಜನಸ್ಥಲ.

(೧೦೩) ಏಕೋತ್ತರ ಆಚಾರಲಿಂಗಸ್ಥಲ— ಇದರಲ್ಲಿ ಗುರುಲಿಂಗ, ಶಿವಲಿಂಗ, ಜಂಗಮಲಿಂಗ ಎಂಬ ಮೂರು ವಿಭೇದಗಳಿವೆ. ಗುರುಲಿಂಗದಲ್ಲಿ ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು ಎಂದು, ಶಿವಲಿಂಗದಲ್ಲಿ ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ ಎಂದು, ಮತ್ತು ಜಂಗಮಲಿಂಗದಲ್ಲಿ ಸ್ವಯ, ಚರ, ಪರ ಎಂದು ಹೀಗೆ ಒಟ್ಟು ೯ ವಿಭಾಗಗಳಿವೆ.

(ಅ) ಗುರುಲಿಂಗ ತ್ರಿವಿಧ— ಇವು ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು ಎಂದು ಇವೆ. ದೀಕ್ಷೆಯಿಂದ ಉಪದೇಶವನ್ನು ಹೊಂದಿ ದಲ್ಲಿ ದೀಕ್ಷಾಗುರುವು. ಉಪದೇಶಕ್ಕೆ ಅನುಗುಣವಾಗಿ ಬೋಧೆಯನ್ನು ಅಭ್ಯಾಸಿಸಲು ಶಿಕ್ಷಾಗುರುವು. ಮುಂದೆ ಅದನ್ನು ಮನನವಾ ಕೊಂಡಲ್ಲಿ ಜ್ಞಾನಗುರುವು.

(ಆ) ಶಿವಲಿಂಗ ತ್ರಿವಿಧ— ಇವು ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ ಎಂದು ಇವೆ. ಬಾಹ್ಯದಲ್ಲಿ ಮಾಡುವ ಸತ್‌ಕೃತ್ಯಗಳು ಕ್ರಿಯಾಲಿಂಗ. ಅವು ಮುಂದೆ ಭಾವಭರಿತವಾದಲ್ಲಿ ಭಾವಲಿಂಗ. ಭಾವ ಭರಿತನಾಗಿ ಜ್ಞಾನವಳವಡಲು ಜ್ಞಾನಲಿಂಗ.

(ಇ) ಜಂಗಮಲಿಂಗ ತ್ರಿವಿಧ— ಇವು ಸ್ವಯ, ಚರ, ಪರ ಎಂದು ಇವೆ. ಕ್ರಿಯೆಗಳ ಪರಿಣಾಮಗಳು ತನ್ನಲ್ಲಿ ನಿಶ್ಚಯವಾಗಿ ಉಳಿದರೆ ಸ್ವಯವು. ಅವು ಭಕ್ತಿ ಕಾರಣವಾಗಿ ಜಗತ್ತಿನಲ್ಲಿ ಜನಹಿತಕ್ಕೋಸ್ಕರ ಉಪಯೋಗಿಸಲ್ಪಟ್ಟಲ್ಲಿ ಚರವು. ಹೀಗೆ ವ್ಯವಹರಿಸಿ ಚಿದಾತ್ಮನಲ್ಲಿ ಬೆರೆ ದಲ್ಲಿ ಅದು ಪರವು. ಇದು ಜಂಗಮದ ಉತ್ಕೃಷ್ಟ ಸ್ಥಿತಿಯು.

ಗುರುಲಿಂಗ, ಶಿವಲಿಂಗ, ಜಂಗಮಲಿಂಗಗಳನ್ನು ಹೀಗೆ ಸಾಧಿಸಿ ದಲ್ಲಿ ಅವೆಲ್ಲವೂ ಆಚಾರಲಿಂಗದಲ್ಲಿ ಅಡಗುವವು. ಇದು ಆಚಾರಲಿಂ ಗದ ಪೂರ್ಣತೆಯು.

(೧೦೪) ಏಕೋತ್ತರ ಗುರುಲಿಂಗಸ್ಥಲ— ಇದರಲ್ಲಿ ಆಗಮಲಿಂಗ, ಕಾಯಲಿಂಗ, ಆಚಾರಲಿಂಗ ಎಂಬ ಮೂರು ಭಾಗಗಳಿವೆ. ಆಗಮ ಲಿಂಗದಲ್ಲಿ ಕ್ರಿಯಾಗಮ, ಭಾವಾಗಮ, ಜ್ಞಾನಾಗಮ ಎಂದು ಮೂರು ವಿಭಾಗಗಳಿವೆ. ಕಾಯಲಿಂಗದಲ್ಲಿ ಸಕಾಯ, ಅಕಾಯ, ಪರಕಾಯ ವೆಂಬ ಮೂರು ವಿಭಾಗಗಳಿವೆ. ಆಚಾರಲಿಂಗದಲ್ಲಿ ಧರ್ಮಾಚಾರ, ಭಾವಾಚಾರ ಜ್ಞಾನಾಚಾರ ಎಂದು ವಿಭೇದಗಳಿವೆ. ಹೀಗೆ ಇಲ್ಲಿ ಒಟ್ಟು ೯ ಮುಖ್ಯ ಭಾಗಗಳಿವೆ.



(ಅ) ಆಗಮಲಿಂಗ ತ್ರಿವಿಧಃ— ಇವು ಕ್ರಿಯಾಗಮ, ಭಾವಾಗಮ, ಜ್ಞಾನಾಗಮ ಎಂದು ಇವೆ. ಸತ್‌ಕ್ರಿಯೆಯೇ ಕ್ರಿಯಾಗಮವು. ಸತ್ ಕ್ರಿಯೆಯಲ್ಲಿ ನಿಷ್ಠೆ ನಿಬ್ಬೆರಿಸಿದರೆ, ಅದು ಭಾವಾಗಮವು ಲಿಂಗದ ಮಹಾ ಜ್ಞಾನದ ಪ್ರಕಾಶದಲ್ಲಿ ಆಚರಿಸುವದೇ ಜ್ಞಾನಾಗಮವು.

(ಬ) ಕಾಯಲಿಂಗ ತ್ರಿವಿಧ— ಇವು ಸಕಾಯ, ಅಕಾಯ, ಪರ ಕಾಯವೆಂದು ಇವೆ. ಸ್ಥೂಲಕ್ರಿಯೆಗಳನ್ನು ಲಿಂಗದೊಡನೆ ಬೆರಿಸಿ ವರ್ತಿ ಸಿದಲ್ಲಿ ಸಕಾಯವು ಇಂಥ ಲಿಂಗ ಕಾಯದಿಂದ ನಿರ್ದೇಹ ಸ್ಥಿತಿಯುಂಟಾ ಗಲು ಅದು ಅಕಾಯವು. ದೇಹದ ನಿರ್ದೇಹ ಸ್ಥಿತಿಯನ್ನು ಸಹ ದಾಟಿ ದಲ್ಲಿ ಅವನು ಸಕಾಯನೂ ಅಲ್ಲ, ಅಕಾಯನೂ ಅಲ್ಲ. ಅವನು ಪರ ಕಾಯನು

(ಕ) ಆಚಾರಲಿಂಗ ತ್ರಿವಿಧ— ಇವು ಧರ್ಮಾಚಾರ, ಭಾವಾ ಚಾರ, ಜ್ಞಾನಾಚಾರ ಎಂದು ಇವೆ. ನೀತಿಯಂತೆ ನಡೆಯುವುದು. ಧರ್ಮಾಚಾರವು. ನೀತಿಯು ಮನಸ್ಸಿನಲ್ಲಿ ದೃಢಪಟ್ಟಲ್ಲಿ ಭಾವಾಚಾ ರವು ಹೀಗೆ ದೃಢಪಟ್ಟು ಮಹಾಜ್ಞಾನದಲ್ಲಿ ವರ್ತಿಸಿದ್ದದರೆ ಜ್ಞಾನಾ ಚಾರವು. ಇವು ಗುರುಲಿಂಗದ ಆಚಾರಲಿಂಗದಲ್ಲಿಯ ಮೂರು ತರಗಳು.

ಹೀಗೆ ಆಗಮಲಿಂಗ, ಕಾಯಲಿಂಗ, ಆಚಾರಲಿಂಗ ಇವುಗಳನ್ನು ಸಾಧಿಸಿದಲ್ಲಿ ಅವೆಲ್ಲವೂ ಗುರುಲಿಂಗದಲ್ಲಿ ಅಡಗುವವು. ಇದು ಗುರು ಲಿಂಗದ ಪೂರ್ಣತೆಯು.

(೧೦೫) ಏಕೋತ್ತರ ಶಿವಲಿಂಗಸ್ಥಲ – ಇದರಲ್ಲಿ ಅನುಗ್ರಹ ಲಿಂಗ, ಅರ್ಪಿತಲಿಂಗ, ಮತ್ತು ತನುಗುಣಲಿಂಗ ಎಂದು ಮೂರು ಮುಖ್ಯ ವಿಭಾಗಗಳಿವೆ. ಇವುಗಳಲ್ಲಿ ಅನುಗ್ರಹ ಲಿಂಗದಲ್ಲಿ ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ ಎಂತಲೂ ಅರ್ಪಿತ ಲಿಂಗದಲ್ಲಿ ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತಗಳೆಂತಲೂ ತನುಗುಣಲಿಂಗ

ದಲ್ಲಿ ಶಿಷ್ಯ, ಶುಶ್ರೂಷಾ, ಸೇವ್ಯ ಎಂತಲೂ ಹೀಗೆ ಒಟ್ಟು ೯ ವಿಭಾಗಗಳಿವೆ.

(ಅ) ಅನುಗ್ರಹಲಿಂಗ ತ್ರಿವಿಧಃ— ಇವು ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ ಎಂದು ಇವೆ. ಅನುಗ್ರಹವು ಕಾಯವನ್ನು ಲಿಂಗಕ್ಕೆ ಅರ್ಪಿಸುವದು ಇಲ್ಲಿ ಅಂಗ ವಿಕಾರಗಳು ದೂರಾಗುವವು. ಇಂದ್ರಿಯಗಳನ್ನು ಲಿಂಗಕ್ಕೆ ಅರ್ಪಿಸುವದು ಇಂದ್ರಿಯಾನುಗ್ರಹವು. ಇದರಿಂದ ಲಿಂಗ ಚೈತನ್ಯವು ಒದಗುವದು. ಅಂಗವನ್ನು ಪ್ರಾಣಕ್ಕೆ ಸಂಬಂಧಿಸುವದು ಪ್ರಾಣಾನುಗ್ರಹವು. ಇದರಿಂದ ಬಾಹ್ಯಾಭ್ಯಂತರವೆಲ್ಲ ಲಿಂಗಮಯವಾಗುವದು.

(ಬ) ಅರ್ಪಿತಲಿಂಗ ತ್ರಿವಿಧಃ – ಇವು ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತಗಳಾಗಿರುವವು. ಕಾಯದಲ್ಲಿ ಅರ್ಪಿತವಾದುದು ಕಾಯಾರ್ಪಿತವು. ಅಂತರ್ಮುಖದಲ್ಲಿ ಅಂದರೆ ಕರಣಗಳ ಮೂಲಕ ಅರ್ಪಿತವಾದುದು ಕರಣಾರ್ಪಿತವು. ಭಾವದಲ್ಲಿ ಅರ್ಪಿತವಾದುದು ಭಾವಾರ್ಪಿತವು. ಇದು ಇದ್ದೂ ಇಲ್ಲದಂಥ ಸ್ಥಿತಿಯು.

(ಕ) ತನುಗುಣಲಿಂಗ ತ್ರಿವಿಧಃ— ಇವು ಶಿಷ್ಯ, ಶುಶ್ರೂಷಾ, ಸೇವ್ಯ ಎಂದು ಇವೆ. ಗುರುವಿನಲ್ಲಿ ಶಿಷ್ಯತ್ವವನ್ನು ಅಂಗೀಕರಿಸುವದು ಶಿಷ್ಯವು. ಅವನ ಶುಶ್ರೂಷೆಯಲ್ಲಿದ್ದು ಲಿಂಗತತ್ವವನ್ನು ದೃಢಪಡಿಸುವದು ಶುಶ್ರೂಷೆಯು. ಶಿಷ್ಯ ಮತ್ತು ಗುರು ಇವರ ಏಕರೂಪತೆಯು ಅಥವಾ ಸಾಮರಸ್ಯವು ಸೇವ್ಯವು. ಆಗ ಶಿಷ್ಯನು ಗುರುವಿನಲ್ಲಿ, ಗುರುವು ಶಿಷ್ಯನಲ್ಲಿ ಬೆರೆಯುವರು.

ಹೀಗೆ ಅನುಗ್ರಹಲಿಂಗ, ಅರ್ಪಿತಲಿಂಗ, ಮತ್ತು ತನುಗುಣಲಿಂಗ ಇವುಗಳನ್ನು ಸಾಧಿಸಿದಲ್ಲಿ ಅವೆಲ್ಲವೂ ಶಿವಲಿಂಗದಲ್ಲಿ ಅಡಗುವವು. ಈ ಸ್ಥಿತಿಯು ಶಿವಲಿಂಗದ ಪೂರ್ಣತೆಯು.



(೧೬) ಏಕೋತ್ತರ ಜಂಗಮಲಿಂಗಸ್ಥಲಃ – ಇದರಲ್ಲಿ ಒಲವುಲಿಂಗ, ನಿರೂಪಲಿಂಗ, ಪ್ರಸಾದಲಿಂಗ ಮತ್ತು ಪಾದೋದಕಲಿಂಗ ಎಂದು ನಾಲ್ಕು ವಿಭಾಗಗಳಿವೆ. ಇವುಗಳಲ್ಲಿ ವೀರಶೈವರಲ್ಲಿ ಅತಿ ಮಹತ್ವದ ಆಚಾರಗಳಾದ ಪ್ರಸಾದ ಮತ್ತು ಪಾದೋದಕದ ವಿಚಾರಗಳು ಬರುತ್ತವೆ. ಒಲವು ಲಿಂಗದಲ್ಲಿ ಜೀವಾತ್ಮ, ಅಂತರಾತ್ಮ, ಪರಮಾತ್ಮ ಎಂತಲೂ ನಿರೂಪ ಲಿಂಗದಲ್ಲಿ ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ ಎಂತಲೂ, ಪ್ರಸಾದಲಿಂಗದಲ್ಲಿ ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿ ಎಂತಲೂ ಪಾದೋದಕ ಲಿಂಗದಲ್ಲಿ ದೀಕ್ಷಾ ಪಾದೋದಕ ಶಿಕ್ಷಾಪಾದೋದಕ, ಜ್ಞಾನಪಾದೋದಕ ಎಂತಲೂ ಒಟ್ಟು ೧೨ ವಿಭಾಗಗಳಿವೆ.

(ಅ) ಒಲವುಲಿಂಗ ತ್ರಿವಿಧಃ— ಇವು ಜೀವಾತ್ಮ, ಅಂತರಾತ್ಮ, ಪರಮಾತ್ಮ ಎಂದು ಇವೆ. ಭವಕ್ಕೆ ಸಂಬಂಧಪಟ್ಟವನು ಜೀವಾತ್ಮನು. ಆತ್ಮವಿವೇಕಿಯಾದವನು ಅಂತರಾತ್ಮನು. ತನ್ನನ್ನು ತಾನು ಅರಿಯುವವನು ಪರಮಾತ್ಮನು

(ಬ) ನಿರೂಪಲಿಂಗ ತ್ರಿವಿಧಃ— ಇವು ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ ಎಂದು ಇವೆ. ದೇಹ ಭಾವವನ್ನು ಅಳಿದು ಸ್ವಾಭಾವಿಕವಾದ ಚಾರಿತ್ರ್ಯವುಳ್ಳವನಾದರೆ ನಿರ್ದೇಹಾಗಮವು. ಶುದ್ಧ ಭಾವದಿಂದ ಕ್ರಿಯೆಗಳನ್ನು ಮಾಡಿದ್ದಾದರೆ ನಿರ್ಭಾವಾಗಮವು. ಆಚರಣೆಗಳಲ್ಲಿ ಅಲಿಪ್ತನಾಗಿ ಕಾರ್ಯಮಾಡುವವನು ನಷ್ಟಾಗಮವು.

(ಕ) ಪ್ರಸಾದಲಿಂಗ ತ್ರಿವಿಧಃ— ಇವು ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿ ಎಂದು ಇವೆ. ಗುರುಮಾರ್ಗದಲ್ಲಿ ಭೃತ್ಯಾಚಾರವುಳ್ಳವನಾಗಿ ಪ್ರಸಾದ ಸೇವನೆ ಮಾಡುವವನು ಆದಿಪ್ರಸಾದಿಯು. ಲಿಂಗಮುಖ ಪ್ರಸಾದ ಸೇವನೆಯು ಅಂತ್ಯಪ್ರಸಾದಿಯು. ಇಲ್ಲಿ ಲಿಂಗೇಂದ್ರಿಯ ಮುಖವುಳ್ಳವನಾಗಿ ಆಚರಿಸಬೇಕು. ಜಂಗಮಮುಖದಿಂದ ತೃಪ್ತಿಯನ್ನು ಅನುಭವಿಸಿದಲ್ಲಿ ಸೇವ್ಯಪ್ರಸಾದಿಯು. ಇವನು ಮಾಯಾಪ್ರಪಂಚವನ್ನು ಅಳಿದವನು.

(ಡ) ಪಾದೋದಕಲಿಂಗ ತ್ರಿವಿಧಃ— ಇದರಲ್ಲಿ ದೀಕ್ಷಾಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕ ಎಂದು ಮೂರು ವಿಭಾಗಗಳು ಇರುತ್ತವೆ. ದೀಕ್ಷಾಗುರುಮುಖದಿಂದ ಆದುದು ದೀಕ್ಷಾಪಾದೋದಕವು. ಇದು ಬಾಹ್ಯಕ್ರಿಯೆಯುಳ್ಳದ್ದು. ಬಾಹ್ಯಕ್ರಿಯೆಗಳ ಮೂಲಕ ಮನಸ್ಸಿನ ಮೇಲೆ ಆದ ಪರಿಣಾಮಗಳು ದೃಢಪಟ್ಟಲ್ಲಿ ಶಿಕ್ಷಾಪಾದೋದಕವು. ಹಿಂದಿನ ಕ್ರಿಯೆಗಳ ಮೂಲಕ ಉಂಟಾಗುವ ಆನಂದೋದಕವು ಜ್ಞಾನ ಗುರು ಮುಖದಿಂದಾದುದು ಅದು ಜ್ಞಾನಪಾದೋದಕವು.

ಹೀಗೆ ಒಲವುಲಿಂಗ, ನಿರೂಪಲಿಂಗ, ಪ್ರಸಾದಲಿಂಗ, ಪಾದೋದಕಲಿಂಗ ಇವುಗಳನ್ನು ಸಾಧಿಸತಕ್ಕದ್ದು. ಹೀಗೆ ಸಾಧಿಸಿದಲ್ಲಿ ಅವೆಲ್ಲವೂ ಜಂಗಮಲಿಂಗದಲ್ಲಿ ಅಡಗುವವು. ಹೀಗಾದಲ್ಲಿ ಅದು ಜಂಗಮಲಿಂಗದ ಪೂರ್ಣತೆಯು.

(೧೭) ಏಕೋತ್ತರ ಪ್ರಸಾದಲಿಂಗಸ್ಥಲಃ— ಇದರಲ್ಲಿ ನಿಷ್ಪತ್ತಿಲಿಂಗ, ಆಕಾಶಲಿಂಗ, ಪ್ರಕಾಶಲಿಂಗ ಎಂದು ಮೂರು ವಿಭಾಗಗಳಿವೆ. ನಿಷ್ಪತ್ತಿಲಿಂಗದಲ್ಲಿ ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ, ಜ್ಞಾನನಿಷ್ಪತ್ತಿ ಎಂತಲೂ, ಆಕಾಶಲಿಂಗದಲ್ಲಿ ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶವೆಂತಲೂ, ಪ್ರಕಾಶಲಿಂಗದಲ್ಲಿ ಕ್ರಿಯಾಪ್ರಕಾಶ, ಭಾವಪ್ರಕಾಶ ಜ್ಞಾನಪ್ರಕಾಶವೆಂತಲೂ ಒಟ್ಟು ೯ ವಿಭಾಗಗಳಿವೆ.

(ಅ) ನಿಷ್ಪತ್ತಿಲಿಂಗ ತ್ರಿವಿಧಃ- ಇದರಲ್ಲಿ ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ, ಜ್ಞಾನನಿಷ್ಪತ್ತಿ ಎಂಬ ಮೂರು ವಿಭಾಗಗಳಿವೆ. ಲಿಂಗಾನುಭವವು ಕ್ರಿಯೆಯಲ್ಲಿ ಉಂಟಾಗಲು ಕ್ರಿಯಾನಿಷ್ಪತ್ತಿಯು. ಅದು ಭಾವದಲ್ಲಿ ಉಂಟಾಗಲು ಭಾವನಿಷ್ಪತ್ತಿಯು. ಅದು ಜ್ಞಾನದಲ್ಲಿ ಉಂಟಾಗಲು ಜ್ಞಾನನಿಷ್ಪತ್ತಿಯು ಎಂದು ಹೇಳಲ್ಪಡುತ್ತಿದೆ.

(ಬ) ಆಕಾಶಲಿಂಗ ತ್ರಿವಿಧಃ— ಇದರಲ್ಲಿ ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ ಎಂಬ ಮೂರು ವಿಭಾಗಗಳಿವೆ. ಶರಣನ ಚಿತ್ ಪಿಂಡಪ್ರಕೃತ್ ಸ್ವರೂಪವನ್ನು ಹೊಂದಲು ಅಂದು ಪಿಂಡಾಕಾಶವು. ಅದು



ಲಿಂಗದಲ್ಲಿ ಬೆರೆದು ಶರಣನ ಅರುಹನ್ನು ಆಶ್ರಯಿಸಲು ಅದು ಬಿಂದ್ವಾಕಾಶವು. ಈ ಅರುಹೂ ಕೂಡ ಮಹಾಘನ ಚೈತನ್ಯದಲ್ಲಿ ಬೆರೆಯಲು ಅದು ಮಹದಾಕಾಶವು ಎಂದು ಹೇಳಲ್ಪಡುತ್ತಿದೆ.

(ಕ) ಪ್ರಕಾಶಲಿಂಗ ತ್ರಿವಿಧಃ - ಇದರಲ್ಲಿ ಮೂರು ವಿಭಾಗಗಳಿವೆ. ಅವು ಯಾವವೆಂದರೆ, ಅವು ಕ್ರಿಯಾಪ್ರಕಾಶ, ಭಾವಪ್ರಕಾಶ, ಜ್ಞಾನಪ್ರಕಾಶ. ಅರುಹಿಗೆ ಪ್ರಕಾಶವೆಂಬ ಹೆಸರಿದೆ. ಈ ಪ್ರಕಾಶವು ಕ್ರಿಯೆಯಲ್ಲಿ ತೋರಿದರೆ ಕ್ರಿಯಾಪ್ರಕಾಶವು. ಭಾವದಲ್ಲಿ ತೋರಿದರೆ ಭಾವಪ್ರಕಾಶವು. ಭಿನ್ನತೆಗಳಳಿದು ಮಹಾಜ್ಞಾನವೇ ತೋರಿದಲ್ಲಿ ಅದು ಜ್ಞಾನಪ್ರಕಾಶವು.

ಹೀಗೆ ಶರಣನು ನಿಷ್ಪತ್ತಿಲಿಂಗ, ಆಕಾಶಲಿಂಗ, ಪ್ರಕಾಶಲಿಂಗ ಇವುಗಳನ್ನು ಸಾಧಿಸಿದಲ್ಲಿ ಅವೆಲ್ಲವುಗಳು ಪ್ರಸಾದಲಿಂಗದಲ್ಲಿ ಅಡಗುವವು. ಹೀಗೆ ಅಡಗಿದಲ್ಲಿ ಅದು ಪ್ರಸಾದಲಿಂಗದ ಪೂರ್ಣತೆಯು.

(೧೮) ಏಕೋತ್ತರ ಮಹಾಲಿಂಗಸ್ಥಲಃ— ಇವರಲ್ಲಿ ಹಿಂದಿನ ಸ್ಥಲಗಳ ಮೂಲಕ ಪ್ರಗತಿಯು ಪೂರ್ಣತೆಯನ್ನು ಹೊಂದಲು ಮುಂದೆ ಶರಣನ ಕ್ರಿಯೆಗಳು ನಿವೃತ್ತಿಯನ್ನು ಹೊಂದುವವು. ಮತ್ತು ಕಡೆಗೆ ಅವನು ಶೂನ್ಯ ಅಥವಾ ಬಯಲು ಸ್ಥಿತಿಯನ್ನು ಹೊಂದುವನು. ಇದರಲ್ಲಿಯೂ ಮೂರು ಮುಖ್ಯ ಭಾಗಗಳಿದ್ದು ಒಂದೊಂದು ಭಾಗದಲ್ಲಿ ಮೂರು ಮೂರು ವಿಭಾಗಗಳು ಅಂತು ಒಟ್ಟು ಒಂಬತ್ತು ವಿಭಾಗಗಳು ಇರುತ್ತವೆ. ೧ನೇ ವಿಭಾಗದಲ್ಲಿ ಕೊಂಡುದು ಪ್ರಸಾದಿಸ್ಥಲ, ನಿಂದುದೋಗರಸ್ಥಲ, ಚರಾಚರನಾಸ್ತಿಸ್ಥಲ ಎಂದಿವೆ ೨ನೆಯ ವಿಭಾಗದಲ್ಲಿ ಭಾಂಡಸ್ಥಲ, ಭಾಜನಸ್ಥಲ, ಅಂಗಲೇಪನಸ್ಥಲ ಎಂದಿವೆ. ೩ನೆಯ ವಿಭಾಗದಲ್ಲಿ ಸ್ವಪರ ಪರಿಯುದಸ್ಥಲ, ಭಾವಾಭಾವ ನಷ್ಟಸ್ಥಲ, ಮತ್ತು ಜ್ಞಾನಶೂನ್ಯಸ್ಥಲ ಎಂದಿವೆ.

೧ನೆಯ ವಿಭಾಗಃ— ಇದರಲ್ಲಿ ಕೊಂಡುದು ಪ್ರಸಾದಿಸ್ಥಲ, ನಿಂದುದೋಗರಸ್ಥಲ ಮತ್ತು ಚರಾಚರನಾಸ್ತಿಸ್ಥಲ ಇವು ಬರುತ್ತವೆ. ಲಿಂಗ

ದಲ್ಲಿ ಭಿನ್ನಭಾವವಳಿದು ಪರಮಾನಂದದಲ್ಲಿ ಪರಿಣಾಮಿಯಾಗಿರುವದೇ ಕೊಂಡುದು ಪ್ರಸಾದಿಸ್ಥಲ. ಹೀಗೆ ಪರಮಾನಂದವನ್ನು ಹೊಂದಲು ಮಹತ್‌ಸ್ಥಲವು ಉಂಟಾಗುವದು. ಅದೇ ನಿಂದುದೋಗರಸ್ಥಲವು. ಇದರ ಮುಂದೆ ಏನೇನೂ ಚಲಿಸದೆ ಚರಾಚರವೆಲ್ಲವೂ ನಾಸ್ತಿಯಾಗಲು ಅದು ಚರಾಚರನಾಸ್ತಿಸ್ಥಲ.

೨ನೆಯ ವಿಭಾಗ:— ಇದರಲ್ಲಿ ಭಾಂಡಸ್ಥಲ, ಭಾಜನಸ್ಥಲ, ಅಂಗಲೇಪನಸ್ಥಲಗಳು ಬರುತ್ತವೆ. ಹಿಂದಿನ ಸ್ಥಲಗಳ ಅನುಭವವನ್ನು ಹೊಂದಿ ಸರ್ವಾಚಾರ ಸಂಪತ್ತೆಂಬದು ಎಲ್ಲ ದ್ರವ್ಯಗಳಿಗೆ ಆಶ್ರಯಸ್ಥಾನವಾಗಲು ಅದು ಭಾಂಡಸ್ಥಲ. ಮುಂದೆ ಇದು ಐಕ್ಯನಿಗೂ ಕೂಡ ಭಾಜನವಾಗುವದು. ಇದು ಭಾಜನಸ್ಥಲ. ಇದರಿಂದ ಮಹಾಲಿಂಗವು ಲಿಂಗವನ್ನೆಲ್ಲ ಆವರಿಸಲು ಅದು ಅಂಗಲೇಪನಸ್ಥಲವು

೩ನೆಯ ವಿಭಾಗ:— ಇದರಲ್ಲಿ ಸ್ವಪರವರಿಯದಸ್ಥಲ, ಭಾವಾಭಾವನಷ್ಟಸ್ಥಲ ಮತ್ತು ಜ್ಞಾನಶೂನ್ಯಸ್ಥಲ ಹೀಗೆ ಮೂರು ವಿಭಾಗಗಳಿವೆ. ಎಲ್ಲ ತರದ ಭಿನ್ನತೆಗಳಡಗಿ ಸ್ವಯವೆಂಬ ನಿಜಸ್ಥಿತಿಯನ್ನು ಹೊಂದಲು ಅದು ಸ್ವಪರವರಿಯದ ಸ್ಥಲ. ಮುಂದೆ ಭಾವಾಭಾವಗಳೆರಡೂ ನಷ್ಟವಾಗುವವು. ಅದು ಭಾವಾಭಾವನಷ್ಟಸ್ಥಲ. ಮುಂದೆ ಮೂಲಜ್ಞಾನವನ್ನು ಹೊಂದಿ, ಜ್ಞಾನವೇ ತಾನಾಗಿ, ಜ್ಞಾನವು ನಿಜದಲ್ಲಿ ನಿಲ್ಲಲು ಅದು ಜ್ಞಾನಶೂನ್ಯಸ್ಥಲವು.

ಹೀಗೆ ಅಂಗಸ್ಥಲಗಳೂ ಲಿಂಗಸ್ಥಲಗಳೂ ಇದ್ದು ಅವುಗಳೆಲ್ಲವುಗಳ ಅನುಭವವನ್ನು ಹೊಂದಿ ಶೂನ್ಯದಲ್ಲಿ ನಿಲ್ಲುವದೇ ಜ್ಞಾನಶೂನ್ಯಸ್ಥಲ. ಈ ಷಟ್‌ಸ್ಥಲಗಳನ್ನರಿತವನೇ ಷಟ್‌ಸ್ಥಲ ಬ್ರಹ್ಮಿಯು. ಅವನೇ ಅಂತ್ಯದಲ್ಲಿ ಲಿಂಗಾಂಗ ಸಾಮರಸ್ಯವನ್ನು ಹೊಂದುವನು.

(೧೦೯) ಕ್ರಿಯೆಗಳು:— ಇವು ಅನೇಕ ವಿಧವಾಗಿರುತ್ತವೆ. ಅವುಗಳಲ್ಲಿ ಮುಖ್ಯವಾದ ವಿಭಾಗಗಳು ಯಾವವೆಂದರೆ— (೧) ೫೦ ತೆರದ ಆಚಾರಗಳು, (೨) ೫೩ ವಿಧದ ಇರವುಗಳು, (೩) ೩೨ ಕಳೆಗಳು



(೪) ಷಡ್ವಿಧ ವ್ರತಗಳು, (೫) ೬೪ ಶೀಲಗಳು, ಹೀಗೆ ಇರುತ್ತವೆ. ಇವುಗಳಲ್ಲಿ ವೀರಶೈವರ ನೈತಿಕ, ಸಾಮಾಜಿಕ, ಧಾರ್ಮಿಕ ಮತ್ತು ಆಚಾರ ವಿಷಯಕ ತತ್ವಗಳು ಅಡಕವಾಗಿರುತ್ತವೆ.

(೧೧೦) ಪಂಚಾಚಾರಗಳು:- ಕ್ರಿಯೆಗಳು ನಂ॥ ೧೦೯ ರಲ್ಲಿ ಹೇಳಿದಂತೆ ಅನೇಕವಾಗಿರುತ್ತವೆ. ಅವುಗಳ ಸಾರವನ್ನು ಷಟ್‌ಸ್ಥಲಶಾಸ್ತ್ರಜ್ಞರು ತೆಗೆದು ಅವನ್ನು ಪಂಚಾಚಾರ ಮತ್ತು ಸಪ್ತಾಚಾರಗಳಲ್ಲಿ ಸೇರ್ಪಡೆ ಮಾಡಿದ್ದಾರೆ. ಪಂಚಾಚಾರಗಳು ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಎಂದಿರುತ್ತವೆ. ಇವುಗಳ ಮೂಲಕ ಬಾಹ್ಯಕ್ರಿಯೆಗಳು ಶುದ್ಧವಾಗುತ್ತವೆ. ಅಲ್ಲದೆ ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ, ಸರ್ವಾಚಾರ ಸಂಪತ್ತಿನಾಚಾರ ಎಂಬ ೭ ವಿಭೇದಗಳು ಬೇರೆ ಇವೆ. ಇವುಗಳಿಂದ ಅಂತರಂಗ ಕ್ರಿಯೆಗಳು ಶುದ್ಧವಾಗುತ್ತವೆ.

(೧೧೧) ಲಿಂಗಾಚಾರ:— ಗುರುವಿನ ಮೂಲಕ ಧಾರಣಮಾಡಿದ ಇಷ್ಟಲಿಂಗವಲ್ಲದೆ ಅನ್ಯಸ್ಥಾವರ ಲಿಂಗಗಳನ್ನಾಗಲಿ ಇತರ ದೇವತೆಗಳನ್ನಾಗಲಿ ಸೇವಿಸದೆ ಇರುವದು ಲಿಂಗಾಚಾರವು.

(೧೧೨) ಸದಾಚಾರ:— ಸತ್ಯಶುದ್ಧ ಕಾಯಕವನ್ನು ಮಾಡುತ್ತ ಸಮಸ್ತ ಪ್ರಾಣಿಗಳಲ್ಲಿ ಪಾತ್ರಾಪಾತ್ರವ ತಿಳಿದು ಪರಹಿತಾರ್ಥ ಮಾಡುವದೇ ಸದಾಚಾರವು.

(೧೧೩) ಶಿವಾಚಾರ:— ಶಿವಭಕ್ತರಲ್ಲಿ ಜಾತಿ ವರ್ಣಗಳನ್ನು ಎಣಿಸದೆ ಸಮಯಾಚಾರವುಳ್ಳವನಾಗಿ ಶಿವಾರ್ಪಣ ಬುದ್ಧಿಯಿಂದ ಆಚರಿಸುವದೇ ಶಿವಾಚಾರವು.

(೧೧೪) ಗಣಾಚಾರ:— ವೀರಶೈವರಿಗೆ ಕುಂದು ನಿಂದೆಗಳು ಬಂದರೆ ಅವುಗಳನ್ನು ತರಿಹರಿಸದೆ ತಕ್ಕ ಪ್ರತೀಕಾರ ಮಾಡುವದೇ ಗಣಾಚಾರವು.

(೧೧೫) ಭೃತ್ಯಾಚಾರಃ— ಶಿವಶರಣರು ಹಿರಿಯರಾಗಿ ತಾನೇ ಕಿರಿಯನಾಗಿ ಭಯಭಕ್ತಿಯಿಂದ ಅವರೊಡನೆ ಆಚರಿಸುವದು ಭೃತ್ಯಾಚಾರವು.

(೧೧೬) ಸಪ್ತಾಚಾರಗಳುಃ— ಇವು ಮೇಲೆ ಹೇಳಿದಂತೆ ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ ಸರ್ವಾಚಾರ ಸಂಪತ್ತಿನಾಚಾರ, ಎಂದು ಏಳು ವಿಧಗಳಾಗಿವೆ. ಇವುಗಳ ಮೂಲಕ ಮನುಷ್ಯನ ಅಂತರಂಗ ಕ್ರಿಯೆಗಳು ಶುದ್ಧವಾಗುತ್ತವೆ.

(೧೧೭) ಕ್ರಿಯಾಚಾರಃ— ಭಕ್ತನು ದೀಕ್ಷೆಯನ್ನು ಹೊಂದಿ ನಿತ್ಯಕರ್ಮಗಳನ್ನು ಮಾಡುತ್ತ ಮಂತ್ರದಲ್ಲಿ ನಿಂದ ನಿಜಾವಸ್ಥೆಯು ಕ್ರಿಯಾಚಾರವು. ಇದರಿಂದ ಕರ್ಮೇಂದ್ರಿಯಗಳು ಪವಿತ್ರವಾಗುತ್ತವೆ.

(೧೧೮) ಜ್ಞಾನಾಚಾರಃ–ಶಿವಶರಣರ ವಚನಾನುಭವವನ್ನು ಹೊಂದಿ ಅವುಗಳಂತೆ ಆಚರಿಸುವವೇ ಜ್ಞಾನಾಚಾರವು. ಇದರಿಂದ ಜ್ಞಾನೇಂದ್ರಿಯಗಳು ಪವಿತ್ರವಾಗುವವು.

(೧೧೯) ಭಾವಾಚಾರಃ— ಆತ್ಮಾನುಭವವನ್ನು ಹೊಂದಿ ದುರ್ಗುಣಗಳನ್ನು ತ್ಯಜಿಸಿ ಸದ್ಗುಣಗಳನ್ನು ಹಿಡಿಯುವದೇ ಭಾವಾಚಾರವು. ಇದರಿಂದ ಮನುಷ್ಯನ ಕರಣಗಳು ಪವಿತ್ರವಾಗುತ್ತವೆ.

(೧೨೦) ಸತ್ಯಾಚಾರಃ— ಕೊಟ್ಟ ಭಾಷೆಯನ್ನು ಪ್ರಾಣಾಂತ್ಯದವರೆಗೂ ನಡೆಯಿಸುವದು ಸತ್ಯಾಚಾರವು. ಇದರಿಂದ ವಿಷಯಗಳ ಮೇಲಿನ ಲೋಲುಪತೆಯು ಹೋಗಿ ದೃಢಭಾವವು ನೆಲೆಗೊಳ್ಳುತ್ತದೆ.

(೧೨೧) ನಿತ್ಯಾಚಾರಃ— ಲಿಂಗಾಣತಿಯಿಂದ ಬಂದುದನ್ನು ಸೇವಿಸುತ್ತ ಪ್ರಸಾದದಲ್ಲಿ ಲೋಲುಪ್ತನಾಗಿರುವದು ನಿತ್ಯಾಚಾರವು. ಇದರಿಂದ ಮನುಷ್ಯನು ಮಹಾಪ್ರಸಾದಿ ಎಂದೆನಿಸಿಕೊಳ್ಳುವನು.



(೧೨೨) ಧರ್ಮಾಚಾರಃ— ಪ್ರಣವ ಮಹಾಮಂತ್ರದಲ್ಲಿ ಲೋಲುಪ್ತನಾಗಿ ಆಚರಿಸುವದು ಧರ್ಮಾಚಾರವು. ಇದರಿಂದ ಲಿಂಗಾಂಗಗಳು ಏಕರೂಪತೆಯನ್ನು ಹೊಂದುವವು.

(೧೨೩) ಸರ್ವಾಚಾರ ಸಂಪತ್ತಿನಾಚಾರಃ— ಷಟ್‌ಸ್ಥಲದ ಪ್ರಕಾರ ವರ್ತಿಸುತ್ತ ಏಕೋತ್ತರ ಮಾರ್ಗದಲ್ಲಿ ನಿಂದು ಬಚ್ಚ ಬರಿಯ ನಿರವಯವನ್ನು ಸಾಧಿಸುವದೇ ಸರ್ವಾಚಾರ ಸಂಪತ್ತಿನಾಚಾರವು. ಇದರಿಂದ ಸರ್ವಾಂಗದಲ್ಲಿ ಜ್ಞಾನಜ್ಯೋತಿಯುಂಟಾಗುತ್ತದೆ.

(೧೨೪) ಅಷ್ಟಾವರಣಗಳುಃ— ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವು ಅಷ್ಟಾವರಣಗಳು. ಇವುಗಳಲ್ಲಿ ಬಾಹ್ಯ ಅಷ್ಟಾವರಣಗಳು, ಅಂತರಂಗ ಅಷ್ಟಾವರಣಗಳು ಎಂದು ಎರಡು ವಿಭೇದಗಳಿವೆ. ಹಾಗೆಯೇ ಇವುಗಳು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ತೋರಿದಂತೆ ಅವುಗಳಲ್ಲಿ ಬೇರೆ ಮೂರು ವಿಧಗಳನ್ನು ಮಾಡಬಹುದು.

(೧೨೫) ಗುರುಃ – ಭಕ್ತನಿಗೆ ದೀಕ್ಷೆಯನ್ನು ಮಾಡಿ ಅವನಿಗೆ ಲಿಂಗಾಂಗಿ ಧರ್ಮದ ಉಪದೇಶವನ್ನು ಗುರುವು ಮಾಡುವನು. ಹಾಗೆ ಉಪದೇಶಮಾಡಿದಂತೆ ನಡೆದಲ್ಲಿ ಭಕ್ತನ ಲಿಂಗ ಮನ ಭಾವಗಳಲ್ಲಿ ಆಯಾ ಲಿಂಗಗಳು ಪ್ರಕಟವಾಗುವವು. ಇದು ಗುರುವಿನ ಕಾರ್ಯವು. ಬಾಹ್ಯ ಕ್ರಿಯೆಗಳಿಗೆ ಸಂಬಂಧಿಸಿದ್ದು.

(೧೨೬) ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರುಃ – ಇವು ಗುರುವಿನ ಭೇದಗಳು. ಅಂಗಕ್ಕೆ ಲಿಂಗವನ್ನು ಅನುಗೊಳಿಸಿದಲ್ಲಿ ದೀಕ್ಷಾಗುರುವು. ಮನಕ್ಕೆ ಅರುಹ ತೋರಿದಲ್ಲಿ ಶಿಕ್ಷಾಗುರುವು. ಸಾಮರಸ್ಯದ ಗುಟ್ಟನ್ನು ತೋರಿಸಿ ಜೀವನ ಭವವನ್ನು ಕಳೆದಲ್ಲಿ ಜ್ಞಾನಗುರುವು. ದೀಕ್ಷಾ ಗುರುವುಳ್ಳವನಾದರೆ ಆಚಾರಸಹಿತನಾಗುತ್ತಾನೆ. ಶಿಕ್ಷಾ ಗುರುವಾದಲ್ಲಿ ಕ್ರಿಯೆಯಲ್ಲಿ ನಿಶ್ಚಯ ಬುದ್ಧಿಯುಳ್ಳವನಾಗುತ್ತಾನೆ. ದೀಕ್ಷಾ ಗುರು

ವಾವಲ್ಲಿ ಸರ್ವೇಂದ್ರಿಯ ವ್ಯಾಮೋಹರಹಿತನಾಗಿ ಪರಂಜ್ಯೋತಿ ಪ್ರಕಾಶ ಸ್ವರೂಪನಾಗಿ ವ್ಯವಹರಿಸುತ್ತಾನೆ. ಇವುಗಳಿಗೆ ಅನುಕ್ರಮವಾಗಿ ಕ್ರಿಯಾ ಗುರು, ಜ್ಞಾನಗುರು, ಮಹಾಜ್ಞಾನಗುರು ಎಂಬ ಹೆಸರುಗಳೂ ಉಂಟು.

(೧೨೭) ಲಿಂಗ:— ಗುರುವು ಭಕ್ತನಿಗೆ ಉಪದೇಶ ಮಾಡುವಲ್ಲಿ ಅವನ ಬಾಹ್ಯ ಆಚರಣೆಗೋಸ್ಕರ ಕರುಣಿಸಿದ ಚಿನ್ಹವು ಇದಾಗಿದೆ. ಅದರ ಮೂಲಕ ಭಕ್ತನು ತನ್ನ ತನು ಮನ ಭಾವಗಳಲ್ಲಿ ಪರವಸ್ತುವಿನ ಕಳೆಯನ್ನು ಪ್ರಕಟಮಾಡಿಕೊಳ್ಳುತ್ತಾನೆ.

(೧೨೮) ಲಿಂಗಾಯತ, ಲಿಂಗಸ್ವಾಯತ, ಲಿಂಗಸನ್ನಿಹಿತ:— ಲಿಂಗವು ಅಂಗದಲ್ಲಿ ಸ್ಥಾಪಿತವಾದಲ್ಲಿ ಲಿಂಗಾಯತವು, ಮನದಲ್ಲಿ ಸ್ಥಾಪಿತವಾದಲ್ಲಿ ಲಿಂಗಸ್ವಾಯತವು, ಭಾವದಲ್ಲಿ ಸ್ಥಾಪಿತವಾದರೆ ಲಿಂಗಸನ್ನಿಹಿತವು. ಸ್ಥೂಲತನುವಿನಲ್ಲಿ ಇಷ್ಟಲಿಂಗ ಪ್ರತಿಷ್ಠೆ, ಸೂಕ್ಷ್ಮ ತನುವಿನಲ್ಲಿ ಪ್ರಾಣಲಿಂಗ ಪ್ರತಿಷ್ಠೆ, ಮತ್ತು ಕಾರಣ ತನುವಿನಲ್ಲಿ ಭಾವಲಿಂಗ ಪ್ರತಿಷ್ಠೆ, ಈ ಪ್ರಕಾರ ಸಂಬಂಧವಿರುತ್ತದೆ. ಮುಂದೆ ಆ ಲಿಂಗವು ಮಂತ್ರರೂಪವಾಗಿ ಆರು ಚಕ್ರಗಳಲ್ಲಿ ಸ್ಥಾಪಿತವಾಗಲು ಅದು ಆಚಾರಾದಿ ಆರು ಲಿಂಗಗಳ ಸ್ವರೂಪವನ್ನು ಹೊಂದುತ್ತದೆ. ಇವುಗಳೆಲ್ಲವು ಬಾಹ್ಯ ಇಷ್ಟಲಿಂಗದಲ್ಲಿಯೂ ಕೂಡ ಸಂಬಂಧಪಡುತ್ತವೆ. ಹೇಗೆಂದರೆ- ಪೀಠ, ಗೋಳಕ, ಗೋಮುಖಗಳಲ್ಲಿ ಇಷ್ಟಪ್ರಾಣ ಭಾವ ಲಿಂಗಗಳು. ಪೀಠ, ಕಟಿ, ವರ್ತುಳ, ಗೋಮುಖ, ನಾಳ, ಮಸ್ತಕಗಳಲ್ಲಿ ಅನುಕ್ರಮವಾಗಿ ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹತ್ ಈ ಲಿಂಗಗಳು ಸ್ಥಾಪಿತವಾಗುತ್ತವೆ. ಈ ಪ್ರಕಾರ ಭಾವಿಸಿ ಇಷ್ಟಲಿಂಗದ ಕ್ರಿಯೆಗಳನ್ನು ಮಾಡತಕ್ಕದ್ದು. ಮೇಲೆ ಹೇಳಿದ ಮೂರು ವಿಧ ಲಿಂಗಗಳಿಗೆ ಕ್ರಿಯಾಲಿಂಗ, ಜ್ಞಾನಲಿಂಗ, ಮಹಾಜ್ಞಾನ ಲಿಂಗಗಳೆಂತಲೂ ಅನುಕ್ರಮವಾಗಿ ಹೆಸರುಗಳಿವೆ.

(೧೨೯) ಜಂಗಮ:— ಜಂಗಮನು ಅಂಗ ವಿಕಾರಗಳನ್ನು ದೂರ ಮಾಡಿ, ಷಟ್‌ಸ್ಥಲಾಚರಣೆಯುಳ್ಳವನಾಗಿ, ಶಿವತತ್ವವನ್ನೊಳಕೊಂಡು



ಆಚರಿಸುತ್ತಾನೆ ಅವನು ಭಾವದಲ್ಲಿ ಲಿಂಗಪರಿಪೂರ್ಣನು, ಲಿಂಗಚೈತನ್ಯನು, ಅನುಭಾವಿಯು. ಆನಂದಸ್ವರೂಪನು ಆಗಿರುತ್ತಾನೆ. ಜಂಗಮವು ಮೂರು ವಿಧ ಶರೀರಗಳ ಮೇಲೆಯೂ ಪರಿಣಾಮ ಮಾಡುತ್ತಾನೆ. ಆಗ ಅನುಕ್ರಮವಾಗಿ ಕ್ರಿಯಾ ಜಂಗಮ, ಜ್ಞಾನಜಂಗಮ, ಮಹಾಜ್ಞಾನಜಂಗಮ ಎಂಬ ಹೆಸರುಗಳುಂಟಾಗುತ್ತವೆ

(೧೩೦) ಚಕ್ರಸನ್ನಿಹಿತ ಆರು ಲಿಂಗಗಳು:— ಈ ಲಿಂಗಗಳಿಗೆ ಕೆಳಗೆ ಕಾಣಿಸಿದಂತೆ ಹೆಸರುಗಳಿವೆ. ನಾಲ್ಕು ದಳಗಳುಳ್ಳ ಆಧಾರ ಚಕ್ರದಲ್ಲಿಯ ಲಿಂಗಕ್ಕೆ ಚತುರ್ವಿಧ ಬಿಂದು ಲಿಂಗವೆಂತಲೂ ಆರು ದಳಗಳುಳ್ಳ ಸ್ವಾಧಿಷ್ಠಾನ ಚಕ್ರದಲ್ಲಿಯ ಲಿಂಗಕ್ಕೆ ಷಡ್ವಿಧ ಧಾತುಲಿಂಗವೆಂತಲೂ, ಹತ್ತು ದಳಗಳುಳ್ಳ ಮಣಿಪೂರಕ ಚಕ್ರದಲ್ಲಿಯ ಲಿಂಗಕ್ಕೆ ದಶವಿಧ ಕ್ಷೇತ್ರಲಿಂಗವೆಂತಲೂ, ಹನ್ನೆರಡು ದಳಗಳುಳ್ಳ ಅನಾಹತ ಚಕ್ರದಲ್ಲಿಯ ಲಿಂಗಕ್ಕೆ ದ್ವಾದಶವಿಕೃತಿಲಿಂಗವೆಂತಲೂ, ಹದಿನಾರು ದಳಗಳುಳ್ಳ ವಿಶುದ್ಧಿ ಚಕ್ರದಲ್ಲಿಯ ಲಿಂಗಕ್ಕೆ ಷೋಡಶಕಳಾ ಲಿಂಗವೆಂತಲೂ. ಎರಡು ದಳಗಳುಳ್ಳ ಆಜ್ಞಾ ಚಕ್ರದಲ್ಲಿಯ ಲಿಂಗಕ್ಕೆ ದ್ವಿವಿಧ ವಿದ್ಯಾಲಿಂಗವೆಂತಲೂ ಸಹಸ್ರದಳಗಳುಳ್ಳ ಬ್ರಹ್ಮಚಕ್ರದಲ್ಲಿಯ ಲಿಂಗಕ್ಕೆ ಸಹಸ್ರಶಿವಕಳಾ ಲಿಂಗವೆಂತಲೂ, ಮೂರು ದಳಗಳುಳ್ಳ ಶಿಖಾಚಕ್ರದಲ್ಲಿಯ ಲಿಂಗಕ್ಕೆ ತ್ರಿವಿಧವಿವೇಕಲಿಂಗವೆಂತಲೂ ಹೆಸರುಗಳಿವೆ. ಈ ಹೆಸರುಗಳು ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮಹಾಲಿಂಗಗಳೇ ಇರುತ್ತವೆ. ಮತ್ತು ಕಡೆಯ ಎರಡರಲ್ಲಿ ಇಷ್ಟಲಿಂಗ, ಪ್ರಾಣಲಿಂಗಗಳೂ ಎಲ್ಲಕ್ಕೂ ಕಡೆಯದಾದ ಪಶ್ಚಿಮಚಕ್ರದಲ್ಲಿ ಭಾವಲಿಂಗವೂ ಸ್ಥಾಪಿತವಾಗಿರುತ್ತವೆ.

(೧೩೧) ಭಕ್ತ—ಜಂಗಮ:— ಜಂಗಮವು ಚೈತನ್ಯಾತ್ಮಕವಾದುದು. ಅದು ನಿರವಯವು. ಇಂಥ ಜಂಗಮವು ವ್ಯವಹರಿಸಲು ಅದಕ್ಕೆ ಒಂದು ಅಂಗವು ಅಥವಾ ಸ್ಥೂಲವಾದುದು ಬೇಕು. ಅವೆರಡೂ ಸಹಕರಿ

ಸಿದಲ್ಲಿಯೇ ಈ ಉಭಯ ವಸ್ತುಗಳ ಕ್ರಿಯೆಗಳು ಸಂಭವಿಸುತ್ತವೆ. ಭಕ್ತ
ಜಂಗಮುಗಳಿಗೆ ಈ ವಿಧದ ಸಂಬಂಧವಿದೆ.

(೧೩.೨) ಗುರು—ಲಿಂಗ:— ಲಿಂಗ ಧಾರಣವು ಗುರುಮುಖ
ಗಿರುತ್ತದೆ. ಆಗ ಗುರುತತ್ವವು ಭಕ್ತನಲ್ಲಿ ಲಿಂಗರೂಪವಾಗಿ ವಾಸವಾಗು
ತ್ತದೆ. ಆದ್ದರಿಂದ ಬಾಹ್ಯದಲ್ಲಿ ಗುರುವು. ಅಂತರಂಗದಲ್ಲಿ ಅದು ಲಿಂಗವು

(೧೩.೩) ಗುರು—ಜಂಗಮುಗಳು:— ಭಕ್ತನು ಗುರುತತ್ವ ಸಂಬಂಧ
ವುಳ್ಳವನಾಗಬೇಕು. ಆಗ ಇಂಥ ಗುರುವಿನ ಮೂಲಕ ಭಕ್ತನು ಲಿಂಗವನ್ನು
ಹೊಂದಿ ಉಚ್ಚ ಗುಣಗಳನ್ನು ಒಳಕೊಳ್ಳುತ್ತಾನೆ. ಹೀಗಿರುವದು ಭಕ್ತ
ನಲ್ಲಿ ಗುರುವಿದ್ದದ್ದರ ಚಿನ್ಹವು. ಇಂಥ ಕ್ರಿಯಾ ರೂಪವಾದ ಗುರು
ವಿಗೆ ಜಂಗಮವು ಪ್ರಾಣವಾಗಿರುತ್ತದೆ. ಹೀಗೆ ಗುರುವಿಗೆ ಜಂಗಮವೇ
ಆಧಾರವು. ಗುರುವಿನಿಂದ ಭಕ್ತನ ಅರಿವೂ ಆಚಾರಗಳೂ ಉಂಟಾ
ಗುತ್ತವೆ. ಆದರೂ ಅವು ಜಂಗಮ ಮುಖವಾಗಿ ಬರುತ್ತಿವೆ. ಈ ಬಗೆ
ಯಾಗಿ ಗುರುಜಂಗಮವನ್ನು ತಿಳಿದು ಆಚರಿಸಿದಲ್ಲಿ ಶಿವಪ್ರಸಾದವು
ನೆಲೆಗೊಳ್ಳುತ್ತದೆ. ಈ ಪ್ರಸಾದವೇ ಸಾಮರಸ್ಯವು. ಇದು ಗುರುಜಂಗ
ಮಗಳ ಸಂಬಂಧವು.

(೧೩.೪) ಲಿಂಗ—ಜಂಗಮವು:— ಶಿವ ಮತ್ತು ಶಕ್ತಿಗಳಲ್ಲಿ ಹೇಗೆ
ಸಂಬಂಧವೋ ಹಾಗೆ ಅನುಕ್ರಮವಾಗಿ ಲಿಂಗ ಜಂಗಮತತ್ವಗಳ ಸಂಬಂಧ
ವಿರುತ್ತದೆ. ಶಿವ ಶಕ್ತಿಗಳು ಪರಸ್ಪರಾವಲಂಬಿಗಳು. ಹಾಗೆಯೇ ಲಿಂಗ
ಜಂಗಮುಗಳು ಪರಸ್ಪರಾವಲಂಬಿಗಳು.

ಆದ್ದರಿಂದ ಜಂಗಮವನ್ನು ಬಿಟ್ಟು ಲಿಂಗವಿರಲಾರದು. ಅಂದರೆ
ಈ ಜಂಗಮವು ಲಿಂಗಕ್ಕೆ ಚೈತನ್ಯಾತ್ಮಕವಾಗಿರುತ್ತದೆ.

ಗುರುಕರುಣವೇ ಲಿಂಗವು. ಈ ಲಿಂಗದ ನಿಜತ್ವವೇ ಜಂಗಮ
ವೆಂದು ಹೇಳಲ್ಪಡುತ್ತದೆ. ಆದ್ದರಿಂದ ಲಿಂಗ ಜಂಗಮುಗಳು ಒಂದ



ನ್ನೊಂದು ಬಿಟ್ಟು ವ್ಯವಹರಿಸಲಾರವು. ಹೇಗೆ ದೀಪಕ್ಕೆ ಪ್ರಕಾಶವು ಸಂಬಂ
ಧಪಡುತ್ತದೆಯೋ ಹಾಗೆ ಲಿಂಗಕ್ಕೆ ಜಂಗಮವು ಸಂಬಂಧಪಡುತ್ತದೆ.
ಜಂಗಮವು ಲಿಂಗದ ಪ್ರಕಾಶದಂತಿರುತ್ತದೆ. ಮಣ್ಣಿಲ್ಲದೆ ಮರನಾಗದು.
ಮರನಿಲ್ಲದೆ ಹಣ್ಣಾಗದು. ಹಾಗೆಯೇ ಅಂಗವು ಮಣ್ಣಿನಂತೆ, ಲಿಂಗವು ಮರ
ನಂತೆ, ಫಲವು ಜಂಗಮನ ತೆರನಂತೆ ಲಿಂಗವು ಸಕ್ಕರೆಯಂತಿದ್ದರೆ ಜಂಗ
ಮವು ರುಚಿಯಂತೆ. ಹೀಗೆ ವಚನಕಾರರು ಲಿಂಗಜಂಗಮುಗಳ ಸಂಬಂ
ಧವನ್ನು ತೋರಿಸುತ್ತಾರೆ ಒಟ್ಟಿಗೆ ಲಿಂಗದ ಕಳೆಯೇ ಜಂಗಮವೆಂದು
ಹೇಳಬಹುದು.

ತನುವನ್ನವಲಂಬಿಸಿ ಲಿಂಗವಿರುತ್ತದೆ. ಮನವನ್ನವಲಂಬಿಸಿ ಅನು
ಭಾವವಿದೆ. ಈ ಅನುಭಾವವೇ ಜಂಗಮವಾಗಿದೆ. ತನು, ಮನ, ಅನು
ಭಾವ ಇವುಗಳ ಸಂಬಂಧವು ಹೇಗೋ, ಹಾಗೆಯೇ ಲಿಂಗಜಂಗಮುಗಳ
ಸಂಬಂಧವಿರುತ್ತದೆ.

ಉಚ್ಚತರದ ಆಚಾರವೇ ಲಿಂಗವೆಂದು ನಾವು ಹೇಳಬಹುದು.
ಈ ಆಚಾರದ ತಿಳುವಳಿಕೆಯೇ ಜಂಗಮವು. ಈ ರೀತಿ ಲಿಂಗದಲ್ಲಿಯೇ
ಜಂಗಮವಿದೆಂದು ಭಾವಿಸಬೇಕು.

ಅಂತರಂಗದ ಜ್ಞಾನವು ಜಂಗಮವಾಗಿದೆ. ಆ ಜಂಗಮದ ವರ್ತ
ನೆಯೇ ಲಿಂಗವು. ಆ ಎರಡೂ ಕೂಡಿದಲ್ಲಿ ಬಹಿರಂಗ ಕ್ರಿಯೆಯು ತೋರು
ತ್ತದೆ. ಈ ಕ್ರಿಯೆಯೇ ಗುರುಸ್ವರೂಪವು. ಹೀಗೆ ಲಿಂಗ ಜಂಗಮ
ಗುರು ಇವುಗಳ ಸಂಬಂಧವಿದೆ.

ಆದ್ದರಿಂದ ಜಂಗಮವಿರಹಿತ ಲಿಂಗವಿರಲಾರದು. ಮತ್ತು ಲಿಂಗ
ವಿರಹಿತ ಜಂಗಮವೂ ಇರಲಾರದು.

(೧೩.೫) ಲಿಂಗ—ಜಂಗಮ—ಭಕ್ತ:— ನಾದಸ್ವರೂಪವು ಜಂಗ
ಮವು. ನಾದವು ಶಕ್ತಿರೂಪವಾದ್ದರಿಂದ ನಾದವೇ ಜಂಗಮವೆಂದು ಹೇಳಲ್ಪ

ದುತ್ತಿದೆ. ಬಿಂದುಸ್ವರೂಪವು ಲಿಂಗವು. ಮತ್ತು ಈ ಉಭಯಕ್ಕೆ ಆಧಾರವಾ ದುದು ಭಕ್ತನು. ಹೀಗೆ ಈ ಮೂವರ ಸಂಬಂಧವಿದೆ. ಲಿಂಗವು ಸತ್‌ಸ್ವರೂ ಪವು. ಭಕ್ತನು ಚಿತ್ ಸ್ವರೂಪವು. ಜಂಗಮವು ಆನಂದ ಸ್ವರೂಪವು. ಭಕ್ತನ ಅಂಗವು ಲಿಂಗವು. ಭಕ್ತನ ಪ್ರಾಣವು ಜಂಗಮವು. ಹೀಗೆ ಭಕ್ತ ಲಿಂಗ ಜಂಗಮಗಳ ಪರಸ್ಪರ ಸಂಬಂಧವಿದೆ.

(೧೩೬) ಲಿಂಗ ಮುಖ ಸಂಬಂಧಗಳು:— ಲಿಂಗದ ಪಿಂಡಿಕೆಯು ನಾದ ಸ್ವರೂಪವಾದುದು. ಅದರ ಪೀಠಿಕೆಯು ಮಹಾಶಕ್ತಿಯ ದ್ಯೋತಕವು. ಅದು ಬಿಂದು ರೂಪವು. ಈ ಪಿಂಡಿಕೆಯು ಪೀಠಿಕೆಯೊಡನೆ ಇರಲು ಅದ ರಲ್ಲಿ ಕಲೆಯು ತಲೆದೋರುತ್ತದೆ. ಹೀಗೆ ಲಿಂಗವು ನಾದಬಿಂದು ಕಲಾ ತ್ಮಕವಾಗಿದೆ. ಇಷ್ಟಲಿಂಗದ ಪೀಠವೇ ಇಷ್ಟಲಿಂಗವು, ಅದರ ಗೋಮು ಖವೇ ಪ್ರಾಣಲಿಂಗವು, ಗೋಳಕವೇ ಭಾವಲಿಂಗವು. ಹಾಗೆಯೇ ಈ ಲಿಂಗದಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗಗಳು ಸಂಬಂಧಪಡುತ್ತವೆ. ಇಷ್ಟಲಿಂಗದ ಆರು ಭಾಗಗಳಿಗೆ ಅವು ಸಂಬಂಧಿಸುತ್ತವೆ. ಈ ಆರು ಲಿಂಗಗಳೊಡನೆ ಅವುಗಳಿಗೆ ಸಂಬಂಧಿಸಿವ ಸಕೀಲಗಳೂ ಕೂಡ ಇಷ್ಟಲಿಂಗದಲ್ಲಿ ಸಂಬಂಧಿ ಸುತ್ತವೆ.

(೧೩೭) ಗುರು, ಲಿಂಗ, ಜಂಗಮಗಳು: — ಈ ಮೂರು ತತ್ವಗಳು ತನಗೆ ಸಂಬಂಧಪಡುತ್ತವೆ. ಕಾಯವು ಗುರುವು, ಪ್ರಾಣವು ಲಿಂಗವು, ಜ್ಞಾನವು ಜಂಗಮವಾಗಿರುತ್ತದೆ. ಆದ್ದರಿಂದ ಕಾಯದಲ್ಲಿ ಗುರುತತ್ವವನ್ನೂ ಜೀವ ದಲ್ಲಿ ಲಿಂಗತತ್ವವನ್ನೂ ಭಾವದಲ್ಲಿ ಜಂಗಮತತ್ವವನ್ನೂ ಕಾಣಬೇಕು. ಹೀಗೆ ಕಾಣುವಲ್ಲಿ ಪೂಜಿಸಿ ಗುರುವನ್ನು ಕಾಣಬೇಕು. ಧ್ಯಾನಿಸಿ ಲಿಂಗವನ್ನು ಕಾಣಬೇಕು. ಈ ಉಭಯದಲ್ಲಿದ್ದುಕೊಂಡು ಸಾಮರಸ್ಯ ಜ್ಞಾನದಿಂದ ಜಂಗಮವನ್ನು ಕಾಣಬೇಕು. ಹೀಗೆ ವರ್ತಿಸಿದಲ್ಲಿ ಗುರುಲಿಂಗ ಜಂಗಮ ತತ್ವಗಳು ತನ್ನಲ್ಲಿ ಒಳಕೊಳ್ಳುತ್ತವೆ. ಗುರುವು ಭಕ್ತನ ಚಿತ್ತವನ್ನರಿಯ ಬೇಕು. ಲಿಂಗವು ಭಕ್ತನ ಚಿತ್ತಿನಲ್ಲಿ ಅಚ್ಚೊತ್ತಿದಂತಿರಬೇಕು. ಜಂಗ



ಮವು ವ್ಯವಹಾರದ ಜಂಜಡಕ್ಕೆ ಸಿಲುಕಬಾರದು. ಹೀಗೆ ಭಕ್ತನ ವರ್ತನೆ ಇರಬೇಕು. ಗುರುವು ಸಕಲವು, ಲಿಂಗವು ನಿಃಕಲವು, ಜಂಗಮವು ಸಕಲ ನಿಃಕಲವಾಗಿವೆ. ಗುರುವಿನಲ್ಲಿ ಸದಾಚಾರವಿರಬೇಕು. ಲಿಂಗದಲ್ಲಿ ಶಿವಾ ಚಾರ, ಜಂಗಮದಲ್ಲಿ ಸಮಯಾಚಾರವಿರಬೇಕು. ಜಂಗಮವು ಚೈತ ನ್ಯಾತ್ಮಕವಾದುದು. ಅಂದರೆ ಅದರ ಗುಣವು ಚರಿಸುವಂತಹದು. ಆದರೆ ಒಂದೆಡೆಗೆ ನೆಲಸಿರುವದು ಲಿಂಗದ ಗುಣವು. ಇದರ ಇರವನ್ನು ಅರು ಹಿದಲ್ಲಿ ಅದು ಗುರುವು. ಇಂಥ ಗುರುವಿಡಿದು ಲಿಂಗವನ್ನು ಕಾಣಬೇಕು. ಇಂಥ ಲಿಂಗವು ಸಾಕಾರವಾದುದು. ಈ ಸಾಕಾರವನ್ನು ನಿರಾಕಾರವಿಡಿದು ಕಾಣಬೇಕು. ಯಾಕಂದರೆ ನಿರಾಕಾರದ ದ್ಯೋತಕವು ಈ ಸಾಕಾರವಿರುತ್ತದೆ. ಆದರೆ ಈ ನಿರಾಕಾರವನ್ನು ಜಂಗಮವಿಡಿದು ಕಾಣಬೇಕು. ಈ ಜಂಗಮ ವಿಲ್ಲದೆ ಹೋದರೆ ಆ ನಿರಾಕಾರವು ತೋರದು. ಈ ಮೂರು ವಸ್ತುಗಳು ಪರಶಿವನ ಸ್ವರೂಪವೆಂದು ಭಾವಿಸಿ ಅವುಗಳೊಡನೆ ವರ್ತಿಸಬೇಕು. ಹಾಗೂ ಅವುಗಳ ಮರ್ಮವನ್ನು ತಿಳಿದು ಭಕ್ತನು ಆಚರಿಸಬೇಕು. ಇದ ರಿಂದ ಗುರುಲಿಂಗಜಂಗಮಗಳು ತಿಳಿಯುವವು.

ಗುರುಲಿಂಗಜಂಗಮಗಳ ಸ್ವರೂಪಗಳು ಮೇಲೆ ಹೇಳಿದಂತಿದ್ದುದ ರಿಂದ ಅವುಗಳನ್ನು ತನ್ನಲ್ಲಿಯೇ ಕಾಣಬೇಕು. ತನುವಿಗೆ ಗುರುವಿನ ಸಂಬಂಧವಿದೆ. ಮನಸ್ಸಿಗೆ ಲಿಂಗದ ಸಂಬಂಧವಿದೆ. ಮತ್ತು ಜ್ಞಾನಕ್ಕೆ ಜಂಗಮ ಸಂಬಂಧವಿದೆ ಆದ್ದರಿಂದ ಕಾಯದಿಂದ ಗುರುವನ್ನು, ಮನ ಅಥವಾ ಜೀವದಿಂದ ಲಿಂಗವನ್ನು, ಭಾವ ಅಥವಾ ಜ್ಞಾನದಿಂದ ಜಂಗ ಮವನ್ನು ಒಳಕೊಳ್ಳಬೇಕು ಗುರುವು ನಾದವು, ಲಿಂಗವು ಬಿಂದುವು, ಜಂಗಮವು ಕಳೆಯು, ಹೀಗೆ ಅವು ಹೇಳಲ್ಪಡುತ್ತವೆ. ಆದರೆ ಈ ಮೂರರಲ್ಲಿ ಸಾಮರಸ್ಯವಿರುತ್ತದೆ. ಆದ್ದರಿಂದ ಆಚಾರವೇ ಲಿಂಗವೆಂದು ತಿಳಿಯ ಬೇಕು. ಪ್ರಾಣದಲ್ಲಿ ಅರಿವನ್ನು ನೆಲೆಗೊಳಿಸಬೇಕು. ಮತ್ತು ಈ ಅರಿವೇ ಜಂಗಮವೆಂದು ಭಾವಿಸಬೇಕು. ಈ ವಿಷಯವನ್ನು ಸ್ಥೂಲವಾಗಿ ಹೇಳ ಬೇಕಾದರೆ, ಗುರುವು ದೀಕ್ಷೆಯನ್ನು ಮಾಡುವನು ಲಿಂಗವು ಮನಸ್ಸಿನ

ಮಾಲಿನ್ಯವನ್ನು ಕಳೆಯುವದು. ಜಂಗಮವು ಪ್ರಪಂಚಾಸಕ್ತತನವನ್ನು ದೂರ ಮಾಡುವದು. ವಚನಕಾರರು ಗುರು ಲಿಂಗ ಜಂಗಮ ಭಕ್ತ ಇವ್ರುಗಳಲ್ಲಿ ಭೇದ ಮಾಡುವದಿಲ್ಲ. ಅವುಗಳಲ್ಲಿ ಸಾಮರಸ್ಯವಿರುತ್ತದೆಂದು ಅವರು ಭಾವಿಸುತ್ತಾರೆ. ಇಂಥ ಸಾಮರಸ್ಯ ವರ್ತನೆಯಿಂದ ಈ ನಾಲ್ಕರಲ್ಲಿ ಲಿಂಗದ ಕಳೆಯು ತೋರಿ ಕಡೆಗೆ ಐಕ್ಯವು ಉಂಟಾಗುತ್ತದೆ. ಈ ಸ್ಥಿತಿಯೇ ಬಯಲು ಎಂದು ವಚನಕಾರರು ಹೇಳುತ್ತಾರೆ. ಗುರು ಲಿಂಗ ಜಂಗಮದ ಅರಿವೇ ಶಿವಯೋಗವೆಂತಲೂ ಹೇಳಲ್ಪಡುತ್ತದೆ.

(೧೩೮) ಪಾದೋದಕ:— ಗುರುಲಿಂಗಜಂಗಮಗಳು ತನ್ನಲ್ಲಿ ಒಂದುಗೊಳ್ಳುವ ರೀತಿಯನ್ನು ಅರುಹಿಕೊಡುವ ಕ್ರಿಯೆಯು ಇದಾಗಿದೆ. ಇದು ಸಂಪೂರ್ಣ ಭಾವನಾಮಯವಾದ ವಿಧಿಯು. ಇಂಥ ಈ ಪಾದೋದಕವು ಕೇವಲ ನೀರು ಅಲ್ಲ. ಅದು ಚಿತ್‌ಸ್ವರೂಪವಾಗಿರುತ್ತದೆಂದು ತಿಳಿಯಬೇಕು. ಇದನ್ನು ಭಾವನಾಪ್ರಧಾನವಾಗಿ ಮತ್ತು ಅದರ ಮರ್ಮವನ್ನು ತಿಳಿದು ಆಚರಿಸಿದ್ದಾದರೆ ಅದು ಭಕ್ತ ಜಂಗಮರ ಸರ್ವಾಂಗವನ್ನು ವೇಧಿಸುತ್ತದೆ. ಈ ಪಾದೋದಕದ ಮೂಲಕ ಭಕ್ತನು ಗುರುಲಿಂಗಜಂಗಮಗಳನ್ನು ಹೊಂದಿ ಸರ್ವಾಂಗಲಿಂಗಿಯಾಗುತ್ತಾನೆ. ಹೀಗೆ ಇದರ ಆಚರಣೆ ಇರುತ್ತದೆ. ಇದಕ್ಕೆ ಗುರುಲಿಂಗಜಂಗಮಗಳೆಲ್ಲವೂ ಬೇಕು. ಒಂದು ವೇಳೆ ಅವು ಪ್ರತ್ಯಕ್ಷ ದೊರೆಯದಿದ್ದರೆ ಭಕ್ತನೂ ಅವನಂತೆ ಜಂಗಮನೂ ಕೂಡ ಅವುಗಳನ್ನು ಸೂಕ್ಷ್ಮರೀತಿಯಿಂದ ತಮ್ಮ ಆಚರಣೆಯಲ್ಲಿಟ್ಟುಕೊಂಡು ಪಾದೋದಕ ಪ್ರಸಾದ ಸೇವನೆಯನ್ನು ಪಡೆಯುವ ಸೌಕರ್ಯಡನ್ನು ವಚನಕಾರರು ಮಾಡಿದ್ದಾರೆ. ಇಂಥ ಕಾಲದಲ್ಲಿ ಅವು ಕೇವಲ ಭಾವನಾಮಯವಾಗಿರುತ್ತವೆ. ಹೀಗೆ ವೀರಶೈವರಲ್ಲಿ ಪಾದಪೂಜೆ ಎಂದರೆ, ಪಾದವ ತೊಳೆದ ನೀರು ಎಂಬ ಅರ್ಥವಿಲ್ಲ. ಅದು ಗುರುಲಿಂಗ ಜಂಗಮವನ್ನು ತನು ಮನ ಭಾವಗಳಲ್ಲಿ ಪ್ರಕಟಿಸಿಕೊಂಡು ಸಾಮರಸ್ಯ ಸ್ಥಿತಿಯನ್ನು ಹೊಂದುವ ರೀತಿಯನ್ನು ತಿಳಿಸುವ ಒಂದು ಬಗೆಯ ವಿಧಾನವಾಗಿದೆ. ಹಾಗೆ ಭಕ್ತ ಜಂಗಮರು ಆಚರಿಸಿದಲ್ಲಿ ಅವರ ತನು ಮನ ಭಾವ



ಗಳೆಲ್ಲ ಲಿಂಗಮಯವಾಗುವವು. ಇದು ಸನ್ಮಾರ್ಗಿಗಳಾದ ಷಟ್‌ಸ್ಥಲವನ್ನು ಹಿಡಿದ ಸ್ತ್ರೀಪುರುಷ ಭಕ್ತ ಜಂಗಮರಿಗೆ ಮಾತ್ರ ಅಳವಡುವದಲ್ಲದೆ ಇತರರಿಗೆ ಅಳವಡಲಾರದು. ಇಷ್ಟೇ ಅಲ್ಲ, ಈ ಉಭಯತರ ಮನ ಪ್ರಾಣ ಭಾವಗಳ ಸಹ ಪರಸ್ಪರತೆಯನ್ನು ಹೊಂದುವಂತಹ ಸ್ಥಿತಿಯಲ್ಲಿರಬೇಕು. ಅಂದರೆ ಅವರ ರೀತಿ ನಡೆಗಳಲ್ಲಿ ಸಹಕಾರವಿರಬೇಕು. ಹೀಗೆ ಲಿಂಗಾಂಗಿಗಳು ಸದಾ ಪರಸ್ಪರ ಆಚರಿಸುತ್ತಿಬೇಕು. ಕೇವಲ ಯಾಂತ್ರಿಕ ರೀತಿಯಿಂದ ಆಚರಿಸತಕ್ಕ ಆಚರಣೆಯು ಇದು ಅಲ್ಲ. ಪಾದೋದಕ ವಿಧಿಯನ್ನು ವಚನಕಾರರು ತಮ್ಮ ವಚನಗಳಲ್ಲಿ ವಿಸ್ತಾರವಾಗಿ ವಿವರಿಸಿದ್ದಾರೆ. ಇಂಥ ಮೂಲ ವಚನಗಳನ್ನೇ ವಾಚಕರು ನೋಡಬೇಕು.

(೧೩೯) ಗುರುಪಾದೋದಕ, ಕ್ರಿಯಾಪಾದೋದಕ, ಜ್ಞಾನಪಾದೋದಕ:— ಇವು ಮೂರು ಪಾದೋದಕದ ವಿಭಾಗಗಳು. ಪಾದೋದಕವು ದೇಹದಲ್ಲಿ ಶುದ್ಧಿಯನ್ನುಂಟು ಮಾಡಿ ಲಿಂಗಚೈತನ್ಯವನ್ನು ಹುಟ್ಟಿಸುತ್ತದೆ. ಗುರುಪಾದೋದಕದಿಂದ ಸ್ಥೂಲದೇಹದ ಶುದ್ಧಿಯು. ಕ್ರಿಯಾ ಪಾದೋದಕದಿಂದ ಸೂಕ್ಷ್ಮದೇಹದ ಶುದ್ಧಿಯು. ಜ್ಞಾನಪಾದೋದಕದಿಂದ ಕಾರಣದೇಹದ ಶುದ್ಧಿಯು. ಗುರುಪಾದೋದಕದಿಂದ ಇಷ್ಟಲಿಂಗ ಸಂಬಂಧವು. ಕ್ರಿಯಾ ಪಾದೋದಕದಿಂದ ಪ್ರಾಣಲಿಂಗಸಂಬಂಧವು, ಜ್ಞಾನಪಾದೋದಕದಿಂದ ಭಾವಲಿಂಗ ಸಂಬಂಧವು ಉಂಟಾಗುತ್ತವೆ. ಆದ್ದರಿಂದ ಪಾದೋದಕವು ಆಚಾರದಲ್ಲಿ ಪ್ರತ್ಯಕ್ಷ ಪರಬ್ರಹ್ಮವೆಂದು ವಚನಕಾರರಿಂದ ಹೇಳಲ್ಪಡುತ್ತಿದೆ. ಮೊದಲು ಉದಕವು ಹೋಗಿ ಆಮೇಲೆ ಗುರುಪಾದೋದಕವೆನಿಸುತ್ತದೆ. ಈ ಗುರುಪಾದೋದಕವೇ ಕ್ರಿಯಾಪಾದೋದಕವಾಗುತ್ತದೆ. ಈ ಕ್ರಿಯಾಪಾದೋದಕವೇ ಜ್ಞಾನಪಾದೋದಕವಾಗುತ್ತದೆ. ಗುರುಪಾದೋದಕದಿಂದ ಸಂಚಿತಕರ್ಮವು, ಲಿಂಗಪಾದೋದಕದಿಂದ ಪ್ರಾರಬ್ಧಕರ್ಮವು, ಜಂಗಮಪಾದೋದಕದಿಂದ ಆಗಾಮಿಕರ್ಮವು, ನಷ್ಟವಾಗುತ್ತವೆ. ಗುರುಪಾದೋದಕ, ಕ್ರಿಯಾಪಾದೋದಕ, ಜ್ಞಾನಪಾದೋದಕ ಇವುಗಳಿಗೆ ಅನುಕ್ರಮವಾಗಿ ಗುರುಪಾದೋದಕ, ಲಿಂಗಪಾದೋದಕ.

ಜಂಗಮ ಪಾದೋದಕವೆಂತಲೂ, ದೀಕ್ಷಾ ಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕವೆಂತಲೂ ಬೇರೆ ಹೆಸರುಗಳಿವೆ. ದೀಕ್ಷಾಪಾದೋದಕಕ್ಕೆ ಧೂಳಪಾದೋದಕವೆಂತಲೂ ಬೇರೆ ಹೆಸರು ಉಂಟು. ಅಲ್ಲದೆ ಇವುಗಳಿಗೆ ಕರುಣ ಜಲ, ವಿನಯ ಜಲ, ಸಮತೆ ಜಲ ಎಂಬ ಹೆಸರುಗಳೂ ಅನುಕ್ರಮವಾಗಿ ಇರುತ್ತವೆ.

(೧೪೦) ಲಿಂಗೋದಕ, ಪಾದೋದಕ, ಪ್ರಸಾದೋದಕಃ- ಗುರುವು ಮೊದಲು ಪಂಚಕಲಶದ ಜಲವನ್ನು ತನ್ನ ಕರುಣ ಜಲವನ್ನಾಗಿ ಮಾಡಿ ಭಕ್ತನ ಮೈಲಿಗೆಯನ್ನು ಕಳೆಯಲು ಆಮೇಲೆ ಭಕ್ತನು ತನ್ನ ಲಿಂಗಕ್ಕೆ ಇದರಿಂದ ಮಜ್ಜನಕ್ಕೆರೆಯಲು ಅದು ಲಿಂಗೋದಕವು. ಆ ಲಿಂಗೋದಕವನ್ನು ಗ್ರಹಿಸಲು ಅದು ಪಾದೋದಕವೆನಿಸುತ್ತದೆ. ಹೀಗೆ ಪಾದೋದಕವನ್ನು ಗ್ರಹಿಸಿ ಲಿಂಗಾರ್ಪಿತ ಭೋಗೋಪಭೋಗಿಯಾದಲ್ಲಿ ಅದು ಅರ್ಪಿತ ಪ್ರಸಾದೋದಕವು. ಹೀಗೆ ಲಿಂಗಾರ್ಚನೆಯಿಂದ ಲಿಂಗೋದಕವು, ಪಂಚೇಂದ್ರಿಯಾರ್ಚನೆಯಿಂದ ಪಾದೋದಕವು, ಪ್ರಾಣಾರ್ಚನೆಯಿಂದ ಪ್ರಸಾದೋದಕವು ಆಗುವವು. ಲಿಂಗೋದಕದಿಂದ ಅಂಗವು ಶುದ್ಧವು. ಪಾದೋದಕದಿಂದ ಪರವು ನಾಸ್ತಿಯಾಗುವದು. ಪ್ರಸಾದೋದಕದಿಂದ ಭವಬೀಜವು ಅಡಗುವದು ಆದ್ದರಿಂದ ಕೇವಲ ಅಂಗದೇಹಿಯಾದವನಿಗೆ ಲಿಂಗೋದಕವಿಲ್ಲ. ಪ್ರಕೃತಿಜೀವಿಗೆ ಪಾದೋದಕವಿಲ್ಲ. ಭವಜೀವಿಗೆ ಪ್ರಸಾದೋದಕವಿಲ್ಲ. ಇವು ಅನುಕ್ರಮವಾಗಿ ಸಂಚಿತ, ಪ್ರಾರಬ್ಧ, ಆಗಾಮಿ ಈ ಕರ್ಮಗಳನ್ನು ದೂರ ಮಾಡುತ್ತವೆ. ಲಿಂಗೋದಕದಿಂದ ಅಂಗರಕ್ಷಣೆಯಾಗುತ್ತದೆ. ಪಾದೋದಕದಿಂದ ತನ್ನನ್ನು ಸೋಂಕಿದ ಸರ್ವವೆಲ್ಲವೂ ಪವಿತ್ರವು. ಮತ್ತು ಪ್ರಸಾದೋದಕದಿಂದ ಪ್ರಾಣನ ನೆಲೆಯ ಅರಿವು ಉಂಟಾಗುತ್ತದೆ. ಲಿಂಗೋದಕವು ಶಿವಸಂಸ್ಕಾರವುಳ್ಳದು. ಪಾದೋದಕದಿಂದ ಲಿಂಗಮಜ್ಜನಕ್ಕೆರೆವುದು. ಪ್ರಸಾದೋದಕದಿಂದ ಆರೋಗಣೆ ಮಾಡುವುದು. ಅಂದರೆ ಭುಂಜಿಸುವುದು. ಹೀಗೆ ಆಚಾರದಲ್ಲಿ ಈ ತ್ರಿವರ್ಗಗಳ ಉಪಯೋಗವಿರುತ್ತದೆ.



(೧೪೧) ದಶವಿಧ ಪಾದೋದಕಗಳುಃ— ಇವು ಗುರು ಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕ, ಸ್ಪರ್ಶನೋದಕ, ಅವಧಾನೋದಕ, ಆಪ್ಯಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ನಾಮೋದಕ, ಸತ್ಯೋದಕ, ಎಂದು ಹತ್ತು ಇರುತ್ತವೆ. ಪಾದೋದಕವನ್ನು ಸಿದ್ಧಪಡಿಸುವಲ್ಲಿ ಮತ್ತು ಅದನ್ನು ಸ್ವೀಕರಿಸುವಲ್ಲಿ ಈ ಹತ್ತು ವಿಧಗಳುಂಟಾಗುತ್ತವೆ. ಇವು ಆಚರಣೆಗೆ ಸಂಬಂಧಪಟ್ಟರೂ ಭಾವನಾ ಪ್ರಧಾನವಾದವುಗಳು. ಇವುಗಳನ್ನು ತಾತ್ವಿಕ ದೃಷ್ಟಿಯಿಂದಲೂ ಆಚಾರ ದೃಷ್ಟಿಯಿಂದಲೂ ವಿವೇಚಿಸಬಹುದು. (೧) ತಾತ್ವಿಕ ದೃಷ್ಟಿಯಿಂದ ಕೆಳಗೆ ಹೇಳಿದಂತೆ ಇವುಗಳನ್ನು ವಿವರಿಸಬಹುದಾಗಿದೆ. ಹೇಗೆಂದರೆ. ಸ್ಪರ್ಶನ ಗುಣದಿಂದ ಬಂದುದು ಗುರುಪಾದೋದಕವು. ಅಂಗದ ಗುಣವಳಿಯಲು ಲಿಂಗಪಾದೋದಕವು ಮಹಾಗಣಂಗಳ ಅರಿವನ್ನರಿತುದಾಗಿ ಜಂಗಮ ಪಾದೋದಕವು, ಅಥವಾ ಮಜ್ಜನೋದಕವು. ಚತುರ್ದಳ ಪದ್ಮವಿಕಸಿತವಾಗಲು ಸ್ಪರ್ಶನೋದಕವು. ಲಿಂಗಕ್ಕೆ ಪರಮಪರಿಣಾಮವನ್ನು ಸಮರ್ಪಿಸಿದಲ್ಲಿ ಅವಧಾನೋದಕವು. ಲಿಂಗಾರೋಗಣೆ ಮಾಡಿದಲ್ಲಿ ಆಪ್ಯಾಯನೋದಕವು. ಲಿಂಗವನ್ನು ಹಸ್ತದಲ್ಲಿರಿಸಲು ಅದು ಹಸ್ತೋದಕವು. ಶಿವಯೋಗವಾದಲ್ಲಿ ಪರಿಣಾಮೋದಕವು. ನಾಮಸೀಮೆ ಇಲ್ಲವಾಗಿ ನಿರ್ನಾಮೋದಕವು. ಮುಂದೆ ಹೆಸರಿಲ್ಲದ ಬಯಲು ಬೆರೆಸಲು ಅದು ಸತ್ಯೋದಕವು. ಈ ಭಾವಗಳಿಂದ ದಶವಿಧ ಪಾದೋದಕಗಳನ್ನು ಗ್ರಹಿಸತಕ್ಕದ್ದು. ಹೀಗೆ ಪಾದೋದಕವನ್ನು ಸಿದ್ಧಪಡಿಸಿ ಗ್ರಹಿಸುವುದು. ಇದು ಭಾವನಾಮಯವಾದ ಆಚರಣೆಯು. ವಾಚಕರು ಮೂಲಗ್ರಂಥಗಳನ್ನು ನೋಡಿ ಅವುಗಳ ಮರ್ಮವನ್ನು ಕಂಡುಹಿಡಿದು ಆಚರಿಸಬೇಕು. ಅಂದರೆ ಆಯಾ ತತ್ವಗಳು ಅವರಲ್ಲಿ ನೆಲೆಗೊಳ್ಳುವವು.

(೨) ಕೇವಲ ಕ್ರಿಯಾದೃಷ್ಟಿಯಿಂದಲೂ ಅವು ಹೇಳಲ್ಪಡುವವು. ಹೇಗೆಂದರೆ— ಪಾದದಲ್ಲಿ ಸಂಬಂಧಿಸಿದ್ದು ಗುರುಪಾದೋದಕವು. ಆ ಪಾದತೀರ್ಥವನ್ನು ಲಿಂಗಕ್ಕೆ ಸಂಬಂಧಿಸಬೇಕೆಂಬ ಇಚ್ಛೆಯುತ್ಪನ್ನವಾದಲ್ಲಿ ಲಿಂಗೋದಕವು. ಹಾಗೆ ಮಜ್ಜನಕ್ಕೆರೆದಲ್ಲಿ ಮಜ್ಜನೋದಕವು. ಜಿಹ್ವೆಯಲ್ಲಿ

ಸ್ವೀಕರಿಸಿದಲ್ಲಿ ಸ್ಪರ್ಶನೋದಕವು. ಅದನ್ನು ಎಚ್ಚರಿಕೆಯಿಂದ ಸೇವಿಸಿದಲ್ಲಿ
ಅವಧಾನೋದಕವು. ಸೇವಿಸಿ ಸಂತೋಷಗೊಂಡಿದಲ್ಲಿ ಆಪ್ಯಾಯನೋ
ದಕವು. ಹಸ್ತದೊಳಗಿನ ತೀರ್ಥವನ್ನು ಸ್ಪರ್ಶಿಸಿದ್ದು ಹಸ್ತೋದಕವು. ಬಟ್ಟ
ಲ್ಲಿಯ ತೀರ್ಥವನ್ನು ಮೂರು ಸಲ ಸೇವಿಸಲು ಪರಿಣಾಮೋದಕವು
ಅಂಥ ಪಾದೋದಕವು ಅಂತಿಂತೆಂದು ಹೆಸರನ್ನು ಇಡಲಿಕ್ಕೆ ಸಾಧ್ಯವಿಲ್ಲ
ವಾಗಿ ನಿರ್ನಾಮೋದಕವು. ಬ್ರಹ್ಮರಂಧ್ರದಲ್ಲಿಯ ಚಿದಮೃತವೇ ಅದೆಂದು
ಭಾವಿಸಿದಲ್ಲಿ ಸತ್ಯೋದಕವು. ಈ ವ್ಯಾಖ್ಯೆಗಳು ಕೇವಲ ಕ್ರಿಯೆಗೆ ಸಂಬಂ
ಧಿಸಿ ಮಾಡಿದವುಗಳು. ಹೀಗೆ ಪಾದೋದಕವನ್ನು ಬಹಿರಂಗ ಅಂತರಂ
ಗಗಳಲ್ಲಿ ಅರಿಯಬೇಕು.

(೧೪೨) ಅರ್ಪಣ—ಪ್ರಸಾದಃ— ಯಾವ ಫಲಪದವನ್ನಪೇಕ್ಷಿ
ಸದೆ ಲಿಂಗಕಾರ್ಯಕ್ಕೋಸ್ಕರ ಕ್ರಿಯೆಗಳನ್ನು ಮಾಡುತ್ತ ತಾನು ಅನು
ಭವಿಸುವುದೆಲ್ಲವೂ ಪರಮಾತ್ಮನದೆಂದು ಭಾವಿಸಿ ಮಾಡುವದು ಅರ್ಪ
ಣವು. ಹೀಗೆ ಅರ್ಪಿಸಿ ಅನುಭವಿಸಲ್ಪಟ್ಟಿದು ಪ್ರಸಾದವು.

(೧೪೩) ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣಃ - (೧) ಮನು
ಷ್ಯನಿಗೆ ಅಂಗ, ಪ್ರಾಣ, ಭಾವವೆಂಬಿವೆ. ಇವುಗಳ ಮುಖಾಂತ
ರವೇ ಮನುಷ್ಯನು ಕಾರ್ಯ ಮಾಡುತ್ತಾನೆ. ಇವು ಶುದ್ಧವಾದಲ್ಲಿ
ಕ್ರಿಯೆಯು ಶುದ್ಧವು. ಅರ್ಪಣದಿಂದ ಅವುಗಳು ಶುದ್ಧವಾಗುತ್ತವೆ.
ಇಷ್ಟಲಿಂಗಕ್ಕೆ ಅಂಗವನ್ನು, ಪ್ರಾಣಲಿಂಗಕ್ಕೆ ಮನವನ್ನು, ಭಾವಲಿಂಗಕ್ಕೆ
ತೃಪ್ತಿಯನ್ನು ಅರ್ಪಿಸಬೇಕು. ಹೀಗೆ ಅರ್ಪಿಸಿದಲ್ಲಿ ಅವು ಅನು
ಕ್ರಮವಾಗಿ ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣಗಳು.
(೨) ಹಾಗೆಯೇ ಪದಾರ್ಥಸೇವನೆಯಲ್ಲಿ ರೂಪು, ರುಚಿ, ತೃಪ್ತಿಗಳೆಂಬುವುಗ
ಳನ್ನು ಅನುಭವಿಸಬೇಕಾಗುತ್ತದೆ. ಆಗ ರೂಪನ್ನು ಕಾಯದ ಕೈಯಲ್ಲಿ
ಇಷ್ಟಲಿಂಗಕ್ಕೆ ಅರ್ಪಿಸತಕ್ಕದ್ದು. ಅದು ಶುದ್ಧ ಪ್ರಸಾದವು. ರುಚಿಯಾಗಿ
ಬಂದ ಪದಾರ್ಥವನ್ನು ಮನದ ಕೈಯ್ಯಲ್ಲಿ ಜಿಹ್ವೆಯ ಮುಖದಲ್ಲಿ ಪ್ರಾಣ
ಲಿಂಗಕ್ಕೆ ಅರ್ಪಿಸಬೇಕು. ಅದು ಸಿದ್ಧ ಪ್ರಸಾದವು. ಪರಿಣಾಮವಾಗಿ ಬಂದ



ಪದಾರ್ಥವನ್ನು ಭಾವದ ಕೈಯಲ್ಲಿ ಹೃದಯ ಮುಖದಲ್ಲಿ ಭಾವಲಿಂಗಕ್ಕೆ
ಅರ್ಪಿಸಬೇಕು. ಅದು ಪ್ರಸಿದ್ಧ ಪ್ರಸಾದವು. ಹೀಗೆ ಮಾಡಿದಲ್ಲಿ ಅಂಗ
ಮನ ಭಾವಗಳು ಪರಮಾತ್ಮನಲ್ಲಿ ಲಯವಾಗುವವು. ಇವುಗಳಿಗೆ ಅನು
ಕ್ರಮವಾಗಿ ಇಷ್ಟಲಿಂಗಾರ್ಪಣ, ಪ್ರಾಣಲಿಂಗಾರ್ಪಣ, ಭಾವಲಿಂಗಾರ್ಪಣ
ಎಂಬ ಹೆಸರುಗಳುಂಟಾಗುತ್ತವೆ. (೩) ಮನುಷ್ಯನ ಅಂಗ, ಪ್ರಾಣ, ಭಾವ
ಅಥವಾ ತನು ಮನ ಭಾವ ಇವುಗಳನ್ನು ಅನುಕ್ರಮವಾಗಿ ಗುರು ಲಿಂಗ
ಜಂಗಮಕ್ಕೂ ಅರ್ಪಿಸಬೇಕೆಂದು ಹೇಳಲ್ಪಡುತ್ತಿದೆ. ಗುರು ಲಿಂಗ ಜಂಗಮ
ಗಳು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳಿಗೆ ಅನುಕ್ರಮವಾಗಿ
ಸಂಬಂಧ ಪಡುತ್ತವೆ. ಅಷ್ಟಾವರಣಗಳು ಕ್ರಿಯಾಯುಕ್ತವಾಗಿವೆ. ಆದ್ದ
ರಿಂದ ಅನುಭವಿಸುವ ಪದಾರ್ಥಗಳನ್ನು ಗುರುಲಿಂಗ ಜಂಗಮಗಳಿಗೆ ಅರ್ಪಿಸಿ
ಅನುಭವಿಸಿದಲ್ಲಿ ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣಗಳು ಒದ
ಗುವವು. (೪) ಹಾಗೆಯೇ ಮನುಷ್ಯನಿಗೆ ತನು, ಮನ, ಧನಗಳಿರು
ತ್ತವೆ. ಅವುಗಳನ್ನು ಗುರು ಲಿಂಗ ಜಂಗಮಕ್ಕೆ ಅರ್ಪಿಸಿ ಅನುಭವಿಸತ
ಕ್ಕದ್ದು. ಹಾಗೆ ಮಾಡಿದಲ್ಲಿ ಈ ತ್ರಿವಿಧಗಳು ಒಳಕೊಳ್ಳುವವು ಹೀಗೆ
ಇದರಲ್ಲಿ ೪ ವಿಧಗಳಾಗುತ್ತವೆ.

(೧೪೪) ಕರಣಾರ್ಪಣಃ— ಮನುಷ್ಯನಿಗೆ ನೇತ್ರ, ಶ್ರೋತ್ರ, ಜಿಹ್ವೆ,
ಘ್ರಾಣ ತ್ವಕ್ಕು ಎಂದು ಪಂಚಕರಣಗಳಿರುತ್ತವೆ ನೇತ್ರವು
ನೋಡುತ್ತದೆ, ಶ್ರೋತ್ರವು ಕೇಳುತ್ತದೆ. ಜಿಹ್ವೆಯು ರುಚಿಸುತ್ತದೆ.
ಘ್ರಾಣವು ವಾಸಿಸುತ್ತದೆ. ತ್ವಕ್ಕು ಮುಟ್ಟುತ್ತದೆ. ಇವುಗಳೆಲ್ಲವನ್ನೂ
ಲಿಂಗಾಂಗಿಯು ಲಿಂಗಾರ್ಪಿತ ಮಾಡಿ ಲಿಂಗ ಭೋಗೋಪಭೋಗಿಯಾಗಿ
ರಬೇಕು. ಇವನೇ ಪ್ರಸಾದಿಯು. ಹೀಗೆ ಆಚರಿಸಿದಲ್ಲಿ ಅವನ ಸರ್ವಾಂ
ಗವು ಶುದ್ಧವು. ಈ ಪಂಚಕರಣಗಳಲ್ಲಿ ನಾಸಿಕದಲ್ಲಿ ಆಚಾರಲಿಂಗವು
ಜಿಹ್ವೆಯಲ್ಲಿ ಗುರುಲಿಂಗವು ನೇತ್ರದಲ್ಲಿ ಶಿವಲಿಂಗವು ತ್ವಕ್ಕಿನಲ್ಲಿ ಜಂಗ
ಮಲಿಂಗವು ಶ್ರೋತ್ರದಲ್ಲಿ ಪ್ರಸಾದ ಲಿಂಗವು ಇರುತ್ತವೆ. ಈ ಪಂಚೇಂ
ದ್ರಿಯಗಳನ್ನು ಅನುಕ್ರಮವಾಗಿ ಆಯಾಲಿಂಗಗಳಿಗೆ ಅರ್ಪಿಸಬೇಕು. ಹೀಗೆ

ಮಾಡಿದಲ್ಲಿ ಆತ್ಮನಲ್ಲಿ ಕಡೆಯುದಾದ ಮಹಾಲಿಂಗವು ಪ್ರಕಟವಾಗುತ್ತ ಆಗ ಸುಶಬ್ದ ಪ್ರಸಾದ, ಸ್ಪರ್ಶನ ಪ್ರಸಾದ, ರೂಪು ಪ್ರಸಾದ, ರ ಪ್ರಸಾದ, ಗಂಧಪ್ರಸಾದಗಳು ಪ್ರಸಾದಿಗೆ ದೊರಕೊಳ್ಳುವವು. ಹೀಗೆ ಅ ರಿಸುವಲ್ಲಿ ಆಯಾ ಇಂದ್ರಿಯಗಳ ದ್ವಾರಗಳಲ್ಲಿ ಆಯಾ ಲಿಂಗಗಳನ್ನು ನೆ ಗೊಳಿಸಬೇಕು. ಹೀಗೆ ನೆಲೆಗೊಳಿಸಿ ಲಿಂಗ ಮುಖವಾಗಿ ಇಂದ್ರಿಯಭೋ ವನ್ನು ಮಾಡಬೇಕು ಆಗ ಮನುಷ್ಯನ ಶ್ರೋತ್ರ, ನೇತ್ರ, ಘ್ರಾಣ ಜಿಹ್ವೆ, ತ್ವಕ್ಕುಗಳು ಶಿವನ ಇಂದ್ರಿಯಗಳು, ಅವನ ಶಿರ, ಮುಖ, ಹೃದ ಪಾದ, ಬಾಹುಗಳು ಶಿವನ ಅವಯವಗಳು. ಅವನ ಮನ, ಬುದ್ಧಿ ಚಿತ್ತ ಅಹಂಕಾರಗಳು ಶಿವನ ಕರಣಗಳು, ಅವನ ಪ್ರಾಣ, ಅಪಾನ ವ್ಯಾನ, ಉದಾನ, ಸಮಾನ ವಾಯುಗಳು ಶಿವಚೈತನ್ಯವುಳ್ಳವುಗಳು ಆ ತ್ತವೆ. ಹೀಗೆ ಮನುಷ್ಯನ ಭೋಗವೆಲ್ಲವು ಪರಮಾತ್ಮನ ಭೋಗವೆನಿಸ ವವು. ಇದೇ ಲಿಂಗ ಭೋಗೋಪಭೋಗವು. ಲಿಂಗಾಂಗಿಯ ಜೀವನ ಕ್ರಮವು.

(೧೪೫) ಭರಿತಾರ್ಪಣ:- ಅರ್ಪಣವಾದುದನ್ನು ಸೇವಿಸಲೇಬೇಕು ಅದನ್ನು ತ್ಯಜಿಸಕೂಡದು. ಆದ್ದರಿಂದ ಮನುಷ್ಯನು ತನಗೆ ಸಲ ಷ್ಟನ್ನೇ ಗ್ರಹಿಸಿ ಲಿಂಗಾರ್ಪಿತ ಮಾಡಬೇಕು. ಇದು ಭರಿತಾರ್ಪಣವು ಆದ್ದರಿಂದ ಅವನು ಮಿತಹಾರಿಯಾಗಿರತಕ್ಕದ್ದು. ಹೀಗಿಲ್ಲದಿದ್ದರೆ ಲಿಂ ಭೋಗವು ತಪ್ಪುತ್ತದೆ. ಅದು ಕಿಲ್ಬಿಷವು. ಅಂದರೆ ಹೊಲಸಾದದ್ದು. ಆದ ರಿಂದ ಪ್ರಸಾದಿಯು ಆಹಾರವನ್ನು ಚೆಲ್ಲಕೂಡದು. ಅಂದರೆ ಊಟದಲ್ಲಿ ಮುಸುರಿಯನ್ನು ಮಾಡತಕ್ಕದ್ದಲ್ಲ.

(೧೪೬) ಅರ್ಪಿತಾವಧಾನ:— ಅಷ್ಟವಿಧ ಸಕೀಲದ ಮೂಲಕ ಘ್ರಾಣದಲ್ಲಿಯ ಆಚಾರಲಿಂಗದಲ್ಲಿ ಸುಗಂಧ ಪ್ರಸಾದವನ್ನು, ಜಿಹ್ವೆಯ ಲ್ಲಿಯ ಗುರು ಲಿಂಗದಲ್ಲಿ ಸುರಸಪ್ರಸಾದವನ್ನು, ನೇತ್ರದಲ್ಲಿಯ ಶಿವ ಲಿಂಗದಲ್ಲಿ ಸುರೂಪು ಪ್ರಸಾದವನ್ನು, ತ್ವಕ್ಕಿನಲ್ಲಿಯ ಜಂಗಮಲಿಂಗ ದಲ್ಲಿ ಸುಸ್ಪರ್ಶನ ಪ್ರಸಾದವನ್ನು, ಕರ್ಣದಲ್ಲಿಯ ಪ್ರಸಾದಲಿಂಗದಲ್ಲಿ



ಅರ್ಪಿತಾವಧಾನವು.

(೧೪೭) ಇಷ್ಟ ಪ್ರಾಣ ಭಾವಲಿಂಗಾರ್ಪಿತವು:— ಇಷ್ಟಲಿಂಗಕ್ಕೆ ತನ್ನ ಶರೀರವನ್ನು, ಪ್ರಾಣಲಿಂಗಕ್ಕೆ ತನ್ನ ಮನಸ್ಸನ್ನು, ಭಾವಲಿಂಗಕ್ಕೆ ತನ್ನ ತೃಪ್ತಿಯನ್ನು ಅರ್ಪಿಸುವದು ಅನುಕ್ರಮವಾಗಿ ಇಷ್ಟ. ಪ್ರಾಣ ಭಾವಲಿಂಗಾರ್ಪಿತವೆಂದು ಹೇಳಲ್ಪಡುತ್ತಿದೆ.

(೧೪೮) ಲಿಂಗಕ್ಕೆ ಗುರು ಪ್ರಸಾದವು:— ಲಿಂಗವು ಗುರುವಿನ ಮನ ಸ್ಥಲದಲ್ಲಿ ಮತ್ತು ಭಕ್ತನು ಗುರುವಿನ ಕರಸ್ಥಲದಲ್ಲಿ ಪರಿಣಾಮಹೊಂದು ತ್ತಾರೆ. ಹೀಗೆ ಭಕ್ತ ಮತ್ತು ಲಿಂಗ ಇವು ಗುರುವಿನ ಮೂಲಕ ಪ್ರಕಟ ವಾಗುತ್ತಿದ್ದು ಈ ಉಭಯಕ್ಕೆ ಗುರುಪ್ರಸಾದವು ಪ್ರಾಣವಾಗಿದೆ. ಆದ್ದರಿಂದ ಗುರುಪ್ರಸಾದವು ಲಿಂಗ ಮತ್ತು ಭಕ್ತ ಈ ಉಭಯಕ್ಕೆ ಸಲ್ಲುವುದೆಂದು ಭಾವಿಸಿ ಅರ್ಪಿಸಿ ಸ್ವೀಕರಿಸುವುದು.

(೧೪೯) ಗುರು, ಲಿಂಗಗಳಿಗೆ ಜಂಗಮ ಪ್ರಸಾದವು:— ಭಕ್ತನಿಗೆ ಲಿಂಗವು ಪ್ರಾಣವು, ಲಿಂಗಕ್ಕೆ ಗುರುವು ಪ್ರಾಣವು, ಗುರುವಿಗೆ ಜಂಗಮವು ಪ್ರಾಣವು. ಈ ರೀತಿಯಾಗಿರುವದರಿಂದ ಭಕ್ತ ಲಿಂಗ ಗುರು ಇವರಿಗೆ ಜಂಗಮ ಪ್ರಸಾದವು ಸಲ್ಲುವುದೆಂದು ಭಾವಿಸಿ ಪದಾರ್ಥಗಳ ಪೂರ್ವಾ ಶ್ರಯವನ್ನು ಕಳೆದು ಅರ್ಪಿಸಿ ಸ್ವೀಕರಿಸುವುದು.

(೧೫೦) ಗುರು ಲಿಂಗ ಜಂಗಮಗಳಿಗೆ ಭಕ್ತನ ಪ್ರಸಾದ:— ಭಕ್ತನು ಅಂಗಸ್ವರೂಪನಾಗಿದ್ದು ಅವನಿಗೆ ಗುರು ಲಿಂಗ ಜಂಗಮಗಳು ಪ್ರಾಣ ಸ್ವರೂಪರು. ಅದರಿಂದ ಗುರು ಲಿಂಗಜಂಗಮಗಳಿಗೆ ಭಕ್ತವೇ ಆಧಾರವು. ಆದ್ದರಿಂದ ಭಕ್ತನಿಂದ ಬಂದ ಪ್ರಸಾದವು ಗುರುವಿಗೆ, ಗುರುವಿನಿಂದೊಗೆದ ಪ್ರಸಾದವು ಲಿಂಗಕ್ಕೆ, ಉಂಟಾಗುತ್ತವೆ. ಜಂಗಮಕ್ಕೂ ಕೂಡ ಭಕ್ತನೇ ಅಂಗವಾಗಿರುವನು. ಆದ್ದರಿಂದ ಜಂಗಮಕ್ಕೆ ಭಕ್ತನ ಪ್ರಸಾದವಿದೆ. ಹೀಗೆ ಭಕ್ತ ಗುರು ಲಿಂಗ ಜಂಗಮ ಪ್ರಸಾದಗಳಲ್ಲೆಲ್ಲ ಅಭಿನ್ನತೆಯುಂ ಟಾಗಿರುತ್ತದೆ.

(೧೫೧) ಲಿಂಗ, ಜಂಗಮ, ಪ್ರಸಾದಃ— ಅರ್ಪಣದ ಕಾರ್ಯದಲ್ಲಿ ಮನವನ್ನರ್ಪಿಸಿ ಸಾಮರಸ್ಯದಿಂದ ವರ್ತಿಸಿದಲ್ಲಿ ಅದು ಲಿಂಗರೂಪವು. ಧನವನ್ನರ್ಪಿಸಿ ಸಾಮರಸ್ಯದಿಂದ ವರ್ತಿಸಿದರೆ ಅದು ಜಂಗಮ ರೂಪವು. ತನುವನ್ನರ್ಪಿಸಿ ಸಾಮರಸ್ಯದಿಂದ ವರ್ತಿಸಿದರೆ ಅದು ಪ್ರಸಾದರೂಪವು. ಹೀಗೆ ಈ ತ್ರಿವಿಧ ಸುಖವನ್ನು ಅರ್ಪಿಸಿದಲ್ಲಿ ಅದು ಬಯಲು. ಹೀಗೆ ಮನ ವನ್ನು ಲಿಂಗವು, ಧನವನ್ನು ಜಂಗಮವು, ತನುವನ್ನು ಪ್ರಸಾದವು ಒಳ ಕೊಂಡಿರುತ್ತವೆ.

(೧೫೨) ಗುರು ಲಿಂಗ ಜಂಗಮ ಪ್ರಸಾದಗಳುಃ— ಪರಮಾತ್ಮನು ಗುರು ರೂಪಾಗಿ ಕರಸ್ಥಲಕ್ಕೆ ಲಿಂಗವಾಗಿ, ಮನಸ್ಥಲಕ್ಕೆ ಮಂತ್ರವಾಗಿ, ಪ್ರಾಣಸ್ಥಲಕ್ಕೆ ಜಂಗಮವಾಗಿ, ವ್ಯವಹರಿಸುತ್ತಾನೆ. ಅಂದರೆ ತನುವಿನಲ್ಲಿ ಗುರುವು, ಮನದಲ್ಲಿ ಲಿಂಗವು, ಪ್ರಾಣದಲ್ಲಿ ಜಂಗಮವು, ಅರಿವಿನಲ್ಲಿ ಪ್ರಸಾ ದವಾಗಿರುತ್ತಾನೆ.

(೧೫೩) ಗುರು ಲಿಂಗ ಜಂಗಮ ಪ್ರಸಾದ ಪಾದೋದಕಗಳುಃ— ಪರಮಾತ್ಮನು ಗುರುವಾಗಿ ಉಪದೇಶಿಸುತ್ತಾನೆ. ಲಿಂಗವಾಗಿ ಮನದಲ್ಲಿ ಇಂಬುಗೊಳ್ಳುತ್ತಾನೆ. ಜಂಗಮವಾಗಿ ಬಂದು ಮನಸ್ಸಿನ ಅಹಂಭಾವ ವನ್ನು ದೂರ ಮಾಡುತ್ತಾನೆ. ಪ್ರಸಾದವಾಗಿ ಸರ್ವಾಂಗವನ್ನೆಲ್ಲ ಆವ ಗ್ರಹಿಸುತ್ತಾನೆ. ಕಡೆಗೆ ಪಾದೋದಕವಾಗಿ ಮನುಷ್ಯನ ಒಳಹೊರಗೆಂಬು ನ್ನೆಲ್ಲ ಶುದ್ಧಗೊಳಿಸಿ ಅವನನ್ನು ಚಿತ್ ಸ್ವರೂಪನನ್ನಾಗಿ ಮಾಡುತ್ತಾನೆ.

(೧೫೪) ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗಳುಃ— ಗುರುವಿನಲ್ಲಿ ಶುದ್ಧವು, ಲಿಂಗದಲ್ಲಿ ಸಿದ್ಧವು, ಜಂಗಮದಲ್ಲಿ ಪ್ರಸಿದ್ಧವು ಹೀಗೆ ಪ್ರಸಾದಗಳಿರುತ್ತವೆ. ಆದ್ದರಿಂದ ಕಾಯದ ಕಯ್ಯಲ್ಲಿ ಇಷ್ಟ ಲಿಂಗಕ್ಕೆ ಕೊಟ್ಟುದು ಶುದ್ಧ ಪ್ರಸಾ ದವು. ಮನದ ಕಯ್ಯಲ್ಲಿ ಪ್ರಾಣಲಿಂಗಕ್ಕೆ ಕೊಟ್ಟುದು ಸಿದ್ಧ ಪ್ರಸಾದವು. ಪರಿಣಾಮವಾಗಿ ಬಂದ ಪದಾರ್ಥವನ್ನು ಭಾವದ ಕಯ್ಯಲ್ಲಿ ಹೃದಯ ಮುಖದಲ್ಲಿ ಭಾವಲಿಂಗಕ್ಕೆ ಕೊಟ್ಟುದು ಪ್ರಸಿದ್ಧ ಪ್ರಸಾದವು. ಈ ಶುದ್ಧ



ಸಿದ್ಧ ಪ್ರಸಿದ್ಧ ಪ್ರಸಾದಗಳನ್ನು ಏಕ ರೂಪ ಮಾಡಿದಲ್ಲಿ ಅದು ಮಹಾ ಘನಲಿಂಗವೆನಿಸಿಕೊಳ್ಳುವದು. ಆ ಮಹಾಲಿಂಗವು ತಾನಾದುದೇ ಏಕ ಪ್ರಸಾದವು. ಗುರುವಿನಿಂದ ಸರ್ವಾಂಗವೆಲ್ಲ ಶುದ್ಧ ಪ್ರಸಾದವಾಗುವದು. ಎಲ್ಲ ವಿಷಯಗಳನ್ನು ದುರ್ವರ್ತನೆಗಳನ್ನು ಲಿಂಗ ಮುಖದಿಂದ ಜಯಿಸಿ ದಲ್ಲಿ ಸರ್ವಾಂಗವೆಲ್ಲ ಸಿದ್ಧಪ್ರಸಾದವಾಗುವದು. ಸಮಸ್ತ ಕರಣಗಳ ದುರ್ವ ರ್ತನೆಗಳನ್ನು ಜಂಗಮ ಮುಖದಿಂದ ಜಯಿಸಿದಲ್ಲಿ ಸರ್ವಾಂಗವೆಲ್ಲ ಪ್ರಸಿದ್ಧ ಪ್ರಸಾದವಾಗುವದು. ಗುರು ಪ್ರಸಾದವು ಅಂಗವನ್ನು ಸೋಂಕಿ ದಲ್ಲಿ ಸರ್ವಾಂಗ ಗುರುವಾಗುವದು. ಲಿಂಗಪ್ರಸಾದವು ಮನವನ್ನು ಸೋಂಕಿದಲ್ಲಿ ಮನಸ್ಸು ಲಿಂಗವಾಗುವದು. ಜಂಗಮ ಪ್ರಸಾದವು ಅರಿವನ್ನು ಸೋಂಕಿದಲ್ಲಿ ಅದು ಅಖಂಡಿತ ಪ್ರಸನ್ನ ಪ್ರಸಾದವಾಗುವದು. ಕಾಯಾರ್ಪಣವರ್ಪಿತವಾಗಿ ಉಳಿದುದು ಶುದ್ಧ ಪ್ರಸಾದವೆಂತಲೂ ಕರಣಾರ್ಪಿತವರ್ಪಿತವಾಗಿ ಉಳಿದುದು ಸಿದ್ಧ ಪ್ರಸಾದವೆಂತಲೂ ಭಾವಾ ರ್ಪಣವಾಗಿ ಉಳಿದುದು ಪ್ರಸಿದ್ಧ ಪ್ರಸಾದವೆಂತಲೂ ಬೇರೆ ವಿಧವಾ ಗಿಯೂ ಹೇಳಲ್ಪಡುವದುಂಟು.

(೧೫೫) ಸ್ವಯಪ್ರಸಾದಿ, ಜ್ಞಾನಪ್ರಸಾದಿ, ಮಹಾಪ್ರಸಾದಿ,ಃ— ಇವು ಪ್ರಸಾದಿ ಸ್ಥಲವನ್ನು ಹೊಂದಿದವನ ತರಗತಿಗಳಾಗಿವೆ. ಮೊದಲು ತ್ರಿವಿಧ ಪ್ರಸಾದವನ್ನು ಹೊಂದಿದಲ್ಲಿ ಸ್ವಯ ಪ್ರಸಾದಿಯು. ಸ್ವಯ ಪ್ರಸಾ ದಿಯು ತರುವಾಯ ಅರಿವು ಉಂಟಾಗಲು ಅದು ಜ್ಞಾನ ಪ್ರಸಾದಿಯು. ಜ್ಞಾನ ಪ್ರಸಾದಿಯ ತರುವಾಯ ಮಹಾಪ್ರಸಾದ ಸ್ಥಿತಿಯು ಪ್ರಾಪ್ತ ವಾಗುತ್ತದೆ.

(೧೫೬) ಆದಿ ಪ್ರಸಾದಿ, ಸೇವ್ಯಪ್ರಸಾದಿ, ಅಂತ್ಯಪ್ರಸಾದಿಃ— ಇಷ್ಟ ಲಿಂಗಕ್ಕೆ ಸೋಂಕಿ ಬಂದ ಪ್ರಸಾದವನ್ನು ಸ್ವೀಕರಿಸಲು ಅದು ಆದಿ ಪ್ರಸಾದಿಯು ಆ ಇಷ್ಟ ಲಿಂಗವನ್ನು ಸೋಂಕಿ ಬಂದ ಪ್ರಸಾದವು ಪ್ರಾಣ ಲಿಂಗವನ್ನು ಸೋಂಕಿ, ಆಗ ಉಂಟಾದ ಪ್ರಸಾದವನ್ನು ಸ್ವೀಕರಿಸಲು ಅದು ಸೇವ್ಯ ಪ್ರಸಾದಿಯು. ಹೀಗೆ ಪ್ರಾಣಲಿಂಗವನ್ನು ಸೋಂಕಿ ಭಾವ

ಲಿಂಗ ಮುಖಕ್ಕೆ ಬರಲು ಅಂಥದನ್ನು ಸೇವಿಸಲು ಅದು ಅಂತ ಪ್ರಸಾದಿಯು.

(೧೫೭) ಅಚ್ಚ ಪ್ರಸಾದಿ, ನಿಚ್ಚಪ್ರಸಾದಿ, ಸಮಯ ಪ್ರಸಾದಿ:– ಅಚ್ಚ ಪ್ರಸಾದಿಯು ಗುರುವು ಬೋಧಿಸಿದಂಥ ಆಚರಣೆಯ ಮಾರ್ಗವನ್ನು ತಿಳಿದು ವ್ರತಾಚರಣೆಗೆ ಏನೂ ತಪ್ಪು ತಡೆಗಳಿಲ್ಲದ ಹಾಗೆ ಆಚರಿಸುತ್ತಾನೆ. ನಿಚ್ಚಪ್ರಸಾದಿಯಾದವನು ಕೂಡ ಗುರುವು ಹೇಳಿದ ಮೇಲು ಶಿಸ್ತಿಯಂತೆ ತನ್ನ ಆಚರಣೆಯನ್ನು ಪರಿಪಡಿಸಿಕೊಂಡು ನಡೆಯುತ್ತಾನೆ ಅಂದರೆ ಜ್ಞಾನಿ ಗಳು ಯಾವ ಆಚರಣೆಯನ್ನು ಹೇಳಿಕೊಡುತ್ತಾರೋ ಅದರಂತೆ ಅವರೊ ಡನೆ ನಡೆದು ಮುಂದೆ ಅವರಿಲ್ಲದಿದ್ದರೂ ಕೂಡ ತಾನೇ ಅವರಂತೆ ಆಚರಿ ಸುತ್ತಾನೆ. ಸಮಯ ಪ್ರಸಾದಿಯು ಈ ಮೂವರಲ್ಲಿ ಎಲ್ಲಕ್ಕೂ ಅಶಕ್ತನು. ಅವನು ತತ್ಕಾಲಕ್ಕೆ ಬಂದ ಜಂಗಮನೊಡನೆ ಯಥಾಮತಿ ಆಚರಿಸುತ್ತಾನೆ. ಆಚರಣೆಯ ಈ ಬಗ್ಗೆ ಅವನಿಗೆ ಕಟ್ಟುಗಳಿರುವದಿಲ್ಲ. ಒಂದು ವೇಳೆ ಜಂಗಮವು ಇಲ್ಲದಿದ್ದರೂ ಅವನಿಗೆ ಕೊರತೆ ಇಲ್ಲ. ಅಚ್ಚ ಪ್ರಸಾದಿಯು ವಿಧಿಪೂರ್ವಕವಾಗಿ ಜಂಗಮದ ನಿರೀಕ್ಷಣೆಯಲ್ಲಿಯೇ ಪಾದೋದಕವನ್ನು ತಪ್ಪದೆ ಸ್ವೀಕರಿಸುತ್ತಾನೆ. ಆದರೆ ನಿಚ್ಚ ಪ್ರಸಾದಿಯು ಜಂಗಮವು ಒಂದೂ ಪ್ಪತ್ತು ತಪ್ಪಿದರೂ ಹಿಂದಿನ ಸಂಬಂಧವನ್ನಿಟ್ಟುಕೊಂಡು ಆಚರಿಸು ತ್ತಾನೆ. ತನ್ನ ಸಮಯೋಚಿತಕ್ಕೆ ಕ್ರಿಯಾ ಜಂಗಮವು ದೊರೆಯದಿದ್ದರೂ ಅವನು ತನ್ನ ಹಿಂದಿನ ಸಂಬಂಧದ ಮೂಲಕ ತನ್ನ ಕ್ರಿಯೆಗಳನ್ನು ಮುಗಿ ಸುತ್ತಾನೆ. ಅಂಥ ಕಾಲದಲ್ಲಿ ಅವನು ಷೋಡಶಕಲಾ ಸ್ವರೂಪವಾದ ತನ್ನ ಚಿದ್ಘನ ಮಹಾಲಿಂಗವನ್ನು ನಿರಂಜನ ಜಂಗಮದೋಪಾದಿಯಲ್ಲಿ ಭಾವಿಸಿ ನಿರ್ಗುಣಪೂಜೆ ಮಾಡಿ ಅಷ್ಟವಿಧ ಮಂತ್ರ ಸಕೀಲದಿಂದ ಅಷ್ಟವಿಧಲಿಂಗ ಧ್ಯಾನದಿಂದ ಅದಕ್ಕೆ ಸಮರ್ಪಿಸಿ ಪಾದೋದಕವನ್ನು ಸೇವಿಸುತ್ತಾನೆ. ಕ್ರಿಯಾ ಜಂಗಮ ಮೂರ್ತಿಗಳು ಅರ್ಚನೆಯ ಸಮಯದಲ್ಲಿ ಒಂದು ವೇಳೆ ಬಂದರೆ ದಿವಾ ರಾತ್ರಿ ಎನ್ನದೆ ಅವರೊಡನೆ ಕ್ರಿಯಾಚರಣೆಯನ್ನಾ ಚರಿಸುವವನು ಅಚ್ಚ ಪ್ರಸಾದಿಯು. ಆದರೆ ಸಮಯೋಚಿತದಲ್ಲಿ ಹೀಗೆ ಕ್ರಿಯಾಜಂಗಮವು ದೊರೆಯದಿದ್ದರೆ ಆಗ ಅವನು ಮೇಲೆ ಹೇಳಿದಂತೆ ನಿಚ್ಚಪ್ರಸಾದಿಯೋಪಾದಿಯಲ್ಲಿ ಆಚರಿಸುತ್ತಾನೆ. ಆದರೆ ಅವನಿಗೆ ಆವ ಜಂಗಮವೂ ದೊರೆಯದೆ ಹೋದದ್ದಾದರೆ ತನ್ನ ಇಷ್ಟ ಮಹಾಲಿಂಗವೇ ಜ್ಞಾನ ಜಂಗಮ ಸ್ವರೂಪವೆಂದು ಭಾವಿಸಿ ಆದರ ಪರಿಣಾಮ ಪ್ರಸಾದ ದಲ್ಲಿ ಲೋಲುಪ್ತನಾಗುತ್ತಾನೆ. ಇವನು ಸಮಯ ಪ್ರಸಾದಿಯು.



ಆದರೆ ನಾವು ಲಕ್ಷಿಸತಕ್ಕದ್ದೇನಂದರೆ ಈ ಮೂವರು ಗುರುವಿನ ಮೂಲಕ ದೀಕ್ಷೆಯನ್ನು ಹೊಂದಿ ಅಂತರಂಗದಲ್ಲಿ ಬೆಳಗುವ ಪ್ರಾಣಲಿಂಗ ವನ್ನು ಇಷ್ಟ ಲಿಂಗದಲ್ಲಿ ಬಹಿಷ್ಕರಿಸಿಕೊಂಡವರಿರಬೇಕು. ಲಿಂಗಾಂಗಗಳು, ಷಟ್ ಸ್ಥಾನಗಳುಆವವೆಂಬುದರ ಜ್ಞಾನ, ಚಿದ್ವಿಭೂತಿ, ಚಿದ್ರುದ್ರಾಕ್ಷಿ, ಪಂಚಾ ಕ್ಷರ, ಷಡಕ್ಷರ ಇವುಗಳ ಅರುಹು, ಷಟ್‌ಸ್ಥಲ ಮಾರ್ಗ ಮತ್ತು ಷಡ್ವಿಧ ಶೀಲ ವ್ರತ ನೇಮಗಳ ತಿಳುವಳಿಕೆ, ಷೋಡಶ ಭಕ್ತಿಯ ಆಚರಣೆ, ಮೂವತ್ತೆರಡು ಕಲೆಗಳ ಜ್ಞಾನ, ಈ ಎಲ್ಲವುಗಳ ನಿರ್ಣಯವನ್ನು ತಿಳಿದು ಕೊಂಡಿರಬೇಕು. ಈ ಜ್ಞಾನವುಳ್ಳವರು ಆಯಾ ಕಾಲಗಳಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ವಚನಕಾರರು ಮೇಲೆ ವಿವರಿಸಿದ ಈ ಮೂರು ಭೇದಗಳ ಮೂಲಕ ವಿವರಿಸುತ್ತಾರೆ.

(೧೫೮) ಭಿನ್ನ ಭೋಜನ, ಪ್ರಸಾದಭೋಜನ, ಸಹಭೋಜನ:— ಇವು ಸೇವನೆಯ ಕಾಲದಲ್ಲಿ ಲಿಂಗಕ್ಕರ್ಪಿಸಿ ಭುಂಜಿಸುವ ವಿಧಗಳಾಗಿ ರುತ್ತವೆ. ಮುಂದಿಟ್ಟ ಸಕಲ ಪದಾರ್ಥಗಳನ್ನು ಏಕಕಾಲಕ್ಕೆ ಲಿಂಗಕ್ಕೆ ಕೊಟ್ಟು ಭುಂಜಿಸುವದು ಭಿನ್ನಭೋಜನವು. ಮುಂದಿಟ್ಟ ಸಕಲ ಪದಾರ್ಥಗಳನ್ನು ಒಂದೇ ವೇಳೆ ಲಿಂಗಕ್ಕೆ ಕೊಡದೆ ಎತ್ತಿದ ಭೋಜನ ವನ್ನೇ ಲಿಂಗಕ್ಕೆ ಕೊಟ್ಟು ಅದನ್ನು ಕೆಳಕ್ಕೆ ಇಳುಹದೆ ಕೊಳ್ಳುವದು ಪ್ರಸಾದ ಭೋಜನವು. ಮುಂದಿಟ್ಟ ಪದಾರ್ಥಗಳನ್ನೆಲ್ಲ ಲಿಂಗಕ್ಕೆ ಮೊದಲು ಕೊಟ್ಟು ಭೋಜ್ಯ ಭೋಜ್ಯಕ್ಕೆ ಕೊಟ್ಟುಕೊಂಬುದು ಸಹಭೋಜನವು. ಇವು ವೀರಶೈವರಲ್ಲಿ ಊಟಮಾಡುವ ಪದ್ಧತಿಗಳಾಗಿರುತ್ತವೆ. ಆಯಾ ಕಾಲ ಗಳಲ್ಲಿ ಆಯಾ ವಿಧದ ಭಾವನೆಗಳು ಪರಮಾತ್ಮನಿಗೋಸ್ಕರ ಇರತಕ್ಕದ್ದು.

(೧೫೯) ಏಕಭಾಜನ (ತನುಭಾಜನ, ಮನಭಾಜನ, ಪ್ರಾ
ಭಾಜನ):— ಇಲ್ಲಿ ಇಂದ್ರಿಯಗಳಲ್ಲಿ ಲಿಂಗಾರ್ಪಿತ ಮಾಡಿ ಪ
ಬೆರಸಿ ಪರಿಣಾಮಿಸಬೇಕು. ಅತ್ಯಂತ ನೈತಿಕಾಚಾರವುಳ್ಳವನಿಗೆ ಈ ಏ
ಭಾಜನಸ್ಥಿತಿಯು ಸಲ್ಲುವದು. ಜೀವನಲ್ಲಿ ಸರ್ವವೂ ಲಿಂಗವೆಂಬ ಭಾವ
ದೃಢವಾಗಿರಬೇಕು. ಅವನ ತನುವೇ ಲಿಂಗಕ್ಕೆ ಭಾಜನವಾಗಿಯ
ಹಾಗೆಯೇ ಅವನ ತನುವಿಗೆ ಲಿಂಗವೇ ಭಾಜನವಾಗಿಯೂ ಇದ್ದುದು ತನ
ಭಾಜನವು. ಹಾಗೆಯೇ ಮನಭಾಜನ ಮತ್ತು ಪ್ರಾಣಭಾಜನಗಳಿರುತ್ತವ
ಅಂದರೆ ಲಿಂಗಕ್ಕೆ ಮನವೇ ಭಾಜನ ಮತ್ತು ಮನಕ್ಕೆ ಲಿಂಗವೇ
ಭಾಜನವಾಗಿ ಮನವಳಿದು ಮನವೇ ಲಿಂಗವಾಗಿರಬೇಕು. ಹಾಗೆಯೇ
ಪ್ರಾಣಕ್ಕೆ ಲಿಂಗವೇ ಭಾಜನವಾಗಿ ಲಿಂಗಕ್ಕೆ ಪ್ರಾಣವೇ ಭಾಜನವಾ
ಪ್ರಾಣವೆಂಬ ಭಾಜನವಳಿದು ಪ್ರಾಣವು ಲಿಂಗವಾಗಿರಬೇಕು. ಇವು
ಅನುಕ್ರಮವಾಗಿ ಮನಭಾಜನ ಮತ್ತು ಪ್ರಾಣ ಭಾಜನಗಳು. ಹೀಗೆ
ತನುಭಾಜನ ಮನಭಾಜನ, ಪ್ರಾಣಭಾಜನಗಳಿರುತ್ತವೆ. ಇವೆಲ್ಲವು
ಏಕಭಾಜನವಲ್ಲಿ ಬರುತ್ತವೆ. ಹೀಗೆ ವರ್ತಿಸುವವರಿಗೆ ಮೇಲೆ ೧೫೮ರಲ್ಲಿ
ಹೇಳಿದ ಸಹಭೋಜನವು ಪ್ರಾಪ್ತವಾಗುತ್ತದೆ. ಇದರಲ್ಲಿ ಭಕ್ತಜಂಗಮ
ಹೀಗೆ ಭೇದವಿರುವದಿಲ್ಲ. ಯಾಕಂದರೆ ಭಕ್ತನು ತನ್ನ ಅರ್ಥ ಪ್ರಾಣಾ
ಭಿಮಾನಗಳನ್ನು ಗುರುಲಿಂಗಜಂಗಮಕ್ಕೆ ಅರ್ಪಿಸಿದ್ದರಿಂದ ಅವನು ಗುರು
ಲಿಂಗಜಂಗಮಕ್ಕೆ ಪ್ರಾಣವಾಗಿರುತ್ತಾನೆ. ಇಂಥವನಿಗೂ ಗುರುಲಿಂಗ
ಜಂಗಮಕ್ಕೂ ಏಕಭಾಜನವಲ್ಲದೆ ಭಿನ್ನಭಾಜನವಿರಲಾರದು. ಆದ್ದ
ರಿಂದಲೇ ಚನ್ನಯ್ಯ ಕಣ್ಣಪ್ಪ ಇಂಥವರೊಡನೆ ಪರಮಾತ್ಮನು ಭುಂಜಿ
ಸಿದನೆಂದು ವಚನಶಾಸ್ತ್ರದ ಅಭಿಪ್ರಾಯವದೆ. ಇದೇ ಶಿವಶರಣರ
ನಡೆಯು. ಇಲ್ಲಿ ಜಾತಿಸೂತಕವಿರಲಾರದು. ಇಷ್ಟೇ ಅಲ್ಲ, ಹೀಗೆ
ಏಕಭಾಜನವಿಲ್ಲದ ಹೊರತು ಅಂಗದ ಕಳೆಯಲ್ಲಿ ಲಿಂಗವನ್ನು ಧರಿಸಿ
ಕೊಳ್ಳಲು ಬರಲಾರದು. ಯಾಕಂದರೆ ಭಿನ್ನಭಾವವಿದ್ದಲ್ಲಿ ಲಿಂಗವಿರ
ಲಾರದು. ಆದ್ದರಿಂದ ಲಿಂಗದಲ್ಲಿ ಅವಿರಳನಾಗಿ ಅಂಗದ ಗುಣಗಳನ್ನು
ಕಳೆದು ದ್ವಂದ್ವಾಚರಣೆಯನ್ನು ತೊಲಗಿಸಿ ವೀರಶೈವನು ವರ್ತಿಸತಕ್ಕದ್ದು.



(೧೬೦) ಮಿಶ್ರಾರ್ಪಣವು:— ಷಡ್ವಿಧಾಂಗವನ್ನು ಷಡ್ವಿಧಲಿಂಗದಲ್ಲಿ ಒಡಗೂಡಿಸಿ ಷಡ್ವಿಧಲಿಂಗ ಸಂಬಂಧವನ್ನು ಮಾಡಿಕೊಂಡು ಷಡ್ವಿಧ ಭಕ್ತಿವಿಡಿದು ಆಚರಿಸಿ ಪರಮಾತ್ಮನೊಡನಿರುವ ಸ್ಥಿತಿಯನ್ನುಂಟು ಮಾಡಿಕೊಳ್ಳುವದೇ ಮಿಶ್ರಾರ್ಪಣದ ಮುಖ್ಯ ಉದ್ದೇಶವಿರುತ್ತದೆ. ಇದರಲ್ಲಿಯೂ ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣಗಳೆಂಬ ಭಾಗಗಳಿವೆ.

(೧) ಕಾಯಾರ್ಪಣ:— ಭೋಜ್ಯವನ್ನು ಆಚಾರಲಿಂಗದಲ್ಲಿ, ಪಾನ್ಯವನ್ನು ಗುರುಲಿಂಗದಲ್ಲಿ, ಭಕ್ಷ್ಯವನ್ನು (ಕಡಿದು ತಿನ್ನುವ ಪದಾರ್ಥ) ಶಿವಲಿಂಗದಲ್ಲಿ, ಚೋಹ್ಯವನ್ನು (ಸುರಿದು ತಿನ್ನುವ ಪದಾರ್ಥ) ಜಂಗಮಲಿಂಗದಲ್ಲಿ, ಲೇಹ್ಯವನ್ನು (ನೆಕ್ಕಿ ತಿನ್ನುವ ಪದಾರ್ಥ) ಪ್ರಸಾದಲಿಂಗದಲ್ಲಿ ಇವೆಲ್ಲವುಗಳ ಅರಿವನ್ನು ಮಹಾಲಿಂಗದಲ್ಲಿ ಸಮರ್ಪಣೆ ಮಾಡತಕ್ಕದ್ದು. ಇದು ಷಡ್ವಿಧ ಭಕ್ತಿ ಸಕೀಲಗಳಿಂದ ಆಗಬೇಕು. ಇದು ಕಾಯಾರ್ಪಣವು.

(೨) ಕರಣಾರ್ಪಣ:- ಪ್ರಾಣಲಿಂಗವು ಘ್ರಾಣೇಂದ್ರಿಯದಲ್ಲಿ ಪಂಚಾಚಾರ ಸ್ವರೂಪವಾದ ಆಚಾರಲಿಂಗವಾಗಿ, ಜಿಹ್ವೆಯಲ್ಲಿ ಮಂತ್ರಮೂರ್ತಿಯಾದ ಗುರುಲಿಂಗವಾಗಿ, ನಯನದಲ್ಲಿ ಪ್ರಕಾಶ ಸ್ವರೂಪವಾದ ಶಿವಲಿಂಗವಾಗಿ, ತ್ವಕ್ಕಿನಲ್ಲಿ ಯಜನ (ಪೂಜಾ) ಸ್ವರೂಪವಾದ ಚರಲಿಂಗವಾಗಿ, ಶ್ರೋತ್ರದಲ್ಲಿ ಈಳನ (ಪ್ರಾರ್ಥನೆ) ಸ್ವರೂಪವಾದ ಪ್ರಸಾದಲಿಂಗವಾಗಿ, ಹೃದಯೇಂದ್ರಿಯದೊಳಗೆ ಬೋಧಾ ಸ್ವರೂಪವಾದ ಮಹಾಲಿಂಗವಾಗಿ ಇರುತ್ತದೆ. ಆದ್ದರಿಂದ ಸುಗಂಧ, ಸುರಸ, ಪರಮಪ್ರಕಾಶ, ಸುಸ್ಪರ್ಶನ, ಸುಶಬ್ದ, ಸುಪರಿಣಾಮ ಇವುಗಳನ್ನು ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗಗಳಿಗೆ ಅರ್ಪಿಸತಕ್ಕದ್ದು. ಮುಂದೆ ಈ ಪದಾರ್ಥಗಳಲ್ಲಿ ಅವವುಗಳ ಗುಣಗಳ ಪ್ರಕಾರ ಪುನಃ ಆರು ವರ್ಗಗಳನ್ನು ವಚನಕಾರರು ಮಾಡಿ ಆಯಾ ಲಿಂಗಗಳಿಗೆ ಅರ್ಪಿಸಬೇಕೆಂದು ಹೇಳುತ್ತಾರೆ. (ಅ) ಗಂಧದಲ್ಲಿಯ ಆರು ಭಾಗಗಳು ಅವವೆಂದರೆ:—

ಪೃಥ್ವಿಯು ಗಂಧ, ಅಗರು ಮೊದಲಾದ ವೃಕ್ಷಗಳ ಗಂಧ, ಚಿಗುರು ಗಂಧ, ಪುಷ್ಪದ ಗಂಧ, ಹಣ್ಣುಗಳ ಗಂಧ, ಮತ್ತು ಈ ಗಂಧಗಳನ್ನೆ ಲ್ಲವನ್ನು ಅರಿವ ಪರಿಣಾಮ, ಇವುಗಳನ್ನು ಅನುಕ್ರಮವಾಗಿ ಆಚಾರ ಲಿಂಗದೊಳಗಣ ಆಚಾರಲಿಂಗ, ಆಚಾರಲಿಂಗದೊಳಗಣ ಗುರುಲಿಂಗ, ಆಚಾರಲಿಂಗದೊಳಗಣ ಶಿವಲಿಂಗ, ಆಚಾರಲಿಂಗದೊಳಗಣ ಜಂಗಮ ಲಿಂಗ, ಆಚಾರಲಿಂಗದೊಳಗಣ ಪ್ರಸಾದಲಿಂಗ, ಆಚಾರಲಿಂಗದೊಳಗಣ ಮಹಾಲಿಂಗಗಳಿಗೆ ಅರ್ಪಿಸತಕ್ಕದ್ದು. (ಬ) ರುಚಿಯಲ್ಲಿ ಮಧುರ, ಒಗರು, ಖಾರ, ಆಮ್ಲ, ಕಹಿ, ಮತ್ತು ಅವೆಲ್ಲವುಗಳ ಪರಿಣಾಮ ಹೀಗೆ ಆರು ಭಾಗಗಳಿದ್ದು ಅವುಗಳನ್ನು ಅನುಕ್ರಮವಾಗಿ ಗುರುಲಿಂಗದೊ ಳಗಣ ಆಚಾರಲಿಂಗ-ಗುರುಲಿಂಗ-ಶಿವಲಿಂಗ-ಜಂಗಮಲಿಂಗ-ಪ್ರಸಾದ ಲಿಂಗ ಮಹಾಲಿಂಗಗಳಲ್ಲಿ ಅರ್ಪಿಸತಕ್ಕದ್ದು. (ಕ) ವರ್ಣಗಳಲ್ಲಿ ಪೀತ, ಶ್ವೇತ, ಕೆಂಪು, ಹಸರು, ಕೃಷ್ಣ ಮತ್ತು ಅವುಗಳ ಪರಿಣಾಮ ಎಂತಲೂ (ಡ) ಸ್ಪರ್ಶನದಲ್ಲಿ ಕಠಿಣ, ಮೃದು, ಉಷ್ಣ, ಶೈತ್ಯ, ಮಿಶ್ರ ಸ್ಪರ್ಶನ ಮತ್ತು ಅವುಗಳ ಪರಿಣಾಮವೆಂತಲೂ (ಇ) ನಾದದಲ್ಲಿ ಕಂಚಿನವಾದ್ಯ, ತಂತಿಯ ವಾದ್ಯ, ಭೇರಿ ಮೊದಲಾದ ಚರ್ಮದ ವಾದ್ಯ, ಊದುವ ವಾದ್ಯ, ಗೀತನಾದ ಮತ್ತು ಅವುಗಳ ಪರಿಣಾಮವೆಂತಲೂ (ಫ) ತೃಪ್ತಿ ಯಲ್ಲಿ ಗಂಧ ತೃಪ್ತಿ, ರಸ ತೃಪ್ತಿ, ರೂಪತೃಪ್ತಿ, ಸ್ಪರ್ಶನ ತೃಪ್ತಿ, ಶಬ್ದ ತೃಪ್ತಿ, ಮಹದತೃಪ್ತಿ ಎಂತಲೂ ಭಾಗಗಳಿದ್ದು ಅವೆಲ್ಲವುಗಳನ್ನು ಅನು ಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಇವುಗಳಲ್ಲಿಯ ಆರಾರು ಲಿಂಗಗಳಿಗೆ ಅರ್ಪಣ ಮಾಡತಕ್ಕದ್ದು. ಹೀಗೆ ೩೬ ತೆರದ ಕರಣಾರ್ಪಣಗಳಿರುತ್ತವೆ. ಕಾಯಾರ್ಪಣದೊಳಗಿನ ಮಿಶ್ರವೇ ಕರಣಾರ್ಪಣವೆಂದು ಹೇಳಬಹುದು.

(೩) ಭಾವಾರ್ಪಣಃ— ಇದರಲ್ಲಿ ಆತ್ಮ ತತ್ವಸಂಬಂಧವಾದ ೨೧೬ ತೆರದ ತೃಪ್ತಿಪದಾರ್ಥಗಳನ್ನು ೨೧೬ ಲಿಂಗಗಳಿಗೆ ೨೧೬ ತೆರದ ಭಕ್ತಿ ಸಕೀಲಗಳಿಂದ ಸಮರ್ಪಿತವಾಗುವವು. ಕರಣಾರ್ಪಣದಲ್ಲಿರುವ ಪ್ರತಿ



ಯೊಂದು ಗುಂಪಿನಲ್ಲಿ ಮೇಲೆ ಹೇಳಿದಂತೆ ಆರು ಆರು ವಿಧಗಳಾಗಿ ೩೬ ಭಾಗಗಳಾಗುವವಷ್ಟೇ. ಈ ಪ್ರತಿಯೊಂದರಲ್ಲಿ ಭಾವಲಿಂಗ ಸಂಬಂಧದಲ್ಲಿ ಆರು ಕ್ರಿಯೆಗಳಿರುತ್ತವೆ. ಅವು ಇಂದ್ರಿಯಗಳಿಗೆ ತಟ್ಟುವದು, ತಟ್ಟಿ ದ್ದನ್ನು ತಿಳಿಯುವದು, ತಿಳಿದದ್ದನ್ನು ನಿಶ್ಚಯಿಸುವದು, ನಿಶ್ಚಯಿಸಿದ್ದನ್ನು ದೃಢೀಕರಿಸುವದು, ದೃಢೀಕರಿಸಿದ್ದನ್ನು ಅನುಭವಿಸುವದು, ಅನುಭವಿಸಿ ದನ್ನು, ಆನಂದಿಸುವದು ಹೀಗೆ ಇರುತ್ತವೆ. ಅವು ಆತ್ಮಸಂಬಂಧವಾದವು ಗಳು. ಅವುಗಳನ್ನು ಭಾವಲಿಂಗಕ್ಕೆ ಅರ್ಪಿಸಬೇಕು. ೩೬ ತೆರದ ಕರ ಣಾರ್ಪಣದ ಪ್ರತಿಯೊಂದರಲ್ಲಿ ಮೇಲೆ ಹೇಳಿದ ಆರು ಕ್ರಿಯೆಗಳು ಇದ್ದು ಈ ಕ್ರಿಯೆಗಳೆಲ್ಲವು ೩೬ ರ ಪ್ರತಿಯೊಂದರಲ್ಲಿ ಇರುವದರಿಂದ ಎಲ್ಲವೂ ಕೂಡಿ ೨೧೬ ತೆರದ ಅರ್ಪಣಗಳಾಗುವವು. ಇದೇ ಭಾವಾರ್ಪಣವು. ಉದಾಃ— ಆಚಾರಲಿಂಗದೊಳಗಣ ಆಚಾರಲಿಂಗದೊಳಗಣ ಆಚಾರ ಲಿಂಗ, ಆಚಾರಲಿಂಗದೊಳಗಣ ಆಚಾರಲಿಂಗದೊಳಗಣ ಗುರುಲಿಂಗ. ಹೀಗೆ ಅನುಕ್ರಮವಾಗಿ ಆಚಾರಲಿಂಗದೊಳಗಣ ಆಚಾರಲಿಂಗದಲ್ಲಿ ಆರು ವಿಭಾಗಗಳು, ಆಮೇಲೆ ಆಚಾರಲಿಂಗದೊಳಗಣ ಗುರುಲಿಂಗದೊಳಗಣ ಆಚಾರಲಿಂಗ ಮುಂತಾಗಿ ಆಚಾರಲಿಂಗದೊಳಗಣ ಗುರುಲಿಂಗದಲ್ಲಿಯು ಆರು ವಿಭಾಗಗಳು, ಹೀಗೆ ಪ್ರತಿಯೊಂದರಲ್ಲಿ ಆರಾರಂತೆ ೩೬ ವಿಭಾ ಗಗಳು ಇದ್ದು, ಈ ಆರು ಸ್ಥಲಗಳಲ್ಲಿ ೩೬ ರಂತೆ ಎಲ್ಲ ಕೂಡಿ ಒಟ್ಟು ೨೧೬ ವಿಭಾಗಗಳು ಆಗುವವು. ಇದು ಭಾವಾರ್ಪಣವು. ಇದರಲ್ಲಿ ಇಂದ್ರಿಯಗಳಿಗೆ ತಟ್ಟುವದು ಆಚಾರಲಿಂಗಕ್ಕೆ, ತಟ್ಟಿದ್ದನ್ನು ತಿಳಿಯು ವದು ಗುರುಲಿಂಗಕ್ಕೆ, ತಿಳಿದದ್ದನ್ನು ನಿಶ್ಚಯಿಸುವದು ಶಿವಲಿಂಗಕ್ಕೆ, ನಿಶ್ಚ ಯಿಸಿದ್ದನ್ನು ದೃಢೀಕರಿಸುವದು ಜಂಗಮಲಿಂಗಕ್ಕೆ, ದೃಢೀಕರಿಸಿದ್ದನ್ನು ಅನುಭವಿಸುವದು ಪ್ರಸಾದಲಿಂಗಕ್ಕೆ, ಅನುಭವಿಸಿದ್ದನ್ನು ಆನಂದಿಸುವದು ಮಹಾಲಿಂಗಕ್ಕೆ ಸಂಬಂಧಪಡುತ್ತವೆ. ಹೀಗೆ ಮಿಶ್ರಾರ್ಪಣದ ರೀತಿ ಯನ್ನು ಶಿವಶರಣರು ಬೋಧಿಸಿ ನಡೆದಿರುತ್ತಾರೆ.

(೧೬೧) ಇಷ್ಟಲಿಂಗದಲ್ಲಿ ಅರ್ಪಣದ ಸಂಬಂಧವುಃ— ಅಷ್ಟಾವರ ಣದ ಆಚರಣೆಯಲ್ಲಿ ಇಷ್ಟಲಿಂಗದ ಸಂಬಂಧವನ್ನಿಡದೆ ಆವ ಆವರ

ಣದ ಆಚರಣೆಯನ್ನೂ ಆಚರಿಸಲಿಕ್ಕೆ ಬರಲಾರದು. ಅದರ ಮೂಲಕ ವಾಗಿಯೇ ಗುರುಲಿಂಗಜಂಗಮವನ್ನು ಅರಿಯಬೇಕು. ಹೀಗೆ ಅರಿತು ಪ್ರಸಾದಮೂಲಕವಾಗಿಯೇ ಭಕ್ತನು ಯಾವಾಗಲೂ ಆಚರಿಸುತ್ತಿರಬೇಕು. ಇದು ಮಿಶ್ರಾರ್ಪಣದಲ್ಲಿ ವರ್ಣಿಸಲ್ಪಟ್ಟಿದೆ. ಹಾಗೆಯೇ ನಿತ್ಯದ ಲಿಂಗ ಪೂಜೆಯ ಆಚರಣೆಯಲ್ಲಿಯೂ ಕೂಡ ಈ ತತ್ವಗಳನ್ನಿಟ್ಟುಕೊಳ್ಳಬೇಕು. ಈ ಅರ್ಪಣದ ಮುಖ್ಯ ಆಚರಣೆಯು ಇಷ್ಟಲಿಂಗದ ಆಯ ಆಯ ಭಾಗಗಳಿಗೆ ಸಂಬಂಧಿಸಿದೆಂಬುದನ್ನು ಅರಿತುಕೊಳ್ಳಬೇಕು. ಈ ಸಂಬಂಧವನ್ನು ಮಂತ್ರಮೂಲಕ ಮಾಡಿಕೊಳ್ಳತಕ್ಕದ್ದು. ಈ ವಿವರ ಹೇಗೆಂದರೆ– (೧) ಆಚಾರಲಿಂಗಕ್ಕೆ ಭೋಜ್ಯ, ಬೋನವೆಂಬ ಪದಾರ್ಥ, ಗಂಧವೆಂಬ ದ್ರವ್ಯ, ಕಠಿಣತೆ, ಪೃಥ್ವೀ ತತ್ವವಿದ್ದು ಓಂ ಹ್ರಾಂ ಮಂತ್ರದಿಂದ ಇಷ್ಟಲಿಂಗದ ಸಂಬಂಧ ಮಾಡತಕ್ಕದ್ದು. (೨) ಗುರುಲಿಂಗಕ್ಕೆ ಪಾನ್ಯ, ಉದಕ ಪದಾರ್ಥ, ಮೃದುತ್ವ ದ್ರವ್ಯ, ಅಪ್ಪು ತತ್ವವಿದ್ದು, ಓಂ ಹ್ರೀಂ ಮಂತ್ರದಿಂದ ಇಷ್ಟಲಿಂಗದ ಕಟಿಯಲ್ಲಿ ಸಂಬಂಧಿಸತಕ್ಕದ್ದು. (೩) ಶಿವಲಿಂಗಕ್ಕೆ ಭಕ್ಷ್ಯ, ರೂಪ ಪದಾರ್ಥ, ಉಷ್ಣತೆ ದ್ರವ್ಯ, ಅಗ್ನಿ ತತ್ವವಿದ್ದು, ಓಂ ಹ್ರೂಂ ಮಂತ್ರದಿಂದ ಇಷ್ಟಲಿಂಗದ ವೃತ್ತಕ್ಕೆ ಸಂಬಂಧಿಸತಕ್ಕದ್ದು. (೪) ಜಂಗಮಲಿಂಗಕ್ಕೆ ಚೋಹ್ಯ, ಸ್ಪರ್ಶನ ಪದಾರ್ಥ, ಮಿಶ್ರದ್ರವ್ಯ, ವಾಯುತತ್ವವಿದ್ದು ಓಂ, ಹ್ರೈಂ ಮಂತ್ರದಿಂದ ಇಷ್ಟ ಲಿಂಗದ ಗೋಮುಖಕ್ಕೆ ಸಂಬಂಧಿಸತಕ್ಕದ್ದು. (೫) ಪ್ರಸಾದಲಿಂಗಕ್ಕೆ ಲೇಹ್ಯ, ಶಬ್ದಪದಾರ್ಥ, ಮಿಶ್ರಸ್ಪರ್ಶನ, ಆಕಾಶತತ್ವವಿದ್ದು, ಓಂ, ಹ್ರೌಂ ಮಂತ್ರದಿಂದ ಇಷ್ಟಲಿಂಗದ ನಾಳಕ್ಕೆ ಸಂಬಂಧಿಸತಕ್ಕದ್ದು. (೬) ಮಹಾಲಿಂಗಕ್ಕೆ ಇರವಿಲ್ಲದ ಅರಿವು, ಭೋಜ್ಯಾದಿ ಐದು ಪದಾರ್ಥವೆಂದರಿವು, ಓಂ, ಹ್ರಃ ಮಂತ್ರದಿಂದ ಇಷ್ಟಲಿಂಗದ ಗೋಳಕಕ್ಕೆ ಸಂಬಂಧಿಸತಕ್ಕದ್ದು.

(೧೬.೨) ಏಕಾದಶ ಪ್ರಸಾದಗಳು:— ಏಕಾದಶ ಪ್ರಸಾದಗಳಲ್ಲಿ ವೀರಶೈವನ ಪ್ರಗತಿಗೆ ಸಂಬಂಧಿಸಿದ ಎಲ್ಲ ಆಚರಣೆಗಳು ಅಡಕವಾಗಿರುತ್ತವೆ. ಆಚರಣೆಯು ಬೇರೆ ಬೇರೆ ದೃಷ್ಟಿಯಿಂದ ಅವುಗಳ



ವರ್ಣನೆಯನ್ನು ವಚನಕಾರರು ಅನೇಕ ಬಗೆಯಾಗಿ ಮಾಡುತ್ತಾರೆ. ಆದರೆ ಅವೆಲ್ಲವೂ ಮೂಲದಲ್ಲಿ ಒಂದೇ ಅರ್ಥವುಳ್ಳವಾಗಿರುತ್ತವೆ. ಆದರೂ ಅವುಗಳಲ್ಲಿ ಆಂತರಂಗಿಕ ಮತ್ತು ಬಾಹ್ಯ ಎಂದು ಎರಡು ವಿಭೇದಗಳನ್ನು ನಾವು ಮಾಡಬಹುದು. ಕೆಲವು ವಚನಗಳಲ್ಲಿ ಇವುಗಳಿಗೆಯೇ ಅನುಕ್ರಮವಾಗಿ ಮಾಹೇಶ್ವರನ ಏಕಾದಶ ಪ್ರಸಾದಗಳು, ಮತ್ತು ಭಕ್ತನ ಏಕಾದಶ ಪ್ರಸಾದಗಳು ಎಂದು ಹೇಳುವದುಂಟು. ಮೊದಲಿನವು ಹೆಚ್ಚಿಗೆ ತಾತ್ವಿಕವಾಗಿರುತ್ತವೆ. ಈ ಶಬ್ದಗಳಿಗೆ ಅನುಕ್ರಮವಾಗಿ ಮೀರಿದ ಸ್ಥಲಕ್ಕೆ ಸಂಬಂಧಿಸಿದವು, ಮತ್ತು ಮಾರ್ಗಕ್ರಿಯೆಗೆ ಸಂಬಂಧಿಸಿದವು ಎಂತಲೂ ಹೇಳಬಹುದು. ಮೊದಲನೆಯದರಲ್ಲಿ (ಅ) ವಿಧ, (ಬ) ವಿಧ, (ಕ) ವಿಧ, (ಡ) ವಿಧ ಎಂದು ನಾಲ್ಕು ವಿಧಗಳನ್ನು ಮಾಡುತ್ತೇವೆ. ೨ನೇ ವರ್ಗದಲ್ಲಿ ನಾವು ಒಂದೇ ವರ್ಗವನ್ನು ಮಾಡುತ್ತೇವೆ. ಈ ಎರಡಲ್ಲದೆ ಮೂರನೆಯ ವರ್ಗವೂ ಒಂದಿರುತ್ತದೆ. ಅದು ಸಂಪೂರ್ಣ ತಾತ್ವಿಕವು. ನಾವು ಸಂಕ್ಷೇಪವಾಗಿ ಇವುಗಳ ವ್ಯಾಖ್ಯೆಗಳನ್ನು ಆಯಾ ವಚನಕಾರರ ಅಭಿಪ್ರಾಯಗಳ ಪ್ರಕಾರ ವಿವರಿಸುತ್ತೇನೆ.

೧ನೇ ವರ್ಗವು:— ಇದು ತಾತ್ವಿಕವಾದರೂ ಇದನ್ನು ಮೂರು ದೃಷ್ಟಿಯಿಂದ ಹೇಳಬಹುದು. ಅವುಗಳನ್ನು ಮೇಲೆ ಹೇಳಿದಂತೆ (ಅ) ವಿಧ, (ಬ) ವಿಧ, (ಕ) ವಿಧ, (ಡ) ವಿಧ ಎಂದು ಕರೆಯುತ್ತೇವೆ. ಅವು ಯಾವವೆಂದರೆ,

(ಅ) ವಿಧ— (೧) ಶುದ್ಧಪ್ರಸಾದ— ಮಂತ್ರಧ್ಯಾನದಿಂದ ಪದಾರ್ಥದ ಪೂರ್ವಾಶ್ರಯವಳಿದುದೇ ಶುದ್ಧಪ್ರಸಾದವು. (೨) ಸಿದ್ಧಪ್ರಸಾದ- ಶುದ್ಧಪ್ರಸಾದವನ್ನು ಲಿಂಗಕ್ಕೆ ನೈವೇದ್ಯ ಮಾಡಲು ಆಗ ಪ್ರಸಾದದ ಕಳೆ ಲಿಂಗದಲ್ಲಿ ನೆಲೆಗೊಳ್ಳುತ್ತದೆ. ಇದು ಸಿದ್ಧಪ್ರಸಾದವು. (೩) ಪ್ರಸಿದ್ಧಪ್ರಸಾದವು:— ಸಿದ್ಧಪ್ರಸಾದವನ್ನು ಜಿಹ್ವೆಯಲ್ಲಿ ಸ್ವೀಕರಿಸುವದು. ಇದು ಜಂಗಮಮುಖವಾದುದೆಂದು ಭಾವಿಸಿ ಹಾಗೆ ಸ್ವೀಕರಿಸಿದಲ್ಲಿ ಪ್ರಸಿದ್ಧಪ್ರಸಾದವು. (೪) ಆಪ್ಯಾಯನ ಪ್ರಸಾದ- ಮೇಲೆ ಹೇಳಿದ

ಮೂರು ಪ್ರಸಾದಗಳು ಲಿಂಗಮುಖವಾದವುಗಳೆಂಬ ದೃಢಭಾವವು ನೆಲೆಗೊಳ್ಳಲು ಅದು ಆಪ್ಯಾಯನ ಪ್ರಸಾದವು. (೫) ಸಮಯಪ್ರಸಾದ:- ಈ ಪ್ರಸಾದದ ಸೇವನಾ ಕಾಲದಲ್ಲಿ ಇತರ ಪದಾರ್ಥಗಳಿಗೆ ಲಕ್ಷ್ಯವಿಡದೆ ಅವು ಅನರ್ಪಿತವೆಂದು ತಿಳಿಯುವದು ಸಮಯಪ್ರಸಾದವು. (೬) ಪಂಚೇಂದ್ರಿಯ ವಿರಹಿತಪ್ರಸಾದ:— ಈ ಪ್ರಸಾದ ಸೇವನೆಯಲ್ಲಿ ಪಂಚೇಂದ್ರಿಯಗಳು ಮುಟ್ಟದ ಮುನ್ನವೇ ಅವುಗಳನ್ನು ಸೇವಿಸುವದು ಇರುತ್ತವೆ. (೭) ಅಂತಃಕರಣ ಚತುಷ್ಟಯ ವಿರಹಿತಪ್ರಸಾದಃ— ಅಂಗದ ಕರಣಗಳಿಗೆ ದೂರನಾಗಿ ಪ್ರಸಾದ ಸೇವಿಸುವದು. (೮) ಪ್ರಸಾದಿಯ ಪ್ರಸಾದ- ಪ್ರಸಾದಿಯು ಪ್ರಸಾದವನ್ನು ಜಂಗಮಕ್ಕೆ ಕೊಟ್ಟು ಸಮರಸಭೋಗಮಾಡುವದು. (೯) ಸದ್ಭಾವಪ್ರಸಾದ- ಪ್ರಸಾದವನ್ನು ಸದ್ಭಾವದಿಂದ ಸೇವಿಸುವದೇ ಸದ್ಭಾವಪ್ರಸಾದವು. (೧೦) ಸಮತಾ ಪ್ರಸಾದಃ-- ಹಸಿವು ಅಡಗಿ ಶಾಂತಿಸೈರಣೆಯಿಂದಾಗುವದೇ ಸಮತಾ ಪ್ರಸಾದವು. (೧೧) ಜ್ಞಾನಪ್ರಸಾದ-- ಸಮತಾಪ್ರಸಾದದಲ್ಲಿ ತೃಪ್ತಿಯನ್ನು ಹೊಂದಿ ಕ್ರಿಯಾ ಖಂಡಿತ ಮಾಡುವಲ್ಲಿ ಅಖಂಡಪರಿಪೂರ್ಣಪ್ರಸಾದಿಯಾಗಿರುವದು ಜ್ಞಾನಪ್ರಸಾದವು.

(ಬ) ವಿಧ- (೧) ಶುದ್ಧಪ್ರಸಾದ- ದೀಕ್ಷೆಯಿಂದ ತನುವನ್ನು ಶುದ್ಧಪಡಿಸಿದಲ್ಲಿ ಅದು ಶುದ್ಧಪ್ರಸಾದವು. (೨) ಸಿದ್ಧಪ್ರಸಾದವು- ಇಷ್ಟಲಿಂಗ ಧಾರಣಮಾಡಿಕೊಂಡು ಮಂತ್ರಸ್ವರೂಪವನ್ನು ನೆನೆಯುತ್ತಿರಲು ನೆನೆವ ಮನಸ್ಸಿನಲ್ಲಿ ಮಂತ್ರವು ಸಿದ್ಧಿಸಲು ಆ ಮನವೇ ಸಿದ್ಧಪ್ರಸಾದವು. (೩) ಪ್ರಸಿದ್ಧಪ್ರಸಾದವು- ತನುವು ಶುದ್ಧಪ್ರಸಾದ ಮತ್ತು ಮನವು ಸಿದ್ಧಪ್ರಸಾದವಾಯಿತ್ತೆಂಬ ಭಾವನೆಯೇ ಪ್ರಸಿದ್ಧಪ್ರಸಾದವು. (೪) ಆಪ್ಯಾಯನ ಪ್ರಸಾದ-- ಈ ಮೂರಕ್ಕೆ ಮೂಲವಾದುದು ಆತ್ಮ. ಅದರಲ್ಲಿ ಪ್ರಸಾದವು ವೇಧಿಸಲು ಅದು ಆಪ್ಯಾಯನ ಪ್ರಸಾದವು. (೫) ಸಮಯಪ್ರಸಾದ- ಈ ವಿಧವು ಇತರ ಸಮಾಜದವರಿಗೆ ಸಮನಿಸಲಾರದು, ಆದರೆ ಶರಣನಿಗೆ ಮಾತ್ರ ಸಮನಿಸುತ್ತದೆಂಬ ತಿಳುವಳಿಕೆಯು ಸಮಯ ಪ್ರಸಾದವು. (೬) ಪಂಚೇಂದ್ರಿಯವಿರಹಿತ ಪ್ರಸಾದ— ಪಂಚೇಂದ್ರಿಯಗಳಲ್ಲಿ ಪಂಚ



ಪ್ರಸಾದವನ್ನು ಸಂಬಂಧಿಸಿಕೊಂಡು ಪಂಚವಿಷಯರಹಿತನಾಗಿರುವದು ಪಂಚೇಂದ್ರಿಯವಿರಹಿತ ಪ್ರಸಾದವು. (೭) ಅಂತಃಕರಣ ಚತುಷ್ಟಯವಿರಹಿತ ಪ್ರಸಾದವು— ಇದು ಅಂಗಕರಣಗಳು ಲಿಂಗಕರಣಗಳಾಗಿರುವದು ಇದೆ. (೮) ಪ್ರಸಾದಿಯ ಪ್ರಸಾದ— ಸರ್ವಾಂಗವು ಲಿಂಗಮಯವಾಗಿ ಲಿಂಗಭೋಗೋಪಭೋಗಿಯಾಗಿರುವದು ಪ್ರಸಾದಿಯ ಪ್ರಸಾದ. (೯) ಸದ್ಭಾವ ಪ್ರಸಾದ— ಭಾವದಲ್ಲಿ ಸದ್ಭಾವವುಳ್ಳವನಾಗುವದು ಸದ್ಭಾವ ಪ್ರಸಾದ. (೧೦) ಸಮತಾಪ್ರಸಾದ – ಸದ್ಭಾವಿಯಾಗಿ ಪರರ ನಿಂದೆಗಳನ್ನು ಸೈರಿಸುತ್ತ ಸರ್ವರಲ್ಲಿ ಸಮತಾಭಾವಿಯಾಗಿರುವದು ಸಮತಾಪ್ರಸಾದವು. (೧೧) ಜ್ಞಾನಪ್ರಸಾದಃ – ಸಮತಾಭಾವವೇ ಅಂಗವಾದ ಶರಣನು ಗಾಳಿ ಇಲ್ಲದ ದೀಪದಂತೆ ಸಹಜಸುಜ್ಞಾನದಲ್ಲಿರುವದೇ ಜ್ಞಾನಪ್ರಸಾದವು.

(ಕ) ವಿಧವು— (೧) ಗುರುಪ್ರಸಾದ-ಗುರುಮುಖದಿಂದ ಬಂದುದು ಗುರುಪ್ರಸಾದವು. ಇದು ಶುದ್ಧಪ್ರಸಾದವೆಂತಲೂ ಹೇಳಬಹುದು. (೨) ಲಿಂಗಪ್ರಸಾದ— ಗುರುಪ್ರಸಾದವನ್ನು ಲಿಂಗಕ್ಕೆ ಅರ್ಪಿಸುವದು ಲಿಂಗಪ್ರಸಾದವು. ಇದು ಸಿದ್ಧಪ್ರಸಾದವೆಂತಲೂ ಹೇಳಬಹುದು. (೩) ಜಂಗಮಪ್ರಸಾದ—ಭೋಜನಕ್ಕೆ ಸಿದ್ಧಪಡಿಸಿ ಲಿಂಗಕ್ಕೆ ಕೊಟ್ಟು ಸಲಿಸುವದೇ ಜಂಗಮಪ್ರಸಾದವು. ಇದು ಪ್ರಸಿದ್ಧ ಪ್ರಸಾದವೆಂತಲೂ ಹೇಳಬಹುದು. (೪) ಆಪ್ಯಾಯನಪ್ರಸಾದ—ಲಿಂಗಾರ್ಪಿತದ ಅಪೇಕ್ಷೆಯಿಂದ ಸಲಿಸುವದೇ ಆಪ್ಯಾಯನಪ್ರಸಾದ. (೫) ಸಮಯಪ್ರಸಾದ— ಗುರುಲಿಂಗ ಜಂಗಮವನ್ನು ಕುರಿತು ತೆಗೆದುಕೊಂಬುವದು ಸಮಯ ಪ್ರಸಾದವು. (೬) ಪಂಚೇಂದ್ರಿಯವಿರಹಿತ ಪ್ರಸಾದ— ಪಂಚೇಂದ್ರಿಯಗಳಲ್ಲಿ ಪಂಚವಿಷಯ ಪದಾರ್ಥಗಳನ್ನು ಪಂಚವಿಧಲಿಂಗಕ್ಕೆ ಸಮರ್ಪಣೆಮಾಡುವದು ಪಂಚೇಂದ್ರಿಯ ವಿರಹಿತಪ್ರಸಾದವು. (೭) ಅಂತಃಕರಣವಿರಹಿತ ಚತುಷ್ಟಯ ಪ್ರಸಾದ— ಅಹಂಕಾರದಲ್ಲಿ ಶಿವಚಿಂತನೆಯುಳ್ಳಾತನಾಗಿ ಸಲಿಸುವದು ಅಂತಃಕರಣವಿರಹಿತ ಪ್ರಸಾದವು. (೮) ಪ್ರಸಾದಿಯ ಪ್ರಸಾದ— ಗುರುಲಿಂಗಜಂಗಮದ ಪ್ರಸಾದವನ್ನು ಅಪೇಕ್ಷಿಸಿ ಕೊಂಬುವದೇ ಪ್ರಸಾದಿಯ

ಪ್ರಸಾದವು. (೯) ಸದ್ಭಾವ ಪ್ರಸಾದ – ತ್ರಿವಿಧಾಂಗದಲ್ಲಿ ತ್ರಿವಿಧಲಿಂಗವನ್ನು ಸಂಬಂಧಿಸಿ ಆ ಲಿಂಗವೇ ತಾನೆಂದರಿದು ಆ ತ್ರಿವಿಧ ಲಿಂಗಕ್ಕೆ ಕೊಡುವದು ಸದ್ಭಾವ ಪ್ರಸಾದವು. (೧೦) ಸಮತಾಪ್ರಸಾದ – ಬಹಿರಂಗ ಪ್ರಪಂಚವನ್ನು ನಷ್ಟಮಾಡಿ ಅರುಹ ಹಿಡಿದು ಸಲಿಸುವದು ಸಮತಾ ಪ್ರಸಾದವು. (೧೧) ಜ್ಞಾನಪ್ರಸಾದ – ಗುರುವಿನ ಪ್ರಸನ್ನತ್ವವೇ ಜ್ಞಾನ ಪ್ರಸಾದವು.

ಇದರಲ್ಲಿ (ಅ) ವಿಧವು ಬಾಹ್ಯ ಶರೀರಕ್ಕೆ ಸಂಬಂಧಪಡುತ್ತದೆ. (ಬ) ವಿಧ ಮತ್ತು (ಕ) ವಿಧಗಳು ಪ್ರಾಣ ಮತ್ತು ಜ್ಞಾನಕ್ಕೆ ಹೆಚ್ಚಿಗೆ ಸಂಬಂಧಪಡುತ್ತವೆ. ಮುಖ್ಯವಾಗಿ ಶುದ್ಧ ಸಿದ್ಧ ಪ್ರಸಿದ್ಧ ಪದಾರ್ಥಗಳ ಮೂಲಕ ಗುರುಲಿಂಗ ಜಂಗಮವನ್ನು ಮೊದಲು ಅರಿಯಬೇಕು. ಹೀಗೆ ಅರಿತು ಮುಂದೆ ಹೇಗೆ ಆಚರಿಸಬೇಕೆಂಬುದು ಅವುಗಳ ಮುಂದಿನ ಪ್ರಸಾದಗಳಲ್ಲಿ ಹೇಳಲ್ಪಟ್ಟಿರುತ್ತದೆ. (ಅ) ವಿಧವು ಬಾಹ್ಯ ಆಚರಣೆಗೆ ಸಂಬಂಧವಾದುದು. (ಬ) ಮತ್ತು (ಕ) ವಿಧಗಳು ತಾತ್ವಿಕವಾಗಿರುತ್ತವೆ. ಅವುಗಳು ಬೇರೆ ವಿಧಗಳಾಗಿ ವ್ಯಾಖ್ಯೆಗಳಲ್ಲಿ ಕಂಡರೂ ಅವೆಲ್ಲವೂ ಒಂದೇ ಇರುತ್ತವೆ. ಆದರೆ ಅವುಗಳಲ್ಲಿ ಮಂತ್ರಗಳನ್ನು ಸಂಬಂಧಿಸಬೇಕು. ಅಂದರೆ ಅವುಗಳ ವರ್ತನೆಯು ಶಕ್ಯವು. ಅದು (ಡ) ವಿಧದಲ್ಲಿ ಹೇಳಲ್ಪಟ್ಟಿದೆ.

(ಡ) ವಿಧವು:— (೧) ಶುದ್ಧಪ್ರಸಾದ— ಇದು ಬಕಾರ ಮಂತ್ರವು. ಇದು ಇಷ್ಟಲಿಂಗರೂಪವಾಗಿ ತ್ಯಾಗಾಂಗದಲ್ಲಿ ಸಂಬಂಧಪಡುತ್ತದೆ. (೨) ಸಿದ್ಧ ಪ್ರಸಾದ— ಇದು ನಕಾರ ಮಂತ್ರವು. ಸಿದ್ಧಪ್ರಸಾದವು. ಇದು ಪ್ರಾಣಲಿಂಗವಾಗಿ ಭೋಗಾಂಗದಲ್ಲಿ ಸಂಬಂಧವಾಗಿರುತ್ತದೆ. (೩ ಪ್ರಸಿದ್ಧಪ್ರಸಾದ— ವಕಾರ ಮಂತ್ರವು ಪ್ರಸಿದ್ಧಪ್ರಸಾದವು. ಅದು ಭಾವಲಿಂಗವಾಗಿ ಯೋಗಾಂಗದಲ್ಲಿ ಸಂಬಂಧವು. (೪) ಆಪ್ಯಾಯನ ಪ್ರಸಾದ— ಅದು ನಕಾರಮಂತ್ರವು. ಆಚಾರಲಿಂಗವಾಗಿ ಭಕ್ತಾಂಗವಾಗಿರುತ್ತದೆ. (೫) ಸಮಯಪ್ರಸಾದ— ಮಕಾರವೇ ಸಮಯಪ್ರಸಾದವು. ಅದು ಗುರುಲಿಂಗ



ವಾಗಿ ಮಹೇಶ್ವರನಿಗೆ ಸಂಬಂಧವು. (೬) ಪಂಚೇಂದ್ರಿಯ ವಿರಹಿತ ಪ್ರಸಾದ— ಅದು ಶಿಕಾರವು. ಶಿವಲಿಂಗವಾಗಿ ಪ್ರಸಾದಿಯ ಅಂಗದಲ್ಲಿ ಸಂಬಂಧವು. (೭) ಅಂತಃಕರಣವಿರಹಿತ ಪ್ರಸಾದ— ಅದು ವಕಾರವು. ಅದು ಜಂಗಮಲಿಂಗವಾಗಿ ಪ್ರಾಣಲಿಂಗಿಯ ಅಂಗದಲ್ಲಿ ಸಂಬಂಧವು. (೮) ಪ್ರಸಾದಿಯ ಪ್ರಸಾದವು. ಇದು ಯಕಾರವು. ಅದು ಪ್ರಸಾದಲಿಂಗವಾಗಿ ಶರಣನ ಅಂಗದಲ್ಲಿ ಸಂಬಂಧವು. (೯) ಸದ್ಭಾವಪ್ರಸಾದ— ಇದು ಓಂಕಾರವು. ಮಹಾಲಿಂಗವಾಗಿ ಐಕ್ಯನ ಅಂಗದಲ್ಲಿ ಸಂಬಂಧವು. (೧೦) ಸಮತಾಪ್ರಸಾದ— ಇದು ಅಕಾರವು. ನಿಃಕಲಲಿಂಗವಾಗಿ ಸ್ಥೂಲಾಂಗದಲ್ಲಿ ಸಂಬಂಧವು. (೧೧) ಜ್ಞಾನಪ್ರಸಾದವು— ಇದು ಉಕಾರವು. ಶೂನ್ಯಲಿಂಗವಾಗಿ ಸೂಕ್ಷ್ಮಾಂಗದಲ್ಲಿ ಸಂಬಂಧವು.

ಹೀಗೆ ಏಕಾದಶ ಪ್ರಸಾದಗಳನ್ನು ಆಚರಿಸಿದಲ್ಲಿ ಮುಂದೆ ಮಕಾರವೇ ಚಿತ್ಕಲಾ ಪ್ರಸಾದವಾಗುತ್ತದೆ. ಅದೇ ನಿರಂಜನಲಿಂಗವು. ಅದು ಕಾರಣಾಂಗದಲ್ಲಿ ಸಂಬಂಧವು. ಪ್ರಸಾದವೆಂದರೆ ಕೇವಲ ಭೋಜನಮಾತ್ರವಲ್ಲ. ಶರಣರು ಇದರಲ್ಲಿ ಬಹು ದೀರ್ಘ ವಿಚಾರಗಳನ್ನಿಟ್ಟುಕೊಂಡಿದ್ದಾರೆ.

೨ನೆ ವರ್ಗವು.— ಇದು ಮೇಲೆ ಹೇಳಿದಂತೆ ಕೇವಲ ಕ್ರಿಯಾರೂಪವಾಗಿದೆ. ಮಾರ್ಗಕ್ರಿಯೆಗೆ ಸಂಬಂಧಪಟ್ಟಿದೆ. ಅದು ಹೇಗೆಂದರೆ..

(ಅ) ವಿಧಃ— (೧) ಗುರುಪ್ರಸಾದ— ಮಂತ್ರವಿಧಾನದಿಂದ ಹಸ್ತಸ್ಪರ್ಶ ಮಾಡುವದು ಗುರುಪ್ರಸಾದವು. (೨) ಲಿಂಗಪ್ರಸಾದ— ಲಿಂಗಕ್ಕೆ ಮೂರು ವೇಳೆ ಅರ್ಪಿತಮಾಡುವದು ಲಿಂಗಪ್ರಸಾದವು (೩) ಜಂಗಮಪ್ರಸಾದ— ಲಿಂಗಪ್ರಸಾದವನ್ನು ಜಿಹ್ವೆಗೆ ಮುಟ್ಟಿಸುವದು ಜಂಗಮಪ್ರಸಾದವು. (೪) ಪ್ರಸಾದಿಯ ಪ್ರಸಾದ— ಜಂಗಮಪ್ರಸಾದವನ್ನು ಹಸ್ತಕ್ಕೆ ತರುವದು ಪ್ರಸಾದಿಯ ಪ್ರಸಾದವು. (೫) ಸಮಯಪ್ರಸಾದ— ಪ್ರಸಾದವನ್ನು ನೀಡುವದೇ ಸಮಯಪ್ರಸಾದವು. (೬) ಭೋಜ್ಯಪ್ರಸಾದ— ಇಂಥ ಪ್ರಸಾದವನ್ನು ಸಮರಸಭಾವದಿಂದ ಸೇವನೆಗೆ ತರುವದು ಭೋಜ್ಯ

ಪ್ರಸಾದವು. (೭) ಆಪ್ಯಾಯನ ಪ್ರಸಾದ– ಇಂಥ ಪ್ರಸಾದವನ್ನು ಜಿಹ್ವೆ ಮುಟ್ಟಿಸುವದು ಆಪ್ಯಾಯನಪ್ರಸಾದವು. (೮) ಭಕ್ಷ್ಯಪ್ರಸಾದ– ಮೇಲ್ಕಂಡ ಪ್ರಸಾದವನ್ನು ದಂತದಿಂದ ಜಗಿಯುವದು ಭಕ್ಷ್ಯಪ್ರಸಾದವು. (೯) ಚೋಷ್ಯ ಪ್ರಸಾದ– ಭಕ್ಷ್ಯಪ್ರಸಾದವನ್ನು ಚಪ್ಪರಿಸುವದು ಚೋಷ್ಯಪ್ರಸಾದವು. (೧೦) ಲೇಹ್ಯಪ್ರಸಾದ– ಮುಂದೆ ಅದನ್ನು ಬಟ್ಟಲಖಂಡಿತ ಮಾಡು ವದು ಲೇಹ್ಯ ಪ್ರಸಾದವು. (೧೧) ತೃಪ್ತಿಪ್ರಸಾದ– ಮುಂದೆ ಈ ಬಟ್ಟಲ ಖಂಡಿತ ಮಾಡಿದ್ದನ್ನು ಜಿಹ್ವೆಯಲ್ಲಿ ಖಂಡಿತಮಾಡುವದು ತೃಪ್ತಿಪ್ರಸಾ ದವು. ಈ ಪ್ರಸಾದಗಳು ಆಹಾರ ಪದಾರ್ಥಗಳನ್ನು ಅರ್ಪಿಸಿ ಭೋಜನ ಮಾಡುವ ರೀತಿಗಳನ್ನು ಹೇಳುತ್ತವೆ.

ಈ ಬಗೆಯ ಅರ್ಪಣಭಾವದಿಂದ ಮನುಷ್ಯನು ಪರಿಪೂರ್ಣನಾಗಿ ಶೂನ್ಯಸ್ಥಿತಿಯನ್ನು ಹೊಂದುತ್ತಾನೆ. ಇದರ ವಿವರಣೆಯು ಈ ಕೆಳಗೆ ಹೇಳಲ್ಪಟ್ಟಿದೆ. ಇದು ೩ನೆಯ ವರ್ಗವೆಂದು ಭಾವಿಸಿ ಬೇರೆಯಾಗಿ ವಿಂಗಡಿಸಿ ದ್ದೇವೆ. ಅದು ಹೇಗೆಂದರೆ –

೩ನೇ ವರ್ಗ:- (೧) ಪ್ರಥಮದಲ್ಲಿ– ಮಹಾದೇವನಿಗೆ ಮನವರ್ಪಿತವು. (೨) ದ್ವಿತೀಯದಲ್ಲಿ– ಮಹೇಶ್ವರನಿಗೆ ದೃಢಭಾವವು ಅರ್ಪಿತವು. (೩) ತೃತೀಯದಲ್ಲಿ – ಶಂಕರನಿಗೆ ಸಮಾಧಾನವು ಅರ್ಪಿತವು. (೪) ಚತು ರ್ಥದಲ್ಲಿ– ನಿರ್ವಿಷಯದ ಅರ್ಪಣವಿದೆ. (೫) ಪಂಚಮದಲ್ಲಿ– ನಿರಿಂದ್ರಿ ಯದ ಅರ್ಪಿತವಿದೆ. (೬) ಷಷ್ಠಮದಲ್ಲಿ – ರೂಪವು ನಷ್ಟವಾಗುವದು. ಅದು ನಿರೂಪಾರ್ಪಿತವು (೭) ಸಪ್ತಮದಲ್ಲಿ– ಆತ್ಮಾರ್ಪಿತವಾಗುವದು. (೮) ಅಷ್ಟಮದಲ್ಲಿ– ಪ್ರಸಾದದ ಅರ್ಪಿತವು. (೯) ನವಮದಲ್ಲಿ– ನಿಃಶೂನ್ಯಾ ರ್ಪಿತವು. (೧೦) ದಶಮದಲ್ಲಿ– ತನ್ನ ಮರೆದು ಮಹದರ್ಪಿತವು. (೧೧) ಏಕಾದಶದಲ್ಲಿ ಮಹಾಘನವು ತನ್ನನೇ ನುಂಗಿತ್ತು.

ಈಪ್ರಕಾರ ಪಾದೋದಕ ಪ್ರಸಾದಗಳ ವಿವರಣೆಗಳಿರುತ್ತವೆ. ಈ ವಿಚಾರಗಳು ಶಿವಶರಣರ ಉಕ್ತಿಗಳಲ್ಲಿ ಮಾತ್ರ ದೊರೆಯುತ್ತವೆ. ಅವು ಬಹು ಗೂಢವೂ ಉದಾತ್ತವಾದವುಗಳೂ ಇರುತ್ತವೆ. ಹಿಂದೂ ಧರ್ಮದ



ಬೇರೆ ಯಾವ ಮತಗಳಲ್ಲಿಯೂ ಇಂಥ ವಿಚಾರಗಳು ದೊರೆಯು ಲಾರವು. ವಚನಾರ್ಥಗಳನ್ನು ಬಹು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಿ ದ್ದೇವೆ. ಪ್ರಸಾದದ ಪರಿಣಾಮಗಳು ಮುಂದೆ ವಿವರಿಸಲ್ಪಟ್ಟಿವೆ.

(೧೬೩) ಪ್ರಸಾದದ ಪರಿಣಾಮಗಳು:– ಶುದ್ಧಪ್ರಸಾದವು ತನುವಿಗೆ ಸಂಬಂಧವು. ಆದ್ದರಿಂದ ಅದರಿಂದ ತನು ವಿಕಾರಗಳಳಿಯುವವು. ಸಿದ್ಧ ಪ್ರಸಾದವು ಮನಸ್ಸಿಗೆ ಸಂಬಂಧವು. ಆದ್ದರಿಂದ ಮನಸ್ಸಿನ ವಿಕಾರಗಳು ದೂರಾಗುವವು. ಪ್ರಸಿದ್ಧ ಪ್ರಸಾದವು ಕಾರಣ ದೇಹಕ್ಕೆ ಸಂಬಂಧವು. ಆದ್ದರಿಂದ ಭಾವದ ಭ್ರಮೆಯು ಕೆಡುವದು. ಮುಂದೆ ಆಪ್ಯಾಯನ ಪ್ರಸಾದದಿಂದ ದುರಾಶೆಗಳು ಅಡಗುವವು. ಸಮಯ ಪ್ರಸಾದ ದಿಂದ ವಿಷಯಗಳು ಲಿಂಗ ವಿಷಯಗಳಾಗುವವು. ಪಂಚೇಂದ್ರಿಯ ವಿರ ಹಿತ ಪ್ರಸಾದದಿಂದ ಮನುಷ್ಯನ ಇಂದ್ರಿಯಗಳು ಲಿಂಗೇಂದ್ರಿಯಗಳಾ ಗುವವು. ಮುಂದೆ ಅಂತಃಕರಣ ಚತುಷ್ಟಯ ವಿರಹಿತ ಪ್ರಸಾದ ದಿಂದ ಕರಣಗಳು, ಸಮತಾಪ್ರಸಾದದಿಂದ ಅಂತರಂಗದ ಒಲವುಗಳು, ಸದ್ಭಾವ ಪ್ರಸಾದದಿಂದ ಭಾವವು, ಜ್ಞಾನ ಪ್ರಸಾದದಿಂದ ಜ್ಞಾನವು, ಶುದ್ಧವಾಗುವವು. ಹೀಗೆ ಪ್ರಸಾದಿಗಳು ಸರ್ವಸಂಗ ಪರಿತ್ಯಾಗರಾಗಿ ಬಯಲಲ್ಲಿ ಬಯಲಾಗುವರು. ಇತರ ಮತಾನುಯಾಯಿಗಳು ಯಜ್ಞ ಯಾಗಾದಿ ಕರ್ಮಗಳು. ಯೋಗಾಭ್ಯಾಸ, ತಪಸ್ಸು ಮೊದಲಾದ ಕಷ್ಟ ವಾದ ಆಚರಣೆಗಳನ್ನು ಆಚರಿಸುವದುಂಟು. ಆದರೆ ವೀರಶೈವರು ಅಷ್ಟಾ ವರಣ ನಿರತರಾಗಿ ಮಂತ್ರಮೂಲಕ ಪಾದೋದಕ ಪ್ರಸಾದ ಗ್ರಾಹಕರಾಗಿ ನಿಜಸಮಾಧಿ ಅಥವಾ ಬಯಲನ್ನು ಅಥವಾ ನಿರಪಯಸ್ಥಿತಿಯನ್ನು ಪಡೆಯುವರು.

(೧೬೪) ಪಾದೋದಕ ಪ್ರಸಾದಗಳ ಪರಸ್ಪರ ಸಂಬಂಧ:- ಮೊದಲು ಪಾದೋದಕವು, ಆ ಮೇಲೆ ಪ್ರಸಾದ ಈ ಪ್ರಕಾರ ಅಷ್ಟಾವರಣಗಳಲ್ಲಿ ಕ್ರಮವಿರುತ್ತದೆ. ಮೊದಲು ಪ್ರಸಾದವು ಆ ಮೇಲೆ ಪಾದೋದಕವೆಂದು ಭಾವಿಸುವದು ತಪ್ಪು ಇರುತದೆ. ಪ್ರಸಾದವು ಪಾದೋದಕಕ್ಕಿಂತಲೂ

ಸೂಕ್ಷ್ಮವಾದುದು ಮತ್ತು ವ್ಯಾಪಕ ಭಾವವುಳ್ಳದ್ದು. ಪಾದೋದಕವು ಮನುಷ್ಯನ ಬಹಿರಂಗ ಮತ್ತು ಅಂತರಂಗಗಳನ್ನು ಶುದ್ಧಗೊಳಿಸುತ್ತದೆ. ಆದರೆ ಪ್ರಸಾದವು ಮನುಷ್ಯನ ಯಾವತ್ತು ಬಾಹ್ಯ ಮತ್ತು ಅಂತರಂಗ ಕ್ರಿಯೆಗಳ ಮೇಲೆ ಪರಿಣಾಮ ಮಾಡುತ್ತಿದೆ. ಅವನ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳು, ಅವನ ಇಂದ್ರಿಯಗಳು, ಕರಣಗಳು, ಭಾವ, ಜ್ಞಾನಗಳು ಇವುಗಳ ಮೇಲೆಲ್ಲ ಅದು ತನ್ನ ಪರಿಣಾಮವನ್ನು ಮಾಡುತ್ತಿದೆ.

(೧೬೫) ಷಡ್ವಿಧಲಿಂಗಗಳಿಗೆ ಪಾದೋದಕ ಪ್ರಸಾದಗಳ ಸಂಬಂಧ: ಈ ಸಂಬಂಧಗಳು ಹೇಗೆಂದರೆ— (ಅ) ಪಾದೋದಕ ಸಂಬಂಧ— (೧) ಸ್ಪರ್ಶನೋದಕ ಅವಧಾನೋದಕಗಳು ಅನುಕ್ರಮವಾಗಿ ಆಚಾರ ಲಿಂಗ ಗುರುಲಿಂಗಗಳಿಗೆ ಸಂಬಂಧವು. ಇವು ಗುರುಪಾದೋದಕವಾಗಿ ಇಷ್ಟ ಲಿಂಗಾರ್ಪಿತವಾಗುತ್ತವೆ. ಇದು ಅನಾದಿ ಗುರು ಸ್ವರೂಪವು. (೨) ಆಪ್ಯಾಯನೋದಕ, ಹಸ್ತೋದಕಗಳು ಅನುಕ್ರಮವಾಗಿ ಶಿವಲಿಂಗ ಜಂಗಮಲಿಂಗಗಳಿಗೆ ಸಂಬಂಧವು. ಇವು ಲಿಂಗ ಪಾದೋದಕವಾಗಿ ಪ್ರಾಣಲಿಂಗಾರ್ಪಿತವಾಗುತ್ತವೆ. ಇದು ಅನಾದಿ ಲಿಂಗ ಸ್ವರೂಪವು. (೩) ಪರಿಣಾಮೋದಕ ನಿರ್ನಾಮೋದಕಗಳು ಅನುಕ್ರಮವಾಗಿ ಪ್ರಸಾದ ಲಿಂಗ ಮಹಾಲಿಂಗಗಳಿಗೆ ಸಂಬಂಧವು. ಇವು ಜಂಗಮ ಪಾದೋದಕವಾಗಿ ಭಾವಲಿಂಗಾರ್ಪಿತವಾಗುತ್ತವೆ. ಇದು ಅನಾದಿ ಜಂಗಮ ಸ್ವರೂಪವು. ಕಡೆಗೆ ಉಳಿಯುವ ಸತ್ಯೋದಕವು ನಿಃಕಲ ಪರತತ್ವಕ್ಕೆ ಸಮರ್ಪಣೆಯಾಗುತ್ತದೆ. ಇದು ಅನಾದಿ ಶರಣ ಪ್ರಸನ್ನ ಮೂರ್ತಿಯು.

(ಬ) ಪ್ರಸಾದ ಸಂಬಂಧ:-- (೧) ಆಪ್ಯಾಯನ ಪ್ರಸಾದ ಮತ್ತು ಸಮಯ ಪ್ರಸಾದಗಳು ಗುರು ಪ್ರಸಾದವೆನಿಸಿಕೊಂಡು ಆಚಾರ ಲಿಂಗ ಗುರುಲಿಂಗಗಳಿಗೆ ಸಂಬಂಧವು. ಇವು ಸುಚಿತ್ತ ಹಸ್ತ, ಸುಬುದ್ಧಿ ಹಸ್ತ, ನಿರುಪಾಧಿ ಹಸ್ತ, ಇವುಗಳ ಮೂಲಕ ಇಷ್ಟ ಲಿಂಗದಲ್ಲಿ ಸಂಬಂಧಿಸುತ್ತವೆ. ಇದು ಅನಾದಿ ಭಕ್ತ ಸ್ವರೂಪವು. (೨) ಪಂಚೇಂದ್ರಿಯ ವಿರಹಿತ



ಪ್ರಸಾದ. ಕರಣಚತುಷ್ಟಯ ವಿರಹಿತ ಪ್ರಸಾದಗಳು ಲಿಂಗಪ್ರಸಾದವೆನಿಸಿಕೊಂಡು ಶಿವಲಿಂಗ, ಜಂಗಮಲಿಂಗಗಳಿಗೆ ಸಂಬಂಧವು. ಇವು ನಿರಹಂಕಾರ ಹಸ್ತ, ಸುಮನ ಹಸ್ತ, ನಿರಾಲಂಬ ಹಸ್ತಗಳ ಮೂಲಕ ಪ್ರಾಣಲಿಂಗದಲ್ಲಿ ಸಂಬಂಧಿಸುತ್ತವೆ. ಇದು ಅನಾದಿ ಶೂನ್ಯ ಲಿಂಗ ಸ್ವರೂಪವು. (೩) ಸಮತಾ ಪ್ರಸಾದ, ಪ್ರಸಾದಿಯ ಪ್ರಸಾದಗಳು ಜಂಗಮ ಪ್ರಸಾದವೆನಿಸಿಕೊಂಡು ಪ್ರಸಾದಲಿಂಗ ಮಹಾಲಿಂಗಗಳಿಗೆ ಸಂಬಂಧವು. ಇವು ಸುಜ್ಞಾನ ಹಸ್ತ, ಸದ್ಭಾವ ಹಸ್ತ, ನಿಃಪ್ರಪಂಚ ಹಸ್ತ, ಇವುಗಳ ಮೂಲಕ ಭಾವಲಿಂಗದಲ್ಲಿ ಸಂಬಂಧಿಸುತ್ತವೆ. ಇದು ಅನಾದಿ ನಿರಂಜನ ಜಂಗಮ ಸ್ವರೂಪವು (೪) ಆ ಮೇಲೆ ಸದ್ಭಾವಪ್ರಸಾದ ಮತ್ತು ಜ್ಞಾನ ಪ್ರಸಾದಗಳು ಪರತತ್ವ ಜ್ಯೋತಿರ್ಮಯ ಲಿಂಗದೇವನಿಗೆ ನಿಜಾನಂದ ಹಸ್ತದಿಂದ ಸಮರ್ಪಿತವಾಗಲು ಅದೇ ಅನಾದಿ ಪರಿಪೂರ್ಣ ನಿಜವಸ್ತುವೆಂದು ಹೇಳಲ್ಪಡುತ್ತಿದೆ. ಈ ವಿವರಣೆಯಲ್ಲಿ ಗುರು ಪ್ರಸಾದ, ಲಿಂಗ ಪ್ರಸಾದ, ಜಂಗಮ ಪ್ರಸಾದಗಳೂ, ಗುರು ಪಾದೋದಕ, ಲಿಂಗ ಪಾದೋದಕ, ಜಂಗಮ ಪಾದೋದಕಗಳೂ ಇವುಗಳನ್ನು ವಚನಕಾರರು ವಿವರಿಸಿಲ್ಲ. ಯಾಕೆಂದರೆ ಉಳಿದ ಪಾದೋದಕ ಪ್ರಸಾದಗಳ ಆಚರಣೆಯ ಮೂಲಕ ಈ ಎಂಟೂ ತ್ರಿವಿಧಗಳು ಆಚರಿಸುವವನಲ್ಲಿ ತಾನಾಗಿಯೂ ಒದಗಿ ಬರುತ್ತವೆಂದು ಭಾವಿಸಿರಬೇಕೆಂದು ತೋರುತ್ತದೆ.

(೧೬೬) ಇಷ್ಟಲಿಂಗಕ್ಕೆ ಪಾದೋದಕ ಪ್ರಸಾದಗಳ ಸಂಬಂಧ:— ಈ ಸಂಬಂಧವು ಏಕೋತ್ತರ ಶತಸ್ಥಲದ ಮೂಲಕ ಇರುತ್ತದೆ. ಈ ಸ್ಥಲಗಳಲ್ಲಿ ೫೬ ಲಿಂಗಸ್ಥಲಗಳಿವೆ. ಅವುಗಳಲ್ಲಿ ಮೊದಲಿನ ೫೪ ಸ್ಥಲಗಳು ಆಚಾರಾದಿ ಆರು ಲಿಂಗಗಳಿಗೆ ಸಂಬಂಧಿಸುತ್ತವೆ. ಆಮೇಲೆ ಕಡೆಗೆ ಭಾವಾಭಾವನಷ್ಟಸ್ಥಲ, ಸ್ವಯಚರಪರವಿರಿಯದಸ್ಥಲ ಮತ್ತು ಜ್ಞಾನಶೂನ್ಯಸ್ಥಲ ಇವು ಉಳಿಯುತ್ತವೆ. ಇವು ಅನುಕ್ರಮವಾಗಿ ಜ್ಞಾನಗುರು, ಜ್ಞಾನಲಿಂಗ, ಜ್ಞಾನಜಂಗಮಗಳೆಂದು ಕರೆಯಲ್ಪಡುತ್ತವೆ. ಇವುಗಳ ಮೂಲಕ ಇಷ್ಟಲಿಂಗದ ಮೂರು ಭಾಗಗಳಲ್ಲಿ ಪಾದೋದಕ ಪ್ರಸಾದ

ಗಳ ಸಂಬಂಧವು ಉಂಟಾಗುತ್ತದೆ. ಆದ್ದರಿಂದ ಈ ಪಾದೋದಕ ಪ್ರಸಾದಗಳಲ್ಲಿ ೩ ವಿಧಗಳು ಕಲ್ಪಿಸಲ್ಪಟ್ಟಿವೆ.

(ಅ) ಭಾವಾಭಾವನಷ್ಟಸ್ಥಲವು. ಇದು ಗುರುಸ್ವರೂಪವು. ಅದು ಕ್ರಿಯಾಗುರು ಲಿಂಗಜಂಗಮ ಸ್ವರೂಪದ ಇಷ್ಟಮಹಾಲಿಂಗದ ಅಧೋಪೀಠಿಕೆಗೆ ಸಂಬಂಧಪಡುತ್ತಿದೆ. ಅಲ್ಲಿ ಸ್ಪರ್ಶನೋದಕ ಮತ್ತು ಅವಧಾನೋದಕಗಳಿವೆ. ಅವು ಗುರುಪಾದೋದಕವೆನಿಸಿಕೊಳ್ಳುತ್ತವೆ. ಹಾಗೆಯೇ ಅಲ್ಲಿ ಆಪ್ಯಾಯನ ಪ್ರಸಾದ ಮತ್ತು ಸಮಯ ಪ್ರಸಾದಗಳಿರುತ್ತವೆ. ಅವು ಗುರುಪ್ರಸಾದವೆನಿಸಿಕೊಳ್ಳುತ್ತವೆ. ಹೀಗೆ ಪಾದೋದಕಪ್ರಸಾದಗಳು ಅಳವಡಲು ಈ ರೀತಿ ಆಚರಿಸುವವರು ಆದಿಪ್ರಸಾದಿ ಮತ್ತು ಸಿಚ್ಛಪ್ರಸಾದಿಗಳೆಂದು ಹೇಳಲ್ಪಡುತ್ತಾರೆ.

(ಬ) ಸ್ವಯಚರಪರವರಿಯದ ಸ್ಥಲವು. ಇದು ಲಿಂಗಸ್ವರೂಪವು. ಜ್ಞಾನ ಗುರುಲಿಂಗಜಂಗಮ ಸ್ವರೂಪದ ಇಷ್ಟಮಹಾಲಿಂಗದ ಗೋಳಕದಲ್ಲಿ ಅದು ಸಂಬಂಧಪಡುತ್ತಿದೆ. ಅಲ್ಲಿ ಅಪ್ಯಾಯನೋದಕ ಮತ್ತು ಹಸ್ತೋದಕಗಳು ಇರುತ್ತವೆ. ಅವುಗಳೇ ಲಿಂಗಪಾದೋದಕಗಳು. ಹಾಗೆಯೇ ಅಲ್ಲಿ ಪಂಚೇಂದ್ರಿಯ ವಿರಹಿತ ಪ್ರಸಾದ ಮತ್ತು ಕರಣಚತುಷ್ಟಯವಿರಹಿತ ಪ್ರಸಾದಗಳು ನೆಲಸಿರುತ್ತವೆ. ಅವು ಲಿಂಗಪ್ರಸಾದಗಳು. ಅವು ಇಷ್ಟಲಿಂಗದ ಗೋಳಕದಲ್ಲಿ ಅಳವಡಲು, ಅಂತ್ಯಪ್ರಸಾದಿ ಮತ್ತು ಸಮಯಪ್ರಸಾದಿಗಳೆಂದು ಹೀಗೆ ಆಚರಿಸುವವರು ಹೇಳಲ್ಪಡುತ್ತಾರೆ.

(ಕ) ಜ್ಞಾನಶೂನ್ಯಸ್ಥಲ. ಇದು ಮೂಲ ಜಂಗಮಸ್ವರೂಪವಾಗಿದೆ. ಅದು ಮಹಾಜ್ಞಾನ ಗುರುಲಿಂಗಜಂಗಮ ಸ್ವರೂಪವಾದ ಇಷ್ಟ ಮಹಾಲಿಂಗದ ಜಲರೇಖೆಯನುಳ್ಳ ಪಾನಿಬಟ್ಟಲಕ್ಕೆ ಸಂಬಂಧಪಡುತ್ತಿದೆ. ಅಲ್ಲಿ ಪರಿಣಾಮೋದಕ ನಿರ್ನಾಮೋದಕ ಮತ್ತು ಸತ್ಯೋದಕಗಳು ನೆಲಸಿರುತ್ತಿವೆ. ಅವುಗಳೇ ಜಂಗಮಪಾದೋದಕಗಳು. ಹಾಗೆಯೇ ಅಲ್ಲಿ ಸಮತಾ ಪ್ರಸಾದ, ಪ್ರಸಾದಿಯ ಪ್ರಸಾದ, ಸದ್ಭಾವ ಪ್ರಸಾದ, ಮತ್ತು ಜ್ಞಾನ ಪ್ರಸಾದಗಳು ಸಂಬಂಧಪಡುತ್ತವೆ. ಅವೇ ಜಂಗಮಪ್ರಸಾದಗಳು. ಹೀಗೆ



ಆಚರಿಸುವವರು ಸೇವ್ಯಪ್ರಸಾದಿ ಮತ್ತು ಅಚ್ಚಪ್ರಸಾದಿಗಳೆಂದು ಹೇಳಲ್ಪಡುತ್ತಾರೆ.

ಹೀಗೆ ಸ್ವೀಕರಿಸಿದ ಪಾದೋದಕವೇ ನೇತ್ರದಲ್ಲಿ ಕರುಣಜಲ, ವಾಕ್ಕಿನಲ್ಲಿ ವಿನಯಜಲ, ಅಂತರಂಗದಲ್ಲಿ ಸಮತಾಜಲವಾಗಿರುತ್ತದೆ. ಈ ತ್ರಿವಿಧೋದಕವು ಕಾದುಪ್ಪವು ಹೆರೆದುಪ್ಪವಾದಂತೆ ಇಷ್ಟ ಮಹಾಲಿಂಗಕ್ಕೆ ತ್ಯಾಗಾಂಗವಾದ ಶುದ್ಧಪ್ರಸಾದವಾಗುವದು. ಪ್ರಾಣಲಿಂಗಕ್ಕೆ ಭೋಗಾಂಗವಾದ ಸಿದ್ಧಪ್ರಸಾದವಾಗುವದು. ಮತ್ತು ಭಾವಲಿಂಗಕ್ಕೆ ಯೋಗಾಂಗವಾದ ಪ್ರಸಿದ್ಧಪ್ರಸಾದವಾಗುವದು.

ಈ ತ್ರಿವಿಧಪ್ರಸಾದ ಪಾದೋದಕಗಳು ಶರಣನಿಗೆ ಶುದ್ಧಪ್ರಸಾದವಾಗಿ ಅವನ ಜಿಹ್ವೆಯಲ್ಲಿ ಅಚ್ಚಪ್ರಸಾದವಾಗುತ್ತವೆ. ಸಿದ್ಧಪ್ರಸಾದವಾಗಿ ಅವನ ಹಸ್ತದಲ್ಲಿ ಸಿಚ್ಛಪ್ರಸಾದವಾಗುತ್ತವೆ. ಪ್ರಸಿದ್ಧಪ್ರಸಾದವಾಗಿ ಅವನ ಪಾದದಲ್ಲಿ ಸಮಯಪ್ರಸಾದವಾಗುತ್ತವೆ. ಇವೆಲ್ಲವು ಶ್ರೀಪ್ರಭುದೇವರ ವಿಚಾರಗಳು.

(೧೬) ಚಕ್ರಗಳಿಗೆ ಪಾದೋದಕ ಪ್ರಸಾದಗಳ ಸಂಬಂಧಃ — ಪಾದೋದಕ ಪ್ರಸಾದಗಳು ಭಕ್ತನ ಚಕ್ರಗಳ ಮೇಲೆಯೂ ಪರಿಣಾಮ ಮಾಡುತ್ತವೆ. ಅವುಗಳಲ್ಲಿ ಬೇರೆ ಬೇರೆ ಮಂತ್ರಸ್ವರೂಪವುಳ್ಳ ಲಿಂಗಗಳು ನೆಲಸಿವೆ. ಆಯಾ ಪಾದೋದಕ ಪ್ರಸಾದ ಸೇವನೆಯ ಮೂಲಕ ಆ ಲಿಂಗಗಳಲ್ಲಿ ಮತ್ತು ಆ ಲಿಂಗಗಳಿದ್ದ ಚಕ್ರಗಳಲ್ಲಿ ಚೈತನ್ಯವು ಉಂಟಾಗುತ್ತದೆ. ಇದು ಭಕ್ತನ ಪ್ರಗತಿಗೆ ಕಾರಣವಾಗುತ್ತದೆ. ಈ ಪ್ರಗತಿಯು ಭಕ್ತನ ಕಾಯ, ಮನ, ಭಾವಗಳಲ್ಲಿ ಹಾಗೆಯೇ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಈ ಚಕ್ರಗಳು, ಮುಂದೆ ಈ ಚಕ್ರಗಳ ತರುವಾಯ ಇರುವ ಬ್ರಹ್ಮಚಕ್ರ ಮತ್ತು ಶಿಖಾಚಕ್ರ, ಇವುಗಳಲ್ಲೆಲ್ಲ ಜಾಗ್ರತೆಯು ಉತ್ಪನ್ನವಾಗಲು ಎಲ್ಲಕ್ಕೂ ಕಡೆಯದಾದ ಪಶ್ಚಿಮ ಚಕ್ರದಲ್ಲಿಯೂ ಲಿಂಗದ ಕಳೆಯು ಪೂರ್ಣತೆಯನ್ನು ಹೊಂದಲು ಅದೇ ಲಿಂಗಾಂಗ ಸಾಮರಸ್ಯವು. ಈ ಪೂರ್ಣತೆಯು ಗುರುಲಿಂಗಜಂಗಮದ

ತ್ರಿಳುವಳಿಕೆಯನ್ನುಂಟುಮಾಡಿಕೊಂಡು ಆಚರಿಸಿದ ಪಾದೋದಕ ಪ್ರಸಾ
ಗಳ ಮೂಲಕವೇ ಉಂಟಾಗುತ್ತದೆ. ಈ ವಿವರವು ಹೇಗೆಂದರೆ:—

(೧) ಕಾಯದ ಮಧ್ಯದಲ್ಲಿ ಇಷ್ಟಲಿಂಗ ಮಹಾಮಂತ್ರ. ವಿ
ಭೂತಿ, ರುದ್ರಾಕ್ಷಿಗಳು ನೆಲಸಿದ್ದು, ಇಲ್ಲಿ ದೀಕ್ಷಾಪಾದೋದಕ ಮತ್ತು
ಶುದ್ಧಪ್ರಸಾದಗಳಿರುತ್ತವೆ. (೨) ಮನದ ಮಧ್ಯದಲ್ಲಿ ಪ್ರಾಣಲಿಂಗ ಪ
ಕೋಟಿ ಮಹಾಮಂತ್ರವಿದ್ದು, ಇಲ್ಲಿ ಶಿಕ್ಷಾಪಾದೋದಕ ಮತ್ತು ಸಿ
ಪ್ರಸಾದಗಳು ಸಂಬಂಧಪಡುತ್ತವೆ. ಇವುಗಳ ಮೂಲಕವೇ ಮನಸ್ಸು
ಪೂರ್ಣತೆಯನ್ನು ಹೊಂದುತ್ತದೆ. (೩) ಭಾವದ ಮಧ್ಯದಲ್ಲಿ ಭಾವ
ಲಿಂಗ ಅಗಣಿತ ಮಂತ್ರವಿದ್ದು ಇಲ್ಲಿ ಜ್ಞಾನಪಾದೋದಕ ಮತ್ತು ಪ್ರ
ಪ್ರಸಾದಗಳು ಸಂಬಂಧಪಡುತ್ತವೆ. ಇವುಗಳ ಮೂಲಕವೇ ಭಾವವು
ಪೂರ್ಣತೆಯನ್ನು ಹೊಂದುತ್ತದೆ.

ಆದರೆ ಈ ಪ್ರಗತಿಯೊಡನೆ ಎಲ್ಲ ಚಕ್ರಗಳಲ್ಲಿ ಜಾಗ್ರತಿಯು
ಉಂಟಾದಲ್ಲಿ ಅವೆಲ್ಲವುಗಳಲ್ಲಿ ಪರಸ್ಪರತೆಯುಂಟಾಗಿ ಎಲ್ಲವೂ ಸ್ಥಿರಪಡುತ್ತ
ಹೋಗುತ್ತವೆ ಈ ಜಾಗ್ರತಿಯು ಆಯಾ ಮಂತ್ರಧ್ಯಾನಪೂರ್ವಕವಾ
ಆಯಾ ಲಿಂಗಗಳಲ್ಲಿ ಮತ್ತು ಚಕ್ರಗಳಲ್ಲಿ ಉಂಟಾಗತಕ್ಕದ್ದು. ಈ
ಕಾರ್ಯವು ಆಯಾ ಪಾದೋದಕ ಪ್ರಸಾದಗಳ ಮೂಲಕ ಜರಗುವದು.
ಅದು ಹೇಗೆಂದರೆ—

(೪) ಪಂಚಾಚಾರ ಮೂರ್ತಿಯಾದ ಆಚಾರಲಿಂಗ ಮಂತ್ರವು
ಆಧಾರ ಚಕ್ರಕ್ಕೆ ಸಂಬಂಧಿಸಿದ್ದು ಅಲ್ಲಿ ಸ್ಪರ್ಶನೋದಕ ಮತ್ತು ಆಪ್ಯಾ
ಯನ ಪ್ರಸಾದಗಳು ಪರಿಣಾಮ ಮಾಡುತ್ತವೆ. (೫) ಮಂತ್ರಮೂರ್ತಿ
ಯಾದ ಗುರುಲಿಂಗ ಮಂತ್ರವು ಸ್ವಾಧಿಷ್ಠಾನ ಚಕ್ರಕ್ಕೆ ಸಂಬಂಧವಾ
ಗಿದ್ದು ಅಲ್ಲಿ ಅವಧಾನೋದಕ ಮತ್ತು ಸಮಯಪ್ರಸಾದಗಳು ಪರಿಣಾಮ
ಮಾಡುತ್ತವೆ. (೬) ನಿರೀಕ್ಷಣ ಮೂರ್ತಿಯಾದ ಶಿವಲಿಂಗಮಂತ್ರವು
ಮಣಿಪೂರಕ ಚಕ್ರಕ್ಕೆ ಸಂಬಂಧವಾಗಿದ್ದು ಅಲ್ಲಿ ಆಪ್ಯಾಯನೋದಕ
ಮತ್ತು ಪ್ರಸಾದಿಯ ಪ್ರಸಾದಗಳು ಪರಿಣಾಮಮಾಡುತ್ತವೆ. (೭) ಯಜನ



ಸ್ವರೂಪವಾದ ಜಂಗಮಲಿಂಗಮಂತ್ರವು ಅನಾಹತ ಚಕ್ರಕ್ಕೆ ಸಂಬಂಧ
ವಾಗಿದ್ದು ಅಲ್ಲಿ ಹಸ್ತೋದಕ ಮತ್ತು ಪಂಚೇಂದ್ರಿಯವಿರಹಿತ ಪ್ರಸಾದ
ಗಳು ಪರಿಣಾಮಮಾಡುತ್ತವೆ. (೮) ಜ್ಞಾನ ಸ್ವರೂಪವಾದ ಪ್ರಸಾದ
ಲಿಂಗಮಂತ್ರವು ವಿಶುದ್ಧಿಚಕ್ರಕ್ಕೆ ಸಂಬಂಧವಾಗಿದ್ದು ಅಲ್ಲಿ ಪರಿಣಾಮೋ
ದಕ ಮತ್ತು ಕರಣ ಚತುಷ್ಟಯವಿರಹಿತ ಪ್ರಸಾದಗಳು ಪರಿಣಾಮ
ಮಾಡುತ್ತವೆ. (೯) ವೇಧಾಸ್ವರೂಪವಾದ ಮಹಾಲಿಂಗಮಂತ್ರವು ಆಜ್ಞಾ
ಚಕ್ರಕ್ಕೆ ಸಂಬಂಧವಾಗಿದ್ದು ಅಲ್ಲಿ ನಿರ್ನಾಮೋದಕ ಮತ್ತು ಸಮತಾ
ಪ್ರಸಾದಗಳು ಪರಿಣಾಮ ಮಾಡುತ್ತವೆ.

ಮೇಲೆ ಹೇಳಿದವುಗಳು ಕೆಳಗಿನ ಆರು ಚಕ್ರಗಳು. ಇವುಗಳ ಮುಂದೆ
ಬ್ರಹ್ಮಚಕ್ರ, ಶಿಖಾಚಕ್ರ ಮತ್ತು ಕಡೆಗೆ ಪಶ್ಚಿಮ ಚಕ್ರಗಳು ಇವೆ. ಅಲ್ಲಿಯೂ
ಕೂಡ ಮಂತ್ರಗಳೂ ಪಾದೋದಕ ಪ್ರಸಾದಗಳೂ ಸಂಬಂಧಪಡುತ್ತವೆ.
ಅದು ಹೇಗೆಂದರೆ—

(೧೦) ಬ್ರಹ್ಮಚಕ್ರಕ್ಕೆ ನಿರಾಲಂಬಮೂರ್ತಿ ನಿಷ್ಕಲಲಿಂಗ ಮಂತ್ರವು
ಸಂಬಂಧಪಡುತ್ತಿದ್ದು ಅಲ್ಲಿ ಸತ್ಯೋದಕ ಮತ್ತು ಸದ್ಭಾವಪ್ರಸಾದಗಳು
ಪರಿಣಾಮಮಾಡುತ್ತವೆ. (೧೧) ಶಿಖಾಚಕ್ರಕ್ಕೆ ಪರಿಪೂರ್ಣಾನಂದ ನಿಷ್ಪ್ರ
ಪಂಚ ಮೂರ್ತಿಶೂನ್ಯ ನಿರಂಜನ ಲಿಂಗಮಂತ್ರವಿದ್ದು ಅಲ್ಲಿ ಕರುಣ
ಜಲ, ವಿನಯಜಲ, ಸಮತಾಜಲಗಳು ಹಾಗೂ ಚಿತ್ಕಲಾಪ್ರಸಾದ, ನಿಜ
ಪ್ರಸಾದ, ಚಿದ್ರೂಪಪ್ರಸಾದಗಳು ಸಂಬಂಧಪಡುತ್ತವೆ (೧೨) ಇವುಗಳೇ
ಪಶ್ಚಿಮಚಕ್ರದಲ್ಲಿಯೂ ಸಂಬಂಧಪಡುತ್ತವೆ.

ಈ ವಿಧದ ಆಚರಣೆಯಿಂದ ಭಕ್ತನ ಸರ್ವಾಂಗವೆಲ್ಲ ಪಾದೋ
ದಕ ಪ್ರಸಾದಮಯ, ಲಿಂಗಮಯ, ಮಂತ್ರಮಯವಾಗುತ್ತದೆಂದು ತಿಳಿ
ಯುವದು.

(೧೬೮) ಪ್ರಸಾದಿಕರು:— ಅವುದೋ ಒಂದು ಕಾರಣದಿಂದ
ಸಂಸಾರದಲ್ಲಿ ಹೇಯಬುದ್ಧಿಯು ಉತ್ಪನ್ನವಾಗಲು ಪುನರ್ದೀಕ್ಷೆಯನ್ನು
ಹೊಂದಿ ಆಹಾರ ಗ್ರಹಣದ ವಿಷಯವಾಗಿ ವಿಶೇಷನಿರ್ಬಂಧಗಳನ್ನಿಟ್ಟು

ಕೊಂಡು ಆಚರಿಸುವವರು ಪ್ರಸಾದಿಕರೆಂದು ರೂಢಿಯಲ್ಲಿ ಹೇಳುವದುಂಟು. ಇವರು ಪಾಲ್ಕುರಿಕೆ ಸೋಮಾರಾಧ್ಯರು ವಿವರಿಸಿದ ೬೪ ಶೀಲಗಳಲ್ಲಿ ಕೆಲವುಗಳನ್ನು ಸಹ ಆಚರಿಸುತ್ತಿರಬಹುದು. ಆದರೆ ಶಿವಶರಣರ ನಡೆಯ ಮೇರೆಗೆ ಇವರು ಪ್ರಸಾದಿಕರೆಂದು ಹೇಳಲು ಬರಲಾರದು. ಪ್ರಸಾದಿಕರು ಷಟ್‌ಸ್ಥಲ, ಏಕೋತ್ತರಶತಸ್ಥಲಗಳ ಮರ್ಮವನ್ನು ಅರಿತವರಾಗಿರಬೇಕು. ಇದನ್ನರಿತುಕೊಂಡು ದಶವಿಧಪಾದೋದಕ, ಏಕಾದಶ ಪ್ರಸಾದಗಳನ್ನು ಆಚರಿಸಬೇಕು. ಇಂಥ ಆಚರಣೆಯಿಂದ ಅವರ ತನು, ಮನ, ಭಾವಗಳು, ಚಕ್ರಗಳು, ಶಕ್ತಿಗಳು, ಇಂದ್ರಿಯಗಳು, ಕರಣಗಳು ಇವುಗಳಲ್ಲೆಲ್ಲ ಲಿಂಗದ ಕಳೆಯು ಬೆಳಗಹತ್ತುವದು. ಹೀಗೆ ಆಚರಿಸುವವರೇ ಪ್ರಸಾದಿಕರು.

(೧೬೯) ವಿಭೂತಿ:— ಅದು ಮಹಾವಸ್ತುವಿನ ದಿವ್ಯ ತೇಜವು. ಅದು ಕಾಲ, ಕಾಮ, ಕರ್ಮತ್ರಯ, ತನುತ್ರಯ ಇವುಗಳನ್ನು ಚಿತ್‌ಶಿಖಿ ಎಂಬ ಜ್ಞಾನಾಗ್ನಿಯಿಂದ ದಹಿಸಿದ ಚಿಹ್ನವು. ಶಿವಶರಣರು ಅದು ಪರಶಿವನ ಪರಮ ಚೈತನ್ಯವು, ಚಿತ್‌ಸ್ವರೂಪ ಎಂದು ಭಾವಿಸಿ ಅದನ್ನು ಲೇಪಿಸಿಕೊಳ್ಳುತ್ತಾರೆ.

(೧೭೦) ದೀಕ್ಷಾಭಸಿತ, ಶಿಕ್ಷಾಭಸಿತ, ಕ್ರಿಯಾಭಸಿತ:— ವಿಭೂತಿಗಳು ಮೂರು ವಿಧವಾಗಿವೆ. (೧) ಕ್ರಿಯಾಗ್ನಿಯಿಂದ ದಹಿಸಿದ ಬೂದಿಯನ್ನು ಧೂಳಪಾದೋದಕದಲ್ಲಿ ಅಥವಾ ಗುರುಪಾದೋದಕದಲ್ಲಿ ಶೋಧಿಸಿ ಘಟ್ಟಿಯ ಮಾಡಿದ್ದು ದೀಕ್ಷಾಭಸಿತವು. (೨) ಗುರುಪಾದೋದಕ ಮತ್ತು ಲಿಂಗಪಾದೋದಕ ಇವುಗಳನ್ನು ಸಮ್ಮಿಶ್ರ ಮಾಡಿ ಷಡಕ್ಷರ ಮಂತ್ರವನ್ನು ಸ್ಥಾಪಿಸಿದ್ದು ಶಿಕ್ಷಾಭಸಿತವು. (೩) ಗುರುಪಾದೋದಕದಲ್ಲಿ ಘಟ್ಟಿಯ ಕಟ್ಟಿ, ಲಿಂಗಪಾದೋದಕವನ್ನು ಆ ಘಟ್ಟಿಗೆ ಸಮ್ಮಿಶ್ರಮಾಡಿ ಆದಿ ಪ್ರಣವಗಳಾರು, ಅನಾದಿಪ್ರಣವಗಳಾರು, ಚಿತ್ಕಲಾಪ್ರಸಾದ ಪ್ರಣವಗಳಾರು, ನಿಃಕಳಂಕ ಚಿತ್ಕಲಾ ಮೂಲ ಪ್ರಣವ ಮೂರು ಹೀಗೆ ೨೧ ಪ್ರಣವಗಳನ್ನು ಸ್ಥಾಪಿಸಿ ತಯಾರಿಸಿದ್ದು ಕ್ರಿಯಾಭಸಿತವು. ಜ್ಞಾನಭಸಿತವೆಂತಲೂ



ಇದಕ್ಕೆ ಹೆಸರಿದೆ. ಅಷ್ಟಾವರಣದ ಆಚರಣೆಯಲ್ಲಿ ಆಚರಿಸುವವರ ಅನುಕೂಲತೆಗೋಸ್ಕರ ಶಿವಶರಣರು ಈ ವಿಧಗಳನ್ನು ಕಲ್ಪಿಸಿದ್ದಾರೆ. ಈ ದೃಷ್ಟಿಯಿಂದ ಲಿಂಗಧಾರಕ ಭಕ್ತರು, ಉಪಾಧಿಭಕ್ತರು, ನಿರುಪಾಧಿ ಭಕ್ತರು ಎಂಬ ಮೂರು ವರ್ಗಗಳು ಅನುಕ್ರಮವಾಗಿ ಮಾಡಲ್ಪಟ್ಟಿರುತ್ತವೆ. ಅವರು ಆಯಾ ರೀತಿಯಿಂದ ಭಸಿತವನ್ನು ಉಪಯೋಗಿಸುವುದು. ಈ ವಿಧಗಳು ಅವರವರ ಅನುಕೂಲ್ಯತೆಗೋಸ್ಕರ ಮಾಡಲ್ಪಟ್ಟಿರುತ್ತವೆ. ಸಹಜಭಕ್ತ ಮತ್ತು ನಿರ್ವಾಣಭಕ್ತ ಎಂತಲೂ ಇನ್ನು ಎರಡು ವಿಧಗಳನ್ನು ಕಲ್ಪಿಸುವದುಂಟು. ಇವರು ಎಲ್ಲರಿಗೂ ಮೇಲ್ತರಗತಿಯವರು.

(೧೭೧) ವಿಭೂತಿ ಧಾರಣದ ಸ್ಥಳಗಳು:— (೧) ಲಿಂಗಧಾರಕ ಭಕ್ತರು ೮ ಸ್ಥಾನಗಳಲ್ಲಿ ಧರಿಸುವುದು. ಅವು ಮಸ್ತಕ, ಲಲಾಟ, ಗ್ರೀವ, ಎರಡು ಬಾಹುಗಳು, ಹೃದಯ, ನಾಭಿ, ಪೃಷ್ಠ ಹೀಗೆ ಇರುತ್ತವೆ. (೨) ಉಪಾಧಿಭಕ್ತರು ಧರಿಸುವ ಸ್ಥಳಗಳು ೧೬ ಇವೆ. ಅವು— ಶಿರಸ್ಸು, ಭಾಳ, ಎರಡು ಕರ್ಣಗಳು, ಎರಡು ಓಷ್ಠ, ಕಂಠ, ಎರಡು ಬಾಹುಗಳು, ಎರಡು ಭುಜಗಳು, ಎರಡು ಮಣಿಬಂಧಗಳು, ಹೃದಯ ಉದರ, ನಾಭಿ ಹೀಗೆ ಇರುತ್ತವೆ. (೩) ನಿರುಪಾಧಿ ಭಕ್ತರು ಧರಿಸುವ ಸ್ಥಾನಗಳು ೩೨ ಇವೆ. ಅವು ಮೂರ್ಧ್ನ, ಲಲಾಟ, ಎರಡು ಕರ್ಣಗಳು, ಎರಡು ನೇತ್ರಗಳು, ಘ್ರಾಣ, ಮುಖ ಎರಡು ಬಾಹುಗಳು, ಎರಡು ಭುಜಗಳು, ಎರಡು ಮಣಿಬಂಧಗಳು, ಎರಡು ಸ್ತನಗಳು, ವಕ್ಷ, ಉದರ, ಎರಡು ಪಾರ್ಶ್ವಗಳು, ನಾಭಿ, ಮೇಢ್ರ, ಪಾಯು, ಪೃಷ್ಠ, ಊರುದ್ವಯ, ಎರಡು ಜಾನುಗಳು, ಎರಡು ಜಂಘೆಗಳು, ಎರಡು ಪಾದಗಳು ಹೀಗೆ ಇರುತ್ತವೆ.

(೧೭೨) ವಿಭೂತಿ ಧಾರಣದ ಪರಿಣಾಮಗಳು:— ದೀಕ್ಷಾಭಸಿತದಿಂದ ವಿಧಿಲಿಖಿತವು ತೊಡೆದು ಶಿವಲಿಖಿತವು ಲಿಖಿಸಲ್ಪಡುವದು. ಶಿಕ್ಷಾಭಸಿತದಿಂದ ಲಿಂಗನಿಷ್ಠಾಪರ ಭಕ್ತಿಯು ತೋರುವದು. ಜ್ಞಾನ ಅಥವಾ ಕ್ರಿಯಾಭಸಿತದಿಂದ ಸರ್ವಾಚಾರ ಸಂಪತ್ತು, ಜಂಗಮಾನುಭವವು ದೊರೆಯುವವು.

(೧೭೩) ಪಂಚಭಸ್ಮಗಳು:— (೧) ಭೂತಿ- ಇದು ಶಿವಜ್ಞಾನವನ್ನು ಮಹದೈಶ್ವರ್ಯವನ್ನುಂಟು ಮಾಡುತ್ತದೆ. (೨) ಭಸಿತವು- ಮನುಷ್ಯನ ಸಕಲ ಕಾಂಕ್ಷೆಗಳನ್ನು ಸುಟ್ಟು ನಿಃಕಾಮನನ್ನಾಗಿ ಮಾಡುತ್ತದೆ. (೩) ಭಸ್ಮ-- ಇದು ಪೂರ್ವಕರ್ಮವನ್ನು ದೂರಮಾಡುತ್ತದೆ. (೪) ಕ್ಷಾರ- ಇದು ಮಾಯೆಯನ್ನು ಕೆಡಿಸುತ್ತದೆ. (೫) ರಕ್ಷೆ-- ಇದು ಭೂತ, ಪ್ರೇತ, ಪಿಶಾಚ, ರಾಕ್ಷಸ ಬಾಧೆಗಳನ್ನು ತಪ್ಪಿಸುತ್ತದೆ. ಇವೆಲ್ಲವು ನಂದೆ, ಭದ್ರೆ, ಸುರಭಿ, ಸುಶೀಲ, ಸುಮನ ಎಂಬ ಗೋವುಗಳ ಮೂಲಕ ಆಯಾ ಮಂತ್ರಗಳಿಂದ ಉತ್ಪನ್ನವಾಗುತ್ತವೆ.

(೧೭೪) ರುದ್ರಾಕ್ಷಿಗಳು:— ರುದ್ರಾಕ್ಷಿಗಳು ಪರಶಿವನ ಜ್ಞಾನಚಕ್ಷುವಿನಿಂದ ಉದಯವಾದುವೆಂದು ತಿಳಿಯಲ್ಪಡುತ್ತವೆ. ಅವು ಶಿವಾನುಭವದ ಅರಿಕೆಯನ್ನು ಮಾಡಿಕೊಡುವ ತತ್ವಚಿಂತಾಮಣಿಗಳು ಮತ್ತು ರುದ್ರನ ಮುದ್ರೆಗಳು ಎಂದು ಭಾವಿಸಬೇಕು. ಭಕ್ತನು ಜಪದ ರೀತಿಗಳನ್ನು ಮೊದಲು ತಿಳಿಯಬೇಕು. ಇವುಗಳನ್ನು ತಿಳಿದು ಮಂತ್ರಸ್ಮರಣೆಯಿಂದ ರುದ್ರಾಕ್ಷಿಗಳನ್ನು ಆಯಾ ಸ್ಥಾನಗಳಲ್ಲಿ ಧರಿಸಿಕೊಂಡು ತಾನೇ ರುದ್ರನಾಗಿ ಲಿಂಗವನ್ನು ಪೂಜಿಸಬೇಕು. ವಿಭೂತಿ ರುದ್ರಾಕ್ಷಿಗಳನ್ನು ಧರಿಸಿಕೊಂಡು ಶಿವಲಿಂಗಾರ್ಚನೆಯನ್ನು ಮಾಡಿ, ಪಂಚಾಕ್ಷರಿಯನ್ನು ವಿಧಾನಪೂರ್ವಕ ಜಪಿಸುವದೇ ವೀರಶೈವನ ಮುಖ್ಯ ಆಚರಣೆಯಾಗಿದೆ.

(೧೭೫) ರುದ್ರಾಕ್ಷಿ ಧಾರಣ ಸ್ಥಾನಗಳು:— ಪಶ್ಚಿಮ ಚಕ್ರದಲ್ಲಿ ೧, ಶಿಖಿಯಲ್ಲಿ ಅಥವಾ ಮೂರ್ಧ್ನಿಯಲ್ಲಿ ೩, ಶಿರವನ್ನು ಬಳಸಿ ೩೬, ಪ್ರತಿಯೊಂದು ಕರ್ಣದಲ್ಲಿ ಒಂದೊಂದು, ಕಂಠದಲ್ಲಿ ೩೨, ಉರ ಅಥವಾ ಎದೆಯಲ್ಲಿ ೫೬, ಎರಡು ತೋಳುಗಳಲ್ಲಿ ೧೬, ೧೬. ಎರಡು ಮುಂಗೈಗಳಲ್ಲಿ ೧೨, ೧೨, ವಕ್ಷಸ್ಥಳದಲ್ಲಿ ಹಾರ ಅಥವಾ ಯಜ್ಞೋಪವೀತವಾಗಿ ೧೦೮. ಈ ಪ್ರಕಾರ ರುದ್ರಾಕ್ಷಿಗಳನ್ನು ಭಕ್ತನು ಧರಿಸಬೇಕು. ಈ ರುದ್ರಾಕ್ಷಿಗಳು ಬೇರೆ ಬೇರೆ ಮುಖದವುಗಳಿದ್ದು ಅವುಗಳನ್ನು ಬೇರೆ ಬೇರೆ ವಿಶಿಷ್ಟಸ್ಥಾನಗಳಲ್ಲಿ ಧರಿಸಬೇಕೆಂಬ ನಿಯಮಗಳಿವೆ. ಹಸ್ತದಲ್ಲಿ ಧರಿಸಿದಲ್ಲಿ



ದಾನಕೊಡಬಹುದು. ಆದರೆ ದಾನ ತೆಗೆದುಕೊಳ್ಳಬಾರದು. ಬಾಹುವಿನಲ್ಲಿದ್ದರೆ ಪರವಧೂ ಸಂಗವನ್ನು ಮಾಡಕೂಡದು. ಉರದಲ್ಲಿದ್ದರೆ ಅನ್ಯದೈವಕ್ಕೆರಗಬಾರದು. ಹೀಗೆ ರುದ್ರಾಕ್ಷಿಧಾರಣವಾದ ಬಳಿಕ ಉಚ್ಚನೈತಿಕಾಚರಣೆಯುಳ್ಳವನಾಗಿರಬೇಕು. ಜಪಕಾಲದಲ್ಲಿ, ತಪಸ್ಸಿನ ಕಾಲದಲ್ಲಿ ಮತ್ತು ದೇವಪೂಜೆಯಲ್ಲಿ ರುದ್ರಾಕ್ಷಿಗಳನ್ನು ಧರಿಸಬೇಕು. ಹೀಗೆ ಭಕ್ತನು ರುದ್ರಾಕ್ಷಿಯನ್ನರಿದು ಆಚರಿಸಬೇಕು.

(೧೭೬) ರುದ್ರಾಕ್ಷಿಯ ವಿಧಗಳು:— ೧೪ ಮುಖಗಳ ವರೆಗೆ ರುದ್ರಾಕ್ಷಿಗಳಿರುತ್ತವೆ. ಏಕಮುಖ ರುದ್ರಾಕ್ಷಿಯು ಪರಶಿವಗೆ, ೨ ಮುಖವುಳ್ಳ ರುದ್ರಾಕ್ಷಿಯು ಈಶಾನಗೆ, ೩ ಮುಖವುಳ್ಳ ರುದ್ರಾಕ್ಷಿಯು ಅಗ್ನಿಗೆ, ೪ ಮುಖವುಳ್ಳ ರುದ್ರಾಕ್ಷಿಯು ಬ್ರಹ್ಮನಿಗೆ, ೫ ಮುಖವುಳ್ಳ ರುದ್ರಾಕ್ಷಿಯು ಸದಾಶಿವನಿಗೆ, ೬ ಮುಖವುಳ್ಳ ರುದ್ರಾಕ್ಷಿಯು ಷಣ್ಮುಖನಿಗೆ, ೭ ಮುಖವುಳ್ಳ ರುದ್ರಾಕ್ಷಿಯು ಅನಂತನಿಗೆ, ೮ ಮುಖವುಳ್ಳ ರುದ್ರಾಕ್ಷಿಯು ವಿಘ್ನೇಶ್ವರನಿಗೆ, ೯ ಮುಖವುಳ್ಳ ರುದ್ರಾಕ್ಷಿಯು ಭೈರವನಿಗೆ, ೧೦ ಮುಖವುಳ್ಳ ರುದ್ರಾಕ್ಷಿಯು ಮಾಧವನಿಗೆ. ೧೧ ಮುಖವುಳ್ಳ ರುದ್ರಾಕ್ಷಿಯು ಏಕಾದಶ ರುದ್ರರಿಗೆ, ೧೨ ಮುಖವುಳ್ಳ ರುದ್ರಾಕ್ಷಿಯು ದ್ವಾದಶಾದಿತ್ಯರಿಗೆ, ೧೩ ಮುಖವುಳ್ಳ ರುದ್ರಾಕ್ಷಿಯು ಮಹೇಶ್ವರನಿಗೆ. ೧೪ ಮುಖವುಳ್ಳ ರುದ್ರಾಕ್ಷಿಯು ಚತುರ್ದಶ ಮನುಗಳಿಗೆ ಸಂಬಂಧಪಡುತ್ತವೆ

ಶಿಖಾಸ್ಥಾನದಲ್ಲಿ ಏಕಮುಖ ರುದ್ರಾಕ್ಷಿಯನ್ನು, ಮಸ್ತಕದಲ್ಲಿ, ೨ ಮುಖ, ೩ ಮುಖ ಮತ್ತು ೧೨ ಮುಖಗಳುಳ್ಳ ಮೂರು ರುದ್ರಾಕ್ಷಿಗಳನ್ನು, ೧೧ ಮುಖಗಳುಳ್ಳ ರುದ್ರಾಕ್ಷಿಗಳನ್ನು ಶಿರವನ್ನು ಬಳಸಿ, ೫ ಮುಖ ೭ ಮುಖ ಅಥವಾ ೧೦ ಮುಖಗಳುಳ್ಳ ರುದ್ರಾಕ್ಷಿಗಳನ್ನು ಕರ್ಣದಲ್ಲಿ, ಕಂಠದಲ್ಲಿ ೮ ಮುಖಗಳುಳ್ಳ ರುದ್ರಾಕ್ಷಿಗಳನ್ನು, ೬ ಮುಖಗಳುಳ್ಳ ರುದ್ರಾಕ್ಷಿಗಳನ್ನು ೪ ಮುಖಗಳುಳ್ಳ ರುದ್ರಾಕ್ಷಿಗಳನ್ನು ಉರದಲ್ಲಿ, ೧೩ ಮುಖಗಳುಳ್ಳ ರುದ್ರಾಕ್ಷಿಗಳನ್ನು ಬಾಹುವಿನಲ್ಲಿ, ೯ ಮುಖಗಳುಳ್ಳ ರುದ್ರಾಕ್ಷಿಗ

ಅನ್ನು ಮುಂಗೈಯಲ್ಲಿ, ೧೨ ಮುಖಗಳುಳ್ಳ ರುದ್ರಾಕ್ಷಿಗಳನ್ನು ವಕ್ಷಸ್ಥಳದಲ್ಲಿ, ಧರಿಸುವದೆಂದು ವಚನಕಾರರು ಹೇಳುತ್ತಾರೆ.

(೧೭೭) ಚಿದ್ರುದ್ರಾಕ್ಷಿ :— ಚಿದ್ರುದ್ರಾಕ್ಷಿಗಳಿಂತಲೂ ಇದ್ದ ಅವುಗಳ ವಿವರಣೆಯನ್ನು ಮಂತ್ರ ಈ ವಿಷಯದಲ್ಲಿ ವಾಚಕರು ನೋಡತಕ್ಕದ್ದು.

(೧೭೮) ಮಂತ್ರ :— ಪರಮಾತ್ಮನ ನಾಮವೇ ಮಂತ್ರವಾಗಿದೆ. ಇದು ವೀರಶೈವರಲ್ಲಿ 'ಓಂ ನಮಃಶಿವಾಯ' ಎಂದಿದೆ ಇದನ್ನೇ ಅವರು ನೆನೆಯಬೇಕು. ಇದು ಭವಬಂಧನ ದುರಿತಗಳನ್ನು ಗೆಲ್ಲುವದೆಂದು ಬಸವನ ಅಭಿಪ್ರಾಯವು. ವಿವೇಕವು ಕೂಡಿದಲ್ಲಿ, ನೆನಹುಗೆಟ್ಟ ಮತಿ ಮಂದವಾದಲ್ಲಿ ಮಂತ್ರವನ್ನು ನೆನೆಯಬೇಕು. ಇದನ್ನೇ ವೀರಶೈವನು ಜಪಿಸಬೇಕು. ಪಂಚಾಕ್ಷರಿಯು ಹೀಗಿದ್ದು ಇದೇ ಎಲ್ಲ ಮಂತ್ರಗಳಿಗೆ ಉತ್ಪತ್ತಿ ಲಯ ಸ್ಥಾನವಾಗಿದೆ. ಇದೇ ಶಿವಮಂತ್ರವೆನಿಸುತ್ತದೆ. ಏಳು ಕೋಟಿ ಮಹಾಮಂತ್ರಗಳಿವೆ. ಉಪಮಂತ್ರಗಳಿಗೆ ಲೆಕ್ಕವಿಲ್ಲ. ಆದರೆ ಭಕ್ತನು ಅವುಗಳಲ್ಲಿ ವ್ಯಾಕುಲನಾಗದೆ ಈ ಶಿವಮಂತ್ರ ಒಂದನ್ನೇ ನೆನೆಯಬೇಕು.

(೧೭೯) ಪಂಚಾಕ್ಷರ ಮಂತ್ರ :— ಆರಂಭದಲ್ಲಿ ಜಗತ್ತು ತಲೆದೋರದೆ ಇದ್ದ ಕಾಲದಲ್ಲಿ ನಿತ್ಯ ನಿರಂಜನ ಪರವಸ್ತುವು ಒಂದೇ ಇದ್ದು ಅದು ನಿರಂಜನ ಪ್ರಣವವೆಂದು ಹೇಳಲ್ಪಡುತ್ತದೆ. ಅದರ ಚಿತ್ಕಳೆಗೆ ಶುದ್ಧ ಪ್ರಣವವೆಂಬ ಹೆಸರು ಇದೆ. ಈ ಶುದ್ಧ ಪ್ರಣವದಲ್ಲಿ ಚಿತ್ತು ಉದಯವಾಗುತ್ತದೆ. ಆ ಚಿತ್ತು ಸಚ್ಚಿದಾನಂದಸ್ವರೂಪುಳ್ಳದಾಗಿ ಚಿತ್‌ಪ್ರಣವವೆಂದೆನಿಸಿಕೊಳ್ಳುತ್ತದೆ. ಅದರಲ್ಲಿ ಚಿತ್‌ಶಕ್ತಿಯು ಉದಯವಾಗುತ್ತದೆ. ಇದರಲ್ಲಿ ನಾದ ಬಿಂದು ಕಳೆಗಳು ಉಂಟಾಗುತ್ತವೆ. ಅಕಾರವೇ ನಾದವು ಉಕಾರವೇ ಬಿಂದುವು ಮಕಾರವೇ ಕಳೆಯು ಮತ್ತು ಚಿತ್‌ಶಕ್ತಿ ಇವು ನಾಲ್ಕು ಒಂದಾದಲ್ಲಿ ಪ್ರಣವವು



ಅಂದರೆ ಓಂಕಾರವು ಉಂಟಾಗುತ್ತದೆ. ಈ ಪ್ರಣವವು ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧಚಂದ್ರಾಕೃತಿ, ಬಿಂದ್ವಾಕೃತಿ ಎಂದು ಐದು ಆಕೃತಿಗಳನ್ನು ಒಳಗೊಂಡಿದೆ. ಅವು ಇದರಲ್ಲಿ ಅಡಕವಾಗಿವೆ. ತಾರಕಾಕೃತಿಯಲ್ಲಿ ನಕಾರ ಜನನ, ದಂಡಕಾಕೃತಿಯಲ್ಲಿ ಮಕಾರ ಜನನ, ಕುಂಡಲಾಕೃತಿಯಲ್ಲಿ ಶಿಕಾರ ಜನನ, ಅರ್ಧಚಂದ್ರಾಕೃತಿಯಲ್ಲಿ ವಕಾರ ಜನನ, ಬಿಂದ್ವಾಕೃತಿಯಲ್ಲಿ ಯಕಾರ ಜನನ ಈ ಪ್ರಕಾರ ಪಂಚಾಕ್ಷರಗಳ ಉತ್ಪತ್ತಿಯು ಇದೆ. ಈ ಅಕ್ಷರಗಳಲ್ಲಿ ಓಂ ಪ್ರಣವವು ಕೂಡಲು ಅದು ಶಿವಪಂಚಾಕ್ಷರೀ ಮಂತ್ರವೆಂದು ಹೇಳಲ್ಪಡುತ್ತದೆ. ಇದಕ್ಕೆ ಪ್ರಣವ ಪಂಚಾಕ್ಷರೀ ಮಂತ್ರ, ಷಡಕ್ಷರೀ ಮಂತ್ರ ಎಂಬ ಬೇರೆ ಹೆಸರುಗಳಿವೆ.

(೧೮೦) ಪ್ರಣವಪಂಚಾಕ್ಷರೀ ಮಂತ್ರದ ಜಪದ ಪರಿಣಾಮಗಳು:— ಮನುಷ್ಯನು ಮೂಲದಲ್ಲಿ ಶಕ್ತಿಮಯನಾಗಿದ್ದಾನೆ. ಆದರೆ ಅದು ಪ್ರಕಟವಾಗಿರುವದಿಲ್ಲ. ಅದನ್ನು ಪ್ರಕಟಗೊಳಿಸುವದೇ ಮಂತ್ರಜಪದ ಉದ್ದೇಶವು. ಈ ಮಂತ್ರವು ಅವನ ಶಕ್ತಿಯನ್ನೆಲ್ಲ ಆವರಿಸತಕ್ಕದ್ದಾಗಿದೆ. ಮಂತ್ರಜಪಿಸುವದೂ ಪರಮಾತ್ಮನನ್ನು ನೆನೆಯುವದೂ ಒಂದೇಯಾಗಿವೆ. ದೇವರ ಪ್ರಾರ್ಥನೆ ಎಂದರೆ ಪರಮಾತ್ಮನ ಹೆಸರನ್ನು ತೆಗೆದುಕೊಂಡು ಅವನಿಂದ ಒಂದು ಭಿಕ್ಷೆ ಬೇಡುವದು ಅಲ್ಲ. ಯಾಕೆಂದರೆ ವೀರಶೈವರಲ್ಲಿ ಭಿಕ್ಷೆ ಬೇಡುವದು ಇಲ್ಲ. ಆದ್ದರಿಂದ ಪಂಚಾಕ್ಷರೀ ಜಪವನ್ನು ಮಾಡುವ ಅವರ ಉದ್ದೇಶವು ಆತ್ಮಶಕ್ತಿಯನ್ನು ಬೆಳೆಸುವದಿರುತ್ತದೆ. ಹೀಗೆ ಶಕ್ತಿಯನ್ನು ಬೆಳೆಸಿ ಕಾಯಕಗಳನ್ನು ಮಾಡುತ್ತ ತಮ್ಮ ಎಲ್ಲ ಗುಣಗಳನ್ನು ವಿಕಾಸಪಡಿಸಬೇಕು. ಈ ವಿಕಾಸದ ಪೂರ್ಣಾವಸ್ಥೆಯೇ ಲಿಂಗಾಂಗಸಾಮರಸ್ಯವು. ಮಂತ್ರಜಪದ ಉದ್ದೇಶವು ಹೀಗಿರುವದರಿಂದ ಅದನ್ನು ಕೇವಲ ಯಾಂತ್ರಿಕ ರೀತಿಯಿಂದ ಮಾಡಕೂಡದು. ಅದರ ಅರ್ಥವನ್ನು ತಿಳಿದು ಜಪವನ್ನು ಮಾಡಬೇಕು. ಮನುಷ್ಯನ ಗುಣಗಳಾವವೆಂಬುದು ಷಟ್‌ಸ್ಥಲ ಶಾಸ್ತ್ರದಲ್ಲಿ ಹೇಳಿದೆ. ಇವುಗಳನ್ನು ತಿಳಿದುಕೊಂಡು ಮಂತ್ರಶಕ್ತಿಯನ್ನು ಅವುಗಳಲ್ಲಿ ಬೆರಿಸಬೇಕು. ಪಂಚಾಕ್ಷರದಲ್ಲಿ ಪ್ರಣವುಗೂಡಿ ಆರು ವಿಭಾಗಗಳಿವೆ. ಅವು ನ, ಮ, ಶಿ, ವ, ಯ, ಓಂ ಎಂದಿವೆ.

ಅವುಗಳು ಮನುಷ್ಯನ ಆಯಾ ಗುಣಗಳಿಗೆ ಸಂಬಂಧಪಡುತ್ತವೆ. ಅವು
ಗಳ ಉಚ್ಚರಣೆಯಲ್ಲಿ ಈ ಗುಣಗಳ ವಿಕಾಸದ ಉತ್ಕಟ ಭಾವನೆಯು
ಇರಬೇಕು. ಈ ಗುಣಗಳಲ್ಲಿ ವಚನ ಶಾಸ್ತ್ರವು ೫ ಮುಖ್ಯ ವಿಭಾಗಗಳನ್ನ
ಮಾಡುತ್ತದೆ. ಅವುಃ — (೧) ಶರೀರಕ್ಕೆ ಸಂಬಂಧಿಸಿದವು. (೨) ಬಾಹ್ಯ
ವರ್ತನೆಗೆ ಸಂಬಂಧಿಸಿದವು. (೩) ಅಂತರಂಗದ ಆಚರಣೆಗೆ ಸಂಬಂಧಿ
ಸಿದವು (೪) ಮನುಷ್ಯನ ಯೌಗಿಕ ಜೀವನಕ್ಕೆ ಸಂಬಂಧಿಸಿದವು
(೫) ಮನುಷ್ಯನ ಲೈಂಗಿಕ ವರ್ತನೆಗೆ ಸಂಬಂಧಿಸಿದವು. ಹೀಗೆ ಐದು ವಿಭಾ
ಗಗಳನ್ನು ಸ್ಥೂಲವಾಗಿ ಮಾಡಬಹುದು. ಯಾವ ಯಾವ ಗುಣಗಳು
ಯಾವಯಾವ ಪ್ರಣವಗಳಿಗೆ ಸಂಬಂಧಪಡುತ್ತವೆಂಬುವನ್ನು ವೀರಶೈವರು
ಅರಿತು ಆಚರಿಸಬೇಕು. ಆಚರಿಸಿದಲ್ಲಿ ಆಯಾ ಗುಣಗಳು ಬಲಪಡುತ್ತವೆ.

ನಕಾರ ಮಂತ್ರಃ — ಪೃಥ್ವೀತತ್ವ, ರುಧಿರಮಯ, ದಶೇಂದ್ರಿಯ
ಗಳು ಮತ್ತು ಆಧಾರಚಕ್ರ ಇವು ಶರೀರಕ್ಕೆ ಸಂಬಂಧಪಡುತ್ತವೆ. ಸುಚಿತ್ತ
ಹಸ್ತ ಮತ್ತು ಶ್ರದ್ಧಾಭಕ್ತಿ ಇವು ಬಾಹ್ಯಾಚಾರಕ್ಕೆ ಸಂಬಂಧಿಸುತ್ತವೆ.
ಅಂತರ್ಯಾಮಿತ್ವ. ಕ್ರಿಯಾಶಕ್ತಿ ಮತ್ತು ಪೀತವರ್ಣ ಇವು ಅಂತರಂ
ಗಿಕ ಆಚರಣೆಗೆ ಸಂಬಂಧಿಸುತ್ತವೆ. ಬ್ರಹ್ಮತತ್ವ, ಕರ್ಮಸಾದಾಖ್ಯ,
ಸದ್ಯೋಜಾತ ಮಂತ್ರ ಮೂರ್ತಿ, ಸತ್ ಸ್ವರೂಪ ಇವು ಯೌಗಿಕ ಜೀವ
ನಕ್ಕೆ ಸಂಬಂಧಪಡುತ್ತವೆ. ಆತ್ಮತತ್ವ, ಈಶಾನ್ಯಮಂತ್ರ ಮೂರ್ತಿ,
ಬ್ರಹ್ಮ, ಭಕ್ತ್ಯಂಗ ಸ್ವರೂಪ ಭಕ್ತ ಮತ್ತು ಆಚಾರಲಿಂಗ ಇವು ಲೈಂಗಿಕ
ವರ್ತನೆಗೆ ಸಂಬಂಧಪಡುತ್ತವೆ. ನಕಾರ ಪ್ರಣವವು ಇವುಗಳಿಗೆಲ್ಲ ಸಂಬಂ
ಧಿಸಿರುವದರಿಂದ ಅದರ ಪ್ರಭಾವದ ಮೂಲಕ ಈ ಗುಣಗಳ ವಿಕಾಸವು
ಉಂಟಾಗುತ್ತದೆ.

(೨) ಮಕಾರ ಮಂತ್ರಃ— ಅಪ್ಪ ತತ್ವ, ಮಾಂಸಮಯ, ಮನ
ಪಂಚಕಗಳು ಮತ್ತು ಸ್ವಾಧಿಷ್ಠಾನಚಕ್ರ ಇವು ಶರೀರಕ್ಕೆ ಸಂಬಂಧಪ
ಸುಬುದ್ಧಿಹಸ್ತ, ನೈಷ್ಠಿಕಾಭಕ್ತಿ ಇವು ಬಾಹ್ಯಾಚಾರಕ್ಕೆ ಸಂಬಂಧಿಸು
ತ್ತವೆ. ಚೈತನ್ಯ, ಜ್ಞಾನಶಕ್ತಿ ಮತ್ತು ನೀಲವರ್ಣ ಇವುಗಳು ಅಂತ



ರಂಗಿಕ ಆಚರಣೆಗೆ ಸಂಬಂಧಪಡುತ್ತವೆ. ವಿಷ್ಣುತತ್ವ, ಕರ್ತೃಸಾದಾಖ್ಯ,
ವಾಮದೇವ ಮಂತ್ರಮೂರ್ತಿ, ಚಿತ್ ಸ್ವರೂಪ ಇವು ಯೌಗಿಕ ಜೀವ
ನಕ್ಕೆ ಸಂಬಂಧಿಸುತ್ತವೆ. ವಿದ್ಯಾತತ್ವ, ಈಶ್ವರಮಂತ್ರಮೂರ್ತಿ, ಪಿಂಡ
ಬ್ರಹ್ಮ, ವಿದ್ಯಾಂಗಸ್ವರೂಪ, ಮಹೇಶ್ವರ ಮತ್ತು ಗುರುಲಿಂಗ ಇವು ಭಕ್ತನ
ಲೈಂಗಿಕ ವರ್ತನೆಗೆ ಸಂಬಂಧಪಡುತ್ತವೆ. ಇವುಗಳಿಗೆ ಮಕಾರ ಪ್ರಣವವು
ಸಂಬಂಧವಾಗಿರುವದರಿಂದ ಅದರ ಧ್ಯಾನದ ಮೂಲಕ ಈ ಗುಣಗಳ
ವಿಕಾಸವು ಉಂಟಾಗುತ್ತದೆ.

(೩) ಶಿಕಾರಮಂತ್ರಃ — ಅಗ್ನಿತತ್ವ, ಮೇಧಸ್ಸು ಮಯ. ಪ್ರಾಣಸ್ವ
ರೂಪ, ಮಣಿಪೂರಕ ಚಕ್ರ, ಇವು ಶರೀರಕ್ಕೆ ಸಂಬಂಧಿಸಿದವು. ನಿರ
ಹಂಕಾರಹಸ್ತ ಮತ್ತು ಅವಧಾನಭಕ್ತಿ ಇವು ಬಾಹ್ಯ ಆಚರಣೆಗೆ ಸಂಬಂಧ
ಪಡುತ್ತವೆ. ಭಾವ, ಇಚ್ಛಾಶಕ್ತಿ ಮತ್ತು ಕುಂಕುಮವರ್ಣ ಇವು ಅಂತ
ರಂಗಿಕ ಆಚರಣೆಗೆ ಸಂಬಂಧ ಪಡುತ್ತವೆ. ರುದ್ರತತ್ವ, ಮೂರ್ತಿ
ಸಾದಾಖ್ಯ, ಅಘೋರಮಂತ್ರ ಮೂರ್ತಿ, ಆನಂದಸ್ವರೂಪ ಇವು ಯೌಗಿಕ
ಜೀವನಕ್ಕೆ ಸಂಬಂಧ ಪಡುತ್ತವೆ. ಶಿವತತ್ವ, ಮಹೇಶ್ವರಮಂತ್ರ
ಮೂರ್ತಿ, ಕಲಾಬ್ರಹ್ಮ, ಪ್ರಸಾದಿ, ಶಿವಲಿಂಗ ಇವು ಲೈಂಗಿಕ ಆಚರಣೆಗೆ
ಸಂಬಂಧ ಪಡುತ್ತವೆ. ಶಿಕಾರಪ್ರಣವವು ಇವುಗಳಿಗೆ ಸಂಬಂಧಿಸಿರುವ
ದರಿಂದ ಅದರ ಧ್ಯಾನ ಮೂಲಕ ಈ ಗುಣಗಳ ವಿಕಾಸವು ಉಂಟಾ
ಗುತ್ತದೆ.

(೪) ವಕಾರಮಂತ್ರಃ — ವಾಯುತತ್ವ, ಅಸ್ತಿಮಯ, ದಶವಾಯು
ಗಳ ಸ್ವರೂಪ, ಅನಾಹತಚಕ್ರ, ಇವು ಶರೀರಕ್ಕೆ ಸಂಬಂಧ ಪಡುತ್ತವೆ.
ಸುಮನಹಸ್ತ ಮತ್ತು ಅನುಭಾವಭಕ್ತಿಗಳು ಬಾಹ್ಯಾಚಾರಕ್ಕೆ ಸಂಬಂಧ
ಪಡುತ್ತವೆ. ಕರ್ತಾರ, ಆದಿಶಕ್ತಿ ಮತ್ತು ಶ್ವೇತವರ್ಣಗಳು ಅಂತರಂಗಿಕ
ಆಚರಣೆಗೆ ಸಂಬಂಧಪಡುತ್ತವೆ. ಈಶ್ವರತತ್ವ, ಅಮೂರ್ತಿಸಾದಾಖ್ಯ,
ತತ್ಪುರುಷಮಂತ್ರ ಮೂರ್ತಿ, ಮತ್ತು ನಿತ್ಯಸ್ವರೂಪ ಇವುಗಳು ಯೌಗಿಕ
ಜೀವನಕ್ಕೆ ಸಂಬಂಧಿಸುತ್ತವೆ. ಈಶ್ವರತತ್ವ. ಈಶಮಂತ್ರಮೂರ್ತಿ,
ಆನಂದಬ್ರಹ್ಮ, ಕಾಮಾಂಗಸ್ವರೂಪವಪ್ಪ ಪ್ರಾಣಲಿಂಗಿ ಮತ್ತು ಜಂಗಮ,

ಲಿಂಗ, ಇವು ಲೈಂಗಿಕ ಆಚರಣೆಗೆ ಸಂಬಂಧಪಡುತ್ತವೆ. ವಕಾರ ಪ್ರಣವುವು ಇವುಗಳಿಗೆ ಸಂಬಂಧಿಸಿರುವದರಿಂದ ಅದರ ಧ್ಯಾನದ ಮೂಲಕ ಈ ಗುಣಗಳ ವಿಕಾಸವು ಉಂಟಾಗುತ್ತದೆ.

(೫) ಯಕಾರಮಂತ್ರಃ— ಆಕಾಶತತ್ವ, ಮಜ್ಜಾಮಯ, ತ್ರಿಗುಣ ಸ್ವರೂಪು, ವಿಶುದ್ಧಿಚಕ್ರ, ಇವು ಶರೀರಕ್ಕೆ ಸಂಬಂಧಿಸುತ್ತವೆ. ಸುಜ್ಞಾನ ಹಸ್ತ ಮತ್ತು ಆನಂದಭಕ್ತಿಗಳು ಬಾಹ್ಯಾಚಾರಕ್ಕೆ ಸಂಬಂಧ ಪಡುತ್ತವೆ. ಕ್ಷೇತ್ರಜ್ಞ, ಪರಾಶಕ್ತಿ, ಸ್ಫಟಿಕವರ್ಣ ಇವು ಆಂತರಂಗಿಕ ಆಚರಣೆಗೆ ಸಂಬಂಧಪಡುತ್ತವೆ. ಸದಾಶಿವತತ್ವ, ಶಿವಸಾದಾಖ್ಯ, ಈಶಾನ್ಯ ಮಂತ್ರಮೂರ್ತಿ, ಪರಿಪೂರ್ಣಸ್ವರೂಪು, ಇವು ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸುತ್ತವೆ. ಸದಾಶಿವತತ್ವ, ಸದಾಶಿವಮಂತ್ರಮೂರ್ತಿ, ವಿಜ್ಞಾನ ಬ್ರಹ್ಮ, ಭೂತಾಂಗಸ್ವರೂಪನಪ್ಪ ಶರಣ, ಪ್ರಸಾದಲಿಂಗ ಇವು ಲಿಂಗವಿಕಾಸಾವಸ್ಥೆಯನ್ನು ತೋರಿಸುತ್ತವೆ. ಇವುಗಳಿಗೆ ಯಕಾರಮಂತ್ರವು ಸಂಬಂಧಿಸಿರುವದರಿಂದ ಆದರ ಧ್ಯಾನದ ಮೂಲಕ ಈ ಗುಣಗಳೆಲ್ಲ ವಿಕಾಸವನ್ನು ಹೊಂದುತ್ತವೆ.

(೬) ಓಂಕಾರ ಮಂತ್ರಃ— ಆತ್ಮತತ್ವ, ಶುಕ್ಲಮಯ, ಪಂಚಭೂತಾತ್ಮಮಯ, ಆಜ್ಞಾಚಕ್ರ ಇವುಗಳು ಶರೀರಕ್ಕೆ ಸಂಬಂಧಪಡುತ್ತವೆ. ಸದ್ಭಾವ ಹಸ್ತ ಮತ್ತು ಸಮರಸಭಕ್ತಿ ಇವುಗಳು ಬಾಹ್ಯಾಚಾರಕ್ಕೆ ಸಂಬಂಧಪಡುತ್ತವೆ. ಶಿವ, ಚಿತ್‌ಶಕ್ತಿ, ಮತ್ತು ಜ್ಯೋತಿರ್ಮಯ ವರ್ಣ, ಇವು ಆಂತರಂಗಿಕ ಆಚರಣೆಗೆ ಸಂಬಂಧಿಸುತ್ತವೆ. ಮಹತ್ ತತ್ವ, ಮಹಾಸಾದಾಖ್ಯ, ಮಹಾಮಂತ್ರಮೂರ್ತಿ ನಿರಂಜನಸ್ವರೂಪು, ಇವುಗಳು ಯೌಗಿಕ ಜೀವನಕ್ಕೆ ಸಂಬಂಧಿಸುತ್ತವೆ. ಪರತತ್ವ, ಶಿವಮಂತ್ರಮೂರ್ತಿ, ಪರಬ್ರಹ್ಮ, ಶಿವಲಿಂಗಸ್ವರೂಪನಪ್ಪ ಐಕ್ಯ, ಮಹಾಲಿಂಗ ಇವುಗಳು ಲಿಂಗ ವಿಕಾಸಾವಸ್ಥೆಯನ್ನು ತೋರಿಸುತ್ತವೆ. ಇವುಗಳಿಗೆ ಓಂಕಾರವು ಸಂಬಂಧಿಸಿರುವದರಿಂದ ಆದರ ಧ್ಯಾನದ ಮೂಲಕ ಈ ಗುಣಗಳೆಲ್ಲ ವಿಕಾಸವನ್ನು ಹೊಂದುತ್ತವೆ.



ಪಂಚಾಕ್ಷರಮಂತ್ರ ಜಪಿಸುವವನು ಮೇಲೆ ಹೇಳಿದಂತೆ ಬಾಹ್ಯಾಚಾರ ಮತ್ತು ಆಂತರಂಗಿಕ ಆಚರಣೆಗಳಂತೆ ನಡೆಯಬೇಕು. ಅದರಿಂದ ಅವನ ಆಧ್ಯಾತ್ಮಿಕ ಜೀವನವೂ ಉಚ್ಚತರದ್ದಾಗುತ್ತದೆ. ಇದರಿಂದ ಅವನ ಶರೀರವೂ ಅವನ ಲೈಂಗಿಕ ಸ್ಥಿತಿಯೂ ಶ್ರೇಷ್ಠತರದ್ದಾಗುತ್ತವೆ. ಆದರೆ ಈ ಕಾರ್ಯದಲ್ಲಿ ಪಂಚಾಕ್ಷರಗಳನ್ನು ಜಪಿಸಿ ಅವುಗಳ ಮೂಲಕ ತನ್ನ ಶರೀರವನ್ನೆಲ್ಲ ಮಂತ್ರಮಯವನ್ನಾಗಿ ಮಾಡತಕ್ಕದ್ದು. ಈ ಭಾವವು ಮೇಲ್ಕಂಡ ವಿವರಣೆಯಲ್ಲಿರುತ್ತದೆ.

(೧೪೧) ನಿರಂಜನ ಪ್ರಣವಃ— ಏನೂ ಏನೂ ಎನಲಿಲ್ಲದ ಮಹಾಘನ ನಿರಂಜನಾತೀತವಾದ ನೆನಹು ಮಾತ್ರದಲ್ಲಿ ನಿರಂಜನ ಪ್ರಣವವು ಉತ್ಪತ್ತಿಯನ್ನು ಹೊಂದುತ್ತದೆ. ಸೃಷ್ಟಿಯ ಆವಿರ್ಭಾವವಾಗುವ ಮೊದಲು ಪರಮಾತ್ಮನ ಶೂನ್ಯದ ಮೊದಲಿನ ಸ್ಥಿತಿಯ ದ್ಯೋತಕವು ಇದಾಗಿದೆ.

(೧೪೨) ಅವಾಚ್ಯಃ— ನಿರಂಜನ ಪ್ರಣವದ ನೆನಹು ಮಾತ್ರದಿಂದ ಇದಾಗುತ್ತದೆ. ಇದಕ್ಕೆ ನಿರಂಜನ ಹಕಾರವೆಂಬ ಹೆಸರಿದೆ. ಅದು ಅವಾಚ್ಯ ಎಂದರೆ ಹೇಳಲಿಕ್ಕೆ ಬಾರದ ಪ್ರಣವವೆಂದು ವಚನಕಾರರು ಹೇಳುತ್ತಾರೆ. ಅಲ್ಲಿ ನಾದವು ದಿವ್ಯವಾದದ್ದು, ಬಿಂದುವು ನಿರಾವರಣವಾದದ್ದು, ಮತ್ತು ಕಳೆಯು ನಿರುಪಮವಾದದ್ದೆಂದು ಹೇಳಲ್ಪಡುತ್ತಿದೆ. ಇಂಥ ಇವು ಮೂರು ಕೂಡಿದಲ್ಲಿ ಈ ಅವಾಚ್ಯ ಪ್ರಣವವಾಗುವದು.

(೧೪೩) ಹಕಾರಃ— ಅದು ವಾಚ್ಯಪ್ರಣವವು. ಅದಕ್ಕೆ ವಾಚ್ಯವೆಂಬ ಹೆಸರಿದೆ. ಅದು ಪರಮ ತೇಜೋರಾಶಿಯಾದ ಪರವಸ್ತು ಸ್ವರೂಪವಾಗಿರುತ್ತದೆ. ಅದು ಸರ್ವ ಚೈತನ್ಯಾತ್ಮಕವಾಗಿರುತ್ತದೆ ಅನಿರ್ವಾಚ್ಯವು ವಾಚ್ಯವಾದಲ್ಲಿ ಹಕಾರವಾಗುತ್ತದೆ. ಅದು ನಿರಂಜನ ಮತ್ತು ಅವಾಚ್ಯಕ್ಕಿಂತಲೂ ಸ್ಥೂಲವು.

(೧೪೪) ಹಂ, ಕ್ಷಃ — ಪರಶಿವ ಮತ್ತು ಶಕ್ತಿ ಇವುಗಳನ್ನು ಈ ಅಕ್ಷರಗಳು ಸೂಚಿಸುತ್ತವೆ.

(೧೪೫) ಕಲಾಪ್ರಣವಃ— ಅವಾಚ್ಯ ಪ್ರಣಮದ ನೆನಹು ಮಾತ್ರದಲ್ಲಿ ಕಲಾಪ್ರಣವದ ಉತ್ಪತ್ತಿಯು. ಅವಾಚ್ಯ ಪ್ರಣಮದ ನೆನಹಿನಿಂದ ಚಿನ್ನಾದ, ಚಿದ್ಬಿಂದು, ಚಿತ್ಕಲೆಗಳು ಉದಯವಾಗುತ್ತವೆ. ಇದಕ್ಕೆ ಚಿತ್ಕಲಾಪ್ರಣಮವೆಂತಲೂ ಹೇಳುತ್ತಾರೆ. ಅದರ ಚಿನ್ನಾದ ಕಲೆಯಲ್ಲಿ ೧೨ ಕಲೆಗಳು. ಚಿದ್ಬಿಂದು ಕಲೆಯಲ್ಲಿ ೧೬ ಕಲೆಗಳು, ಚಿತ್ಕಲೆಯಲ್ಲಿ ೧೦ ಕಲೆಗಳು ಅಂತು ೩೮ ಕಲೆಗಳು ಕೂಡಿ ಕಲಾಪ್ರಣಮವಾಗುತ್ತದೆ. ಈ ಪ್ರತಿಯೊಂದು ಕಲೆಯು ಬಹು ಪ್ರಕಾಶಮಾನವಾದುದು. ಅದು ಬಹು ಸೂಕ್ಷ್ಮವಾದುದು.

(೧೪೬) ಅನಾದಿಪ್ರಣಮಃ— ಚಿತ್ಕಳಾ ಪ್ರಣವದ ನೆನಹು ಮಾತ್ರದಿಂದ ಅನಾದಿ ಪ್ರಣಮದ ಉತ್ಪತ್ತಿಯು. ಆದಿ ಅಕಾರ, ಉಕಾರ, ಮಕಾರವಿಲ್ಲದಂದು ಆದಿ ನಾದ ಬಿಂದು ಕಳೆಗಳಿಲ್ಲದಂದು ಅನಾದಿ ಪ್ರಣವ ಓಂಕಾರವು ಉಂಟಾಗುತ್ತದೆ.

(೧೪೭) ಬಕಾರಪ್ರಣಮಃ— ಕಲಾಪ್ರಣವದಲ್ಲಿ ಉದಯವಾದ ಚಿನ್ನಾದದಿಂದ ಬಕಾರಪ್ರಣಮವು ಉಂಟಾಗುತ್ತದೆ. ಅದಕ್ಕೆ ಪರನಾದವೆಂಬ ಹೆಸರು ಇದೆ. ಪರಶಕ್ತಿ ಸುನಾದ ಚೈತನ್ಯವೇ ಈ ಬಕಾರವು.

(೧೪೮) ಸಕಾರಪ್ರಣಮಃ— ಕಲಾಪ್ರಣವದ ಚಿದ್ಬಿಂದುವಿನಿಂದ ಸಕಾರಪ್ರಣಮದ ಉತ್ಪತ್ತಿಯು. ಅದಕ್ಕೆ ಪರಬಿಂದುವೆನ್ನುವರು. ಪರಶಕ್ತಿಯ ಚಿತ್‌ಪ್ರಭಾವರಣವೇ ಸಕಾರವು.

(೧೪೯) ವಕಾರ ಪ್ರಣಮಃ— ಕಲಾಪ್ರಣವದ ಚಿತ್ಕಳೆಯಿಂದ ಮಕಾರ ಪ್ರಣಮದ ಉತ್ಪತ್ತಿಯು. ಅದಕ್ಕೆ ಪರಕಳೆ ಎಂದೆನ್ನುತ್ತಾರೆ. ಪರಶಕ್ತಿಯ ಚಿತ್ಕಲಾತೇಜದ ಪುಂಜವೇ ಈ ವಕಾರವು.

(೧೫೦) ಬ, ಸ, ವಾಕ್ಷರತ್ರಯಃ— ಈ ಪ್ರಣಮಗಳು ಪರನಾದ ಪರಬಿಂದು ಪರಕಳೆಗಳು. ಇವುಗಳ ಮೇಲೆ ಮೂಲ ಪ್ರಕೃತಿಯು ಅವಲಂಬಿಸಿರುವದು. ಈ ಮೂರು ಅಕ್ಷರಗಳು ಮುಂದಿನ ಅ, ಉ, ಮ ಇವುಗಳಿಗೂ



ಆಧಾರವಾಗಿವೆ. ಈ ಅ, ಉ, ಮ ಪ್ರಣಮಗಳು ಹೆಚ್ಚಿಗೆ ಸ್ಥೂಲವಾದವುಗಳು ಮತ್ತು ಇವು ಅನಾದಿಪ್ರಣವದ ನೆನಹುಮಾತ್ರದಿಂದ ಉಂಟಾಗುತ್ತವೆ.

(೧೫೧) ಅಕಾರ ಪ್ರಣಮಃ— ಅದು ಆದಿನಾದವು. ಅದಾದರೂ ಚಿನ್ನಾದವೆಂದು ಹೇಳಲ್ಪಡುತ್ತದೆ. ಜಗತ್ತಿನಲ್ಲಿ ಸಂಹಾರಕೃತ್ಯವನ್ನೆಸಗುತ್ತದೆ. ಆದ್ದರಿಂದ ಅದು ರುದ್ರತತ್ವವು. ಓಂಕಾರ ಪ್ರಣಮದ ತಾರಕಾಕೃತಿ ಮತ್ತು ದಂಡಕಾಕೃತಿಗಳು ಅಕಾರಪ್ರಣಮದಲ್ಲಿ ಸಂಬಂಧಪಡುತ್ತವೆ.

(೧೫೨) ಉಕಾರ ಪ್ರಣಮಃ— ಇದು ಆದಿ ಬಿಂದುವು. ಅಥವಾ ಚಿದ್ಬಿಂದುವು. ಇದು ತಿರೋಧಾನ ಕೃತ್ಯವನ್ನೆಸಗುತ್ತದೆ. ಆದ್ದರಿಂದ ಅದು ಈಶ್ವರತತ್ವವು. ಓಂಕಾರಪ್ರಣಮದ ತಾರಕಾಕೃತಿ ಮತ್ತು ಅರ್ಧಚಂದ್ರಾಕೃತಿಗಳು ಇದಕ್ಕೆ ಸಂಬಂಧಪಡುತ್ತವೆ.

(೧೫೩) ಮಕಾರ ಪ್ರಣಮಃ— ಇದು ಆದಿಕಳೆಯು ಅಥವಾ ಚಿತ್ಕಳೆಯು ಇದೆ. ಇದು ಅನುಗ್ರಹಕೃತ್ಯವನ್ನೆಸಗುತ್ತದೆ. ಆದ್ದರಿಂದ ಅದು ಸದಾಶಿವತತ್ವವು. ಓಂಕಾರದ ಜ್ಯೋತಿರಾಕೃತಿ ಮತ್ತು ದರ್ಪಣಾಕೃತಿಗಳು ಇವುಗಳಿಗೆ ಸಂಬಂಧಿಸುತ್ತದೆ.

(೧೫೪) ಬೀಜಾಕ್ಷರಗಳುಃ— ಅ, ಉ, ಮ, ಬ, ಸ, ವ ಇವುಗಳಿಗೆ ಬೀಜಾಕ್ಷರಗಳೆಂದು ಹೆಸರಿದೆ. ಬ ಸ ವಾಕ್ಷರಗಳು ಚಿನ್ನಾದ ಚಿದ್ಬಿಂದು ಚಿತ್ಕಲಾ ಸ್ವರೂಪಗಳು. ಅ, ಉ, ಮಾಕ್ಷರಗಳು ಶಿವಶಕ್ತ್ಯಾತ್ಮಕವಾಗಿವೆ. ಅವೂ ಕೂಡ ಚಿತ್‌ಸ್ವರೂಪವುಳ್ಳವು. ಅವುಗಳಿಂದ ಮೂಲ ಪ್ರಣಮವು ಉಂಟಾಗುತ್ತದೆ.

(೧೫೫) ಶಕ್ತಿಸಂಬಂಧದ ಪ್ರಣಮಗಳುಃ—ಉ, ಮ, ಅ ಈ ಕ್ರಮದಿಂದ ಜಪಗಳಿದ್ದಲ್ಲಿ, ಅವು ಶಕ್ತಿಸಂಬಂಧದಪ್ರಣಮಗಳೆಂದೆನಿಸಿಕೊಳ್ಳುತ್ತವೆ.

(೧೫೬) ಶಿವಸಂಬಂಧದ ಪ್ರಣಮಗಳುಃ— ಇಲ್ಲಿಯು ಜಪದ ಕ್ರಮವು ಅ, ಉ, ಮ ಹೀಗಿರುತ್ತದೆ.

(೧೯೭) ಶಿವಶಕ್ತಿರಹಿತಪ್ರಣವುಗಳು:— ಇಲ್ಲಿಯು ಜಪದ ಕ್ರಮವು ಮ, ಅ, ಉ ಹೀಗಿರುತ್ತದೆ.

(೧೯೮) ಶಿವಸಂಬಂಧ, ಶಕ್ತಿಸಂಬಂಧ ಮತ್ತು ಶಿವಶಕ್ತಿರಹಿತ ಪ್ರಣವುಗಳ ಕೂಟವು:— ಶಿವಸಂಬಂಧವಾದ ಪ್ರಣವುಗಳು, ಶಕ್ತಿಸಂಬಂಧವಾದ ಪ್ರಣವುಗಳು, ಶಿವಶಕ್ತಿರಹಿತ ಪ್ರಣವುಗಳು, ಇವು ಮೂರು ಕೂಡಿ ಏಕಾರ್ಥವಾದಲ್ಲಿ ಅಖಂಡ ಅಪ್ರಮಾಣ ವಾಙ್ಮನಗೋಚರಕ್ಕತ್ತತ್ತವಾದ ಮಹಾಘನಕ್ಕೆ ಘನವಾದ ಉಪಮಾತೀತಕ್ಕೆ ಅತ್ತತ್ತವಾದ ಸ್ಥಿತಿಯು ಇರುತ್ತದೆ.

(೧೯೯) ಶಿವಸಂಬಂಧದ ಪ್ರಣವುಗಳಿಂದಾದ ವಸ್ತುಗಳು:— ಇದರಲ್ಲಿ ಜ್ಯೋತಿಸ್ವರೂಪಪ್ರಣವು, ದರ್ಪಣಾಕಾರಪ್ರಣವ, ಅರ್ಧಚಂದ್ರಕಪ್ರಣವ, ಕುಂಡಲಾಕಾರಪ್ರಣವ, ದಂಡಸ್ವರೂಪಪ್ರಣವ, ತಾರಕಸ್ವರೂಪಪ್ರಣವ ಎಂದು ಆರು ಪ್ರಕಾರಗಳಿರುತ್ತವೆ.

(ಬ) ದರ್ಪಣಾಕಾರ ಪ್ರಣವದಲ್ಲಿ ಈಶಾನ್ಯಮುಖ, ಅರ್ಧಚಂದ್ರಕ ಪ್ರಣವದಲ್ಲಿ ತತ್ಪುರುಷಮುಖ, ಕುಂಡಲಾಕಾರ ಪ್ರಣವದಲ್ಲಿ ಅಘೋರಮುಖ, ದಂಡಸ್ವರೂಪ ಪ್ರಣವದಲ್ಲಿ ವಾಮದೇವಮುಖ, ತಾರಕಸ್ವರೂಪದಲ್ಲಿ ಸದ್ಯೋಜಾತಮುಖ ಉಂಟಾಗುತ್ತವೆ.

(ಕ) ಈಶಾನ್ಯಮುಖದಲ್ಲಿ ಸಾಯುಜ್ಯಪ್ರಣವು, ತತ್ಪುರುಷಮುಖದಲ್ಲಿ ಸಾಕಲ್ಯಪ್ರಣವು, ಅಘೋರಮುಖದಲ್ಲಿ ಶಾಂಭವಪ್ರಣವು, ವಾಮದೇವಮುಖದಲ್ಲಿ ಸ್ಯಾಸ್ಯಪ್ರಣವು (?) ಸದ್ಯೋಜಾತಮುಖದಲ್ಲಿ ಸೌಖ್ಯಪ್ರಣವು (?) ಉಂಟಾಗುತ್ತವೆ.

(೨೦೦) ಶಕ್ತಿ ಸ್ವರೂಪ ಪರಮ ಪ್ರಣವುಗಳಿಂದಾದ ವಸ್ತುಗಳು:— ಅವು ತಾರಕಸ್ವರೂಪ ಪ್ರಣವು, ದಂಡಕಸ್ವರೂಪ ಪ್ರಣವು, ಕುಂಡಲಾಕಾರ ಪ್ರಣವು, ಅರ್ಧಚಂದ್ರಕ ಪ್ರಣವು, ದರ್ಪಣಾಕಾರ ಪ್ರಣವು, ಜ್ಯೋತಿಸ್ವರೂಪ ಪ್ರಣವು ಎಂದು ಇರುತ್ತವೆ. ಇವು ಶಿವಸಂಬಂಧದ ಪ್ರಣವುಗಳ ಕ್ರಮಕ್ಕೆ ವಿರುದ್ಧ ಕ್ರಮದಲ್ಲಿರುತ್ತವೆ.



(೨೦೧) ಶಿವಶಕ್ತಿರಹಿತ ಪ್ರಣವುಗಳಿಂದಾದ ವಸ್ತುಗಳು:— ಅಖಂಡ ಮಹಾಜ್ಯೋತಿ ಪ್ರಣವುದಲ್ಲಿ ಮೂರ್ತಿಬ್ರಹ್ಮಪ್ರಣವು, ಪಿಂಡಬ್ರಹ್ಮಪ್ರಣವು, ಕಲಾಬ್ರಹ್ಮಪ್ರಣವು, ಬ್ರಹ್ಮಾನಂದಪ್ರಣವು, ವಿಜ್ಞಾನಬ್ರಹ್ಮಪ್ರಣವು, ಪರಬ್ರಹ್ಮಪ್ರಣವು ಇವುಗಳು ಉಂಟಾಗುತ್ತವೆ.

(೨೦೨) ಆದಿಪ್ರಣವ:— ಓಂಕಾರವೆಂಬ ಅನಾದಿ ಪ್ರಣವದ ನೆನಹುಮಾತ್ರದಿಂದ ಆದಿ ಅಕಾರ, ಆದಿ ಉಕಾರ, ಆದಿ ಮಕಾರಗಳು ಉಂಟಾಗುತ್ತವೆ. ಇವು ಅನುಕ್ರಮವಾಗಿ ಚಿನ್ನಾದ ಚಿದ್ಬಿಂದು ಚಿತ್ಕಲೆಗಳಾಗಿವೆ. ಇವು ಮೂರು ಮತ್ತು ಮೂಲ ಚಿತ್ತು ಇವು ಕೂಡಿದಲ್ಲಿ ಓಂಕಾರ ಪ್ರಣವವು ಉಂಟಾಗುತ್ತದೆ. ಇದು ಆದಿಪ್ರಣವವು ಅದು ನಿತ್ಯಪರಿಪೂರ್ಣ ಪರಂಜ್ಯೋತಿ ಪರಬ್ರಹ್ಮವೆಂದು ತಿಳಿಯಬೇಕು. ಇದಕ್ಕೆಯೇ ಗೋಳಕಾಕಾರ ಪ್ರಣವು, ಮೂಲ ಪ್ರಣವುಗಳೆಂಬ ಹೆಸರುಗಳಿವೆ.

(೨೦೩) ಷಡ್ವಿಧ ಪ್ರಣವುಗಳು: – ಇವು ಜ್ಯೋತಿಸ್ವರೂಪ ಪ್ರಣವು, ದರ್ಪಣಾಕಾರ ಪ್ರಣವು, ಅರ್ಧಚಂದ್ರಕ ಪ್ರಣವು, ಕುಂಡಲಾಕಾರ ಪ್ರಣವು, ದಂಡಸ್ವರೂಪ ಪ್ರಣವು, ತಾರಕಸ್ವರೂಪ ಪ್ರಣವು ಹೀಗೆ ಇರುತ್ತವೆ. ಇವುಗಳಲ್ಲಿ ಪ್ರಣವುದ ಮತ್ತು ಪಂಚಾಕ್ಷರಗಳ ಉದಯವು. ಇವು ಆರು ಆದಿಪ್ರಣವ ಅನಾದಿಪ್ರಣವ ಮತ್ತು ಚಿತ್ಕಲಾಪ್ರಣವ ಇವುಗಳಲ್ಲಿಯೂ ಕೂಡ ಆಯಾ ಸ್ವರೂಪಗಳಿಂದ ಇವೆ ಎಂದು ಭಾವಿಸಿ ಜಪಿಸಬೇಕು.

(೨೦೪) ಅಷ್ಟಾಕ್ಷರಗಳು:— ಇವು ಬ, ಸ, ವ; ಅ, ಉ, ಮ; ಹಂ, ಕ್ಷಂ ಎಂದು ಇವೆ. ಜಗತ್ತಿನ ಆಯಾ ಸ್ವರೂಪಗಳನ್ನು ಇವು ಸೂಚಿಸುತ್ತವೆ. ಈ ಸ್ವರೂಪಗಳ ಬಗ್ಗೆ ಈ ಮೊದಲಿಗೇ ಹೇಳಲ್ಪಟ್ಟಿದೆ.

(೨೦೫) ಐವತ್ತೆರಡಕ್ಷರಗಳ ಉತ್ಪತ್ತಿ:— ಗೋಳಕಾಕಾರ ಪ್ರಣವದ ಯಕಾರ ಬೀಜದಲ್ಲಿ ಅಕಾರದಿಂದ ಅಃಕಾರದ ವರೆಗೆ ಶೋಡಶಾಕ್ಷರಗಳ ಉತ್ಪತ್ತಿ, ವಕಾರ ಬೀಜದಲ್ಲಿ ಕಕಾರದಿಂದ ಠಕಾರದ ವರೆಗೆ ದ್ವಾದಶಾಕ್ಷರಗಳ ಉತ್ಪತ್ತಿ, ಶಿಕಾರ ಬೀಜದಲ್ಲಿ ಡಕಾರದಿಂದ ಫಕಾರದ ವರೆಗೆ ದಶಾಕ್ಷರಗಳ ಉತ್ಪತ್ತಿ, ಮಕಾರ ಬೀಜದಲ್ಲಿ ಬಕಾರದಿಂದ ಲಕಾರದ ವರೆಗೆ ಆರಕ್ಷರಗಳ ಉತ್ಪತ್ತಿ. ನಕಾರ ಬೀಜದಲ್ಲಿ ವಕಾರದಿಂದ ಸಕಾರದ ವರೆಗೆ ನಾಲ್ಕಕ್ಷರಗಳ ಉತ್ಪತ್ತಿ ಹೀಗೆ ಇರುತ್ತವೆ. ಈ ಅಕ್ಷರಗಳನ್ನು ಅರಿವಿನಿಂದ ಅರಿದರೆ ಅವು ಪುನಃ ನ ಮ ಶಿ ವಾ ಯ ಆರಕ್ಷರಗಳಾಗುತ್ತವೆ. ಮುಂದೆ ಆರಂಭದ ೧೬ ಸ್ವರಾಕ್ಷರಗಳು ಅಕಾರ ಪ್ರಣವದಲ್ಲಿ ಕಕಾರಾದಿ ಭಕಾರಾಂತ್ಯವಾದ ೨೫ ವಿಕಲಾಕ್ಷರಗಳು ಉಕಾರ ಪ್ರಣವದಲ್ಲಿ ಕಡೆಯ ಮಕಾರಾದಿ ಕ್ಷಕಾರಾಂತ್ಯವಾದ ೧೧ ವ್ಯಾಪಕಾಕ್ಷರಗಳು ಮಕಾರ ಪ್ರಣವದಲ್ಲಿ ಲಯವಾಗುತ್ತವೆ. ಇವುಗಳನ್ನು ಸಹ ಬೀಜಾಕ್ಷರಗಳೆಂತಲೂ ಒಮ್ಮೊಮ್ಮೆ ಕರೆಯುವದುಂಟು.

(೨೦೬) ಪಂಚಾಕ್ಷರ:— ನ ಮಃ ಶಿ ವಾ ಯ ಇದು ಪಂಚಾಕ್ಷರ ಮಂತ್ರವು. ಇದು ಪ್ರಣವರಹಿತವಾಗಿರುತ್ತದೆ. ಕೇವಲ ಶಕ್ತಿದ್ಯೋತಕವಾಗಿದೆ. ಹಾಗೆಯೇ ಪಂಚ ಬ್ರಹ್ಮದ ದ್ಯೋತಕವೂ ಇರುತ್ತದೆ.

(೨೦೭) ಮೂಲಪಂಚಾಕ್ಷರ ಮಂತ್ರ:— ಓಂ ನ ಮಃ ಶಿ ವಾ ಯ ಇದು ಮೂಲ ಪಂಚಾಕ್ಷರ ಮಂತ್ರ. ಇದಕ್ಕೆ ಷಡಕ್ಷರಿ ಮಂತ್ರ, ಶಿವಷಡಕ್ಷರಿ ಮಂತ್ರ ಎಂದು ಬೇರೆ ಹೆಸರುಗಳೂ ಇವೆ. ಇದರ ಅಂಗಗಳನ್ನರಿಯದೆ ಜಪಿಸಿದ್ದಾದರೆ ಅದು ನಿಷ್ಫಲವೆಂದು ವಚನಕಾರರ ಅಭಿಪ್ರಾಯವು. ಈ ಷಡಕ್ಷರವು ಜಗತ್ತನ್ನೆಲ್ಲ ವ್ಯಾಪಿಸಿರುತ್ತದೆ. ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವಿನ ವ್ಯಾಪಾರವು ಈ ಷಡಕ್ಷರಿಯಲ್ಲಿರುವ ಪ್ರಣವಾಕ್ಷರಗಳಿಂದ ಹೊರಡುವ ಶಕ್ತಿಗಳ ಮೂಲಕ ನಡೆಯುತ್ತಿದೆ. ಜಗತ್ತಿನಲ್ಲಿಯ ಎಲ್ಲ ವಸ್ತುಗಳನ್ನು ೫ ವಿಭಾಗಗಳನ್ನಾಗಿ ವಚನಕಾರರು ವಿಭಾಗಿಸುವದುಂಟು. ಈ ಪ್ರತಿಯೊಂದು ವಿಭಾಗದ ಮೇಲೆ,



ಒಂದೊಂದು ಪ್ರಣವವು ಪರಿಣಾಮ ಮಾಡುತ್ತದೆ. ಈ ಐದಕ್ಕೆಲ್ಲ ಪ್ರಾಣಮೂರ್ತಿಯಾಗಿರುವದು ಓಂಕಾರವು. ಪಂಚಾಕ್ಷರಗಳಿಗೆ ಈ ಪ್ರಣವವು ಕೂಡಿದಲ್ಲಿ ಅದು ಪ್ರಣವ ಪಂಚಾಕ್ಷರೀ ಮಂತ್ರವು ಅಥವಾ ಷಡಕ್ಷರೀ ಮಂತ್ರವು ಎಂದು ಹೇಳಲ್ಪಡುತ್ತಿದೆ. ಇದು ಆರು ಅವಯವಗಳುಳ್ಳದ್ದು. ಅವು ಅನುಕ್ರಮವಾಗಿ ಪರಮಾತ್ಮನ ಸರ್ವಜ್ಞತ್ವ, ಸರ್ವೇಶ್ವರತ್ವ, ಸರ್ವನಿಯಂತೃತ್ವ, ಸರ್ವಾಂತರ್ಯಾಮಿತ್ವ, ಸರ್ವಾತ್ಮಕತ್ವ, ಸರ್ವಶಕ್ತಿತ್ವ ಈ ಗುಣಗಳನ್ನು ಸೂಚಿಸುತ್ತವೆ. ಇದರ ಅಕ್ಷರಗಳು ಯಾವ ಯಾವ ವಿಷಯಗಳನ್ನು ಸೂಚಿಸುತ್ತವೆಂಬುದನ್ನು ನಾವು ಹಿಂದೆಯೇ ನಂ॥ ೧೮೦ ಇದರಲ್ಲಿ ವಿವರಿಸಿದ್ದೇವೆ.

(೨೦೮) ಪಂಚಾಕ್ಷರ ಮತ್ತು ಷಡಕ್ಷರಗಳ ಪರಸ್ಪರ ಸಂಬಂಧ— ಪಂಚಾಕ್ಷರವು ಕೇವಲ ಶಕ್ತಿ ಮಂತ್ರವು. ಆದರೆ ಷಡಕ್ಷರವು ಶಿವಮಂತ್ರವೆಂದು ಹೇಳಲ್ಪಡುತ್ತದೆ. ಶಕ್ತಿ ಮಂತ್ರದಲ್ಲಿ ಓಂಕಾರ ಸಂಬಂಧಿಸಿದಲ್ಲಿ ಅದು ಶಿವ ಮಂತ್ರ ಅಥವಾ ಶಿವಶಕ್ತಿಮಂತ್ರವೆಂದು ಹೇಳಲ್ಪಡುತ್ತದೆ. ಓಂಕಾರದ ಸಂಬಂಧದಿಂದ ಶಕ್ತಿಗಳು ವ್ಯವಸ್ಥಿತವಾಗಿ ಲಿಂಗದೊಡನೆ ಹರಿಯುವವು. ಇದನ್ನೇ ವೀರಶೈವರು ಜಪಿಸುವುದು.

(೨೦೯) ಮೂರು ಶರೀರಗಳಿಗೆ ಪ್ರಣವ ಸಂಬಂಧ— ಶರೀರಗಳು ಸ್ಥೂಲ, ಸೂಕ್ಷ್ಮ, ಕಾರಣಗಳೆಂದು ಇವೆ. ಸ್ಥೂಲ ಶರೀರದಲ್ಲಿ ಬಕಾರವು, ಸೂಕ್ಷ್ಮ ಶರೀರದಲ್ಲಿ ಸಕಾರವು, ಕಾರಣ ಶರೀರದಲ್ಲಿ ಮಕಾರವು ಇರುತ್ತವೆ.

(೨೧೦) ನಾದಬಿಂದು.ಕಳೆಗಳಿಗೆ ಪ್ರಣವ ಸಂಬಂಧ:—

ನಾದದಲ್ಲಿ ಅಕಾರವು, ಬಿಂದುವಿನಲ್ಲಿ ಉಕಾರವು, ಕಳೆಯಲ್ಲಿ ಮಕಾರವು ಇರುತ್ತವೆ.

(೨೧೧) ಜೀವತ್ರಯಗಳಿಗೆ ಪ್ರಣವ ಸಂಬಂಧ:— ವಿಶ್ವ, ತೈಜಸ, ಪ್ರಾಜ್ಞ ಇವು ಜೀವತ್ರಯಗಳು. ವಿಶ್ವದಲ್ಲಿ ಅಕಾರವು, ತೈಜಸದಲ್ಲಿ ಉಕಾರವು ಪ್ರಾಜ್ಞದಲ್ಲಿ ಮಕಾರವು ಇರುತ್ತವೆ.

(೨೧೨) ಶೂನ್ಯಚಕ್ರಗಳಲ್ಲಿ ಪ್ರಣವ ಸಂಬಂಧಃ- ಬ್ರಹ್ಮರಂಧ್ರದಲ್ಲಿ ಓಂಕಾರ, ಅಕಾರ, ಬಕಾರಗಳು ಶಿಖಿಯಲ್ಲಿ ಕ್ಷಕಾರ, ಉಕಾರ, ಸಕಾರಗಳು ಮತ್ತು ಪಶ್ಚಿಮ ಚಕ್ರದಲ್ಲಿ ಹಕಾರ, ಮಕಾರ, ಪಕಾರಗಳು ಇರುತ್ತವೆ.

(೨೧೩) ಪಂಚಭೂತಗಳಿಗೆ ಪ್ರಣವ ಸಂಬಂಧ – ಪ್ರಕೃತಿ ಅಥವಾ ಆತ್ಮನಲ್ಲಿ ಓಂಕಾರವು. ಪೃಥ್ವಿಯಲ್ಲಿ ನಕಾರವು ಅಪ್ಪುವಿನಲ್ಲಿ ಮಕಾರವು ಅಗ್ನಿಯಲ್ಲಿ ಶಿಕಾರವು ವಾಯುವಿನಲ್ಲಿ ವಕಾರವು ಆಕಾಶದಲ್ಲಿ ಯಕಾರವು ಇರುತ್ತವೆ.

(೨೧೪) ಕರ್ಮೇಂದ್ರಿಯಗಳಿಗೆ ಪ್ರಣವ ಸಂಬಂಧ –

(ಅ) ಇವು ವಾಕ್ಕು ಪಾಣಿ ಪಾದ ಪಾಯುಗುಹ್ಯಗಳಿವೆ. ವಾಕ್ಕಿನಲ್ಲಿ ಯಕಾರ ಪಾಣಿಯಲ್ಲಿ ವಕಾರ ಪಾದದಲ್ಲಿ ಶಿಕಾರ ಪಾಯುವಿನಲ್ಲಿ ಮಕಾರ ಮತ್ತು ಗುಹ್ಯದಲ್ಲಿ ನಕಾರ ಇರುತ್ತವೆ.

(ಬ) ಮಸ್ತಕ, ಮುಖ, ಹೃದಯ, ಗುಹ್ಯ ಮತ್ತು ಪಾದಗಳು ಶರೀರದ ಅವಯವಗಳು. ಮಸ್ತಕದಲ್ಲಿ ಯಕಾರವು, ಮುಖದಲ್ಲಿ ವಕಾರವು, ಹೃದಯದಲ್ಲಿ ಶಿಕಾರವು, ಗುಹ್ಯದಲ್ಲಿ ಮಕಾರವು, ಪಾದದಲ್ಲಿ ನಕಾರವು ಇರುತ್ತವೆ.

(೨೧೫) ಜ್ಞಾನೇಂದ್ರಿಯಗಳಿಗೆ ಪ್ರಣವ ಸಂಬಂಧಃ –

(ಅ) ಶೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ, ಹೃದಯೇಂದ್ರಿಯ ಇವು ಜ್ಞಾನೇಂದ್ರಿಯಗಳು. ಶ್ರೋತ್ರಕ್ಕೆ ಯಕಾರ, ತ್ವಕ್ಕಿಗೆ ವಕಾರ, ನೇತ್ರಕ್ಕೆ ಶಿಕಾರ, ಜಿಹ್ವೆಗೆ ಮಕಾರ, ಘ್ರಾಣಕ್ಕೆ ನಕಾರ ಮತ್ತು ಹೃದಯೇಂದ್ರಿಯಕ್ಕೆ ಓಂಕಾರ ಸಂಬಂಧವಿರುತ್ತವೆ.

(ಬ) ಲಲಾಟ, ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ನಾಸಾ ಪುಟ ಇವು ಶರೀರದ ಅವಯವಗಳು. ಲಲಾಟದಲ್ಲಿ ಓಂಕಾರ, ಶ್ರೋತ್ರದಲ್ಲಿ ಯಕಾರ, ತ್ವಕ್ಕಿಯಲ್ಲಿ ವಕಾರ, ನೇತ್ರದಲ್ಲಿ ಶಿಕಾರ, ಜಿಹ್ವೆಯಲ್ಲಿ ಮಕಾರ, ನಾಸಾಪುಟದಲ್ಲಿ ನಕಾರ ಇವುಗಳು ಇರುತ್ತವೆ.



(೨೧೬) ವಿಷಯಗಳಿಗೆ ಪ್ರಣವ ಸಂಬಂಧ:— ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವು ಶರೀರ ವಿಷಯಗಳು. ಶಬ್ದಕ್ಕೆ ಯಕಾರ, ಸ್ಪರ್ಶನಕ್ಕೆ ವಕಾರ, ರೂಪಕ್ಕೆ ಶಿಕಾರ, ರಸಕ್ಕೆ ಮಕಾರ, ಗಂಧಕ್ಕೆ ನಕಾರ, ಸಂಬಂಧವಿರುತ್ತವೆ.

(೨೧೭) ಅಂತಃಕರಣಗಳಿಗೆ ಪ್ರಣವ ಸಂಬಂಧಃ… ಇವು ಚಿತ್ತ ಬುದ್ಧಿ, ಅಹಂಕಾರ, ಮನ, ಜ್ಞಾನಗಳಿರುತ್ತವೆ. ಚಿತ್ತಿಗೆ ನಕಾರವು, ಬುದ್ಧಿಗೆ ಮಕಾರವು, ಅಹಂಕಾರಕ್ಕೆ ಶಿಕಾರವು, ಮನಕ್ಕೆ ವಕಾರವು, ಜ್ಞಾನಕ್ಕೆ ಯಕಾರವು, ಸಂಬಂಧಪಡುತ್ತವೆ.

(೨೧೮) ವಾಯುಗಳಿಗೆ ಪ್ರಣವ ಸಂಬಂಧಃ- ಪ್ರಾಣ, ಅಪಾನ ವ್ಯಾನ, ಉದಾನ, ಸಮಾನ ಇವು ವಾಯುಗಳು. ಪ್ರಾಣಕ್ಕೆ ನಕಾರವು, ಅಪಾನಕ್ಕೆ ಮಕಾರವು, ವ್ಯಾನಕ್ಕೆ ಶಿಕಾರವು, ಉದಾನಕ್ಕೆ ವಕಾರವು, ಸಮಾನಕ್ಕೆ ಯಕಾರವು ಸಂಬಂಧಪಡುತ್ತವೆ.

(೨೧೯) ಸಪ್ತಧಾತುಗಳಿಗೆ ಪ್ರಣವ ಸಂಬಂಧಃ-

೧ನೇ ವಿಧಃ- ತ್ವಕ್ಕು, ರುಧಿರ, ಮಾಂಸ, ಮೇಧಸ್ಸು, ಅಸ್ಥಿ, ಮಜ್ಜೆ, ಇವು ಧಾತುಗಳು. ತ್ವಕ್ಕಿಗೆ ಓಂಕಾರ, ರುಧಿರಕ್ಕೆ ನಕಾರ, ಮಾಂಸಕ್ಕೆ ಮಕಾರ, ಮೇಧಸ್ಸಿಗೆ ಶಿಕಾರ. ಅಸ್ಥಿಗೆ ವಕಾರ, ಮಜ್ಜೆಗೆ ಯಕಾರ ಸಂಬಂಧಿಸುತ್ತವೆ.

(ಬ) ೨ನೇ ವಿಧಃ – ಚರ್ಮ, ಅಸ್ಥಿ, ಮಾಂಸ, ಮಜ್ಜೆ, ರಕ್ತ, ಪ್ರಾಣ ಇವು ಧಾತುಗಳು. ಚರ್ಮದಲ್ಲಿ ನಕಾರವು, ಅಸ್ಥಿಯಲ್ಲಿ ಮಕಾರವು, ಮಾಂಸದಲ್ಲಿ ಶಿಕಾರವು, ಮಜ್ಜೆಯಲ್ಲಿ ವಕಾರವು, ರಕ್ತದಲ್ಲಿ ಯಕಾರವು, ಪ್ರಾಣದಲ್ಲಿ ಓಂಕಾರವು, ಸಂಬಂಧಪಡುತ್ತವೆ.

(೨೨೦) ಶ್ಲೇಷ್ಮ, ಶುಕ್ಲ, ರಸ, ಪಿತ್ತ ಇವುಗಳಿಗೆ ಪ್ರಣವ ಸಂಬಂಧಃ— ಶ್ಲೇಷ್ಮಕ್ಕೆ ಯಕಾರ, ಶುಕ್ಲಕ್ಕೆ ಶಿಕಾರ, ರಸಕ್ಕೆ ನಕಾರ, ಪಿತ್ತಕ್ಕೆ ವಕಾರ ಸಂಬಂಧಪಡುತ್ತವೆ.

(೨೨೧) ಮನುಷ್ಯನಿಗೆ ಕ್ಷುಧೆ, ತೃಷ್ಣೆ, ನಿದ್ರೆ, ಆಲಸ್ಯ, ಸಂಗ ಇವು ಗಳಿರುತ್ತವೆ. ಕ್ಷುಧೆಯಲ್ಲಿ ನಕಾರವು, ತೃಷ್ಣೆಯಲ್ಲಿ ಮಕಾರವು, ನಿದ್ರೆಯಲ್ಲಿ ಶಿಕಾರವು, ಆಲಸ್ಯದಲ್ಲಿ ವಕಾರವು, ಸಂಗದಲ್ಲಿ ಯಕಾರವು ಸಂಬಂಧಪಡುತ್ತವೆ. ಇವುಗಳಿಂದ ಇಂಥವುಗಳ ಆಸಕ್ತಿಯನ್ನು ದೂರ ಮಾಡಬಹುದು.

(೨೨೨) ಮನುಷ್ಯನಿಗೆ ಮೋಹ, ಭಯ, ರಾಗ, ಲಜ್ಜೆ ದ್ವೇಷಗಳಿರುತ್ತವೆ. ಮೋಹದಲ್ಲಿ ಯಕಾರ, ಭಯದಲ್ಲಿ ವಕಾರ, ರಾಗದಲ್ಲಿ ಶಿಕಾರ, ಲಜ್ಜೆಯಲ್ಲಿ ಮಕಾರ, ದ್ವೇಷದಲ್ಲಿ ನಕಾರ ಸಂಬಂಧಪಡುತ್ತವೆ. ಇವುಗಳ ಮೂಲಕ ಈ ದೋಷಗಳನ್ನು ದೂರ ಮಾಡಬಹುದು.

(೨೨೩) ಪದಾರ್ಥಗಳಿಗೆ ಕಠಿಣ ಅಥವಾ ಮೃದು ಹೀಗೆ ಧರ್ಮಗಳಿರುತ್ತವೆ. ಕ್ಲಂ ಇದು ಕಠಿಣಕ್ಕೆ, ಕ್ಲಿಂ ಇದು ಮೃದುವಿಗೆ ಸಂಬಂಧವಿರುತ್ತವೆ.

(೨೨೪) ಮನುಷ್ಯನಿಗೆ ಅಸ್ಥಿ, ಮಾಂಸ, ತ್ವಕ್ಕು, ನಾಡಿ, ರೋಮಗಳಿವೆ. ಇವುಗಳಲ್ಲಿ ಅಸ್ಥಿಗೆ ನಕಾರ, ಮಾಂಸಕ್ಕೆ ಮಕಾರವು, ತ್ವಕ್ಕಿಗೆ ಶಿಕಾರವು, ನಾಡಿಗೆ ವಕಾರವು, ರೋಮಕ್ಕೆ ಯಕಾರವು ಸಂಬಂಧಪಡುತ್ತವೆ.

(೨೨೫) ಶರೀರದ ಪಾರ್ಶ್ವಗಳಿಗೆ ಪ್ರಣವ ಸಂಬಂಧಃ — ಶರೀರದ ಬಲಭಾಗದಲ್ಲಿ ಓಂಕಾರ, ಎಡಭಾಗದಲ್ಲಿ ಉಕಾರ, ಮುಂಭಾಗದಲ್ಲಿ ಅಕಾರ, ಹಿಂಭಾಗದಲ್ಲಿ ಮಕಾರ, ಊರ್ಧ್ವಭಾಗದಲ್ಲಿ ಹಕಾರಗಳಿರುತ್ತವೆ.

(೨೨೬) ಶರೀರಕ್ಕೆ ಪ್ರಣವ ಸಂಬಂಧಃ —

(ಅ) ಶರೀರಕ್ಕೆ ಮುಖ, ಎರಡು ಭುಜಗಳು, ದೇಹಮಧ್ಯ, ಎರಡು ಪಾದಗಳು ಇರುತ್ತವೆ. ಮುಖದಲ್ಲಿ ಓಂಕಾರ, ಎರಡು ಭುಜಗಳಲ್ಲಿ



ವಕಾರ ಯಕಾರಗಳು, ದೇಹಮಧ್ಯದಲ್ಲಿ ಶಿಕಾರ, ಎರಡು ಪಾದಗಳಲ್ಲಿ ನಕಾರ ಮಕಾರಗಳು ಇರುತ್ತವೆ.

(ಬ) ಶರೀರಕ್ಕೆ ಬಲಪಾದ, ಎಡಪಾದ, ಮಧ್ಯನಾಭಿ, ಬಲಹಸ್ತ, ಎಡಹಸ್ತ, ಮತ್ತು ಮಸ್ತಕಗಳಿವೆ. ಬಲಪಾದದಲ್ಲಿ ನಕಾರ, ಎಡಪಾದದಲ್ಲಿ ಮಕಾರ, ಮಧ್ಯನಾಭಿಯಲ್ಲಿ ಶಿಕಾರ, ಬಲಹಸ್ತದಲ್ಲಿ ವಕಾರ, ಎಡಹಸ್ತದಲ್ಲಿ ಯಕಾರ ಮತ್ತು ಮಸ್ತಕದಲ್ಲಿ ಓಂಕಾರಗಳಿರುತ್ತವೆ.

(೨೨೭) ಶರೀರದ ಉಪಾಂಗಗಳಲ್ಲಿ ಪ್ರಣವ ಸಂಬಂಧಃ —

(ಅ) ಬಲಹಸ್ತದ ಮಧ್ಯದಲ್ಲಿ ಓಂಕಾರ, ಹೆಬ್ಬೆರಳಿನಲ್ಲಿ ಯಕಾರ, ಉಳಿದ ನಾಲ್ಕು ಬೆರಳುಗಳಲ್ಲಿ ನ, ಮ, ಶಿ, ವ ಈ ಪ್ರಣವಗಳು ಸಂಬಂಧಿಸುತ್ತವೆ.

ಹಸ್ತದ ಮೇಲುಭಾಗಕ್ಕೆ ಅಕಾರ, ಮುಂಗಯ್ಯಿಗೆ ಬಕಾರ, ಮೊಳಕೆಯ್ಯಿಗೆ ಉಕಾರ, ರಟ್ಟೆಯಲ್ಲಿ ಸಕಾರ, ಭುಜದಲ್ಲಿ ಮಕಾರ, ಹೆಗಲಲ್ಲಿ ವಕಾರ ಸಂಬಂಧಿಸುತ್ತವೆ.

(ಬ) ಉಭಯ ತಳಪಾದದಲ್ಲಿ ಓಂಕಾರ, ಉಭಯ ಪಾದಾಂಗುಷ್ಠದಲ್ಲಿ ಯಕಾರ, ಉಭಯ ನಾಲ್ಕು ಬೆರಳುಗಳಲ್ಲಿ ನ, ಮ, ಶಿ, ವ ಈ ನಾಲ್ಕು ಪ್ರಣವಗಳು ಸಂಬಂಧಿಸುತ್ತವೆ.

ಉಭಯ ಪಾದದ ಮೇಲು ಭಾಗದಲ್ಲಿ ಅಕಾರ, ಉಭಯ ಪಾದದ ಹರಡಿನಲ್ಲಿ ಉಕಾರ, ಉಭಯಪಾದ ದಂತದ ಹರಡಿನಲ್ಲಿ ಬಕಾರ, ಉಭಯ ಪಾದದ ಹಿಮ್ಮಡದಲ್ಲಿ ಮಕಾರ, ಉಭಯ ಕಣಕಾಲಲ್ಲಿ ನಕಾರ, ಉಭಯಪಾದ ಮೊಳಕಾಲಲ್ಲಿ ಹಕಾರ, ಕಿರುದೊಡೆಗಳಲ್ಲಿ ಅಕಾರ, ಹಿಂದೊಡೆಗಳಲ್ಲಿ ಉಕಾರ, ಉಭಯನಾಂಗದಲ್ಲಿ ಮಕಾರ ಸಂಬಂಧಿಸುತ್ತವೆ.

(೨೨೮) ಉಭಯ ಬರಕಿಯಲ್ಲಿ ನಮಃಶಿವಾಯ. ಉಭಯ ಮೊಲೆಯಲ್ಲಿ ಓಂಕಾರ; ಕಕ್ಷೆಯಲ್ಲಿ ಅಕಾರ, ಹೃದಯದಲ್ಲಿ ಉಕಾರ, ಕಂಠದಲ್ಲಿ

ಮಕಾರ; ಉಭಯ ಬಗಲಲ್ಲಿ ಬಕಾರ, ಹೆಡಕಿನಲ್ಲಿ ಸಕಾರ, ಹೆಡಕಿನ ಎಡಬಲದಲ್ಲಿ ವಕಾರ; ಉಭಯಕರ್ಣದಲ್ಲಿ ಓಂಕಾರ ಆಲಿಯಲ್ಲಿ ಯಕಾರ, ಕಿರಿಯಾಲಿಯಲ್ಲಿ ವಕಾರ; ಕರ್ಣ ಮತ್ತು ಊರ್ಧ್ವ ಭಾಗ ನಯನಗಳಲ್ಲಿ ಅಕಾರ ಬಕಾರಗಳು, ಎಡಭಾಗದ ನಯನಗಳಲ್ಲಿ ಉಕಾರ ಸಕಾರಗಳು, ಉಭಯ ನಯನ ಮಧ್ಯದಲ್ಲಿ ಮಕಾರ ನಕಾರಗಳು, ಉಭಯ ಗಲ್ಲಗಳಲ್ಲಿ ಓಂಕಾರ ಇವುಗಳು ಸಂಬಂಧಪಡುತ್ತವೆ.

(೨೨೯) ಚಕ್ರಗಳಿಗೆ ಪ್ರಣವ ಸಂಬಂಧಃ— ಆಧಾರದಲ್ಲಿ ನಕಾರ, ಸ್ವಾಧಿಷ್ಠಾನದಲ್ಲಿ ಮಕಾರ, ಮಣಿಪೂರಕದಲ್ಲಿ ಶಿಕಾರ. ಅನಾಹತದಲ್ಲಿ ವಕಾರ, ವಿಶುದ್ಧಿಯಲ್ಲಿ ಯಕಾರ, ಆಜ್ಞೆಯಲ್ಲಿ ಓಂಕಾರಗಳು ಇರುತ್ತವೆ.

(೨೩೦) ರೇಚಕದಲ್ಲಿ ಅಕಾರ, ಪೂರಕದಲ್ಲಿ ಉಕಾರ, ಕುಂಭಕದಲ್ಲಿ ಮಕಾರ ಸಂಬಂಧಿಸುತ್ತವೆ.

ಟೀಪುಃ— ಶಿವಶರಣರು ಶರೀರ, ಪದಾರ್ಥ, ಗುಣ ಮತ್ತು ಅವಯವ ಇವುಗಳು ಯಾವ ಪ್ರಣವಕ್ಕೆ ಸಂಬಂಧಿಸಿವೆ ಎಂಬುದನ್ನು ಹೇಳುವಲ್ಲಿ ಅವರು ಕೆಲವೊಂದು ಕಾರಣವನ್ನು ಮುಂದಿಟ್ಟುಕೊಂಡು ಸಂಬಂಧವನ್ನು ಹೇಳುವದುಂಟು. ಪಂಚಭೂತಗಳಿಂದ ಜಗತ್ತಿನಲ್ಲಿಯ ಪ್ರತಿಯೊಂದು ಪದಾರ್ಥವು ಉತ್ಪನ್ನವಾಗುತ್ತದೆಂದು ಹಿಂದೂ ಜನರ ಮುಖ್ಯ ತತ್ವವಿದೆ. ಇದಕ್ಕನುಸರಿಸಿಯೇ ಶಿವಶರಣರಲ್ಲಿ ಪ್ರಣವಪಂಚಾಕ್ಷರಿಯ ರಚನೆ ಇದೆ. ಅವರ ಪ್ರತಿಯೊಂದು ಪ್ರಣವವು ಒಂದೊಂದು ಭೂತಕ್ಕೆ ಸಂಬಂಧಿಸಿದೆ. (ವ॥ ೨೧೩ ನೋಡಿರಿ.) ಆದ್ದರಿಂದ ಪಂಚಭೂತಗಳ ಗುಣಗಳನ್ನು ಮೊದಲು ಅರಿತುಕೊಳ್ಳಬೇಕು. ಉದಾಃ— ಪೃಥ್ವಿಯ ತತ್ವವು ಎಲ್ಲಕ್ಕೂ ಸ್ಥೂಲವಾದದ್ದು. ಭೂತಗಳು ಮುಂದೆ ಸೂಕ್ಷ್ಮವಾಗುತ್ತಾಗುತ್ತ ಆಕಾಶತತ್ವದ ವರೆಗೂ ಹೋಗುತ್ತವೆ. ಹೀಗೆ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಇವುಗಳ ಗುಣಗಳಂತೆ ಪದಾರ್ಥಗಳಲ್ಲಿಯೂ ವಿಭಾಗಗಳು ಉಂಟಾಗಿವೆ. ಹೀಗೆ ಆಯಾ ಇಂದ್ರಿಯಗಳಲ್ಲಿ, ವಿಷಯಗಳಲ್ಲಿ,



ಪದಾರ್ಥಗಳ ಗುಣಗಳಲ್ಲಿ. ರಚನೆಯಲ್ಲಿ, ಕ್ರಿಯೆಗಳಲ್ಲಿ ಪಂಚಮಹಾಭೂತಗಳ ಪ್ರಕಾರ ಐದೈದು ವಿಭಾಗಗಳು ಕಲ್ಪಿಸಲ್ಪಟ್ಟಿವೆ. ಈ ವಿಭಾಗಗಳು ಮೊದಲು ಸ್ಥೂಲವಾಗಿದ್ದು ಬರಬರುತ್ತ ಅವು ಸೂಕ್ಷ್ಮವಾಗುತ್ತ ಹೋಗುತ್ತವೆ. ಹೀಗಾಗಲಿಕ್ಕೆ ಅವುಗಳಲ್ಲಿರುವ ಪಂಚಭೂತ ತತ್ವಗಳೇ ಕಾರಣಗಳಾಗಿವೆ. ಮಂತ್ರಗಳನ್ನು ಸಂಬಂಧಿಸುವಲ್ಲಿ ವಾಚಕರು ಈ ತೆರದ ಭೇದಗಳನ್ನು ಮೊದಲು ಅರಿತುಕೊಳ್ಳಬೇಕು. ಅರಿತುಕೊಂಡಲ್ಲಿ ಕೆಲವೊಂದು ಪದಾರ್ಥಕ್ಕೆ ಒಂದು ವಿಶಿಷ್ಟ ಪ್ರಣವವನ್ನು ಏಕೆ ಶಿವಶರಣರು ಇಟ್ಟಿರುವರೆಂಬುದು ತಿಳಿಯುತ್ತದೆ. ಬೇರೆ ಬೇರೆ ಪ್ರಣವಗಳಿಂದಲೇ ಆಯಾ ಗುಣಗಳು ಆಯಾ ಪದಾರ್ಥಗಳಲ್ಲಿ ಉಂಟಾಗಿರುತ್ತವೆಂದು ಅವರ ತತ್ವವಿದೆ. ಆದ್ದರಿಂದ ಆಯಾ ಪದಾರ್ಥಗಳನ್ನು ಆ ಪ್ರಣವಕ್ಕೆಯೇ ಸಂಬಂಧಿಸತಕ್ಕದ್ದು. ಹೀಗೆಯೇ ಶರೀರವು, ಶರೀರದ ಮುಖ್ಯಭಾಗಗಳು, ಅದರ ಅವಯವಗಳು ಸಹ ಬೇರೆ ಬೇರೆ ಪ್ರಣವಗಳಿಗೆ ಸಂಬಂಧಪಡುತ್ತವೆ. ಒಮ್ಮೊಮ್ಮೆ ಪದಾರ್ಥಗಳ ಕೆಲವೊಂದು ವರ್ಗವನ್ನು ಕಲ್ಪಿಸುವಲ್ಲಿ ಒಂದು ದೃಷ್ಟಿಯನ್ನಿಟ್ಟುಕೊಂಡು ಅದನ್ನು ರಚಿಸಿರುತ್ತಾರೆ. ಆದರೆ ಬೇರೊಂದು ವರ್ಗವನ್ನು ಕಲ್ಪಿಸುವಲ್ಲಿ ಬೇರೊಂದು ದೃಷ್ಟಿಯು ಅಥವಾ ಉದ್ದೇಶವು ಅವರಿಗೆ ಇರುವದರಿಂದ ಆಗ ಮೊದಲಿನ ವರ್ಗದಲ್ಲಿ ಕೆಲವೊಂದು ಸ್ಥಾನಹೊಂದಿದ ಪದಾರ್ಥವು ಬೇರೆ ವರ್ಗದಲ್ಲಿ ಬೇರೆ ಸ್ಥಾನವನ್ನು ಹೊಂದಬಹುದು. ಆದ್ದರಿಂದ ಪ್ರಣವಗಳು ಆಯಾ ವರ್ಗಗಳ ಪ್ರಕಾರ ಬೇರೆ ಬೇರೆಯಾಗುತ್ತವೆಂಬುದನ್ನು ವಾಚಕರು ಲಕ್ಷಿಸಬೇಕು. (ನಂ॥ ೨೯೯, ೨೨೪ ನೋಡಿರಿ.) ಮನುಷ್ಯನಿಗೆ ವಿಕಾರಗಳೂ ಉಂಟು. ಅವುಗಳನ್ನು ದೂರಮಾಡುವಲ್ಲಿ ಅವುಗಳಿಗೂ ಕೂಡ ಪ್ರಣವಗಳನ್ನು ಸಂಬಂಧಿಸಬೇಕು. ಇವು ಸಹ ಮಂತ್ರಸಂಬಂಧದಲ್ಲಿ ಬರುತ್ತವೆ. ಮನುಷ್ಯನು ಕ್ರಿಯಾ ರಹಿತನಾಗಬೇಕಾಗುತ್ತದೆ. ಅಂದರೆ ಅವನು ಯಾವ ಗುಣಗಳಿಗೂ ಕೂಡ ಅಲಿಪ್ತನಾಗಿರಬೇಕಾಗುತ್ತದೆ. ಇದರಿಂದ ಕರ್ಮವು ಅವನಿಗೆ ಅಂಟಿಕೊಳ್ಳುವದಿಲ್ಲ. ಇದು ಈ ಪ್ರಣವಗಳನ್ನು ಸಂಬಂಧಿಸುವದರಿಂದ ಸಾಧ್ಯವಾಗುತ್ತದೆ. ಈ ತತ್ವವನ್ನು ಶಿವಶರಣರು

ಈ ತ್ರಿವಿಧಗಳಲ್ಲಿ ಮುಖ್ಯವು ಯಾವವೆಂದರೆ:— ತತ್ ತ್ವಂ ಅಸಿ; ಈಡಾ ಪಿಂಗಳ ಸುಷುಮ್ನ; ಸತ್ಕ್ರಿಯೆ ಸಮ್ಯಜ್ಞಾನ ತ್ರಿಕೂಟ; ಚಿದಂಗ ಚಿದ್ಘನಲಿಂಗ ತ್ರಿಕೂಟ; ಚಿನ್ನಾದ ಚಿದ್ಬಿಂದು ಚಿತ್‌ಕಳೆ; ನಾದ ಬಿಂದು ಕಳೆ; ಕಾಯಾರ್ಪಿತ ಕರಣಾರ್ಪಿತ ಭಾವಾರ್ಪಿತ; ಕರುಣಜಲ ವಿನಯಜಲ ಸಮತಾ ಜಲ; ಲಿಂಗದರೂಪ ಪ್ರಣವಲಿಂಗದ ರುಚಿ ಉಭಯದ ತೃಪ್ತಿ; ತನು ವಿನ ಕುರುಹು ಉನ್ಮನಿಕುರುಹು ನಿಜದಿರವು; ಗುರು ಲಿಂಗ ಜಂಗಮವು; ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರು; ಇಷ್ಟಲಿಂಗ ಪ್ರಾಣಲಿಂಗ ಭಾವ ಲಿಂಗ; ಸ್ವಯಜಂಗಮ ಚರಜಂಗಮ ಪರಜಂಗಮ; ಗುರುಪಾದೋದಕ ಲಿಂಗಪಾದೋದಕ ಜಂಗಮಪಾದೋದಕ; ಶುದ್ಧಪ್ರಸಾದ ಸಿದ್ಧಪ್ರಸಾದ ಪ್ರಸಿದ್ಧ ಪ್ರಸಾದ; ಕ್ರಿಯಾಭಸಿತ ಜ್ಞಾನಭಸಿತ ಚಿದ್ಘನಭಸಿತ; ನಮ ಶಿವ ಯಓಂ; ಅಷ್ಟಾವರಣ ಪಂಚಾಚಾರ ಉಭಯದ ಕೂಟ; ಲಿಂಗದ ಪೀಠ ಊರ್ಧ್ವ ಪೀಠ ಗೋಮುಖ; ಲಿಂಗದ ವೃತ್ತ ಕಟಿ ವರ್ತುಳ; ಶಕ್ತಿಪೀಠ ಶಿವಪೀಠ ಉಭಯದಕೂಟ ಈ ಪ್ರಕಾರ ಗುಂಪುಗಳಿದ್ದು ಈ ಗುಂಪುಗಳಲ್ಲಿ ಷಟ್‌ಸ್ಥಲ ಶಾಸ್ತ್ರಕ್ಕೆ ಸಂಬಂಧಿಸಿದ ವಿಶಿಷ್ಟಾರ್ಥವುಳ್ಳ ಮೂರು ಮೂರು ಶಬ್ದಗಳಿವೆಯಷ್ಟೇ. ಈ ಮೂರು ಅನುಕ್ರಮವಾಗಿ ಅ, ಉ, ಮ ಈ ಬೀಜಾಕ್ಷರಗಳಿಗೆ ಸಂಬಂಧ ಪಡುತ್ತವೆ.

(೩೩೪) ಇಷ್ಟಲಿಂಗಕ್ಕೆ ತ್ರಿವಿಧಗಳ ಸಂಬಂಧ:— ಗುರು, ಲಿಂಗ ಜಂಗಮಗಳು; ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಗಳು; ಸ್ವಯ ಚರ ಪರ ಗಳು; ಇವು ತ್ರಿವಿಧಗಳು ಇದ್ದು ಇವುಗಳಲ್ಲಿ ಮೂರು ಮೂರು ಭಾಗಗಳಿವೆಯಷ್ಟೇ. ಈ ಭಾಗಗಳು ಅನುಕ್ರಮವಾಗಿ ಲಿಂಗದ ಪೀಠ, ಲಿಂಗದ ಮೇಲೂರ್ಧ್ವ, ಮತ್ತು ಲಿಂಗದ ಗೋಮುಖ ಇವುಗಳಿಗೆ ಸಂಬಂಧಿಸುತ್ತವೆ.

(೩೩೫) ಇಷ್ಟಲಿಂಗಕ್ಕೆ ಪಂಚಾಕ್ಷರ ಸಂಬಂಧ:—ಗೋಳಕ, ಪೀಠ, ಕಂಠ, ಗೋಮುಖ, ವೃತ್ತ ಎಂದು ಇಷ್ಟಲಿಂಗದಲ್ಲಿ ಭಾಗಗಳಿವೆ. ಇವು ಅನುಕ್ರಮವಾಗಿ ನ, ಮ, ಶಿ, ವಾ, ಯ ಈ ಪ್ರಣವಗಳಿಗೆ ಸಂಬಂಧ ಪಡುತ್ತವೆ.



(೩೩೬) ಪಂಚಾಕ್ಷರಿಯ ಮಿಶ್ರ ಪಂಚೀಕರಣ:— ಕರ್ಮೇಂದ್ರಿಯ ಗಳು, ಪಂಚವಿಷಯಗಳು, ಜ್ಞಾನೇಂದ್ರಿಯಗಳು, ವಾಯುಗಳು, ಕರಣೇಂ ದ್ರಿಯಗಳು ಇವು ಮನುಷ್ಯನ ಕ್ರಿಯೆಗಳಿಗೆ ಅವಶ್ಯವಾಗಿ ಬೇಕಾಗುವ ಸಾಧ ನಗಳಾಗಿವೆ. ಕರ್ಮೇಂದ್ರಿಯಗಳು ಹೆಚ್ಚಿಗೆ ಸ್ಥೂಲವಾಗಿದ್ದು ಮುಂದಿನ ವುಗಳು ಹೆಚ್ಚು ಹೆಚ್ಚಿಗೆ ಸೂಕ್ಷ್ಮವಾಗುತ್ತ ಹೋಗುತ್ತವೆ. ಈ ಐದು ಗುಂಪುಗಳು ನ, ಮ, ಶಿ, ವಾ, ಯ ಈ ಪಂಚಾಕ್ಷರಗಳಿಗೆ ಅನುಕ್ರಮವಾಗಿ ಸಂಬಂಧಪಡುತ್ತವೆ. ಇದು ಹೇಗೆಂದರೆ, ವಾಕ್ಕು, ಪಾಣಿ, ಪಾದ, ಗುಹ್ಯ, ವಾಯು ಇವು ಕರ್ಮೇಂದ್ರಿಯಗಳು, ಶಬ್ದ, ಸ್ಪರ್ಶ, ರೂಪ, ರಸ, ಗಂಧ ಗಳು ಇವು ಪಂಚ ವಿಷಯಗಳು, ಶ್ರೋತ್ರ, ಚರ್ಮ, ನೇತ್ರ, ಜಿಹ್ವೆ, ಘ್ರಾಣ ಇವು ಜ್ಞಾನೇಂದ್ರಿಯಗಳು, ಸಮಾನ, ಉದಾನ, ವ್ಯಾನ, ಅಪಾನ, ಪ್ರಾಣ ಇವುಗಳು ವಾಯುಗಳು, ಅರಿವು, ಮನ, ಹಮ್ಮು, ಬುದ್ಧಿ, ಚಿತ್ತ, ಇವು ಕರಣೇಂದ್ರಿಯಗಳು. ಇವು ಅನುಕ್ರಮವಾಗಿ ನ, ಮ, ಶಿ, ವಾ, ಯ ಈ ಬೇರೆ ಬೇರೆ ಪ್ರಣವಗಳಿಗೆ ಸಾಮೂಹಿಕವಾಗಿ ಸಂಬಂಧಪಡುತ್ತವೆ. ಆದರೆ ಒಂದೊಂದೇ ಗುಂಪು ತೆಗೆದುಕೊಂಡು ವಿಚಾರಿಸಿದಲ್ಲಿ ಅವುಗಳ ಸಂಬಂಧವು ಹಿಂದೆ ೩೧೪, ೩೧೫, ೩೧೬, ೩೧೭, ೩೧೮ ಈ ಗುಂಪುಗಳಲ್ಲಿ ಹೇಳಿದ ಮೇರೆಗೆ ಆಗುತ್ತದೆ. ಈ ಎರಡನೇ ವಿಧ ಸಂಬಂಧಕ್ಕೆ ಪಂಚ ವಿಂಶತಿ ತತ್ತ್ವ ಸಂಬಂಧವೆಂಬ ಹೆಸರು. ಈಗಿನದಕ್ಕೆ ಮಿಶ್ರ ಪಂಚೀಕರಣ ಸಂಬಂಧವೆಂದು ಹೇಳುವದುಂಟು.

(೩೩೭) ಭಕ್ತನ ಅಂಗವು ಲಿಂಗ ಮಯವು:— ಮೇಲೆ ನಂ॥ ೩೧೪, ೩೧೫, ೩೧೬, ೩೧೭, ೩೧೮ ಇವುಗಳಲ್ಲಿ ನಿರ್ದೇಶವಾದ ಪ್ರಕಾರ ಸಂಬಂಧ ಪಟ್ಟ, ನ, ಮ, ಶಿ, ವಾ, ಯ ಈ ಪ್ರಣವಗಳಿಗೆ ಅನುಕ್ರಮವಾಗಿ ಆಚಾರ ಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗಗಳು ಸಂ ಬಂಧಿಸುತ್ತವೆ. ಯಾಕೆಂದರೆ ಮಂತ್ರದಲ್ಲಿಯೇ ಲಿಂಗವಿದೆ. ಅದ್ದರಿಂದ ಭಕ್ತನ ಚಿತ್ತ, ಬುದ್ಧಿ, ಹಮ್ಮು, ಮನ, ಅರಿವು ಇವುಗಳಲ್ಲಿ ಅನುಕ್ರಮವಾಗಿ ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗಗಳು ಸಂಬಂಧಿಸುತ್ತವೆ. ಹಾಗೆಯೇ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ

ವಾಯುಗಳಲ್ಲಿ, ಘ್ರಾಣ, ಜಿಹ್ವೆ, ನೇತ್ರ, ಚರ್ಮ, ಶ್ರೋತ್ರ ಈ ಜ್ಞಾನೇಂದ್ರಿ ಯಗಳಲ್ಲಿ, ಗಂಧ, ರಸ, ರೂಪ, ಸ್ಪರ್ಶ, ಶಬ್ದಗಳೆಂಬ ವಿಷಯಗಳಲ್ಲಿ, ವಾಯು, ಗುಹ್ಯ, ಪಾದ, ಪಾಣಿ, ವಾಕ್ಕು ಎಂಬ ಕರ್ಮೇಂದ್ರಿಯಗಳಲ್ಲಿ ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗಗಳು ಸಂಬಂಧಿಸುತ್ತವೆ. ಹೀಗೆ ಸಂಬಂಧಿಸುವದರಿಂದ ಭಕ್ತನ ಅಂಗವು ಲಿಂಗಮಯವಾಗುತ್ತದೆ. ಇದು ಭಕ್ತನಲ್ಲಿ ಮಂತ್ರ ಸಂಬಂಧವಾದ ಪರಿಣಾಮವು.

(೨೩೮) ಮಿಶ್ರ ಅಂಗಲಿಂಗ ಸಂಗ:— ಹಿಂದೆ ನಂ॥ ೨೩.೩ ರಲ್ಲಿ ನಿರ್ದೇಶಿಸಿದ ಪ್ರಕಾರ ಕರ್ಮೇಂದ್ರಿಯಗಳು, ಪಂಚವಿಷಯಗಳು, ಜ್ಞಾನೇಂ ದ್ರಿಯಗಳು, ವಾಯುಗಳು, ಕರಣೇಂದ್ರಿಯಗಳು ಇವುಗಳಿಗೆ ಸಾಮೂ ಹಿಕ ರೀತಿಯಿಂದ ಅನುಕ್ರಮವಾಗಿ ನ, ಮ, ಶಿ, ವಾ, ಯ ಈ ಪಂಚ ಪ್ರಣಮಗಳು ಸಂಬಂಧಿಸುವವಷ್ಟೇ. ಹಾಗೆಯೇ ಅವು ಸಾಮೂಹಿಕ ರೀತಿಯಿಂದ ಅನುಕ್ರಮವಾಗಿ ಲಿಂಗಕ್ಕೆ ಸಂಬಂಧಿಸುತ್ತವೆ. ಆಗ ಆ ಲಿಂಗವು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾ ದಲಿಂಗಗಳೆಂದು ಹೇಳಲ್ಪಡುತ್ತವೆ. ಹೀಗೆ ಅವು ಮಿಶ್ರಲಿಂಗಕ್ಕೆ ಸಂಬಂಧಿ ಸಿದಲ್ಲಿ ಮಿಶ್ರ ಅಂಗಲಿಂಗಸಂಗವೆಂದು ಹೇಳಲ್ಪಡುತ್ತದೆ.

(೨೩೯) ಭಕ್ತನಲ್ಲಿ ಗುರುಲಿಂಗ ಜಂಗಮಗಳು:— ಭಕ್ತನ ತನುವೇ ಗುರು, ಅವನ ಮನವೇ ಲಿಂಗ, ಅವನ ಭಾವವೇ ಜಂಗಮವು. ಭಕ್ತನ ಕರವು ಇಷ್ಟಲಿಂಗವು, ಮನವು ಪ್ರಾಣಲಿಂಗವು, ಭಾವವು ಭಾವಲಿಂಗವು.

(೨೪೦) ಭಕ್ತನಿಗೆ ತತ್ವಮಸಿ ಪದದ ಸಂಬಂಧಃ— ಭಕ್ತನ ಕಾಯವು ತತ್ ಪದವು, ಅವನ ಕರ ಪೀಠದ ಇಷ್ಟವು ತ್ವಂ ಪದವು, ಈ ಎರಡರ ಸಂಗವು ಅಸಿ ಪದವು.

ಭಕ್ತನ ಕ್ರಿಯೆಯು ತತ್ ಪದವು, ಅವನ ಅಂತರಂಗದ ಜ್ಞಾನವು ತ್ವಂ ಪದವು. ಈ ಎರಡರ ಸಂಗವು ಅಸಿ ಪದವು.



ಭಕ್ತನ ಲಿಂಗವು ತತ್ ಪದವು. ಅವನ ಪ್ರಾಣವು ತ್ವಂ ಪದವು. ಈ ಎರಡರ ಸಂಗವು ಅಸಿ ಪದವು.

ಭಕ್ತನ ಕರುಹು ತತ್ ಪದವು. ಅವನ ಅರುಹು ತ್ವಂ ಪದವು. ಎರಡರ ಸಂಗವು ಅಸಿ ಪದವು.

(೨೪೧) ಶಬ್ದ ಚತುಷ್ಟಯ ಸಂಬಂಧಃ— ಪರೆ, ಪಶ್ಯಂತಿ, ಮಧ್ಯಮೆ, ವೈಖರಿ ಇವು ಶಬ್ದ ಚತುಷ್ಟಯಗಳು. ಚಿತ್ತಕ್ಕೆ ನಿಲುಕಲು ಅದು ಪರೆ. ಅದು ನೆನಹಿಗೆ ಬರಲು ಪಶ್ಯಂತಿ, ಜಿಹ್ವೆಗೆ ಬರಲು ಅದು ಮಧ್ಯಮೆ, ವಚನಕ್ಕೆ ಬರಲು ಅದು ವೈಖರಿಯು. ನೆನಹಿಗೆ ಬರಲು ಅದು ಪರೆ, ಮನಸಿನ ನೆನ ಹಿಗೆ ಬರಲು ಅದು ಪಶ್ಯಂತಿ, ಕಣ್ಣಿನ ಕೊನೆಗೆ ಬರಲು ಅದು ಮಧ್ಯಮೆ, ತನುವಿಗೆ ಸೋಂಕಲು ಅದು ವೈಖರೀ.

ಲಿಂಗವ ನೆನೆಯಲು ಅದು ಪರೆ. ಲಿಂಗವನ್ನು ಕಣ್ಣಾರೆ ನೋಡಲು ಅದು ಪಶ್ಯಂತಿ. ಲಿಂಗವನ್ನು ನಂತಿಸಲು ಅದು ಮಧ್ಯಮೆ. ಲಿಂಗವನ್ನು ಪೂಜಿಸಲು ಅದು ವೈಖರಿಯು.

(೨೪೨) ಲಿಂಗಾಂಗ ಕೂಟ:— ವಾಮ ಕರಪೀಠದಲ್ಲಿಯ ಲಿಂಗವು ಮತ್ತು ನೇತ್ರದ ನೋಟ ಇವೆರಡು ಕೂಡಿದಲ್ಲಿ ಅದು ಲಿಂಗಾಂಗ ಕೂಟ.

ಹೃದಯ ಪೀಠದ ಚಿಲ್ಲಿಂಗವು ಮತ್ತು ಮನಸ್ಸಿನ ನೆನಹು ಇವೆರಡು ಕೂಡಿದಲ್ಲಿ ಅದು ಲಿಂಗಾಂಗ ಕೂಟ.

ಕರಪೀಠದ ಇಷ್ಟಲಿಂಗ ಮತ್ತು ಸಿರದಲ್ಲಿರುವ ಪರತತ್ವ ಮೂರ್ತಿ ಎನಿಸಿಕೊಳ್ಳುವ ಜಂಗಮ ಇವೆರಡು ಕೂಡಿದಲ್ಲಿ ಅದು ಲಿಂಗಾಂಗ ಕೂಟ.

(೨೪೩) ಮಂತ್ರ ಶಕ್ತಿಯನ್ನು ಬಲಪಡಿಸುವ ಅಕ್ಷರಗಳುಃ— ಮಂತ್ರವನ್ನು ಬಲಪಡಿಸುವದಕ್ಕೋಸ್ಕರ ಅದರೊಡನೆ ಕೆಲವು ಅಕ್ಷರ ಗಳನ್ನು ಉಚ್ಚರಿಸುವದುಂಟು. ಅವುಗಳ ಉಚ್ಚರಣೆಯಿಂದ ಆ ಮಂತ್ರ ಪಠಿಸುವವನ ಲಕ್ಷವು ಮಂತ್ರಕ್ಕೆ ಹೆಚ್ಚು ವೇಧಿಸುತ್ತದೆ. ಇದರಿಂದ ಮಂತ್ರದ ಬಲವು ಹೆಚ್ಚುತ್ತದೆಂದು ತಿಳಿಯಲ್ಪಟ್ಟಿದೆ. ಇಂಥ ಅಕ್ಷರಗಳು

ಮಂತ್ರದ ಆರಂಭಕ್ಕಾಗಲಿ ಇಲ್ಲವೆ ಅಂತ್ಯಕ್ಕಾಗಲಿ ಜೋಡಿಸುವದುಂಟು. ವೀರಶೈವ ಧರ್ಮದಲ್ಲಿ ಹ್ರಾಂ, ಹ್ರೀಂ, ಹ್ರೂಂ, ಹ್ರೈಂ, ಹ್ರೌಂ, ಹ್ರಃ ಇವು ಮಂತ್ರಗಳೊಡನೆ ಜೋಡಿಸಲ್ಪಡುತ್ತವೆ. ಇವಲ್ಲದೆ ಬೇರೆ ಸಾಮಾನ್ಯವಾಗಿ ಕೆಲವು ಅಕ್ಷರಗಳಿವೆ. ಅವು ಕ್ಷ, ಕ್ಷಿ, ಕ್ಷುಂ, ಈ, ಊಂ, ಶೀಂ, ಹುಂ, ಭಂ, ಫಟ್, ಹುಂ ಫಟ್, ವೌಷಟ್, ಸ್ವಾಹಾ, ಧಾವ್ನೆ ನಮಃ, ಚಟ, ಚಟ ಚಟ, ಪ್ರಚಟ, ಚಿಚ್ಛಿಖ, ಸ್ಫುರ, ಸ್ಫುರಸ್ಫುರ, ಪ್ರಸ್ಫುರ, ಕ್ಲಂ, ಕ್ಲಿಂ ಈ ಬಗೆಯ ಅಕ್ಷರಗಳಿರುತ್ತವೆ. ಇವು ಸಿದ್ಧಿಗಳನ್ನು ಸಾಧಿಸುವ ಸಿದ್ಧರು, ಶಾಕ್ತರು ಇಂಥ ಪಂಗಡದವರು ಉಪಯೋಗಿಸುತ್ತಿದ್ದಂತೆ ತೋರುತ್ತದೆ. ಇವುಗಳಲ್ಲಿ ಕೆಲವು ಮಾತ್ರ ವೀರಶೈವರ ಬಳಕೆಯಲ್ಲಿ ಬಂದಿರುವವು. ಆದರೆ ಇವುಗಳಲ್ಲಿ ಹ್ರಾಂ ಕಾರಾದಿ ಅಕ್ಷಗರಳು ಮಾತ್ರ ಅವರಲ್ಲಿ ಹೆಚ್ಚು ಬಳಕೆಯಲ್ಲಿವೆ.

(೨೪೪) ಶಿವಾಂಗ ಮಂತ್ರಃ—ಓಂ, ಹ್ರಾಂ ಹ್ರೀಂ ಹ್ರೂಂ ಹ್ರೈಂ ಹ್ರೌಂ ಹ್ರಃ ಇದು ಶಿವಾಂಗ ಮಂತ್ರವೆಂದು ಹೇಳಲ್ಪಡುತ್ತಿದೆ. ಮಂತ್ರಾಕ್ಷರಗಳೆಂತಲೂ ಇವು ಹೇಳಲ್ಪಡುತ್ತವೆ. ಇವು ಶಿವಾದಿ ಷಟ್ ತತ್ವಗಳೆಂದು ಭಾವಿಸಲ್ಪಟ್ಟಿವೆ. ಈ ತತ್ವಗಳು ಯಾವವೆಂದರೆ— ಶಿವ, ಸದಾಶಿವ, ಈಶ, ಬ್ರಹ್ಮೇಶ, ಈಶ್ವರ, ಈಶಾನ್ಯ ಇವುಗಳೇ ಇಂತ್ತವೆ. ಇವು ಷಟ್ ಸಾದಾಖ್ಯ ಲಿಂಗಗಳು ಎಂದು ಕರೆಯಲ್ಪಡುತ್ತವೆ. ಅಂದರೆ ಇವು ಪರಶಿವನಲ್ಲಿ ಉದ್ಭವಿಸಿರುವ ಸಾದಾಖ್ಯಗಳ ದ್ಯೋತಕವಾಗಿವೆ. ಈ ಸಾದಾಖ್ಯಗಳಿಗೂ ಪಂಚಾಕ್ಷರೀ ಮಂತ್ರಕ್ಕೂ ನಿಕಟಸಂಬಂಧವಿದೆ. ಈ ಸಂಬಂಧದ ಮೂಲಕ ಈ ಅಕ್ಷರಗಳನ್ನು ಪಂಚಾಕ್ಷರೀ ಮಂತ್ರಕ್ಕೆ ಜೋಡಿಸಿ ಅನ್ನುವದರಿಂದ ಪಂಚಾಕ್ಷರೀ ಮಂತ್ರದ ಬಲವು ಹೆಚ್ಚುತ್ತದೆಂದು ಭಾವಿಸಲ್ಪಡುತ್ತದೆ.

(೨೪೫) ಷಟ್ ಪ್ರಸಾದಮಂತ್ರಃ – ಹ್ರಾಂ, ಹ್ರೀಂ, ಹ್ರೂಂ, ಹ್ರೈಂ ಹ್ರೌಂ, ಹ್ರಃ ಇದು ಷಟ್ ಪ್ರಸಾದ ಮಂತ್ರವು. ಇದಕ್ಕೆ ಓಂಕಾರವು ಕೂಡಿದಲ್ಲಿ ಶಿವಾಂಗ ಮಂತ್ರವಾಗುತ್ತದೆ. ಇದರ ಆರಕ್ಷರಗಳು ಷಟ್ ಸಾದಾಖ್ಯ, ಷಟ್‌ಕರಣ ಇವುಗಳನ್ನು ತೋರಿಸುತ್ತವೆ.



(೨೪೬) ಪಂಚ ಪ್ರಸಾದ ಮಂತ್ರಃ— ಓಂ ಹಂ ಹ್ರಾಂ ಹಂ, ಹ್ರಾಂ ಹಂಸ ಇದು ಪಂಚ ಪ್ರಸಾದ ಮಂತ್ರವೆಂದು ಹೇಳಲ್ಪಡುತ್ತದೆ. ಹಂಸ ಈ ಶಬ್ದವು ಇದರಲ್ಲಿ ಮಹತ್ವವಾದದ್ದು.

(೨೪೭) ಪಂಚಾಕ್ಷರೀ ಮಂತ್ರದ ವಿಧಗಳುಃ— ಇವು ನಂ॥ ೨೩೧ ರಲ್ಲಿ ಹೇಳಿದ ಮೇರೆಗೆ ಮೂಲ ಪಂಚಾಕ್ಷರ, ಸ್ಥೂಲ ಪಂಚಾಕ್ಷರ, ಸೂಕ್ಷ್ಮ ಪಂಚಾಕ್ಷರ, ಮಾಯಾಖ್ಯ ಪಂಚಾಕ್ಷರ, ಪ್ರಸಾದ ಪಂಚಾಕ್ಷರ ಎಂದು ಇರುತ್ತವೆ. ಇವುಗಳನ್ನು ಲಿಂಗ ಮಧ್ಯದಲ್ಲಿ ಅನುಸಂಧಾನಿಸಿ ಸ್ಮರಿಸುವುದೇ ಧ್ಯಾನವೆಂದು ಹೇಳಲ್ಪಡುತ್ತಿದೆ.

(೨೪೮) ಮೂಲ ಪಂಚಾಕ್ಷರಃ— ಓಂ ನಮಃ ಶಿವಾಯ ಇದು ಮೂಲ ಪಂಚಾರಕ್ಷವು. ಇದು ಅನೇಕ ವಿಧ ಪಂಚಾಕ್ಷರಗಳಲ್ಲಿ ಮುಖ್ಯವಾದುದು.

ಸರ್ವಜ್ಞತ್ವ, ಸರ್ವೇಶ್ವರತ್ವ, ಸರ್ವನಿಯಂತೃತ್ವ, ಸರ್ವಾಂತರ್ಯಾಮಿತ್ವ, ಸರ್ವಾತ್ಮಕತ್ವ, ಸರ್ವಶಕ್ತಿತ್ವ ಈ ಗುಣಗಳು ಪರಮಾತ್ಮನಲ್ಲಿರುವದನ್ನು ಈ ಮಂತ್ರವು ಸೂಚಿಸುತ್ತದೆ.

(೨೪೯) ಸ್ಥೂಲ ಪಂಚಾಕ್ಷರಃ— ಓಂ, ಹ್ರಾಂ, ಹ್ರೀಂ, ಹ್ರೂಂ, ನಮಃ ಶಿವಾಯ ಇದು ಸ್ಥೂಲ ಪಂಚಾಕ್ಷರವು. ಒಂಬತ್ತು ಅಕ್ಷರಗಳುಳ್ಳದ್ದು. ಇದು ಉದಾರತ್ವ, ಅನುಪ್ರವೇಶತ್ವ, ನೇಮಕತ್ವ, ರುದ್ರತ್ವ, ಶ್ರುತ್ಯಾಚಾರತ್ವ ಈ ಗುಣಗಳು ಪರಮಾತ್ಮನಲ್ಲಿರುವದನ್ನು ಈ ಮಂತ್ರವು ಸೂಚಿಸುತ್ತದೆಂದು ತಿಳಿಯಲ್ಪಟ್ಟಿದೆ.

(೨೫೦) ಸೂಕ್ಷ್ಮ ಪಂಚಾಕ್ಷರಃ—ಓಂ, ಹ್ರೀಂ, ಶಿವಾಯ ಇದು ಸೂಕ್ಷ್ಮ ಪಂಚಾಕ್ಷರ ಮಂತ್ರವು. ಇದು ವಟಬೀಜದಂತೆ ಬಹು ಸೂಕ್ಷ್ಮವಾದದ್ದು.

(೨೫೧) ಮಾಯಾಖ್ಯ ಪಂಚಾಕ್ಷರಃ—ಓಂ, ಹ್ರೀಂ, ಹ್ರೂಂ ನಮಃ ಶಿವಾಯ, ಇದು ಮಾಯಾಖ್ಯ ಪಂಚಾಕ್ಷರವು. ಇದರಲ್ಲಿ ೮ ಅಕ್ಷರಗಳಿವೆ.

(೨೫೨) ಪ್ರಸಾದ ಪಂಚಾಕ್ಷರ:— ಓಂ ಹ್ರಾಂ ಹ್ರೀಂ ಹ್ರೂಂ ಹ್ರೌಂ ನಮಃ ಶಿವಾಯ ಇದು ಪ್ರಸಾದ ಪಂಚಾಕ್ಷರಿಯು. ಈ ಮಂತ್ರವು ಬ್ರಹ್ಮ ಸ್ಥಾನದ ಮಧ್ಯವಳಯದ ಸಹಸ್ರದಳ ಕಮಲ ಕರ್ಣಿಕೆಯಲ್ಲಿರುವ ಪಂಚ ಪತ್ರದಲ್ಲಿ ವಾಸಿಸುತ್ತದೆಂದು ತಿಳಿಯಲ್ಪಟ್ಟಿರುತ್ತದೆ. ಇದರಲ್ಲಿ ೧೦ ಅಕ್ಷರಗಳಿವೆ.

(೨೫೩) ಷಟ್ತ್ರಿಂಶನ್ಮಂತ್ರಗಳು:— ಇವು ಬೀಜಾಕ್ಷರ ಮಂತ್ರ, ಕೀಲಕ ಮಂತ್ರ, ನ್ಯಾಸಾಕ್ಷರಮಂತ್ರ, ವದನಾಕ್ಷರ ಮಂತ್ರ, ಶಕ್ತಿಷಡಂಗ ಮಂತ್ರ, ಲಿಂಗ ಷಡಕ್ಷರಮಂತ್ರ ಎಂದು ಆರು ವಿಧಗಳಾಗಿವೆ. ಇವೆಲ್ಲವೂ ಕೂಡಿ ೩೬ ಮಂತ್ರಗಳಾಗುತ್ತವೆ. ಇವುಗಳನ್ನು ವೀರಶೈವರು ತಮ್ಮಲ್ಲಿ ತೆಗೆದುಕೊಂಡಿರುತ್ತಾರೆ. ಪಂಚ ಪಂಚಾಕ್ಷರ ಮಂತ್ರಗಳು ಪರಮಾತ್ಮನ ಧ್ಯಾನದಲ್ಲಿ ಉಪಯುಕ್ತವಾದವುಗಳು. ಆದರೆ ಈ ಷಟ್ ತ್ರಿಂಶನ್ಮಂತ್ರಗಳು ಅವರ ಆಚರಣೆಯಲ್ಲಿ ಬೇಕಾದವುಗಳಿರುತ್ತವೆ. ಅವುಗಳ ಉಪಯೋಗವು ಅವರ ಅನೇಕ ಕ್ರಿಯೆಗಳಲ್ಲಿರುತ್ತದೆ.

(೨೫೪) ಬೀಜಾಕ್ಷರ ಮಂತ್ರ:— ಬ ಸ ವ ಅ ಉ ಮ ಇವುಗಳು ಬೀಜಾಕ್ಷರಗಳು. ಇವು ಹಿಂದೆ ವಿಸ್ತಾರವಾಗಿ ಹೇಳಲ್ಪಟ್ಟಿವೆ. ಅವು ಮೂಲ ಶಕ್ತಿಗಳು. ಇವು ಆರು ಅಕ್ಷರಗಳಿವೆ.

(೨೫೫) ಕೀಲಕಮಂತ್ರ:— ಹ್ರಾಂ, ಹ್ರೀಂ, ಹ್ರೂಂ, ಹ್ರೈಂ, ಹ್ರೌಂ, ಹ್ರಃ ಇವು ಆರು ಅಕ್ಷರಗಳು. ಕೀಲಕ ಮಂತ್ರ ಇದಕ್ಕೆ ಷಟ್‌ಪ್ರಸಾದ ಮಂತ್ರವೆಂತಲೂ ಇನ್ನೊಂದು ಹೆಸರಿದೆ. (ಹಿಂದೆ ನಂ॥ ೨೪೫ ನೋಡಿರಿ.) ಕೀಲಕ ಮಂತ್ರ ಈ ಶಬ್ದದಲ್ಲಿ 'ದೃಢ ಪಡಿಸುವದು' ಎಂಬರ್ಥವಿದೆ. ಅದ್ದರಿಂದ ಈ ಅಕ್ಷರಗಳ ಕಾರ್ಯವು ಆಯಾ ಮಂತ್ರಗಳನ್ನು ತನ್ನಲ್ಲಿ ದೃಢ ಪಡಿಸುವದಿರುತ್ತದೆಂದು ತಿಳಿದುಬರುತ್ತದೆ.

(೨೫೬) ನ್ಯಾಸಾಕ್ಷರ ಮಂತ್ರ:— ಇದರಲ್ಲಿ ಆರು ಮಂತ್ರಗಳಿರುತ್ತವೆ. ಇದಕ್ಕೆ ಷಡಂಗ ಮಂತ್ರವೆಂದು ಬೇರೊಂದು ಹೆಸರಿದೆ. ಶರೀರದ ಭಾಗಗಳಲ್ಲಿ ಮಂತ್ರ ನ್ಯಾಸ ಮಾಡುವದೇ ಈ ಮಂತ್ರದ ಕಾರ್ಯವಾಗಿರುತ್ತದೆ.



ಓಂ ಹ್ರಾಂ ಹೃದಯಾಯನಮಃ ಇದು ಹೃದಯಮಂತ್ರವೆಂದು ಹೇಳಲ್ಪಡುತ್ತಿದೆ.

ಓಂ ಹ್ರೀಂ ಶಿರಸೆ ಸ್ವಾಹಾ ಇದು ಶಿರೋಮಂತ್ರವೆಂದು ಹೇಳಲ್ಪಡುತ್ತಿದೆ.

ಓಂ ಹ್ರೂಂ ಶಿಖಾಯೈ ವೌಷಟ್ ಇದು ಶಿಖಾಮಂತ್ರವೆಂದು ಹೇಳಲ್ಪಡುತ್ತಿದೆ.

ಓಂ ಹ್ರೈಂ ಕವಚಾಯ ಹುಂ ಇದು ಕವಚಮಂತ್ರವೆಂದು ಹೇಳಲ್ಪಡುತ್ತಿದೆ.

ಓಂ ಹ್ರೌಂ ನೇತ್ರತ್ರಯಾಯ ವೌಷಟ್ ಇದು ನೇತ್ರಮಂತ್ರವೆಂದು ಹೇಳಲ್ಪಡುತ್ತಿದೆ.

ಓಂ ಹ್ರಃ ಅಸ್ತ್ರಾಯ ಫಟ್ ಇದು ಅಸ್ತ್ರಮಂತ್ರವೆಂದು ಹೇಳಲ್ಪಡುತ್ತಿದೆ.

(೨೫೭) ವದನಾಕ್ಷರ ಮಂತ್ರ:— ಇದಕ್ಕೆ ಪಂಚಬ್ರಹ್ಮಮಂತ್ರವೆಂಬ ಬೇರೊಂದು ಹೆಸರು ಇದೆ. ಇದರಲ್ಲಿ ಆರು ಮಂತ್ರಗಳು ಸೇರ್ಪಡೆಯಾಗುತ್ತವೆ. ಪರಶಿವನಿಗೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ, ಎಂದು ಪಂಚಮುಖಗಳಿವೆಯಷ್ಟೇ. ಈ ಮಂತ್ರಗಳು ಈ ಪಂಚಮುಖಗಳಿಗೆ ಸಂಬಂಧಿಸುತ್ತವೆ. ಪಂಚಮುಖಗಳು ವಚನಶಾಸ್ತ್ರದಲ್ಲಿ ಅಂಗೀಕರಿಸಲ್ಪಟ್ಟಿವೆ. ಜಗತ್ತಿನ ಉತ್ಪತ್ತಿಯ ಕಾಲದಲ್ಲಿ ಆಗುವ ಆರು ವಿಧಗಳು ಅಥವಾ ಸಾದಾಖ್ಯಗಳು ಈ ಮುಖಗಳಲ್ಲಿಯೇ ಉಂಟಾಗುವವೆಂದು ಹೇಳಲ್ಪಡುವದುಂಟು. ಸ್ಥಾನಶುದ್ಧಿ, ಸಂಪ್ರೋಕ್ಷಣ, ಭಸ್ಮೋದ್ಧೂಳನ, ತ್ರಿಪುಂಡ್ರಧಾರಣ ಈ ಕಾರ್ಯಗಳಲ್ಲಿ ಈ ಮಂತ್ರಗಳ ಉಪಯೋಗವಿರುತ್ತದೆ. ದೀಕ್ಷಾ ಕಾಲದಲ್ಲಿ ಇವುಗಳು ಬಹಳಕಡೆ ಉಪಯೋಗಿಸಲ್ಪಡುತ್ತವೆ. ಮಂತ್ರನ್ಯಾಸದಲ್ಲಿಯೂ ಇವುಗಳ ಉಪಯೋಗವಿರುತ್ತದೆ. ಇದನ್ನು ಒಮ್ಮೊಮ್ಮೆ ಷಡಂಗಮಂತ್ರವೆಂತಲೂ ಸಹ ಕರೆಯುವದುಂಟು. ಇವು ಯಾವವೆಂದರೆ:—

ಓಂ ಹ್ರಾಂ ನಾಂ ಸದ್ಯೋಜಾತಾಯ ನಮಃ ಇದು ಪಾದಕ್ಕೆ ಸಂಬಂಧವಾಗುತ್ತದೆ.

ಓಂ ಹ್ರೀ ಮಾಂ ವಾಮದೇವಾಯ ನಮಃ— ಇದು ಗುಹ್ಯಕ್ಕೆ ಸಂಬಂಧವಾಗುತ್ತದೆ.

ಓಂ ಹ್ರೂಂ ಶೀಂ ಅಘೋರಾಯ ನಮಃ ಇದು ಹೃದಯಕ್ಕೆ ಸಂಬಂಧಿಸುತ್ತದೆ.

ಓಂ ಹ್ರೈಂ ವಾಂ ತತ್ಪುರುಷಾಯ ನಮಃ ಇದು ಮುಖಕ್ಕೆ ಸಂಬಂಧವಾಗುತ್ತದೆ.

ಓಂ, ಹ್ರೌಂ ಯಾಂ ಈಶಾನಾಯ ನಮಃ ಇದು ಶಿರಸ್ಸಿಗೆ ಸಂಬಂಧವಾಗುತ್ತದೆ.

ಓಂ ಹ್ರಃ ಓಂ ಹೃದಯಾಯ ನಮಃ ಇದು ಸರ್ವಾಂಗದಲ್ಲಿ ಸಂಬಂಧವಾಗುತ್ತದೆ.

ಈ ಮಂತ್ರಗಳಿಗೆ ಅನುಕ್ರಮವಾಗಿ ಸದ್ಯೋಜಾತಮಂತ್ರ, ವಾಮದೇವಮಂತ್ರ, ಅಘೋರಮಂತ್ರ, ತತ್ಪುರುಷಮಂತ್ರ, ಈಶಾನಮಂತ್ರ, ಹೃದಯಮಂತ್ರ ಎಂದು ಹೆಸರುಗಳಿರುತ್ತವೆ. ಭಸ್ಮೋದ್ಧೂಳನ ಕಾಲದಲ್ಲಿ ಈ ಮಂತ್ರಗಳನ್ನು ನಿಶ್ಚಿತ ಸಂಖ್ಯೆಯಿಂದ ಉಚ್ಚರಿಸುತ್ತ ಆಯಾಸ್ಥಾನಗಳಲ್ಲಿ ಭಸಿತವನ್ನು ಸಂಬಂಧಿಸಿಕೊಳ್ಳತಕ್ಕದ್ದು. ಅಂಗನ್ಯಾಸವು ಮಾತ್ರ ಮೇಲೆ ಉದಹರಿಸಿದ ಮಂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿರುತ್ತದೆ.

(೨೫೮) ಶಕ್ತಿಷಡಂಗಮಂತ್ರಃ— ಇದರಲ್ಲಿಯೂ ಆರು ಮಂತ್ರಗಳು ಸೇರ್ಪಡೆಯಾಗುತ್ತವೆ. ಮನುಷ್ಯನು ಷಟ್‌ಸ್ಥಲಕ್ಕನುಗುಣವಾಗಿ ಆಚರಿಸಿದಲ್ಲಿ ಅವನಲ್ಲಿ ಶಕ್ತಿಗಳು ಉಂಟಾಗಿ ಕೆಲವು ಪರಿಣಾಮಗಳು ಸಂಭವಿಸುತ್ತವೆ. ಆಗ ಈ ಶಕ್ತಿಷಡಂಗಮಂತ್ರವು ಉಪಯೋಗಿಸಲ್ಪಡುತ್ತದೆ. ಈ ಮಂತ್ರದ ಮೂಲಕ ಅವನಲ್ಲಿಯ ಆಯಾ ಶಕ್ತಿಗಳು ಸರಿಯಾದ ಮಾರ್ಗದಿಂದ ಚಲಿಸುತ್ತವೆ. ಈ ಮಂತ್ರಗಳು ಯಾವವೆಂದರೆಃ—



ಓಂ ಹ್ರಾಂ ನಾಂ ಸರ್ವಜ್ಞ ಸರ್ವಶಕ್ತಿ ಧಾಮ್ನೇ ನಮಃ
ಓಂ ಹ್ರೀಂ ಮಾಂ ತೃಪ್ತಿಶಕ್ತಿ ಧಾಮ್ನೇ ನಮಃ
ಓಂ ಹ್ರೂಂ ಶೀಂ ಅನಾದಿಶಕ್ತಿ ಧಾಮ್ನೇ ನಮಃ
ಓಂ ಹ್ರೈಂ ವಾಂ ಸ್ವತಂತ್ರ ಶಕ್ತಿ ಧಾಮ್ನೇ ನಮಃ
ಓಂ ಹ್ರೌಂ ಯಾಂ ನಿತ್ಯ ಶಕ್ತಿ ಧಾಮ್ನೇ ನಮಃ
ಓಂ ಹ್ರಃ ಓಂ ಅಲುಪ್ತಾ ಶಕ್ತಿ ಧಾಮ್ನೇ ನಮಃ

ಈ ಪ್ರಕಾರ ಇದರಲ್ಲಿ ಆರು ಮಂತ್ರಗಳಿವೆ.

(೨೫೯) ಲಿಂಗ ಷಡಕ್ಷರ ಮಂತ್ರಃ— ಇವಾದರೂ ಆರು ಇರುತ್ತವೆ. ಇವು ಕೇವಲ ವೀರಶೈವ ಮಂತ್ರಗಳು. ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ ಇವುಗಳಿಗೆ ಇವು ಸಂಬಂಧಿಸುತ್ತವೆ. ಇವು ಯಾವವೆಂದರೆ—

ಓಂ ಹ್ರಾಂ ನಾಂ ಆಚಾರಲಿಂಗಾಯ ನಮಃ
ಓಂ ಹ್ರೀಂ ಮಾಂ ಗುರುಲಿಂಗಾಯ ನಮಃ
ಓಂ ಹ್ರೂಂ ಶೀಂ ಶಿವಲಿಂಗಾಯ ನಮಃ
ಓಂ ಹ್ರೈಂ ವಾಂ ಜಂಗಮಲಿಂಗಾಯ ನಮಃ
ಓಂ ಹ್ರೌಂ ಯಾಂ ಪ್ರಸಾದಲಿಂಗಾಯ ನಮಃ
ಓಂ ಹ್ರಃ ಓಂ ಮಹಾಲಿಂಗಾಯ ನಮಃ

ಲಿಂಗ ಜಪದಲ್ಲಿ ಇವುಗಳು ಯಾವಾಗಲೂ ಉಪಯೋಗಿಸಲ್ಪಡುತ್ತವೆ.

(೨೬೦) ಉಪಾಧಿಭಕ್ತ, ನಿರುಪಾಧಿಭಕ್ತ, ಸಹಜಭಕ್ತಃ— ಉಪಾಧಿಭಕ್ತನು ಕ್ರಿಯಾದೀಕ್ಷೆಯುಕ್ತನಾಗಿರುತ್ತಾನೆ. ಈತನಿಗೆ ಗುರುಮಂತ್ರವು ಸಲ್ಲುತ್ತದೆ. ನಿರುಪಾಧಿಭಕ್ತನು ಕ್ರಿಯಾದೀಕ್ಷೆಯನ್ನು ಹೊಂದುವದಲ್ಲದೆ ಗುರುಲಿಂಗಜಂಗಮದಲ್ಲಿ ತನ್ನದೆಲ್ಲವನ್ನು ನಿರ್ವಂಚಕತ್ವದಿಂದ ಸಮರ್ಪಿಸಿ ನಡೆನುಡಿ ಸಂಪನ್ನನಾಗಿರುತ್ತಾನೆ. ಈತನಿಗೆ ಲಿಂಗಮಂತ್ರವನ್ನು ಹೇಳು

ವುದು. ಹೀಗೆ ಈ ಉಭಯತರ ಆಚರಣೆಯನ್ನು ಹೊಂದಿದ್ದಲ್ಲದೆ ಸಮಸ್ತ ಭೋಗಾದಿಗಳನ್ನು ನೀಗಿದವನು ಸಹಜಭಕ್ತನು. ಈತನಿಗೆ ಜಂಗಮ ಮಂತ್ರವು ಸಲ್ಲುತ್ತದೆ. (ಹಿಂದೆ ನಂ॥ ೧೭೦ ಮತ್ತು ನಂ॥ ೧೭೧ ಸಹ ನೋಡಿರಿ.)

(೨೬೧) ಗುರುಮಂತ್ರ, ಲಿಂಗಮಂತ್ರ, ಜಂಗಮಮಂತ್ರಃ— ಶಕ್ತಿ ಪ್ರಣಮಮಂತ್ರಗಳು, ಶಿವಪ್ರಣಮಮಂತ್ರಗಳು, ಶಿವಶಕ್ತಿರಹಿತ ಪ್ರಣಮ ಮಂತ್ರಗಳು ಎಂದು ಮೂರುವಿಧ ಮಂತ್ರಗಳು ಇವೆ. ಈ ಪ್ರತಿಯೊಂದರಲ್ಲಿ ೧೨, ೧೨ ಪ್ರಣವಗಳು ಇರುತ್ತವೆ. ಶಕ್ತಿಪ್ರಣಮ ಮಂತ್ರಗಳು ಗುರುವಿಗೆ, ಶಿವಪ್ರಣಮಮಂತ್ರಗಳು ಲಿಂಗಕ್ಕೆ, ಶಿವಶಕ್ತಿರಹಿತ ಪ್ರಣಮ ಮಂತ್ರಗಳು ಜಂಗಮಕ್ಕೆ, ಸಂಬಂಧಪಡುತ್ತವೆ. ಈ ಪ್ರಣಮಗಳು ಭಕ್ತ, ಗುರು, ಜಂಗಮ ಹೀಗೆ ಬೇರೆ ಬೇರೆ ವರ್ಗದವರಿಗೆ ಬೇರೆ ಬೇರೆಯಾಗಿ ಸಂಬಂಧಪಡುತ್ತವೆಂದು ಭಾವಿಸಕೂಡದು. ಯಾಕೆಂದರೆ ಷಟ್‌ಸ್ಥಲಶಾಸ್ತ್ರದ ಪ್ರಕಾರ ಪ್ರತಿಯೊಬ್ಬನಲ್ಲಿ ಗುರು, ಲಿಂಗ, ಜಂಗಮಗಳು ಇವೆ. ಈ ತ್ರಿವಿಧಗಳು ಅವನಲ್ಲಿ ಪ್ರಕಟವಾದಂತೆ ಅವನು ಉಪಾಧಿಭಕ್ತ, ನಿರುಪಾಧಿಭಕ್ತ, ಸಹಜಭಕ್ತ ಎಂದು ಕರೆಯಲ್ಪಡುತ್ತಾನೆ.

(೨೬೨) ನಿರಾಭಾರಿ ಜಂಗಮ ಶರಣಗಣಂಗಳುಃ— ಶುದ್ಧಪ್ರಸಾದ ಪ್ರಣವ ೧೨, ಸಿದ್ಧಪ್ರಸಾದ ಪ್ರಣವ ೧೨, ಪ್ರಸಿದ್ಧ ಪ್ರಸಾದ ಪ್ರಣವ ೧೨ ಹೀಗೆ ಒಟ್ಟು ೩೬ ಪ್ರಣವಗಳಿದ್ದು ಅವುಗಳನ್ನೊಡಗೂಡಿರುವವರೇ ನಿರಾಭಾರಿ ಜಂಗಮ ಶರಣ ಗಣಗಳು. ಶುದ್ಧಪ್ರಸಾದ ಪ್ರಣಮಗಳು ಆಚಾರ ಲಿಂಗ ಗುರುಲಿಂಗಗಳಿಗೆ ಸಂಬಂಧಿಸುತ್ತವೆ. ಇವುಗಳನ್ನು ಇಷ್ಟಲಿಂಗಕ್ಕೆ ಮಾಡುವುದು. ಸಿದ್ಧಪ್ರಸಾದ ಪ್ರಣಮಗಳು ಶಿವಲಿಂಗ ಜಂಗಮಲಿಂಗಕ್ಕೆ ಸಂಬಂಧಿಸುತ್ತವೆ. ಇವನ್ನು ಪ್ರಾಣಲಿಂಗಕ್ಕೆ ಮಾಡುವುದು. ಪ್ರಸಿದ್ಧ ಪ್ರಸಾದ ಪ್ರಣಮಗಳು ಪ್ರಸಾದಲಿಂಗ ಮಹಾಲಿಂಗಕ್ಕೆ ಸಂಬಂಧಿಸುತ್ತವೆ. ಇವನ್ನು ಭಾವಲಿಂಗಕ್ಕೆ ಮಾಡುವುದು.

ಟೀಪುಃ— ಅ, ಉ, ಮ; ಬ, ಸ, ವ; ಓಂ ನ ಮಃ ಶಿ ವಾ ಯ ಇವು ೧೨ ಪ್ರಣಮಗಳು. ಇವುಗಳ ಸ್ಥಾನಭೇದದಿಂದ ಶುದ್ಧಪ್ರಸಾದ ಪ್ರಣಮಗಳು, ಸಿದ್ಧಪ್ರಸಾದ ಪ್ರಣಮಗಳು, ಪ್ರಸಿದ್ಧಪ್ರಸಾದ ಪ್ರಣಮಗಳು ಉಂಟಾಗುತ್ತವೆಂದು ತಿಳಿಯುವುದು. ಅದೇ ಪ್ರಕಾರ ಶಕ್ತಿಪ್ರಣಮ ಮಂತ್ರಗಳು, ಶಿವಪ್ರಣಮಮಂತ್ರಗಳು, ಶಿವಶಕ್ತಿರಹಿತಪ್ರಣಮಮಂತ್ರಗಳು ಉಂಟಾಗುತ್ತವೆ. ಇವುಗಳ ವಿವರಗಳು ಮುಂದೆ ಹೇಳಲ್ಪಡುವವು.



(೨೬೩) ಪಂಚಾಸ್ತ್ರ ಮಹಾಮಂತ್ರಗಳುಃ— ಇವು ಶಿವಾಸ್ತ್ರ ಮಂತ್ರ, ಕ್ಷುರಿಕಾಸ್ತ್ರಮಂತ್ರ, ಪಾಶುಪತಾಸ್ತ್ರಮಂತ್ರ, ವ್ಯೋಮಾಸ್ತ್ರಮಂತ್ರ, ಅಘೋರಾಸ್ತ್ರಮಂತ್ರ ಎಂದಿರುತ್ತವೆ. ಅವುಗಳ ವಿವರಃ—

(೧) ಶಿವಾಸ್ತ್ರಮಂತ್ರಃ— ಇದು ಓಂ, ಹಃ, ಅನಂತಶಕ್ತಿ ಧಾಮ್ನೆ ಜ್ಯೋತಿರೂಪಾಯ ಎಂದಿರುತ್ತದೆ.

(೨) ಕ್ಷುರಿಕಾಸ್ತ್ರಮಂತ್ರಃ— ಇದು ಓಂ ತಿಕ್ಷಕ್ಷಿಭಿ ಚಿಚ್ಛಿದ ಕ್ಷುಂಕೃತ ಕ್ಷುರಿಕಾಸ್ತ್ರಾಯ ಫಟ್ ಎಂದಿರುತ್ತದೆ.

(೩) ಪಾಶುಪತಾಸ್ತ್ರಮಂತ್ರಃ— ಇದು ಓಂ, ಶೀಂ, ಪಶು, ಹುಂ ಫಟ್ ಎಂದಿರುತ್ತದೆ.

(೪) ವ್ಯೋಮಾಸ್ತ್ರಮಂತ್ರಃ— ಇದು ಓಂ, ಅಂ, ಈಂ, ಊಂ, ವ್ಯೋಮವ್ಯಾಪಿನೇ ವ್ಯೋಮಾಸ್ತ್ರಾಯ ಫಟ್ ಎಂದಿರುತ್ತದೆ.

(೫) ಅಘೋರಾಸ್ತ್ರಮಂತ್ರಃ— ಓಂ ಸ್ಫುರ ಸ್ಫುರಘೋರ ಘೋರತಮ ತನುರೂಪ ಚಟಚಟ ಪ್ರಚಟ ಪ್ರಚಟ ಕಹ ಕಹ ವಮ ವಮ ಬಂಧ ಬಂಧ ಘಾತಾಯ ಘಾತಾಯ ಹುಂ ಫಟ್ ಎಂದಿದೆ.

ಈ ಮಂತ್ರಗಳು ವೀರಶೈವಪರವಾದುವಲ್ಲ. ಆದರೂ ಇವು ರೂಢಿಯಿಂದ ಅವುಗಳಲ್ಲಿ ಮುಖ್ಯವಾಗಿ ಶಿವಾಸ್ತ್ರಮಂತ್ರವು ವೀರಶೈವರ ಕೆಲವು ವಿಧಿವಿಧಾನಗಳಲ್ಲಿ ಉಪಯೋಗಿಸಲ್ಪಡುವದುಂಟು.

(೨೬೪) ಸಿದ್ಧಿ ಮಂತ್ರಗಳುಃ— ಕೆಲವು ಮಂತ್ರಗಳನ್ನು ಸಾಧಕರು ಉಪಯೋಗಿಸುವದುಂಟು. ಆದರೆ ಅವು ವೀರಶೈವ ಪರವಾದುವಲ್ಲ.

ಸಿದ್ಧಿಗಳನ್ನು ವೀರಶೈವರು ಮಾಡತಕ್ಕದ್ದಲ್ಲ. ಆಯಾ ಮಂತ್ರಗಳ ಕೆಳಗೆ ಕಾಣಿಸಿದ ಹೆಸರುಗಳೇ ಅವುಗಳಿಂದ ಆಗುವ ಸಿದ್ಧಿಗಳನ್ನು ಸೂಚಿಸುತ್ತವೆ.

(ಅ) ಪಂಚೋಪಾಸ್ತ್ರ ಮಂತ್ರಗಳು:— ಅವು ಐದು ಇರುತ್ತವೆ. ಯಾವವೆಂದರೆ:— ಬ್ರಹ್ಮಾಸ್ತ್ರ ಮಂತ್ರ, ನಾಗಾಸ್ತ್ರ ಮಂತ್ರ, ಗರುಡಾಸ್ತ್ರ ಮಂತ್ರ, ಅನಲಾಸ್ತ್ರಮಂತ್ರ, ಅರುಣಾಸ್ತ್ರಮಂತ್ರ, ಅಘೋರಾಸ್ತ್ರಮಂತ್ರ ಎಂದಿವೆ. ಈ ಮಂತ್ರಗಳಿಂದ ಕೆಲವೊಂದು ಶಕ್ತಿಯನ್ನು ಉಂಟುಮಾಡಿಕೊಳ್ಳಬಹುದು.

(ಬ) ಸಂಜೀವನತ್ರಯ ಮಂತ್ರ:— ಇವು ಮೂರು ಇವೆ. ಯಾವವೆಂದರೆ:— ವಿದ್ಯಾಸಂಜೀವನಮಂತ್ರ, ಆತ್ಮಸಂಜೀವನಮಂತ್ರ, ಮೃತಸಂಜೀವನಮಂತ್ರ ಎಂದಿವೆ.

(ಕ) ಪಂಚಶಕ್ತಿಮಂತ್ರಗಳು:— ಅವು ಜೃಂಭಕ, ಪ್ರಸ್ವಾಪನ, ಅಪ್ರತಿಹತ, ನಿಶ್ಚೇಷ್ಟೀಕರಣ, ಜೀವಗ್ರಾಹ ಎಂದಿವೆ.

(ಡ) ಪಂಚಮಾಯಾಮಂತ್ರಗಳು:— ಇವು ಕಾಮರೂಪ, ಘೋರದರ್ಶನ, ಸಮ್ಮೋಹನ, ವಿಶ್ವರೂಪ, ಗುಲ್ಮಸೃಷ್ಟಿ, ಎಂದಿವೆ.

(ಇ) ಏಕಾದಶ ರೌದ್ರಾಸ್ತ್ರಮಂತ್ರಗಳು:— ಅವು ರುದ್ರಶೂಲ, ರುದ್ರಶಕ್ತಿ, ರುದ್ರಚಕ್ರ, ರುದ್ರವಜ್ರ, ರುದ್ರಪಾಶ, ರುದ್ರದಂಡ, ರುದ್ರಪಿನಾಕ, ರುದ್ರನಾರಾಯಣ, ರುದ್ರಬಾಣ, ರುದ್ರಗದಾ, ರುದ್ರಖಡ್ಗ, ಎಂದಿವೆ.

ಇವಲ್ಲದೆ ಧನಮಂತ್ರಗಳು, ಉಪಶಕ್ತಿಮಂತ್ರಗಳು, ತಾಂತ್ರಿಕ ಸಿದ್ಧಿಮಂತ್ರಗಳು ಎಂದು ಬೇರೆ ಅನೇಕ ಮಂತ್ರಗಳಿವೆ. ಆದರೆ ಇವೆಲ್ಲವೂ ವೀರಶೈವರಿಗೆ ವರ್ಜ್ಯವಾದವುಗಳು. ಅವುಗಳ ನಾಮನಿರ್ದೇಶವನ್ನು ಮಾತ್ರ ಇಲ್ಲಿ ಮಾಡಿದ್ದೇವೆ.



(೨೬೫) ಅಜಪಗಾಯತ್ರೀಮಂತ್ರ:— ಪ್ರಾಣಾಯಾಮಪೂರ್ವಕವಾಗಿ ಇದನ್ನು ಎಲ್ಲ ವೈದಿಕರು ಜಪಿಸುವದುಂಟು. ಈ ಮಂತ್ರವೂ ಕೂಡ ವೀರಶೈವರಿಗೆ ಸಂಬಂಧಿಸಿದುದಲ್ಲ. ಇದು ಮೂಲದಲ್ಲಿ ಸೂರ್ಯನಿಗೆ ಸಂಬಂಧಿಸಿದ್ದಿದೆ. ವೈದಿಕಧರ್ಮಗಳಲ್ಲಿ ಇದರ ಮಹತ್ವವು ಬಹಳ ಇದ್ದದರಿಂದ, ಇದನ್ನು ಲಿಂಗಪರವಾಗಿ ಅರ್ಥಮಾಡಲು ಕೆಲವು ವೀರಶೈವ ಗ್ರಂಥಗಳಲ್ಲಿ ಪ್ರಯತ್ನಗಳು ಮಾಡಲ್ಪಟ್ಟಿದ್ದು ತೋರಿಬರುತ್ತದೆ. ಆದರೆ ಶಿವಶರಣರು ಈ ಮಂತ್ರವನ್ನು ಉಪಯೋಗಿಸುವದಿಲ್ಲ. ಅವರು ಯಾವಾಗಲೂ ಷಟ್‌ಸ್ಥಲಕ್ಕೆ, ಆಯಾ ಲಿಂಗಗಳಿಗೆ, ಪಂಚಾಕ್ಷರಗಳಿಗೆ ಸಂಬಂಧಪಟ್ಟ ಮಂತ್ರಗಳನ್ನೇ ಉಪಯೋಗಿಸುತ್ತಾರೆ. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ ಅಪವಾದಾತ್ಮಕವಾಗಿ ತಮ್ಮ ಮಂತ್ರಗಳಿಗೆ ವಿರೋಧವಲ್ಲದ ಸಹಾಯಕಮಂತ್ರಗಳನ್ನು ಮಾತ್ರ ಉಪಯೋಗಿಸುವದುಂಟು.

(೨೬೬) ಬೀಜಾಕ್ಷರಗಳ ಸಮೂಹಗಳು:— ಶಿವಾನುಭವ ಶಾಸ್ತ್ರದಲ್ಲಿ ಬೀಜಾಕ್ಷರಗಳನ್ನು ಎರಡು ಗುಂಪುಗಳನ್ನಾಗಿ ಮಾಡಿದ್ದು ಕಂಡುಬರುತ್ತದೆ. ಒಂದು ಗುಂಪಿನಲ್ಲಿ ೮ ಬೀಜಾಕ್ಷರಗಳು ಇವೆ. ಅವು ಬ, ಸ, ವ, ಅ, ಉ, ಮ, ಹಂ, ಕ್ಷಂ, ಎಂದಿವೆ. ಎರಡನೆಯದರಲ್ಲಿ ೫೦ ಬೀಜಾಕ್ಷರಗಳು ಇವೆ. (ನಂ॥ ೨೦೫ ನೋಡಿರಿ)

(೨೬೭) ಪ್ರಣವಗಳ ಸಮೂಹಗಳು:— ಮೇಲ್ಕಂಡ ಬೀಜಾಕ್ಷರಗಳ ಸಮೂಹಗಳಂತೆಯೇ ಪ್ರಣವಗಳ ಸಮೂಹಗಳೂ ಶಿವಾನುಭವ ಶಾಸ್ತ್ರದಲ್ಲಿ ಕೆಲವು ಹೇಳಲ್ಪಡುತ್ತವೆ. ಅವು ಅನೇಕ ವಿಧವಾಗಿವೆ. ಹೇಗೆಂದರೆ:—

ತ್ರಿವಿಧಪ್ರಣವ, ಷಡ್ವಿಧಪ್ರಣವ, ನವವಿಧಪ್ರಣವ, ದ್ವಾದಶವಿಧಪ್ರಣವ, ಏಕವಿಂಶತಿಪ್ರಣವ, ೨೪ ಪ್ರಣವಗಳು, ೩೬ ಪ್ರಣವಗಳು, ೪೮ ಪ್ರಣವಗಳು, ದಶಪಂಚಪ್ರಣವಗಳು, ಏಕವಿಶಂತಿಪ್ರಣವಗಳು ಇತ್ಯಾದಿ. ಶಿವಾನುಭವ ಶಾಸ್ತ್ರಕಾರರು ಈ ಪ್ರಕಾರ ಅನೇಕ ವಿಧವಾಗಿ ಮಂತ್ರ ವಿಷಯಗಳನ್ನು ಹೇಳಿರುತ್ತಾರೆ. ಪ್ರತಿಯೊಂದು ಪ್ರಣವವು ಕೆಲ

ವೊಂದು ವಿಶಿಷ್ಟ ವಿಷಯ ಅಥವಾ ತತ್ತ್ವವನ್ನು ಸೂಚಿಸುತ್ತದೆ. ಆ ವಿಷಯವು ಅಥವಾ ತತ್ತ್ವವು ಷಟ್‌ಸ್ಥಲ ಶಾಸ್ತ್ರಕ್ಕೆ ಸಂಬಂಧಿಸಿದ್ದಿರುತ್ತದೆ. ಈ ಸಂಬಂಧವನ್ನು ತಿಳಿದಲ್ಲಿ, ಕೆಲವೊಂದು ಪ್ರಣವುಗಳ ಗುಂಪು ಆವ ಆವ ವಿಷಯಗಳನ್ನು ನಿರೂಪಿಸುತ್ತದೆಂಬುದನ್ನು ಕಂಡುಹಿಡಿಯಬಹುದು. ವಾಚಕರು ಈ ವಿಷಯವನ್ನು ಸ್ವತಂತ್ರ ಗ್ರಂಥಗಳಲ್ಲಿಯೇ ಸಂದರ್ಭಾನುಸಾರ ತಿಳಿದುಕೊಳ್ಳಬೇಕು. ಈಗಿನ ಸಂಕ್ಷಿಪ್ತ ಗ್ರಂಥದಲ್ಲಿ ಇವುಗಳನ್ನು ತಿಳಿಸುವದು ಶಕ್ಯವಿಲ್ಲ. ಹೀಗೆ ಈ ಎಲ್ಲ ರೀತಿಗಳನ್ನು ತಿಳಿದುಕೊಂಡು ಮಂತ್ರಾರ್ಥವನ್ನು ಲಕ್ಷಿಸಿ ಆಚರಿಸತಕ್ಕದ್ದು. ಮಂತ್ರಜಪದಲ್ಲಿ ಆ ಮಂತ್ರಾರ್ಥವನ್ನು ಲಕ್ಷಿಸಿ ತಮ್ಮ ವಿಧಿಗಳನ್ನು ನೆರವೇರಿಸಿದಲ್ಲಿ ಅವು ಪರಿಣಾಮಕಾರಿಗಳಾಗುವವು. ಇವುಗಳಲ್ಲಿ ಮುಖ್ಯವಾದಗಳು ಕೆಳಗೆ ಹೇಳಲ್ಪಟ್ಟವೆ. ಪ್ರತಿಯೊಬ್ಬ ವೀರಶೈವನು ಅವುಗಳ ಜ್ಞಾನವನ್ನು ಮಾಡಿಕೊಂಡು ಉಪಯೋಗಿಸತಕ್ಕದ್ದು.

(೨೬೮) ಶತಮಂತ್ರಾಕ್ಷರಗಳು:— ಇವು ಪೂರ್ಣ ವೀರಶೈವಪರವಾದವುಗಳು.

| ಹೆಸರು. | ಪ್ರಣವ ಸಂಖ್ಯೆ. | |
|---|---|---|
| (೧) ಮೂಲ ಪಂಚಾಕ್ಷರ | ೬ | (ನಂ॥ ೨೪೮) |
| (೨) ಸ್ಥೂಲ ಪಂಚಾಕ್ಷರ | ೯ | (ನಂ॥ ೨೪೯) |
| (೩) ಸೂಕ್ಷ್ಮ ಪಂಚಾಕ್ಷರ | ೫ | (ನಂ॥ ೨೫೦) |
| (೪) ಮಾಯಾಖ್ಯ ಪಂಚಾಕ್ಷರ | ೮ | (ನಂ॥ ೨೫೧) |
| (೫) ಪ್ರಸಾದ ಪಂಚಾಕ್ಷರ | ೧೦ | (ನಂ॥ ೨೫೨) |
| (೬) ನಿರಂಜನ ಪ್ರಣವ, ಶೂನ್ಯ ಪ್ರಣವ, ನಿಷ್ಕಲ ಪ್ರಣವ, ಮತ್ತು ಮೂಲ ಪ್ರಣವಗಳು. | ೪ | |
| (೭) ಷಡಕ್ಷರ ಮಂತ್ರ | ೬ | (ನಂ॥ ೨೦೭) |
| (೮) ಬೀಜಾಕ್ಷರಗಳು | ೫೨ | (ನಂ॥ ೨೦೫) |
| ಒಟ್ಟು | ೧೦೦ | |



(೨೬೯) ನೂರೆಂಟು ಪ್ರಣವುಗಳು:— ಇವು ಕೂಡ ಪೂರ್ಣ ವೀರಶೈವಪರವಾದವುಗಳು.

| | |
|---|---|
| (೧) ಬ, ಸ, ವ | ೩ |
| (೨) ಅ, ಉ, ಮ | ೩ |
| (೩) ಪಂಚಾಕ್ಷರ | ೬ |
| | ೧೨ |

ವೀರಶೈವರಲ್ಲಿ ಯಾವ ಮಂತ್ರ ತೆಗೆದುಕೊಂಡರೂ ಅದರಲ್ಲಿ ಈ ೧೨ ಪ್ರಣವುಗಳು ಮುಖ್ಯ ಸ್ಥಾನವನ್ನು ಹೊಂದಿರುತ್ತವೆ. ಈ ೧೨ ಪ್ರಣವುಗಳನ್ನು ಒಂಭತ್ತು ವೇಳೆ ಪುನಶ್ಚರಣೆ ಮಾಡಲು ನೂರೆಂಟು ಪ್ರಣವುಗಳಾಗುತ್ತವೆ. ಇವುಗಳಲ್ಲಿರುವ ಬ, ಸ, ವ ಅಕ್ಷರಗಳು ಆತ್ಮತ್ರಯವನ್ನು ಸೂಚಿಸುತ್ತವೆ. ಅವು ಗುರುಲಿಂಗಜಂಗಮ ಸ್ವರೂಪವು. ಅವು ಬಹು ಸೂಕ್ಷ್ಮವು. ಅ, ಉ, ಮ ಅಕ್ಷರಗಳು ತನುತ್ರಯಗಳು. ಅವು ಇಷ್ಟ, ಪ್ರಾಣ, ಭಾವಲಿಂಗಗಳ ಸ್ವರೂಪಗಳು. ಹೆಚ್ಚಿಗೆ ಸ್ಥೂಲವು. ಷಡಕ್ಷರೀ ಮಂತ್ರದ ಆಯಾ ಪ್ರಣವಗಳು ಷಟ್ ತತ್ತ್ವಗಳನ್ನು ತೋರಿಸುತ್ತವೆ. ಅವೆಲ್ಲವೂ ಷಡ್ವಿಧಲಿಂಗಸ್ವರೂಪವು. ಇವುಗಳು ಹಿಂದೆ ವಿವರಿಸಲ್ಪಟ್ಟವೆ. ಇವುಗಳ ಧ್ಯಾನದಿಂದ ಶಿವಯೋಗವು ಲಭಿಸುತ್ತದೆ.

(೨೭೦) ೧೧೬ ವರ್ಣಗಳು:— ಮೇಲೆ ನಂ॥ ೨೬೮ ರಲ್ಲಿಯ ಶತಮಂತ್ರಾಕ್ಷರಗಳು ಒಂದುನೂರು ಮತ್ತು ನಂ॥ ೨೫೩ ರಲ್ಲಿಯ ಷಟ್ ತ್ರಿಂಶನ್ಮಂತ್ರಗಳು ೧೬ ಈ ಉಭಯ ಕೂಡಿ ೧೧೬ ವರ್ಣಗಳಾಗುವವು. ಇವುಗಳ ಪೂರ್ಣ ಜ್ಞಾನಪೂರ್ವಕನಾಗಿ ಆಚರಿಸುವವನೇ ಮಂತ್ರಶರೀರಿಯೂ, ಲಿಂಗಾಂಗಿಯೂ ಎಂದೆನಿಸಿಕೊಳ್ಳುತ್ತಾನೆ.

(೨೭೧) ಜಪದ ಉದ್ದೇಶವು:— ಕರಸ್ಥಲದಲ್ಲಿರುವ ಶಿವಲಿಂಗದ ಬಾಹ್ಯೋಪಚಾರಗಳಲ್ಲಿ ಲೋಲುಪ್ತನಾಗಿರಲು ಆ ಲಿಂಗವು ಅಂತರಂಗದಲ್ಲಿ ವೇಧಿಸಿ ಅಲ್ಲಿ ಬೇರೆಬೇರೆ ಲಿಂಗಗಳಾಗಿ ನೆಲೆಗೊಳ್ಳುವದು. ಈ ಕಾರ್ಯ

ದಲ್ಲಿ ಲಿಂಗ ಜಪವು ಲಿಂಗಧ್ಯಾನಿಗೆ ಸಹಾಯಕವಾಗಿರುತ್ತದೆ. ಈ ರೀ
ಯನ್ನು ವೀರಶೈವನು ತಿಳಿದು ಆಚರಿಸುವದೇ ಜಪದ ಉದ್ದೇಶವು.

(೨೭೨) ಲಿಂಗಜಪಃ— ಚಕ್ರಗಳಲ್ಲಿ ಬೇರೆಬೇರೆ ದಳಗಳಿವೆ. ಆ ದಳಗಳಿಗೆ ಕೆಲವೊಂದು ಸಂಖ್ಯೆಯ ಜಪಗಳಿದ್ದು ಅವೆಲ್ಲವೂ ಕೂ ೨೬೦೦ ಆಗುವವು. ಇವುಗಳನ್ನರಿತು ಆಚರಿಸುತ್ತಿರಲು ಆಗ ರೇ ಕವೇ ಪಂಚಾಕ್ಷರಿ, ಪೂರಕವೇ ಓಂಕಾರ, ಕುಂಭಕವೇ ಚಿತ್‌ಶಕ್ತಿರೂ ವಾಗುವದು. ಈ ರೀತಿಯನ್ನರಿತು ಆಚರಿಸುವದೇ ಲಿಂಗ ಜಪವು ಅಥವ ಶಿವಜಪವು.

(೨೭೩) ಚಿದ್ರುದ್ರಾಕ್ಷಿಃ— ಇದಕ್ಕೆ ಚಿದಕ್ಷಮಣಿ ಎಂತಲೂ ಹೆ ರಿವೆ. ಕರದಲ್ಲಿರುವ ಇಷ್ಟ ಲಿಂಗವು ಷಡಾಧಾರ ಚಕ್ರಗಳಲ್ಲಿ ಆರು ತೆ ನಾದ ಲಿಂಗವಾಗಿ ಪ್ರಕಟವಾಗುತ್ತದೆ. ಆಧಾರದಲ್ಲಿ ಚತುರ್ವಿಧ ಬಿಂದು ಲಿಂಗ, ಸ್ವಾಧಿಷ್ಠಾನದಲ್ಲಿ ಷಡ್ವಿಧಧಾತುಲಿಂಗ, ಮಣಿಪೂರಕದಲ್ಲಿ ದ ವಿಧ ಕ್ಷೇತ್ರಲಿಂಗ, ಅನಾಹತದಲ್ಲಿ ದ್ವಾದಶವಿಕೃತಿಲಿಂಗ, ವಿಶುದ್ಧಿಯಲ್ಲಿ ಷೋಡಶಕಳಾಲಿಂಗ, ಆಜ್ಞೆಯಲ್ಲಿ ಆತ್ಮವಿದ್ಯಾಲಿಂಗ ಎಂದು ಅದು ಕರೆ ಯಲ್ಪಡುತ್ತದೆ. ಅಂತರಂಗದಲ್ಲಿ ಹೀಗೆ ಲಿಂಗವು ಸ್ಥಾಪಿತವಾಗುವದ ರಿಂದ ವೀರಶೈವನು ಪ್ರಾಣಲಿಂಗಿ ಎಂದೆನಿಸಿಕೊಳ್ಳುತ್ತಾನೆ. ಷಟ್‌ಚಕ್ರ ಗಳಲ್ಲಿರುವ ಈ ಲಿಂಗಗಳಲ್ಲಿ ರುದ್ರರು ಸಂಬಂಧಪಟ್ಟಿರುತ್ತಾರೆ. ಈ ರುದ್ರರು ಒಟ್ಟು ೫೦ ಜನರು. ಆಧಾರದಲ್ಲಿ ೪ ರುದ್ರರು, ಸ್ವಾಧಿಷ್ಠಾನದಲ್ಲಿ ೬ ರುದ್ರರು, ಮಣಿಪೂರಕದಲ್ಲಿ ೧೦ ರುದ್ರರು, ಅನಾಹತದಲ್ಲಿ ೧ ರುದ್ರರು, ವಿಶುದ್ಧಿಯಲ್ಲಿ ೧೬ ರುದ್ರರು, ಆಜ್ಞೆಯಲ್ಲಿ ಇಬ್ಬರು, ಹೀಗೆ ೫೦ ರುದ್ರರು ಇದ್ದಾರೆ. ಅವರು ಲೋಮವಿಲೋಮದಲ್ಲಿ ಒಂದುನೂರು ರುದ್ರರಾಗುತ್ತಿದ್ದು ಅವರೊಡನೆ ಮಾಯಾಖ್ಯ ಪಂಚಾಕ್ಷರಿ ಓಂ, ಹ್ರಾಂ ಹ್ರೀಂ ನಮಃ ಶಿವಾಯ ಈ ಎಂಟು ಕೂಡಲು ನೂರೆಂಟು ರುದ್ರ ಬೀಜಗಳಾಗುತ್ತವೆ. ಇವುಗಳೇ ಚಿದ್ರುದ್ರಾಕ್ಷಿಗಳು ಎಂದೆನಿಸಿಕೊಳ್ಳು ತ್ತವೆ.



ಈ ರುದ್ರರಿಗೆ ನೂರೆಂಟು ಶಕ್ತಿಗಳು ಸತಿಪತಿಭಾವದಿಂದಿರುತ್ತಾರೆ. ಆಯಾ ಚಕ್ರಗಳಲ್ಲಿ ಎಷ್ಟು ಜನ ರುದ್ರರು ಇದ್ದಾರೋ, ಅಷ್ಟೇ ಸಂಖ್ಯೆ ಯಿಂದ ಶಕ್ತಿಯರೂ ಇದ್ದು ಮಾಯಾಖ್ಯಗೂಡಿ ೧೦೮ ಶಕ್ತಿಗಳಾಗಿ ರುದ್ರ ರೊಡನೆ ಬೆರೆದು ಚಿದ್ಗ್ರಂಥಿಗಳೆಂದೆನಿಸಿಕೊಳ್ಳುತ್ತಾರೆ.

ಆಗ ಲಿಂಗವೇ ಮಂತ್ರ, ಮಂತ್ರವೇ ಚಿತ್ತು ಎಂದು ಅರಿದು ಜಪಿಸಲು ಪ್ರಾಣವಾಯುವಿಕಾರವಳಿಯುತ್ತದೆ, ಸುಜ್ಞಾನವೇ ಸೂತ್ರವಾ ಗುತ್ತದೆ. ಚಿದ್ರುದ್ರಾಕ್ಷಿಯ ಈ ತೆರನನ್ನು ಅರಿದು ಜಪಿಸುವುದು. ಇದ ನ್ನರಿತು ಜಪಿಸಲು, ಭಕ್ತನಲ್ಲಿ ಲಿಂಗಶಕ್ತಿಯು ಉದ್ಭವಿಸುತ್ತದೆ.

(೨೭೪) ಕಂಠಸ್ಥಾನದಲ್ಲಿಯ ರುದ್ರರ ಮತ್ತು ಶಕ್ತಿಯರ ಹೆಸರು ಗಳು ಕೆಳಗೆ ವಿವರಿಸಿದಂತೆ ಇವೆ. ಇವರು ಸ್ವರಾಕ್ಷರ ಮೂರ್ತಿಗಳೆಂದು ಹೇಳಲ್ಪಡುತ್ತಾರೆ.

| ರುದ್ರರು. | ಶಕ್ತಿಯರು. | ಅಕ್ಷರಗಳು. |
|---|---|---|
| ಶ್ರೀಕಂಠ | ಪೂರ್ಣೋದರಿ | ಅ |
| ಅನಂತ | ವಿರಜೆ | ಆ |
| ಸೂಕ್ಷ್ಮ | ಶಾಲ್ಮಲಿ | ಇ |
| ತ್ರಿಮೂರ್ತಿ | ಲೋಲಾಕ್ಷಿ | ಈ |
| ಅಮರೇಶ | ವರ್ತುಳಾಕ್ಷಿ | ಉ |
| ಅರ್ಘೀಶ | ದೀರ್ಘನಾಸಿಕೆ | ಊ |
| ಭಾರಭೂತಿ | ದೀರ್ಘಮುಖಿ | ಋ |
| ಅರಿಲೇಶ | ಗೋಮುಖಿ | ೠ |
| ಸ್ಥಾಣುಕ | ದೀರ್ಘ ಜಿಹ್ವೆ | ಌ |
| ಹರ | ಕುಂಡೋದರಿ | ೡ |
| ಝಂಟೀಶ | ಊರ್ಧ್ವಕೇಶಿ | ಏ |
| ಜಾತುಕ | ವಿಕೃತಮುಖಿ | ಐ |

| | | |
|---|---|---|
| ಸದ್ಯೋಜಾತ | ಜ್ವಾಲಾಮುಖಿ | ಓ |
| ಅನುಗ್ರಹೇಶ್ವರ | ಉಲ್ಕಾಮುಖಿ | ಔ |
| ಅಕ್ರೂರ | ಶ್ರೀಮುಖಿ | ಅಂ |
| ಮಹಾಸೇನ | ವಿದ್ಯಾಮುಖಿ | ಅಃ |

(೨೭೫) ಹೃದಯಸ್ಥಾನದಲ್ಲಿರುವ ರುದ್ರರ ಮತ್ತು ಶಕ್ತಿಯರ ಹೆಸರುಗಳು ಕೆಳಗೆ ವಿವರಿಸಿದಂತೆ ಇವೆ. ಇವರು ವಿಕಲಾಕ್ಷರಾದಿ ದೇವತೆಗಳು ಮತ್ತು ದ್ವಾದಶಾಕ್ಷರರು. ಇದು ಅನಾಹತ ಚಕ್ರವು.

| ರುದ್ರರು. | ಶಕ್ತಿಯರು. | ಅಕ್ಷರಗಳು. |
|---|---|---|
| ಕ್ರೋಧೀಶ | ಮಹಾಕಾಳಿ | ಕ |
| ಚಂಡೇಶ | ಸರಸ್ವತಿ | ಖ |
| ಪಂಚಾಂತಕಶಿವೋತ್ತಮ | ಗೌರಿ | ಗ |
| ಶಿವೋತ್ತಮ | ಮಂತ್ರಶಕ್ತಿ | ಘ |
| ಏಕರುದ್ರ | ಆತ್ಮಶಕ್ತಿ | ಙ |
| ಕೂರ್ಮ | ಭೂತಮಾತೆ | ಚ |
| ಏಕನೇತ್ರ | ಲಂಬೋದರಿ | ಛ |
| ಚತುರಾಸನ | ದ್ರಾವಿಣಿ | ಜ |
| ಅಜೇಶ | ನಗರಿ | ಝ |
| ಸರ್ವ | ಖೇಚರಿ | ಞ |
| ಸೋಮೇಶ | ಮಂಜರಿ | ಟ |
| ಲಾಂಗುಲಿ | ರೂಪಿಣಿ | ಠ |

(೨೭೬) ಉದರ ಸ್ಥಾನದಲ್ಲಿರುವ ರುದ್ರರು ಮತ್ತು ಶಕ್ತಿಯರು ಕೆಳಗೆ ವಿವರಿಸಿದಂತೆ ಇದ್ದಾರೆ. ಇವರು ೧೦ ಜನರು ಇದ್ದಾರೆ. ಇದು ಮಣಿಪೂರಕ ಚಕ್ರವು.



| ರುದ್ರರು. | ಶಕ್ತಿಯರು. | ಅಕ್ಷರಗಳು. |
|---|---|---|
| ದಾರುಕ | ನಿರಜೆ | ಡ |
| ಅರ್ಧನಾರೀಶ್ವರ | ಕಾಲೋದರಿ | ಢ |
| ಸೋಮ | ಪೂತನಿ | ಣ |
| ಉಮಾಕಾಂತ | ಭದ್ರಕಾಳಿ | ತ |
| ಆಷಾಢದಂಡಿ | ಯೋಗಿನಿ | ಥ |
| ಸ್ಫುರ | ಶಂಖಿನಿ | ದ |
| ಅತ್ರಿರುದ್ರ | ಘರ್ಜನಿ | ಧ |
| ಮೀನರುದ್ರ | ಕಾಲರಾತ್ರಿ | ನ |
| ಮೇಷರುದ್ರ | ಕರ್ದಿನಿ | ಪ |
| ಲೋಹಿತ | ಕಪರ್ದಿನಿ | ಫ |

(೨೭೭) ಗುಹ್ಯಸ್ಥಾನದಲ್ಲಿರುವ ಸ್ವಾಧಿಷ್ಠಾನ ಚಕ್ರದಲ್ಲಿರುವ ರುದ್ರರ ಮತ್ತು ಶಕ್ತಿಯರ ಹೆಸರುಗಳು ಕೆಳಗೆ ಕಾಣಿಸಿದಂತೆ ಇವೆ.

| ರುದ್ರರು. | ಶಕ್ತಿಯರು. | ಅಕ್ಷರಗಳು. |
|---|---|---|
| ಶಿಖಿ | ವಾಗ್ನವೆ | ಬ |
| ಸಕಲಂಡ | ಜಯೆ | ಭ |
| ದ್ವಿಲಂಡ | ಸುಮುಖಿ | ಮ |
| ಮಹಾಕಾಲ | ಈಶ್ವರಿ | ಯ |
| ಸಾಲ | ರೇವತಿ | ರ |
| ಭುಜಂಗೇಶ | ಮಾಧವಿ | ಲ |

(೨೭೮) ಗುದಸ್ಥಾನದಲ್ಲಿಯ ಆಧಾರಚಕ್ರದಲ್ಲಿರುವ ರುದ್ರರು ಮತ್ತು ಶಕ್ತಿಯರು ನಾಲ್ವರು. ಇವರ ಹೆಸರುಗಳು ಕೆಳಗೆ ಕಾಣಿಸಿದಂತೆ

| ರುದ್ರರು | ಶಕ್ತಿಯರು. | ಅಕ್ಷರಗಳು. |
|---|---|---|
| ಪಿನಾಕೇಶ | ವಾರುಣಿ | ವ |
| ಖಡ್ಗೀಶ | ವಾಯುವಿ | ಶ |

| | | |
|---|---|---|
| ಬಕ | ರಕ್ಷಾವಧಾರಿಣಿ | ಷ |
| ಶ್ವೇತಭೃಗ್ವೀಶ | ಸಹಜೆ | ಸ |

(೨೭೯) ಲಲಾಟಸ್ಥಾನವಲ್ಲಿ ಇಬ್ಬರು ರುದ್ರರು ಶಕ್ತಿಯರು ಇದ್ದಾರೆ. ಇದು ಆಜ್ಞಾಚಕ್ರವು.

| **ರುದ್ರರು.** | **ಶಕ್ತಿಯರು.** | **ಅಕ್ಷರಗಳು.** |
|---|---|---|
| ಶಿವ | ವ್ಯಾಪಿನಿ | ಹಂ |
| ಸಂವರ್ತಕ | ಮಾಯಾನ್ವಿತೆ | ಕ್ಷಂ |

ಸೂಚನೆಃ— ಮೇಲೆ ನಂ॥ ೨೭೩ ರಿಂದ ೨೭೯ ರ ವರೆಗೆ ಹೇಳಿದ ವಿವರಣೆಗಳು ಚಿದ್ರುದ್ರಾಕ್ಷಿಯ ವಿಷಯದಲ್ಲಿ ಬರುತ್ತವೆ. ಬಾಹ್ಯ ಇಷ್ಟ ಲಿಂಗದ ಮೂಲಕ ಅಂತರಂಗದಲ್ಲಿ ಲಿಂಗಗಳು ಪ್ರಕಟವಾಗುತ್ತವೆ. ಇದು ಲಿಂಗಧ್ಯಾನದ ಮೂಲಕ ಜರಗುತ್ತದೆ. ಹೀಗೆ ನೆಲೆಗೊಂಡ ಲಿಂಗಗಳ ಹೆಸರುಗಳು ನಂ॥ ೨೭೩ ರಲ್ಲಿ ಇವೆ. ಅವೇ ಆಚಾರಲಿಂಗ, ಗುರು ಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗ ಳಾಗಿರುತ್ತವೆ. ಹೀಗೆ ನೆಲೆಗೊಳ್ಳುವಲ್ಲಿ ಆ ಚಕ್ರಗಳಲ್ಲಿರುವ ದಳಗಳಲ್ಲಿ ರುದ್ರರೂ ಶಕ್ತಿಯರೂ ಇವರ ಸಂಗಮವಾಗುವದು. ಈ ಸಂಗಮವು ಜರಗಿ ದಲ್ಲಿ ಅದು ಚಿದ್ಗ್ರಂಥಿ ಎಂದು ಹೇಳಲ್ಪಡುತ್ತದೆ. ಸಾಮಾನ್ಯ ಜನರಲ್ಲಿಯ ಗ್ರಂಥಿಗಳಲ್ಲಿ ರಕ್ತ, ಸ್ನಾಯುಗಳನ್ನು ಮಾತ್ರ ಕಾಣಬಹುದು. ಆದರೆ ಲಿಂಗಜಪಗಳಿಂದ ಪಕ್ವವಾದ ಲಿಂಗಾಂಗಿಯ ಶರೀರದಲ್ಲಿರುವ ಈ ಗ್ರಂಥಿಗ ಳಲ್ಲಿ ಲಿಂಗಶಕ್ತಿಯು ಇರುತ್ತದೆ. ಆದ್ದರಿಂದ ಅವು ಚಿದ್ಗ್ರಂಥಿಗಳೆಂದು ಹೇಳಲ್ಪಟ್ಟಿರುತ್ತವೆ. ಇದು ವೀರಶೈವನ ಲಿಂಗಮಂತ್ರಜಪವು.

(೨೮೦) ಲಿಂಗಜಪಗಳಲ್ಲಿ ಅರ್ಪಣಭಾವವುಃ— ವೀರಶೈವರು ಲಿಂಗಾ ರ್ಪಣ ಭಾವದಿಂದ ತಮ್ಮ ಲಿಂಗಜಪಗಳನ್ನು ಮಾಡತಕ್ಕದ್ದು. ಅರ್ಪ ಣಭಾವದಿಂದ ಲಿಂಗವು ಅಂತರಂಗವನ್ನು ವೇಧಿಸುತ್ತದೆ. ಜಪಮಾಡು ವದೆಂದರೆ ಕೇವಲ ನಾಮಸಂಕೀರ್ತನವಲ್ಲ. ಅದರೊಡನೆ ಆಯಾ ಲಿಂಗಗಳ



ನೆನಹು, ಮತ್ತು ಆ ನೆನಹಿನೊಡನೆ ಅರ್ಪಣಭಾವ ಇವುಗಳೂ ಇರತ ಕ್ಕದ್ದು. ವೀರಶೈವರಲ್ಲಿ ಲಿಂಗಜಪಗಳು ಈ ರೀತಿಯಾಗಿರುತ್ತವೆ.

(೨೮೧) ಲಿಂಗಜಪಗಳ ಭೇದಗಳುಃ— ಇವು ಮುಖ್ಯ ಎರಡು ಇವೆ. ಈ ಒಂದೊಂದು ಭೇದದಲ್ಲಿ ಅನೇಕ ಉಪಭೇದಗಳೂ ಇರು ತ್ತವೆ. ಮುಖ್ಯ ಭೇದಗಳು ಯಾವವೆಂದರೆಃ— (೧) ಪ್ರಣವೋಚ್ಚರಣೆ ಗಳು. ಇಲ್ಲಿ ಪ್ರಣಮಗಳ ಪುನಶ್ಚರಣೆ ಮಾತ್ರ ಇರುತ್ತದೆ. ಮನುಷ್ಯನಲ್ಲಿ ಹುದುಗಿರುವ ಅಂತಃಶಕ್ತಿಯನ್ನು ಒಟ್ಟಾಗಿ ಹೆಚ್ಚಿಸುವದೇ ಇವುಗಳ ಉದ್ದೇ ಶವು. (೨) ಪ್ರಣಮಗಳನ್ನು ಆಯಾ ಲಿಂಗಗಳಿಗೆ ಸಮರ್ಪಣ ಮಾಡುತ್ತ ಉಚ್ಚರಿಸುವುದು. ಇಲ್ಲಿ ಅಂತಃ ಶಕ್ತಿಯನ್ನು ಆಯಾ ಲಿಂಗಗಳಿಗೆ ಸಮ ರ್ಪಿಸುವದಿರುತ್ತದೆ. ಹೀಗೆ ಇವುಗಳಲ್ಲಿ ಎರಡು ಮುಖ್ಯ ಭೇದಗಳನ್ನು ಮಾಡಬಹುದು.

(೨೮೨) ಪ್ರಣವೋಚ್ಚರಣೆಃ— ವೀರಶೈವರಲ್ಲಿ ಅ, ಉ, ಮ; ಬ, ಸ, ವ; ಓಂ ನ ಮಃ ಶಿ ವಾ ಯ ಹೀಗೆ ೧೨ ಮುಖ್ಯ ಪ್ರಣಮಗಳು ಇರು ತ್ತವೆ. ಇವುಗಳ ಉಚ್ಚರಣೆಯ ಮುಖ್ಯ ವಿಧಗಳು ಯಾವವೆಂದರೆಃ—

೧ನೇ ವಿಧಃ—

ಬಾಂ ಸಾಂ ವಾಂ; ನಾಂ ಮಾಂ ಶೀಂ ವಾಂ ಯಾಂ ಓಂ; ಆಂ ಊಂ ಮಾಂ ಎಂದಿದೆ.

೨ ನೇ ವಿಧವುಃ—

ಓಂ; ನಾಂ ಮಾಂ; ಆಂ ಬಾಂ ಹ್ರಾಂ ಹ್ರೀಂ, ನಮಃಶಿವಾಯ.
ಓಂ, ಶೀಂ ವಾಂ; ಊಂ ಸಾಂ ಹ್ರೂಂ ಹ್ರೈಂ, ನಮಃಶಿವಾಯ
ಓಂ, ಯಾಂ; ಮಾಂ ವಾಂ ಹ್ರೌಂ ಹ್ರಃ, ನಮಃಶಿವಾಯ.

ಒಂದನೇ ವಿಧವು ಸಾಮಾನ್ಯವಾದುದು. ಎರಡನೇ ವಿಧವು ಇಷ್ಟ ಲಿಂಗ, ಪ್ರಾಣಲಿಂಗ, ಭಾವಲಿಂಗಗಳಿಗೆ ಅನುಕ್ರಮವಾಗಿ ಸಂಬಂಧಿಸಿ ಹೇಳಲ್ಪಟ್ಟಿದೆ.

(೨೮೩) ಲಿಂಗಾರ್ಪಣ ಜಪಗಳುಃ— ಇದರಲ್ಲಿ ತ್ರಿಲಿಂಗಾರ್ಪಣ ಜಪವು, ನವಲಿಂಗಾರ್ಪಣ ಜಪವೆಂತಲೂ ಕಾಯಾರ್ಪಣ ಜಪವು, ಕರಣಾರ್ಪಣ ಜಪವೆಂತಲೂ ಭೇದಗಳು ಇರುತ್ತವೆ. ಅಲ್ಲದೆ ವೀರ ಶೈವರು ತಮ್ಮ ಅಂಗದ ಮೇಲೆ ಧರಿಸುವ ಇಷ್ಟಲಿಂಗಕ್ಕೆ ಸಂಬಂಧಿಸಿದ ಜಪವೂ ಒಂದು ಇದೆ.

(೨೮೪) ತ್ರಿಲಿಂಗಾರ್ಪಣ ಜಪವುಃ —

ಓಂ ಹ್ರಾಂ ನಾಂ ನಮಃಶಿವಾಯ ಆಚಾರಲಿಂಗಾಯನಮಃ
ಓಂ ಹ್ರೀಂ ಮಾಂ ನಮಃಶಿವಾಯ ಗುರುಲಿಂಗಾಯನಮಃ
ಇಷ್ಟಲಿಂಗವೇ ನಿಮಗರ್ಪಿತವು.

ಓಂ ಹ್ರೂಂ ಶೀಂ ನಮಃಶಿವಾಯ ಶಿವಲಿಂಗಾಯನಮಃ
ಓಂ ಹ್ರೈಂ ವಾಂ ನಮಃಶಿವಾಯ ಜಂಗಮಲಿಂಗಾಯನಮಃ
ಪ್ರಾಣಲಿಂಗವೇ ನಿಮಗರ್ಪಿತವು.

ಓಂ ಹ್ರೌಂ ಯಾಂ ನಮಃಶಿವಾಯ ಪ್ರಸಾದಲಿಂಗಾಯನಮಃ
ಓಂ ಹ್ರಃ ಓಂ ನಮಃಶಿವಾಯ ಮಹಾಲಿಂಗಾಯನಮಃ
ಭಾವಲಿಂಗವೇ ನಿಮಗರ್ಪಿತವು.

(೨೮೫) ನವಲಿಂಗಾರ್ಪಣ ಜಪವುಃ— ಇದರಲ್ಲಿ ಷಡ್ಲಿಂಗ ಜಪವೂ ಸೇರಿಕೊಂಡಿರುತ್ತದೆ. ಇದರಲ್ಲಿ ಎರಡು ವಿಧಗಳಿವೆ.

೧ನೇ ವಿಧಃ —

ಓಂ ಹ್ರಾಂ ನಾಂ ಆಚಾರಲಿಂಗಾಯನಮಃ
ಓಂ ಹ್ರೀಂ ಮಾಂ ಗುರುಲಿಂಗಾಯನಮಃ
ಓಂ ಹ್ರೂಂ ಶೀಂ ಶಿವಲಿಂಗಾಯನಮಃ
ಓಂ ಹ್ರೈಂ ವಾಂ ಜಂಗಮಲಿಂಗಾಯನಮಃ
ಓಂ ಹ್ರೌಂ ಯಾಂ ಪ್ರಸಾದಲಿಂಗಾಯನಮಃ
ಓಂ ಹ್ರಃ ಓಂ ಮಹಾಲಿಂಗಾಯನಮಃ



ಓಂ ಅಂ ಇಷ್ಟಲಿಂಗಾಯನಮಃ
ಓಂ ಊಂ ಪ್ರಾಣಲಿಂಗಾಯನಮಃ
ಓಂ ಮಾಂ ಭಾವಲಿಂಗಾಯನಮಃ

ಇವುಗಳಲ್ಲಿ ಮೊದಲನೆಯ ಆರು ಷಟ್‌ಸ್ಥಲಕ್ಕೂ ಉಳಿದ ಮೂರು ಅವುಗಳಿಗೆ ಮೇಲಿರುವ ಶೂನ್ಯ ಸ್ಥಲಗಳಿಗೂ ಸಂಬಂಧಿಸುತ್ತವೆ.

೨ನೇ ವಿಧಃ— ಕೆಳಗಿನದರಲ್ಲಿ ಬ, ಸ, ವ; ಅ, ಉ, ಮ ಪ್ರಣಮಗಳನ್ನೊಡಗೊಂಡು ಮಾಡತಕ್ಕ ಜಪದ ಕ್ರಮವಿದೆ. ಅದರಲ್ಲಿ ಪ್ರಣಮಗಳಲ್ಲಿ ಮಂತ್ರಶಕ್ತಿಯನ್ನು ಹೆಚ್ಚಿಸುವದಕ್ಕೋಸ್ಕರ ಒಂದಕ್ಕಿಂತಲೂ ಹೆಚ್ಚು ಸಾರೆ ಅವು ಇಡಲ್ಪಟ್ಟವೆ. ಅದು ಹೇಗೆಂದರೆಃ—

(೧) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ; ಅಂ ಓಂ ಊಂ ಓಂ ಮಾಂ ಆಚಾರಲಿಂಗಾಯನಮಃ

(೨) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ; ಅಂ ಓಂ ಊಂ ಓಂ ಮಾಂ ಗುರುಲಿಂಗಾಯನಮಃ.

(೩) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಒಂ ವಾಂ ಓಂ ಯಾಂ; ಓಂ ಓಂ ಓಂ; ಅಂ ಓಂ ಊಂ ಓಂ ಮಾಂ ಶಿವಲಿಂಗಾಯನಮಃ.

(೪) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ; ಅಂ ಓಂ ಊಂ ಓಂ ಮಾಂ ಜಂಗಮಲಿಂಗಾಯನಮಃ.

(೫) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ, ಓಂ ಯಾಂ; ಓಂ ಓಂ ಓಂ; ಅಂ ಓಂ ಊಂ ಓಂ ಮಾಂ ಪ್ರಸಾದಲಿಂಗಾಯನಮಃ.

(೬) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ, ಓಂ ಯಾಂ; ಓಂ ಓಂ ಓಂ; ಅಂ ಓಂ ಊಂ ಓಂ ಮಾಂ ಮಹಾಲಿಂಗಾಯನಮಃ.

(೭) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ; ಅಂ ಓಂ ಊಂ ಓಂ ಮಾಂ ಇಷ್ಟಲಿಂಗಾಯನಮಃ.

(೮) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ, ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ; ಅಂ ಓಂ ಊಂ ಓಂ ಮಾಂ ಪ್ರಾಣಲಿಂಗಾಯನಮಃ.

(೯) ಓಂ ಬಾಂ ಓಂ ನಾಂ ಓಂ ವಾಂ; ಓಂ ಸಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ, ಓಂ; ಅಂ ಓಂ ಊಂ ಓಂ ಮಾಂ ಭಾವಲಿಂಗಾಯನಮಃ

(೨೮೬) ಕಾಯಾರ್ಪಣ ಜಪವು:—

(ಅ) ಭೋಜ್ಯವನ್ನು ಓಂ ಹ್ರಾಂ ನಾಂ ನಮಃಶಿವಾಯ ಈ ಮಂತ್ರದಿಂದ ಆಚಾರಲಿಂಗಕ್ಕೆ ಅರ್ಪಿಸುವುದು.

(ಬ) ಪಾನ್ಯವನ್ನು ಓಂ ಹ್ರೀಂ ಮಾಂ ನಮಃಶಿವಾಯ ಎಂಬ ಮಂತ್ರದಿಂದ ಗುರುಲಿಂಗಕ್ಕೆ ಸಮರ್ಪಿಸುವುದು.

(ಕ) ಭಕ್ಷ್ಯವನ್ನು ಓಂ ಹ್ರೂಂ ಶೀಂ ನಮಃಶಿವಾಯ ಎಂಬ ಮಂತ್ರದಿಂದ ಶಿವಲಿಂಗಕ್ಕೆ ಅರ್ಪಿಸುವುದು.

(ಡ) ಚೋಹ್ಯವನ್ನು ಓಂ ಹ್ರೈಂ ವಾಂ ನಮಃಶಿವಾಯ ಎಂಬ ಮಂತ್ರದಿಂದ ಜಂಗಮಲಿಂಗಕ್ಕೆ ಅರ್ಪಿಸುವುದು.

(ಇ) ಲೇಹ್ಯವನ್ನು ಓಂ ಹ್ರೌಂ ಯಾಂ ನಮಃಶಿವಾಯ ಎಂಬ ಮಂತ್ರದಿಂದ ಪ್ರಸಾದಲಿಂಗಕ್ಕೆ ಅರ್ಪಿಸುವುದು.



(ಫ) ಇಲ್ಲದಲ್ಲಿಯ ರೂಪನ್ನು ಪರಿಣಾಮವೆಂಬ ದ್ರವ್ಯವನ್ನು ತೃಪ್ತಿ ಎಂಬ ಪದಾರ್ಥವನ್ನು ಓಂ ಹ್ರಃ ಓಂ ನಮಃ ಶಿವಾಯ ಎಂಬ ಮಂತ್ರದಿಂದ ಮಹಾಲಿಂಗಕ್ಕೆ ಅರ್ಪಿಸುವುದು.

(೨೮೭) ಕರಣಾರ್ಪಣ ಜಪವು:— ರೂಪು, ರುಚಿ, ತೃಪ್ತಿಗಳನ್ನು ಯಾವ ಜಪದಿಂದ ಅರ್ಪಿಸತಕ್ಕದ್ದೋ ಅದೇ ಕರಣಾರ್ಪಣ ಜಪವೆಂದು ಹೇಳಲ್ಪಡುತ್ತಿದೆ. ಅದು ಹೇಗೆಂದರೆ:—

ಓಂ ಹ್ರಾಂ ಹ್ರೀಂ. ಬಾಂ ಅಂ ನಾಂ ಮಾಂ. ನಮಶ್ಶಿವಾಯ

ಎಂದು ರೂಪು ಪದಾರ್ಥವನ್ನು ಇಷ್ಟಲಿಂಗಕ್ಕೆ ಅರ್ಪಿಸುವುದು.

ಓಂ ಹ್ರೂಂ ಹ್ರೈಂ, ಸಾಂ ಊಂ ಶೀಂ ವಾಂ, ನಮಶ್ಶಿವಾಯ

ಎಂದು ರುಚಿ ಪದಾರ್ಥವನ್ನು ಪ್ರಾಣಲಿಂಗಕ್ಕೆ ಅರ್ಪಿಸುವುದು.

ಓಂ ಹ್ರೌಂ ಹ್ರಃ, ವಾಂ ಮಾಂ ಯಾಂ, ಓಂ, ನಮಶ್ಶಿವಾಯ

ಎಂದು ತೃಪ್ತಿಪದಾರ್ಥವನ್ನು ಭಾವಲಿಂಗಕ್ಕೆ ಅರ್ಪಿಸುವುದು. ಇದು ಕರಣಾರ್ಪಣ ಜಪವು.

(೨೮೮) ಇಷ್ಟಲಿಂಗಾರ್ಪಣ ಜಪವು:- ಇದನ್ನು ಅರ್ಪಿಸುವ ವಿಧವು ಹೇಗೆಂದರೆ:—

| | | | |
|---|---|---|---|
| ಓಂ | ಹ್ರಾಂ | ನಮಃಶಿವಾಯ - ಪೀಠದಲ್ಲಿರುವ | ಆಚಾರಲಿಂಗಕ್ಕೆ |
| ಓಂ | ಹ್ರೀಂ | ನಮಃಶಿವಾಯ - ಕಟಿಯಲ್ಲಿರುವ | ಗುರುಲಿಂಗಕ್ಕೆ |
| ಓಂ | ಹ್ರೂಂ | ನಮಃಶಿವಾಯ - ವರ್ತುಳದಲ್ಲಿರುವ | ಶಿವಲಿಂಗಕ್ಕೆ |
| ಓಂ | ಹ್ರೈಂ | ನಮಃಶಿವಾಯ - ಗೋಮುಖದಲ್ಲಿರುವ | ಜಂಗಮಲಿಂಗಕ್ಕೆ |
| ಓಂ | ಹ್ರೌಂ | ನಮಃಶಿವಾಯ - ನಾಳದಲ್ಲಿರುವ | ಪ್ರಸಾದಲಿಂಗಕ್ಕೆ |
| ಓಂ | ಹ್ರಃ | ನಮಃಶಿವಾಯ - ಗೋಳಕದಲ್ಲಿರುವ | ಮಹಾಲಿಂಗಕ್ಕೆ |

ಸಮರ್ಪಿಸುವುದು.

ಬೇರೆ ಪದ್ಧತಿಯ ಜಪಗಳೂ ಉಂಟು. ಆದರೆ ಅವುಗಳ ಮೂಲ ತತ್ವಗಳಲ್ಲಿ ಭೇದವಿಲ್ಲ. ಅವುಗಳ ಉಪಯೋಗದಂತೆ ಬೇರೆ ಬೇರೆ ಹೆಸರುಗಳುಂಟು. ಅವುಗಳಲ್ಲಿ ಕೆಲವು ಮಾದರಿಗಾಗಿ ಕೆಳಗೆ ಕೊಡಲ್ಪಟ್ಟಿವೆ.

(೨೮೯) ಹಸ್ತಪ್ರಸಾದ ಜಪಃ – ಈ ಜಪದ ವಿವರ ಕೆಳಗೆ ಕಾಣಿಸಿದಂತೆ ಇದೆ. ಇಷ್ಟ ಪ್ರಾಣ ಭಾವಲಿಂಗಗಳ ಜಪಗಳು ಇವಾಗಿವೆ.

ಓಂ ಹ್ರಾಂ ಹ್ರೀಂ ಬಾಂ ಆಂ ನಾಂ ಮಾಂ. ಇಷ್ಟಲಿಂಗಾಯನಮಃ
ಓಂ ಹ್ರೂಂ ಹ್ರೇಂ ಸಾಂ ಊಂ ಶೀಂ ವಾಂ ಪ್ರಾಣಲಿಂಗಾಯನಮಃ
ಓಂ ಹ್ರೈಂ ಹ್ರಃ ವಾಂ ಮಾಂ ಯಾಂ ಓಂ ಭಾವಲಿಂಗಾಯನಮಃ

ಇದನ್ನು ಜಪಿಸಿ ಅಡಿಗೆಯನ್ನು ಮುಟ್ಟಿಸುವುದು.

(೨೯೦) ರೂಪು ರುಚಿ ತೃಪ್ತಿಗಳ ಅರ್ಪಣಃ—

ನಮಃಶಿವಾಯ ರೂಪು ಇಷ್ಟಲಿಂಗಾಯನಮಃ
ನಮಃಶಿವಾಯ ರುಚಿ ಪ್ರಾಣಲಿಂಗಾಯನಮಃ
ನಮಃಶಿವಾಯ ತೃಪ್ತಿ ಭಾವಲಿಂಗಾಯನಮಃ

ಇದೊಂದು ವಿಧದ ಕರಣಾರ್ಪಣ ಜಪವು. ಇದರ ಮೂಲಕ ಲಿಂಗಕ್ಕೆ ತೋರಿಸಿ ಎಡೆಯನ್ನು ಅರ್ಪಿಸುವುದು.

(೨೯೧) ನ್ಯಾಸಗಳುಃ— ವೀರಶೈವರಲ್ಲಿ ಅನೇಕ ತರದ ನ್ಯಾಸಗಳಿವೆ. ನ್ಯಾಸಗಳು ಮಂತ್ರಾಕ್ಷರಗಳ ಮೂಲಕವೇ ಆಗುತ್ತವೆ. ಅವುಗಳಿಂದ ವೀರಶೈವನು ಮಂತ್ರ ಶರೀರಿಯಾಗಿ ಲಿಂಗವನ್ನು ಪೂಜಿಸುತ್ತಾನೆ. ಅವುಗಳ ವಿವರಗಳು ಮುಂದೆ ಕೊಡಲ್ಪಡುವವು. ಹೀಗೆ ಮಂತ್ರಗಳ ಕಾರ್ಯಗಳು ಅನೇಕ ವಿಧವಾಗಿವೆ.

(೨೯೨) ತ್ರಿಲಿಂಗಗಳ ಜಪಸಂಖ್ಯೆಃ- ಇಷ್ಟಲಿಂಗದ ಜಪಗಳ ಸಂಖ್ಯೆ ೪೩೨೦. ಪ್ರಾಣಲಿಂಗದ ಜಪಗಳ ಸಂಖ್ಯೆ ೯೫೦೪. ಭಾವಲಿಂಗದ ಜಪಗಳ ಸಂಖ್ಯೆ ೭೭೭೬. ಹೀಗೆ ಒಟ್ಟು ಜಪಸಂಖ್ಯೆ ೨೧೬೦೦ ಆಗುತ್ತವೆ.



ಇಷ್ಟಲಿಂಗದಲ್ಲಿ ಆಚಾರಲಿಂಗದ ೪ ದಳಗಳು ಗುರುಲಿಂಗದ ೬ ದಳಗಳು ಅಂತು ೧೦ ದಳಗಳಿದ್ದು ಪ್ರತಿಯೊಂದು ದಳಕ್ಕೆ ೪೩೨ ಜಪಸಂಖ್ಯೆಯ ಪ್ರಕಾರ ಇದಕ್ಕೆ ಒಟ್ಟು ೪೩೨೦ ಜಪಗಳಾಗುತ್ತವೆ. ಪ್ರಾಣಲಿಂಗದಲ್ಲಿ ೧೦ ದಳಗಳುಳ್ಳ ಶಿವಲಿಂಗ ಮತ್ತು ೧೨ ದಳಗಳುಳ್ಳ ಜಂಗಮಲಿಂಗವಿದ್ದು ಮೇಲಿನ ಎಣಿಕೆಯ ಪ್ರಕಾರ ಜಪಗಳ ಸಂಖ್ಯೆ ೯೫೦೪ ಆಗುತ್ತವೆ. ಭಾವಲಿಂಗದಲ್ಲಿ ೧೬ ದಳಗಳುಳ್ಳ ಪ್ರಸಾದಲಿಂಗ ಮತ್ತು ೨ ದಳಗಳುಳ್ಳ ಮಹಾಲಿಂಗವಿದ್ದು ಅದೇ ಎಣಿಕೆಯಿಂದ ಒಟ್ಟು ಜಪಸಂಖ್ಯೆ ೭೭೭೬ ಆಗುತ್ತವೆ. ಜಪಕ್ಕೆ ಒಟ್ಟು ೬೦ ಗಳಿಗೆ ಅಂದರೆ ೨೪ ತಾಸುಗಳು ಹತ್ತುತ್ತವೆ.

(೨೯೩) ಷಡ್ವಿಧ ಲಿಂಗಗಳ ಜಪಸಂಖ್ಯೆಃ—

| ಲಿಂಗ | ಲಿಂಗಕ್ಕೆ ದಳಗಳು | ಒಂದು ದಳಕ್ಕೆ ಜಪಸಂಖ್ಯೆ | ಲಿಂಗದ ಒಟ್ಟು ಜಪಸಂಖ್ಯೆ | ಹತ್ತುವ ವೇಳೆ ಗಳಿಗೆ-ಪಾನಿಪಾಳ |
|---|---|---|---|---|
| ಆಚಾರಲಿಂಗ | ೪ | ೪೩೨ | ೧೭೨೮ | ೪-೪೮ |
| ಗುರುಲಿಂಗ | ೬ | ೪೩೨ | ೨೫೯೨ | ೭-೧೨ |
| ಶಿವಲಿಂಗ | ೧೦ | ೪೩೨ | ೪೩೨೦ | ೧೨- ೦ |
| ಜಂಗಮಲಿಂಗ | ೧೨ | ೪೩೨ | ೫೧೮೪ | ೧೪-೨೪ |
| ಪ್ರಸಾದಲಿಂಗ | ೧೬ | ೪೩೨ | ೬೯೧೨ | ೧೯-೧೨ |
| ಮಹಾಲಿಂಗ | ೨ | ೪೩೨ | ೮೬೪ | ೨-೨೪ |
| | ೫೦ | | ೨೧೬೦೦ | ೬೦- ೦ |

ವೇಳೆಯ ಕೋಷ್ಟಕಃ— ೬೦ ಪಾನಿಪಾಳ = ೧ ಗಳಿಗೆ; ೨½ ಗಳಿಗೆ ೧ ತಾಸು.

(೨೯೪) ಲಿಂಗಗಳ ಜಪಸಂಖ್ಯೆಯ ಪ್ರಮಾಣಗಳುಃ— ಆಚಾರಲಿಂಗದ ಜಪಕ್ಕೆ ೩೦೮ರಿಂದ ೧೬ ವೇಳೆ ಜಪಿಸುವುದು. ಗುರುಲಿಂಗದ ಜಪಕ್ಕೆ ೩೦೮ರಿಂದ ೨೪ ವೇಳೆ ಜಪಿಸುವುದು. ಶಿವಲಿಂಗದ ಜಪಕ್ಕೆ, ೩೦೮ರಿಂದ ೪೦ ವೇಳೆ ಜಪಿಸುವುದು. ಜಂಗಮಲಿಂಗದ ಜಪಕ್ಕೆ ೩೦೮ರಿಂದ

೪೮ ವೇಳೆ ಜಪಿಸುವುದು. ಪ್ರಸಾದಲಿಂಗದ ಜಪಕ್ಕೆ ೩೦೮ರಿಂದ ೬೪ ವೇಳೆ ಜಪಿಸುವುದು. ಮಹಾಲಿಂಗದ ಜಪಕ್ಕೆ ೩೦೮ರಿಂದ ೮ ವೇಳೆ ಜಪಿಸುವುದು. ಅಂದರೆ ಎಲ್ಲಕ್ಕೂ ಕಡಿಮೆ ೨೦೦ ಜಪಗಳು ಆಗುತ್ತಿದ್ದು ಎಲ್ಲಕ್ಕೂ ಹೆಚ್ಚು ಜಪಗಳು ೨೧೬೦೦ ಆಗುವವು. ಎಲ್ಲಕ್ಕೂ ಕಡಿಮೆ ಎಂದರೆ ೨೦೦ ಜಪಗಳಿಗೆ ಈಗಿನ ಲೆಕ್ಕದ ಪ್ರಕಾರ ೧೬ ಮಿನಿಟುಗಳು ಹತ್ತುತ್ತವೆ.

(೨೯೫) ಮಿಶ್ರಷಟ್‌ಸ್ಥಲ ಜಪಗಳು(೩೬ ಅಂಗಲಿಂಗ ಸ್ಥಳಗಳ ಜಪಗಳು):— ಪ್ರತಿಯೊಂದು ಲಿಂಗದಲ್ಲಿ ಆರಾರು ಲಿಂಗಗಳಿವೆಯಷ್ಟೇ. ಒಂದು ಲಿಂಗದಲ್ಲಿಯ ಜಪಗಳನ್ನು ಈ ಆರರಲ್ಲಿ ಸಮನಾಗಿ ಹಂಚಿಹಾಕತಕ್ಕದ್ದು. ಹೀಗೆ ಹಂಚಿಹಾಕಿದಲ್ಲಿ ಆಯಾ ಲಿಂಗಗಳಿಗೆ ಆಗುವ ಜಪಸಂಖ್ಯೆ ಕೆಳಗೆ ಕಾಣಿಸಿದಂತೆ ಆಗುವುದು.

| ಲಿಂಗಗಳು | ಒಟ್ಟು ಜ. ಸಂಖ್ಯೆ | ಮಿಶ್ರ ಲಿಂಗಗಳ ಸಂಖ್ಯೆ | | ಪ್ರತಿ ಲಿಂಗಕ್ಕೆ ಜ. ಸಂಖ್ಯೆ | ಜಪಕ್ಕೆ ಹತ್ತುವ ವೇಳೆ ಪಳಗಳು | ಪಳಕ್ಕೆ ಜಪಗಳು |
|---|---|---|---|---|---|---|
| ಆಚಾರಲಿಂಗ | ೧೭೨೮ | ಆಚಾರಲಿಂಗ ಮಿಶ್ರ | ೬ | ೨೮೮ | ೪೮ | ೬ |
| ಗುರುಲಿಂಗ | ೨೫೯೨ | ಗುರುಲಿಂಗ ಮಿಶ್ರ | ೬ | ೪೩೨ | ೭೨ | ೬ |
| ಶಿವಲಿಂಗ | ೪೩೨೦ | ಶಿವಲಿಂಗ ಮಿಶ್ರ | ೬ | ೭೨೦ | ೧೨೦ | ೬ |
| ಜಂಗಮಲಿಂಗ | ೫೧೮೪ | ಜಂಗಮಲಿಂಗ ಮಿಶ್ರ | ೬ | ೮೬೪ | ೧೪೪ | ೬ |
| ಪ್ರಸಾದಲಿಂಗ | ೬೯೧೨ | ಪ್ರಸಾದಲಿಂಗ ಮಿಶ್ರ | ೬ | ೧೧೫೨ | ೧೯೨ | ೬ |
| ಮಹಾಲಿಂಗ | ೮೬೪ | ಮಹಾಲಿಂಗ ಮಿಶ್ರ | ೬ | ೧೪೪ | ೨೪ | ೬ |
| | | | ೩೬ | | | |

ಈ ಪ್ರಕಾರ ೩೬ ಸ್ಥಳಗಳಿಗೆ ಸಂಬಂಧಿಸಿ ಜಪಗಳನ್ನು ಮಾಡುವುದು.



(೨೯೬) ಅಷ್ಟದಳಕ್ಕೆ ಜಪ ವಿವರಃ-- ಹೃದಯದಲ್ಲಿ ಅಷ್ಟದಳ ಕಮಲವಿದೆ. ಅಲ್ಲಿ ಪ್ರಾಣಲಿಂಗವು ನೆಲೆಗೊಂಡಿದೆ. ದಳಗಳಿಗನುಸರಿಸಿ ಪ್ರಾಣದ ಗುಣಗಳು ಉಂಟಾಗುತ್ತವೆ. ಅವುಗಳ ಒಲವುಗಳನ್ನು ಲಿಂಗಜಪದಿಂದ ಸರಿಪಡಿಸುವುದು.

| | | | | | | |
|---|---|---|---|---|---|---|
| (೧) | ಪೃಥ್ವೀ | ತತ್ವದ | ಪೂರ್ವ | ದಳಕ್ಕೆ | ಜಪ | ೫೦೦೦ |
| (೨) | ಅಪ್ಪು | ,, | ವರುಣ | ,, | ,, | ೪೦೦೦ |
| (೩) | ಅಗ್ನಿ | ,, | ಅಗ್ನಿ | ,, | ,, | ೩೦೦೦ |
| (೪) | ವಾಯು | ,, | ವಾಯುವ್ಯ | ,, | ,, | ೨೦೦೦ |
| (೫) | ಆಕಾಶ | ,, | ಈಶಾನ್ಯ | ,, | ,, | ೧೦೦೦ |
| (೬) | ಸೂರ್ಯ | ,, | ಯಮ | ,, | ,, | ೨೪೦೦ |
| (೭) | ಚಂದ್ರ | ,, | ನೈಋತ್ಯ | ,, | ,, | ೩೨೦೦ |
| (೮) | ಆತ್ಮ | ,, | ಕುಬೇರ | ,, | ,, | ೧೦೦೦ |
| | | | | | ಒಟ್ಟು | ೨೧೬೦೦ |

(೨೯೭) ಷಟ್‌ಸ್ಥಲಗಳಿಗೆ ೧೦೧ ಸ್ಥಲಗಳ ಸಂಬಂಧಃ— ಜಪಗಳ ಮೂಲಕ ಈ ಸಂಬಂಧವು ದೃಢಪಡುತ್ತದೆ. ಭಕ್ತಸ್ಥಳ ೧೫ ಆಚಾರಲಿಂಗ ಸ್ಥಳ ೯ ಇವು ಇಷ್ಟಲಿಂಗದ ವೃತ್ತದಲ್ಲಿ ಸಂಬಂಧವು. ಮಹೇಶ್ವರಸ್ಥಳ ೯ ಗುರುಲಿಂಗಸ್ಥಳ ೯ ಇವು ಇಷ್ಟಲಿಂಗದ ಕಟಿಯಲ್ಲಿ ಸಂಬಂಧವು. ಪ್ರಸಾದಿ ಸ್ಥಲ ೭ ಶಿವಲಿಂಗಸ್ಥಲ ೯ ಇವು ಇಷ್ಟಲಿಂಗದ ವರ್ತುಳದಲ್ಲಿ ಸಂಬಂಧವು. ಪ್ರಾಣಲಿಂಗಿಸ್ಥಲ ೫ ಜಂಗಮಲಿಂಗಸ್ಥಲ ೧೨ ಇದ್ದು ಇವು ಇಷ್ಟಲಿಂಗದ ಗೋಮುಖದಲ್ಲಿ ಸಂಬಂಧವು. ಶರಣಸ್ಥಲ ೪, ಪ್ರಸಾದಲಿಂಗಸ್ಥಲ ೯ ಇದ್ದು ಇವು ಲಿಂಗದ ನಾಳದಲ್ಲಿ ಸಂಬಂಧವು. ಐಕ್ಯಸ್ಥಲ ೪ ಮಹಾಲಿಂಗಸ್ಥಲ ೯ ಇವು ಇಷ್ಟಲಿಂಗದ ಗೋಳಕದಲ್ಲಿ ಸಂಬಂಧವು.

ಹೀಗೆ ಅಂಗಸ್ಥಲಗಳು ೪೪, ಲಿಂಗಸ್ಥಲಗಳು ೫೭ ಅಂತು ೧೦೧ ಸ್ಥಲಗಳು ಇವೆ. ಇವುಗಳನ್ನು ಮೇಲೆ ಹೇಳಿದಂತೆ ಇಷ್ಟಲಿಂಗದ ಷಡ್ವಿಧ

ಸಂಬಂಧ ಮಾಡಿಕೊಂಡು ಭಕ್ತಿಜ್ಞಾನವೈರಾಗ್ಯದಿಂದಾಚ್ರ
ಸ್ಥಾನಗಳಲ್ಲಿ ಸಂಬಂಧ ಮಾಡಿಕೊಂಡು ಮಾಡಿಕೊಂಡಲ್ಲಿ ಲಿಂಗವು
ಮತ್ತು ಜಪಗಳ ಮೂಲಕ ಲಿಂಗಸಂಬಂಧ ಮಾಡಿಕೊಂಡಲ್ಲಿ ಲಿಂಗವು
ಸುತ್ತ ಜಪಗಳ ಮೂಲಕ ಲಿಂಗಸಂಬಂಧ ಇದೇ ಇರುತ್ತದೆ.
ತನ್ನಲ್ಲಿ ಪ್ರಕಟವಾಗುತ್ತದೆ. ಜಪಗಳ ಕಾರ್ಯವು ಇದೇ ಇರುತ್ತದೆ.

ಟೀಪು:— ಮೇಲ್ಕಂಡ ವಿವರಣೆಗಳಲ್ಲಿ ಮಂತ್ರಗಳ ಜಪದಲ್ಲಿ ಒಂದು ವ್ಯವಸ್ಥೆ ಇದ್ದದ್ದು ವಾಚಕರಿಗೆ ಕಂಡುಬರದೆ ಇರಲಾರದು. ನ, ಮ, ಶಿ, ವಾ, ಯ, ಓಂ ಇವು ಕ್ರಮವಾಗಿ ಸ್ಥೂಲದಿಂದ ಹೆಚ್ಚು ಹೆಚ್ಚು ಸೂಕ್ಷ್ಮವಾಗುತ್ತ ಹೋಗುವದರಿಂದ ಇವು ಕ್ರಮವಾಗಿ ಆಚಾರಲಿಂಗ ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಗಳಿಗೆ ಸಂಬಂಧಿಸುತ್ತವೆ ಈ ಆರು ಅನುಕ್ರಮವಾಗಿ ಇಷ್ಟ, ಪ್ರಾಣ, ಭಾವಲಿಂಗಗಳಿಂದ ಎರಡೆರಡರಂತೆ ಉಂಟಾಗಿವೆ. ಇವು ಮೂರು ಅ ಉ ಮ ಪ್ರಣವಗಳಿಂದಾಗಿವೆ. ಈ ತ್ರಿವಿಧಗಳು ಸೂಕ್ಷ್ಮವಾದವು. ಅವು ಇಷ್ಟ ಪ್ರಾಣ ಭಾವಲಿಂಗಗಳನ್ನು ಸೂಚಿಸುತ್ತವೆ. ಮತ್ತು ಈ ತ್ರಿವಿಧ ಲಿಂಗಗಳ ತರುವಾಯ ಶೂನ್ಯಲಿಂಗಗಳು ಬರುತ್ತವೆ. ಇವು ಬ, ಸ, ವ ಪ್ರಣವಗಳಿಂದ ಸೂಚಿತವಾಗುತ್ತವೆ. ಈ ತತ್ವವನ್ನನುಸರಿಸಿ ಎಲ್ಲ ಜಪಗಳ ರಚನೆ ಇರುತ್ತದೆ. ಈ ಪ್ರಣವಗಳನ್ನು ಆಯಾ ಲಿಂಗಗಳಿಗೆ ಸಂಬಂಧಿಸುವಲ್ಲಿ ಹ್ರಾಂ, ಹ್ರೀಂ ಹ್ರೂಂ, ಹ್ರೈಂ, ಹ್ರೌಂ, ಹ್ರಃ ಎಂಬ ಷಟ್ ಪ್ರಸಾದ ಮಂತ್ರವು ಅಥವಾ ಕೀಲಕಮಂತ್ರವು ಉಪಯೋಗಿಸಲ್ಪಡುತ್ತದೆ. ಈ ತತ್ವಗಳನ್ನು ಎಲ್ಲ ಮಂತ್ರಗಳಲ್ಲಿಯೂ ಕಾಣಬಹುದು. ಒಮ್ಮೊಮ್ಮೆ ಈ ಮಂತ್ರಾಕ್ಷರಗಳನ್ನು ಏಕಕಾಲಕ್ಕೆ ಗೋಚರಕ್ಕೆ ತಂದುಕೊಂಡು ಯಾವ ವಿಶಿಷ್ಟಲಿಂಗವನ್ನು ನಾವು ಉದ್ದೇಶಿಸಿಕೊಂಡಿರುತ್ತೇವೆಯೋ ಅದನ್ನಷ್ಟೇ ಕಡೆಗೆ ಅಂದುಬಿಡುವ ಪದ್ಧತಿಯೂ ಉಂಟು. (ನಂ॥ ೨೮೫—೨ನೇ ವಿಧ ನೋಡಿರಿ.) ಆದರೆ ಇದರಿಂದ ಮೂಲತತ್ವಕ್ಕೆ ಯಾವದೂ ವ್ಯತ್ಯಯ ಬರುವದಿಲ್ಲ. ಜಪಗಳ ಸಂಖ್ಯೆಯು ಆಯಾಚಕ್ರಗಳ ದಳಗಳ ಮೇಲೆ ಅವಲಂಬಿಸಿರುತ್ತದೆ. ದಳಗಳಲ್ಲೆಲ್ಲ ರುದ್ರರೂ ಶಕ್ತಿಯರೂ ವಾಸಮಾಡುತ್ತಾರೆ. ಅವರ ಸಂಗಮದಿಂದ ಆಯಾ ಚಕ್ರಗಳಲ್ಲಿ ಕೆಲವೊಂದು ಲೈಂಗಿಕ ಶಕ್ತಿಯು ಉಂಟಾಗುತ್ತದೆ. ಈ ಶಕ್ತಿಯಲ್ಲಿಯೇ ಆಯಾ ಲಿಂಗಗಳು



ನೆಲೆಗೊಂಡಿರುತ್ತವೆ. ಹೀಗೆ ಆಯಾ ಲಿಂಗಗಳು ನೆಲೆಗೊಳ್ಳಲು, ಆ ಲಿಂಗಗಳ ಅಧೀನದಲ್ಲಿಯೇ ಮನುಷ್ಯನ ಕಾರ್ಯಗಳು ಜರಗಹತ್ತುವವು. ಆಗ ಅವನಲ್ಲಿ ಒಂದು ಅಲೌಕಿಕ ಶಕ್ತಿಯು ಒಡಮೂಡುತ್ತದೆ. ಶಿವ ಶರಣರಲ್ಲಿ ಇಂಥ ಶಕ್ತಿಯು ಇರುತ್ತದೆ. ಆದರೆ ಅವರು ಅದನ್ನು ಆತ್ಮೋದ್ಧಾರಕ್ಕೆ ಮತ್ತು ಜನ ಸೇವೆಗೆ ಉಪಯೋಗ ಮಾಡತಕ್ಕದ್ದೇ ಹೊರತು ಸ್ವಾರ್ಥಕ್ಕೆ ಅಥವಾ ದುಷ್ಟ ಕಾರ್ಯಗಳಿಗೆ ಉಪಯೋಗಿಸತಕ್ಕದ್ದಲ್ಲ. ಹೀಗೆ ಜಪಗಳು ಮನುಷ್ಯನ ಕ್ರಿಯೆಗಳಲ್ಲಿ, ನಡೆಯಲ್ಲಿ, ಕಾಯಕದಲ್ಲಿ, ಸಹಾಯಕವಾಗುತ್ತದೆ.

(೨೯೮) ಜಪದ ಕಟ್ಟಳೆ:— ಒಂದು ಉಶ್ವಾಸನಿಶ್ವಾಸಕ್ಕೆ ಒಂದು ಜಪವಿರುತ್ತದೆ. ಇಂಥ ಒಂಬತ್ತು ಉಶ್ವಾಸನಿಶ್ವಾಸಗಳಾದಲ್ಲಿ ಚಿಟ್ಟಿ ಎಂಬ ಹೆಸರಿದೆ. ತಾಸಿಗೆ ೯೦೦ ಜಪಗಳಾಗತಕ್ಕದ್ದು. ಅಂದರೆ ಒಂದು ಮಿನಿಟಿಗೆ ೧೫ ಜಪಗಳ ಪ್ರಮಾಣವಿರುತ್ತದೆ. ತಾಸಿಗೆ ೯೦೦ ಜಪದಂತೆ ೨೪ ತಾಸಿಗೆ ೨೧೬೦೦ ಜಪಗಳಾಗುತ್ತವೆ. ಇದು ಜಪದ ಕಟ್ಟಳೆ.

(೨೯೯) ಮಿಶ್ರಾರ್ಪಣವು:— ಅಂತರಂಗ ಬಹಿರಂಗದಲ್ಲೆಲ್ಲ ಲಿಂಗ ದೊಡಗೂಡಿರುವುದೇ ಮಿಶ್ರಾರ್ಪಣವು. ಅಷ್ಟಾವರಣಗಳನ್ನು ತಿಳಿದವರಿಗೆ ಮಾತ್ರ ಇದು ಸಾಧ್ಯವು. ಇವರಲ್ಲಿ ಕಾಯಾರ್ಪಣ, ಕರಣಾರ್ಪಣ ಭಾವಾರ್ಪಣವೆಂದು ಮೂರು ವಿಭಾಗಗಳಿವೆ. ಕಾಯಾರ್ಪಣವು ಹಿಂದೆ ೧೬೦ (೧) ಇದರಲ್ಲಿ, ಕರಣಾರ್ಪಣವು ೧೬೦ (೨) ಇದರಲ್ಲಿ, ಭಾವಾರ್ಪಣವು ೧೬೦ (೩) ಇದರಲ್ಲಿ, ಹೇಳಲ್ಪಟ್ಟಿವೆ. ಕರಣಾರ್ಪಣದಲ್ಲಿ ಆಚಾರಲಿಂಗ ಮಿಶ್ರ ೬, ಗುರುಲಿಂಗ ಮಿಶ್ರ ೬, ಶಿವಲಿಂಗ ಮಿಶ್ರ ೬, ಜಂಗಮಲಿಂಗ ಮಿಶ್ರ ೬, ಪ್ರಸಾದಲಿಂಗ ಮಿಶ್ರ ೬, ಮಹಾಲಿಂಗ ಮಿಶ್ರ ೬, ಹೀಗೆ ೩೬ ವಿಭೇದಗಳಿವೆ. ಅವುಗಳ ವಿವರಗಳು ೧೬೦ (೨) ಇದರಲ್ಲಿ ಹೇಳಲ್ಪಟ್ಟಿವೆ. ಈ ಪ್ರಕಾರ ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣಗಳೊಳಗೆ ಷಡ್ವಿಧಲಿಂಗ ಮಿಶ್ರಾರ್ಪಣವು ಪಸರಿಸಿ ಆ ೩೬ ಮಿಶ್ರಾರ್ಪಣದೊಳಗೆ ೨೧೬ ಮಿಶ್ರಾರ್ಪಣವು ಪಸರಿಸಿ ಲಿಂಗ ಪರಿಪೂರ್ಣನಾಗಿ

ಪಿಂಡಾಂಡದಲ್ಲಿ ಸದಾ ಸನ್ನಿಹಿತನಾಗಿರುತ್ತಾನೆ. ಈ ಷಡ್ವಿಧ ಲಿಂಗಗಳು
ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ ಸ.ಜ್ಞಾನ, ಸದ್ಭಾವ, ಎಂಬ
ಹಸ್ತಗಳು ತನ್ನಲ್ಲಿ ಸ್ವಸ್ಥವಾಗಿ ನೆಲೆಗೊಂಡಲ್ಲದೆ ಸಾಧ್ಯವಾಗವು. ಷಡ್ವಿಧ
ಲಿಂಗವು ಸಾಧ್ಯವಾದಲ್ಲದೆ ಷಡ್ವಿಧಲಿಂಗಸಂಯೋಗವಾಗದು. ಷಡ್ವಿಧ
ಲಿಂಗ ಸಂಯೋಗವಾದಲ್ಲದೆ ಷಡ್ವಿಧಾರ್ಪಣದ ಮಿಶ್ರದೋಗಣ ಮಿಶ್ರಾ
ರ್ಪಣದ ಛಾಯೆ ಕಾಣಿಸದು. ಆದ್ದರಿಂದ ಹಸ್ತಗಳು ತನ್ನಲ್ಲಿ ನೆಲೆ
ಗೊಳ್ಳುವ ರೀತಿಗಳನ್ನು ಅರಿಯಬೇಕು. ಅದು ಹೇಗೆಂದರೆ:—

(೨೦೦) ಸುಚಿತ್ತದ ನೆಲೆ:- ಕ್ರಿಯಾಶಕ್ತಿಯಮಥನದಿಂದ ಪ್ರಾಣ
ವಾಯುವನ್ನು ನಿಲಿಸಿ ಆಧಾರ ಚಕ್ರದ ಕೆಂಪುವರ್ಣದ ನಾಲ್ಕು ಅಕ್ಷ
ರದ ಅಧಿ ದೈವವಾದ ಬ್ರಹ್ಮನ ಜಾಗ್ರತಾವಸ್ಥೆಯನ್ನು ನಕಾರವೆಂಬ
ಬೀಜಾಕ್ಷರದಿಂದ ತಿಳಿಯಬೇಕು. ಈ ಷಡ್ವಿಧ ವಿಚಾರವಿಡಿದು ಸದ್ಭಕ್ತಿ
ಯಿಂದ ಒಂದನೇ ತತ್ವದಾದಿಯ ಪಶ್ಚಿಮ ದಿಕ್ಕಿನ ಸದ್ಯೋಜಾತ ಮುಖ
ವನ್ನರಿತು ಪೃಥ್ವಿಯ ಕಠಿಣವನ್ನು ಕಿಂಕುರ್ವಾಣ ಭಕ್ತಿಯಿಂದ ತಿಳಿದು
ತನುಗುಣನಾಸ್ತಿಯಾಗಬೇಕು. ಹೀಗೆ ಭಕ್ತಸ್ಥಲವನಂಗಂಗೊಳ್ಳಬೇಕು.
ಇದು ಸುಚಿತ್ತದ ನೆಲೆಯು. ಹೀಗೆ ಆಚಾರಲಿಂಗದ ಮಿಶ್ರವನ್ನರಿ
ಬೇಕು.

(೨೦೧) ಸುಬುದ್ಧಿಯ ನೆಲೆ:-ಜ್ಞಾನ ಶಕ್ತಿಯ ಮಥನದಿಂದ ಅಪಾ
ನವಾಯುವ ನಿಲಿಸಿ ಸ್ವಾಧಿಷ್ಠಾನ ಚಕ್ರದ ನೀಲವರ್ಣದ ಷಡ್ದಳದ ಆರ
ಕ್ಷರದ ಅಧಿದೈವವಾದ ವಿಷ್ಣು ಆತನ ಸ್ವಪ್ನಾವಸ್ಥೆಯನ್ನು ಮಕಾರವೆಂಬ
ಬೀಜಾಕ್ಷರದಿಂದ ತಿಳಿಯಬೇಕು. ತಿಳಿದು ನೈಷ್ಠಿಕಾಭಕ್ತಿಯಿಂದ ಎರ
ಡನೆಯ ತತ್ವದಾದಿಯ ಉತ್ತರ ದಿಕ್ಕಿನ ವಾಮದೇವಮುಖವನರಿತು
ಅಪ್ಪುವಿನ ಮೃದುವನು ದೃಢವ್ರತದಿಂದ ತಿಳಿದು ಸಂಸಾರನಾಸ್ತಿಯಾ
ಗಬೇಕು. ಹೀಗೆ ಮಹೇಶ್ವರ ಸ್ಥಲವನಂಗಂಗೊಳ್ಳಬೇಕು. ಇದು ಸುಬು
ದ್ಧಿಯ ನೆಲೆಯು. ಹೀಗೆ ಗುರುಲಿಂಗದ ಮಿಶ್ರವನ್ನರಿಯಬೇಕು.



(೨೦೨) ನಿರಹಂಕಾರದ ನೆಲೆ:- ಇಚ್ಛಾ ಶಕ್ತಿಯ ಮಥನದಿಂದ
ವ್ಯಾನವಾಯುವ ನಿಲಿಸಿ ಮಣಿಪೂರಕ ಚಕ್ರದ ಕುಂಕುಮ ವರ್ಣದ
ದಶದಳದ ಅಧಿದೈವ ರುದ್ರ ಆತನ ಸುಷುಪ್ತಾವಸ್ಥೆಯನ್ನು ಶಿಕಾರವೆಂಬ
ಬೀಜಾಕ್ಷರದಿಂದ ತಿಳಿಯಬೇಕು. ತಿಳಿದು ಷಡ್ವಿಧ ವಿಚಾರವಿಡಿದು ಅವ
ಧಾನ ಭಕ್ತಿಯಿಂದ ಮೂರನೆಯ ತತ್ವದಾದಿಯಾದ ದಕ್ಷಿಣ ದಿಕ್ಕಿನ
ಅಘೋರ ಮುಖವನರಿದು ಅಗ್ನಿಯ ಉಷ್ಣವನ್ನು ಶಿವಯೋಗದಿಂದ
ಕೆಡಿಸಿ ಕಾಮ್ಯನಾಸ್ತಿಯಾಗಬೇಕು. ಹೀಗೆ ಪ್ರಸಾದಿಸ್ಥಲವನಂಗಂಗೊ
ಳ್ಳಬೇಕು. ಇದು ನಿರಹಂಕಾರದ ನೆಲೆಯು. ಈ ಪ್ರಕಾರ ಶಿವಲಿಂಗದ
ಮಿಶ್ರವನ್ನರಿಯಬೇಕು.

(೨೦೩) ಸುಮನದ ನೆಲೆ:- ಆದಿಶಕ್ತಿಯ ಮಥನದಿಂದ ಉದಾನ
ವಾಯುವ ನಿಲಿಸಿ ಅನಾಹತ ಚಕ್ರದ ಪೀತವರ್ಣದ ದ್ವಾದಶ ದಳದ
ದ್ವಾದಶಾಕ್ಷರದ ಅಧಿದೈವ ಈಶ್ವರನ ತೂರ್ಯಾವಸ್ಥೆಯನ್ನು ವಕಾರವೆಂಬ
ಬೀಜಾಕ್ಷರದಿಂದ ತಿಳಿಯಬೇಕು. ಈ ಷಡ್ವಿಧ ವಿಚಾರವಿಡಿದು ಅನುಭಾವ
ಭಕ್ತಿಯಿಂದ ನಾಲ್ಕನೆಯ ತತ್ವದಾದಿಯಾದ ಪೂರ್ವ ದಿಕ್ಕಿನ ತತ್ಪು
ರುಷ ಮುಖವನರಿದು ವಾಯುವಿನ ಚಲನೆಯನು ಪರಿಪೂರ್ಣದಿಂದ
ಕೆಡಿಸಿ ಗಮನನಾಸ್ತಿಯಾಗಬೇಕು. ಹೀಗೆ ಪ್ರಾಣಲಿಂಗ ಸ್ಥಲವನಂ
ಗಂಗೊಳ್ಳಬೇಕು. ಇದು ಸುಮನದ ನೆಲೆಯು. ಹೀಗೆ ಜಂಗಮಲಿಂಗದ
ಮಿಶ್ರವನ್ನರಿಯಬೇಕು.

(೨೦೪) ಸುಜ್ಞಾನದ ನೆಲೆ:- ಪರಾಶಕ್ತಿಯ ಮಥನದಿಂದ ಸಮಾನ
ವಾಯುವ ನಿಲಿಸಿ ವಿಶುದ್ಧಿ ಚಕ್ರದ ಶ್ವೇತವರ್ಣದ ಷೋಡಶದಳದ
ಷೋಡಶಾಕ್ಷರದ ಅಧಿದೈವ ಸದಾಶಿವನ ಅತೀತಾವಸ್ಥೆಯನ್ನು ಯಕಾರ
ವೆಂಬ ಬೀಜಾಕ್ಷರದಿಂದ ತಿಳಿಯಬೇಕು. ತಿಳಿದು ಷಡ್ವಿಧ ವಿಚಾರವಿ
ಡಿದು ಆನಂದ ಭಕ್ತಿಯಿಂದ ಐದನೆಯ ತತ್ವದಾದಿಯ ಊರ್ಧ್ವದಿಕ್ಕಿನ
ಈಶಾನ್ಯವನರಿದು ಆಕಾಶದ ಭ್ರಮೆಯನು ಪರಿಣಾಮದಿಂದ ತಿಳಿದು

ಕರ್ಮನಾಸ್ತಿಯಾಗಬೇಕು. ಹೀಗೆ ಶರಣಸ್ಥಲವನಂಗಂಗೊಳ್ಳುವದು ಸುಜ್ಞಾನದ ನೆಲೆಯು. ಈ ಪ್ರಕಾರ ಪ್ರಸಾದಲಿಂಗದ ಮಿಶ್ರವನ್ನರಿಯಬೇಕು.

(೩೦೫) ಸದ್ಭಾವದ ನೆಲೆ:-- ಚಿತ್ ಶಕ್ತಿಯ ಮಥನದಿಂದ ನಾಗ ಕೂರ್ಮ ಕ್ರಕರ ದೇವದತ್ತ ಧನಂಜಯವೆಂಬ ಪಂಚವಾಯುಗಳನ್ನು ನಿಲಿಸಿ ಆಜ್ಞಾಚಕ್ರದ ಮಾಣಿಕ್ಯವರ್ಣದ ದ್ವಿದಳದ ಹಂ ಕ್ಷಂ ಎಂಬೆರಡು ಅಕ್ಷರದ ಅಧಿದೈವ ಮಹಾಗುರುವಿನ ನಿರಾವಸ್ಥೆಯನು ಓಂಕಾರವೆಂಬ ಬೀಜಾಕ್ಷರದಿಂದ ತಿಳಿಯಬೇಕು. ತಿಳಿದು ಷಡ್ವಿಧ ವಿಚಾರವಿಡಿದು ಸಮರಸ ಭಕ್ತಿಯಿಂದ ಆರನೆಯ ತತ್ವದಾದಿಯ ಗಂಭೀರ ದಿಕ್ಕಿನ ಮಹಾತತ್ವದ ಮುಖವನರಿದು ಆತ್ಮನ ಅಹಂ ಮಮತೆಯನು ಘನ ಪ್ರಕಾಶದಿಂದ ತಿಳಿದು ಮೋಕ್ಷಾರ್ಥನಾಸ್ತಿಯಾಗಬೇಕು. ಇದು ಐಕ್ಯಸ್ಥಲವನಂಗಂಗೊಳ್ಳುವದು. ಇದು ಸದ್ಭಾವದ ನೆಲೆಯು. ಹೀಗೆ ಮಹಾಲಿಂಗದ ಮಿಶ್ರವನ್ನರಿಯಬೇಕು.

(೩೦೬) ಪಂಚೀಕರಣ, ಮಿಶ್ರಾರ್ಪಣ, ಷಟ್‌ಸ್ಥಲಾಚರಣೆ, ಅಷ್ಟಾವರಣ, ಲಿಂಗಾಂಗಸಾಮರಸ್ಯ ಇವುಗಳ ಸಂಬಂಧವು:-- ಪಂಚೀಕರಣದ ತತ್ವಕ್ಕನ ಸೇರಿಸಿ ಮಿಶ್ರಾರ್ಪಣವಿರುತ್ತದೆ. ಮಿಶ್ರಾರ್ಪಣವು ಷಟ್‌ಸ್ಥಲಾಚರಣೆಗಳಿಗೆ ಸಂಬಂಧಿಸಿರುತ್ತದೆ. ಈ ಷಟ್‌ಸ್ಥಲಗಳ ಸಂಬಂಧವು ಹಿಂದೆ ನಂ॥ ೩೦೦ ರಿಂದ ನಂ॥ ೩೦೫ ಇವುಗಳಲ್ಲಿ ಹೇಳಲ್ಪಟ್ಟಿದೆ. ಷಟ್‌ಸ್ಥಲಾಚರಣೆಯು ಅಷ್ಟಾವರಣಗಳಲ್ಲಿ ರೂಪುಗೊಳ್ಳುತ್ತದೆ. ಈ ಅಷ್ಟಾವರಣಗಳ ಆಚರಣೆಯ ಮೂಲಕ ಇಷ್ಟ ಪ್ರಾಣ ಭಾವಲಿಂಗಗಳು ತನ್ನಲ್ಲಿ ಅಳವಡುತ್ತವೆ. ತನ್ನಲ್ಲಿ ಅವು ಅಳವಟ್ಟಾಗಳೇ ಲಿಂಗಾಂಗ ಸಾಮರಸ್ಯವು ಒದಗುತ್ತದೆ. ಹೀಗೆ ಇವುಗಳ ಪರಸ್ಪರ ಸಂಬಂಧವಿದೆ. ಆದ್ದರಿಂದ ಪಂಚೀಕರಣವನ್ನು ಮೊದಲು ಅರಿಯುವದು ಅವಶ್ಯವು.

(೩೦೭) ಪಂಚೀಕರಣದ ಜ್ಞಾನ: – ಪಂಚಮಹಾಭೂತಗಳಿಂದ ಶರೀರದಲ್ಲಿ ೨೫ ತತ್ವಗಳು ಉಂಟಾಗುತ್ತವೆ. ಈ ತತ್ವಗಳ ಮೂಲಕವೇ



ಶರೀರದ ಕ್ರಿಯೆಗಳು ನಡೆಯುತ್ತವೆ. ಶರೀರದ ಕ್ರಿಯೆಗಳು ಲಿಂಗಕ್ರಿಯೆಗಳಾಗಬೇಕು. ಇದು ಮಿಶ್ರಾರ್ಪಣದ ಮೂಲಕ ಒದಗುತ್ತದೆ. ಈ ಲಿಂಗಕ್ರಿಯೆಗಳಿಂದ ಲಿಂಗಾಂಗಸಾಮರಸ್ಯವನ್ನು ಮುಂದೆ ಹೊಂದಬೇಕು. ೨೫ ತತ್ವಗಳ ಸಂಬಂಧದ ಜ್ಞಾನವೇ ಪಂಚೀಕರಣದ ಜ್ಞಾನವು. ಇದರ ಜ್ಞಾನದಿಂದ ಲಿಂಗಾಂಗಸಾಮರಸ್ಯದ ರೀತಿಯು ತಿಳಿಯುತ್ತಿದೆ.

ಟೀಪು:– ಹಿಂದೆ ನಂ॥ ೩೦೦ರಿಂದ ೩೦೫ರ ವರೆಗೆ ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ ಇವುಗಳ ನೆಲೆಗಳು ಹೇಳಲ್ಪಟ್ಟಿವೆ. ಷಟ್‌ಸ್ಥಲಗಳನ್ನು ಒಳಕೊಳ್ಳುವ ರೀತಿಗಳು ಇವುಗಳಲ್ಲಿ ವಿವರಿಸಲ್ಪಟ್ಟಿವೆ. ಮನುಷ್ಯನ ಕ್ರಿಯೆಗಳು ಹೇಗೆ ಉಂಟಾಗುತ್ತವೆಂಬುದನ್ನು ಅರಿತಲ್ಲಿ ಇವುಗಳ ಜ್ಞಾನವಾಗುವದು. ಇದು ಮಿಶ್ರಾರ್ಪಣಕ್ಕೂ ಅವಶ್ಯವಾದದ್ದು. ಈ ವಿವರವು ಹೇಗೆಂದರೆ:–

ವಾಯುಗಳ ಮೂಲಕ ಶರೀರದ ಕ್ರಿಯೆಗಳು ನಡಿಯುತ್ತವಷ್ಟೇ. ಇವುಗಳ ಮೂಲಕವೇ ಚಾಲನೆಗಳು ಆಯಾ ಅವಯವಗಳಿಗೆ ಮುಟ್ಟುತ್ತವೆ. ಈ ಚಾಲನೆಗಳು ಮನುಷ್ಯನಲ್ಲಿ ಸರಿಯಾಗಿ ನಡೆಯುವದಕ್ಕೋಸ್ಕರ ಸರಿಯಾದ ಶಕ್ತಿಗಳು ಈ ವಾಯುಗಳ ದ್ವಾರಾ ಸಂಚರಿಸಬೇಕು. ಇದರಿಂದ ಆ ವಾಯುಗಳು ಹರಿದಾಡುವ ತಪ್ಪು ದಾರಿಗಳು ಇಲ್ಲದಾಗುತ್ತವೆ. ಕ್ರಿಯಾಶಕ್ತಿಯ ಮಥನ ಅಂದರೆ ಹೊರಬೀಳುವಿಕೆಯಿಂದ ಪ್ರಾಣವಾಯುವೂ, ಜ್ಞಾನಶಕ್ತಿಯ ಮಥನದಿಂದ ಅಪಾನವಾಯುವೂ, ಇಚ್ಛಾಶಕ್ತಿಯ ಮಥನದಿಂದ ವ್ಯಾನವಾಯುವೂ, ಆದಿಶಕ್ತಿಯ ಮಥನದಿಂದ ಉದಾನವಾಯುವೂ, ಪರಾಶಕ್ತಿಯ ಮಥನದಿಂದ ಸಮಾನವಾಯುವೂ, ಚಿತ್‌ಶಕ್ತಿಯ ಮಥನದಿಂದ ನಾಗ, ಕೂರ್ಮ, ಕ್ರಕರ, ದೇವದತ್ತ, ಧನಂಜಯ ವಾಯುಗಳೂ ಸರಿಪಡುವವು.

ಹೀಗೆ ಇವುಗಳನ್ನು ಸರಿಪಡಿಸಬೇಕಾದರೆ ನಕಾರಾದಿ ಮಂತ್ರಗಳ ಮೂಲಕವೇ ಶಕ್ಯವು. ಮಂತ್ರದಿಂದ ಜಾಗ್ರದಾದಿ ಅವಸ್ಥೆಗಳೂ ಕೂಡ ಪರಿಣಾಮಕ್ಕೆ ಬರುವವು. ಆಧಾರಚಕ್ರದಲ್ಲಿಯ ಬ್ರಹ್ಮನ ಜಾಗ್ರತಾವಸ್ಥೆ

ಯನ್ನು ನಕಾರ ಬೀಜಾಕ್ಷರ ಮಂತ್ರದಿಂದಲೂ ಸ್ವಾಧಿಷ್ಠಾನ ಚಕ್ರದಲ್ಲಿಯ ವಿಷ್ಣುವಿನ ಸ್ವಪ್ನಾವಸ್ಥೆಯನ್ನು ಮಕಾರ ಬೀಜಾಕ್ಷರದಿಂದಲೂ ಮಣಿಪೂರಕ ಚಕ್ರದಲ್ಲಿಯ ರುದ್ರನ ಸುಷುಪ್ತ್ಯಾವಸ್ಥೆಯನ್ನು ಶಿಕಾರ ಬೀಜಾಕ್ಷರದಿಂದಲೂ ಅನಾಹತ ಚಕ್ರದಲ್ಲಿಯ ಈಶ್ವರನ ತೂರ್ಯಾವಸ್ಥೆಯನ್ನು ವಕಾರ ಬೀಜಾಕ್ಷರದಿಂದಲೂ ವಿಶುದ್ಧಿ ಚಕ್ರದಲ್ಲಿರುವ ಸದಾಶಿವನ ಅತೀತಾವಸ್ಥೆಯನ್ನು ಯಕಾರ ಬೀಜಾಕ್ಷರದಿಂದಲೂ ಆಜ್ಞಾ ಚಕ್ರದಲ್ಲಿಯ ಮಹಾ ಗುರುವಿನ ನಿರಾವಸ್ಥೆಯನ್ನು ಓಂಕಾರ ಬೀಜಾಕ್ಷರದಿಂದಲೂ ತಿಳಿಯಬೇಕು. ಇದರಿಂದ ಆ ಅವಸ್ಥೆಗಳಲ್ಲಿಯ ಪ್ರಾಪಂಚಿಕ ಒಲವುಗಳು ನಷ್ಟವಾಗುವವು. ಆಗ ಅವುಗಳ ವ್ಯಾಪಾರಗಳು ಅವನ ಅಂಕೆಯಲ್ಲಿ ಉಳಿಯುವವು.

ಹೀಗೆ ಅವು ಉಳಿದಲ್ಲಿ ಸದ್ಭಕ್ತಿ, ನೈಷ್ಠಿಕಾ ಭಕ್ತಿ, ಅವಧಾನಭಕ್ತಿ, ಅನುಭಾವ ಭಕ್ತಿ, ಆನಂದ ಭಕ್ತಿ, ಮತ್ತು ಸಮರಸಭಕ್ತಿಗಳು ನೆಲೆಗೊಳ್ಳುವವು. ಪೃಥ್ವಿ, ಅಪ್, ತೇಜ, ವಾಯು, ಆಕಾಶ, ಆತ್ಮ ಇವುಗಳ ಮೂಲಕ ಮನುಷ್ಯನಲ್ಲಿ ಅನುಕ್ರಮವಾಗಿ, ಉಂಟಾಗುವ ವ್ಯವಹಾರಿಕ ಗುಣಗಳು ಹೊರಟು ಹೋಗುವವು. ಅವು ಸಾಂಸಾರಿಕ ಒಲವುಗಳು, ಕಾಮ್ಯಗಳು, ನಾನಾ ಬಗೆಯ ಗಮನಾಗಮನಗಳು ಮತ್ತು ಕರ್ಮಗಳು ಮತ್ತು ಅಹಂ ಮಮತೆಗಳು ಇದ್ದು ಅವು ದೂರಾಗುತ್ತವೆ.

ಇವುಗಳನ್ನು ದೂರಮಾಡುವಲ್ಲಿ ಮನುಷ್ಯನು ಕಿಂಕುರ್ವಾಣತೆ, ದೃಢವ್ರತ, ಶಿವಯೋಗ ಇವುಗಳನ್ನು ಮೊದಲನೆಯ ಮೂರು ಸ್ಥಲಗಳಲ್ಲಿ ಉಪಯೋಗಿಸಬೇಕು. ಮತ್ತು ಪರಿಪೂರ್ಣತ್ವ, ಪರಿಣಾಮ, ಘನ ಪ್ರಕಾಶ, ಇವುಗಳ ಮೂಲಕ ಅನುಕ್ರಮವಾಗಿ ಕಡೆಯ ಮೂರು ಸ್ಥಲಗಳನ್ನು ಒಳಕೊಳ್ಳಬೇಕು.

ಹೀಗೆ ವರ್ಣಿಸಿದಲ್ಲಿ ಭಕ್ತ, ಮಹೇಶ್ವರಾದಿ ಆರು ಸ್ಥಲಗಳು ಮನುಷ್ಯನಲ್ಲಿ ಅಳವಡುತ್ತವೆ. ಅವು ಹೀಗೆ ಅಳವಡಲು ಹಿಂದೆ ನಂ॥ ೨೯೯ ಇದರಲ್ಲಿ ಹೇಳಿದಂತೆ ಆಯಾ ಲಿಂಗಗಳ ಮಿಶ್ರಗಳನ್ನು ತನ್ನಲ್ಲಿ ಉಂಟುಮಾಡಿಕೊಳ್ಳುವ ಸಾಮರ್ಥ್ಯವು ಒದಗುತ್ತದೆ.



ಈ ರೀತಿಗಳನ್ನು ವೀರಶೈವರ ಪಂಚೀಕರಣದ ಜ್ಞಾನದಿಂದ ಅರಿಯುವದು ಸುಲಭವು. ದೇಹದ ವ್ಯಾಪಾರಗಳನ್ನು ತಿಳಿಸುವದೇ ಈ ಪಂಚೀಕರಣದ ಉದ್ದೇಶವಿರುತ್ತದೆ.

(೩೦೮) ಪಂಚವಿಂಶತಿ ತತ್ವದ ದೇಹವು: ಆಕಾಶ ತತ್ವವು ಜ್ಞಾನ ಮೊದಲಾದ ಅಂತಃಕರಣ ಚತುಷ್ಟಯಗಳಲ್ಲಿರುತ್ತದೆ. ಈ ನಾಲ್ಕು ಮನ, ಬುದ್ಧಿ, ಚಿತ್ತ, ಅಹಂಕಾರಗಳಿವೆ. ವಾಯು ತತ್ವವು ಪಂಚಪ್ರಾಣ ವಾಯುಗಳಲ್ಲಿರುತ್ತದೆ. ಅವು ಸಮಾನ ವ್ಯಾನ ಉದಾನ ಅಪಾನ ಪ್ರಾಣ ವಾಯುಗಳಿರುತ್ತವೆ. ಅಗ್ನಿ ತತ್ವವು ಬುದ್ಧೀಂದ್ರಿಯಗಳಲ್ಲಿರುತ್ತದೆ. ಅವು ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣ ಇವುಗಳಿರುತ್ತವೆ. ಅಪ್ಪು ತತ್ವವು ಪಂಚ ವಿಷಯಗಳಲ್ಲಿರುತ್ತದೆ. ಅವು ಶಬ್ದ ಸ್ಪರ್ಶ ರೂಪ ರಸ ಗಂಧಗಳಿರುತ್ತವೆ. ಪೃಥ್ವೀ ತತ್ವವು ಕರ್ಮೇಂದ್ರಿಯಗಳಲ್ಲಿರುತ್ತದೆ. ಅವು ವಾಕ್ ಪಾಣಿ ಪಾದ ಗುಹ್ಯ ವಾಯು ಇವುಗಳಿರುತ್ತವೆ. (ಈ ತತ್ವಗಳ ವ್ಯಾಖ್ಯೆಗಳು ಹಿಂದೆ ನಂ. ೪೫ ರಿಂದ ೪೮ ರಲ್ಲಿ ಹೇಳಲ್ಪಟ್ಟವೆ.)

(೩೦೯) ಜ್ಞಾನ ಮೊದಲ್ಗೊಂಡು ಅಂತಃಕರಣ ಚತುಷ್ಟಯಗಳುತ್ಪತ್ತಿ:- ಆಕಾಶದ ಮೂಲತತ್ವವೇ ಜ್ಞಾನವು. ಈ ಆಕಾಶದೊಂದಂಶವು ವಾಯುವನ್ನು ಬೆರಿಸಲು ಮನಸ್ಸು, ಆಕಾಶದೊಂದಂಶವು ಅಗ್ನಿಯನ್ನು ಬೆರಿಸಲು ಬುದ್ಧಿಯು, ಆಕಾಶದೊಂದಂಶವು ಅಪ್ಪುವನ್ನು ಬೆರಿಸಲು ಚಿತ್ತ, ಆಕಾಶದೊಂದಂಶವು ಪೃಥ್ವಿಯನ್ನು ಬೆರಿಸಲು ಅಹಂಕಾರವು ಹುಟ್ಟುತ್ತವೆ.

(೩೧೦) ಪ್ರಾಣವಾಯುಗಳುತ್ಪತ್ತಿ:— ವಾಯುವಿನ ಒಂದಂಶವು ಆಕಾಶವನ್ನು ಬೆರಿಸಲು ಸಮಾನವಾಯುವು, ವಾಯುವಿನ ಮೂಲತತ್ವವೇ ಉದಾನವಾಯುವು, ವಾಯುವಿನೊಂದಂಶವು ಅಗ್ನಿಯನ್ನು ಬೆರಿಸಲು ವ್ಯಾನವಾಯುವು, ವಾಯುವಿನೊಂದಂಶವು ಅಪ್ಪುವನ್ನು ಬೆರಿಸಲು ಅಪಾನವಾಯುವು, ವಾಯುವಿನೊಂದಂಶವು ಪೃಥ್ವಿಯನ್ನು ಬೆರಿಸಲು ಪ್ರಾಣವಾಯುವು ಹುಟ್ಟುತ್ತವೆ.

(೩೧೧) ಬುದ್ಧೀಂದ್ರಿಯಗಳುತ್ಪತ್ತಿಃ— ಅಗ್ನಿಯ ಒಂದಂಶವು ಆಕಾಶವನ್ನು ಬೆರಿಸಲು ಶ್ರೋತ್ರೇಂದ್ರಿಯವು, ಅಗ್ನಿಯ ಒಂದಂಶವು ವಾಯುವನ್ನು ಬೆರಿಸಲು ತ್ವಗಿಂದ್ರಿಯವು, ಅಗ್ನಿಯ ಮೂಲ ತತ್ವವೇ ನೇತ್ರೇಂದ್ರಿಯವು, ಅಗ್ನಿಯ ಒಂದಂಶವು ಅಪ್ಪುವನ್ನು ಬೆರಿಸಲು ಜಿಹ್ವೇಂದ್ರಿಯವು, ಅಗ್ನಿಯ ಒಂದಂಶವು ಪೃಥ್ವಿಯನ್ನು ಬೆರಿಸಲು ಘ್ರಾಣೇಂದ್ರಿಯವು ಹುಟ್ಟುತ್ತವೆ.

(೩೧೨) ಪಂಚವಿಷಯಗಳುತ್ಪತ್ತಿಃ— ಅಪ್ಪುವಿನೊಂದಂಶವು ಆಕಾಶವನ್ನು ಬೆರಿಸಲು ಶಬ್ದ ವಿಷಯವು, ಅಪ್ಪುವಿನೊಂದಂಶವು ವಾಯುವನ್ನು ಬೆರಿಸಲು ಸ್ಪರ್ಶನ ವಿಷಯವು, ಅಪ್ಪುವಿನೊಂದಂಶವು ಅಗ್ನಿಯನ್ನು ಬೆರಿಸಲು ರೂಪು ವಿಷಯವು, ಅಪ್ಪುವಿನ ಮೂಲತತ್ವವೇ ರಸ ವಿಷಯವು, ಅಪ್ಪುವಿನೊಂದಂಶವು ಪೃಥ್ವಿಯನ್ನು ಬೆರಿಸಲು ಗಂಧ ವಿಷಯವು ಹುಟ್ಟುತ್ತವೆ

(೩೧೩) ಕರ್ಮೇಂದ್ರಿಯಗಳುತ್ಪತ್ತಿಃ— ಪೃಥ್ವಿಯ ಒಂದಂಶವು ಆಕಾಶವನ್ನು ಬೆರಿಸಲು ವಾಗಿಂದ್ರಿಯವು, ಪೃಥ್ವಿಯ ಒಂದಂಶವು ವಾಯುವನ್ನು ಬೆರಿಸಲು ಪಾಣೀಂದ್ರಿಯವು, ಪೃಥ್ವಿಯ ಒಂದಂಶವು ಅಗ್ನಿಯನ್ನು ಬೆರಿಸಲು ಪಾದೇಂದ್ರಿಯವು, ಪೃಥ್ವಿಯ ಒಂದಂಶವು ಅಪ್ಪುವನ್ನು ಬೆರಿಸಲು ಗುಹ್ಯೇಂದ್ರಿಯವು, ಪೃಥ್ವಿಯ ಮೂಲ ತತ್ವವೇ ಪಾಯುವಿಂದ್ರಿಯವು. ಹೀಗೆ ಇವು ಹುಟ್ಟುತ್ತವೆ.

ಟೀಪುः— ಆಯಾ ಭೂತಗಳ ಮೂಲಕ ಮೇಲೆ ನಂ॥ ೩೦೮ ರಲ್ಲಿ ಹೇಳಿದಂತೆ ತತ್ವಗಳುಂಟಾಗುತ್ತವೆ. ಇವು ಆ ಭೂತಗಳು ಅವುಗಳಲ್ಲಿ ಹೆಚ್ಚಾಗಿ ವಾಸವಾಗಿರುವದರಿಂದ ಅವು ಉಂಟಾಗುತ್ತವೆ. ಆದರೆ ಅವುಗಳ ಒಂದೊಂದಂಶದಲ್ಲಿ ಉಳಿದ ಭೂತಗಳು ಹೆಚ್ಚಾಗಿ ಬೆರೆದಲ್ಲಿ ನಂ॥ ೩೦೯ ರಿಂದ ೩೧೩ ರ ವರೆಗೆ ಹೇಳಿದ ತತ್ವಗಳುಂಟಾಗುತ್ತವೆ. ಕೆಲವೊಂದು ಮಹಾಭೂತದ ಅಂಶವು ಮತ್ತೊಂದು ಮಹಾಭೂತದಲ್ಲಿ ಹೆಚ್ಚಾಗಿ ಬೆರೆ-



ಯಲು ಅವುಗಳಿಂದ ಉಂಟಾಗುವ ತತ್ವಗಳು ಕೆಳಗೆ ವಿವರವಾಗಿ ಹೇಳಲ್ಪಟ್ಟಿವೆ.

(೩೧೪) ಪಂಚವಿಂಶತಿ ತತ್ವಗಳುಃ— ಆಕಾಶ ತತ್ವವು ಉಳಿದ ತತ್ವಗಳಲ್ಲಿ ಹೆಚ್ಚಲು, ಜ್ಞಾನ, ಸಮಾನವಾಯು, ಶ್ರೋತ್ರ, ಶಬ್ದವಿಷಯ, ವಾಕ್ಕು ಇವುಗಳುಂಟಾಗುತ್ತವೆ. ವಾಯು ತತ್ವವು ಹೆಚ್ಚಲು ಮನ, ವ್ಯಾನ, ತ್ವಕ್ಕು, ಸ್ಪರ್ಶನ, ಪಾಣಿ ಇವುಗಳುಂಟಾಗುತ್ತವೆ. ತೇಜ ಅಥವಾ ಅಗ್ನಿ ತತ್ವವು ಹೆಚ್ಚಲು ಬುದ್ಧಿ, ಉದಾನ, ನೇತ್ರ, ರೂಪು, ಪಾದ ಇವುಗಳುಂಟಾಗುತ್ತವೆ. ಅಪ್ಪು ತತ್ವ ಹೆಚ್ಚಲು ಚಿತ್, ಅಪಾನವಾಯು, ಜಿಹ್ವೆ, ರಸ, ಗುಹ್ಯ ಇವುಗಳುಂಟಾಗುತ್ತವೆ. ಪೃಥ್ವಿ ತತ್ವ ಹೆಚ್ಚಲು ಅಹಂಕಾರ, ಪ್ರಾಣ, ಘ್ರಾಣ, ಗಂಧ, ಪಾಯು ಇವುಗಳುಂಟಾಗುತ್ತವೆ.

ಟೀಪುः— ಪಂಚಾಕ್ಷರಗಳಿಂದ ಪಂಚಮಹಾಭೂತಗಳಾಗಿರುತ್ತವೆ. ಈ ಪಂಚಾಕ್ಷರಗಳೇ ಲಿಂಗಗಳಿಗೆ ಸ್ಥಾನಗಳಾಗಿವೆ. ಪಂಚಭೂತಗಳ ಗುಣಗಳನ್ನು ಕಳೆಯಲು ಮನುಷ್ಯನು ಲಿಂಗಿಯಾಗುತ್ತಾನೆ. ಪಂಚಾಕ್ಷರಿಯ ಐದು ಅಕ್ಷರಗಳಿಂದಲೇ ಪಂಚ ವಾಯುಗಳು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಪಂಚವಿಷಯಗಳು, ಜ್ಞಾನ ಮೊದಲ್ಗೊಂಡು ಅಂತಃಕರಣ ಚತುಷ್ಟಯಗಳು, ಅನುಕ್ರಮವಾಗಿ ಆಯಾ ಲಿಂಗಗಳಿಗೆ ಅರ್ಪಿತವಾಗುತ್ತವೆ. ಅರ್ಪಿತದ ಕಡೆಯಲ್ಲಿ ಪಂಚಾಕ್ಷರಗಳು ಓಂಕಾರದಲ್ಲಿ, ಪಂಚಭೂತಗಳು ಆತ್ಮನಲ್ಲಿ, ಅಡಗುವವು. ಓಂಕಾರವು ಮಹಾಲಿಂಗವಿದ್ದು, ಈ ಲಿಂಗವು ಇವುಗಳನ್ನೆಲ್ಲ ಒಳಕೊಳ್ಳುತ್ತದೆ. ಆಗ ಭಕ್ತನು ಮಹಾಲಿಂಗದಲ್ಲಿ ಅವಿರಳ ಸಂಬಂಧಿಯಾಗಿ ಪ್ರಣವ ಸ್ವರೂಪನಾಗಿ ಐಕ್ಯ ಸ್ಥಿತಿಯನ್ನು ಹೊಂದುತ್ತಾನೆ.

ಆಗ ಪೃಥ್ವಿಯೆಂಬ ಭೂತವು ಭಕ್ತಸಂಗವಾಗಿ ಭಕ್ತನಲ್ಲಿಯೇ ಅಡಗಿ, ಅಪ್ಪುವೆಂಬ ಭೂತವು ಮಹೇಶ್ವರನಿಗಂಗವಾಗಿ ಮಹೇಶ್ವರನಲ್ಲಿಯೇ ಅಡಗಿ, ಅಗ್ನಿಯು ಪ್ರಸಾದಿಯಂಗವಾಗಿ ಪ್ರಸಾದಿಯಲ್ಲಿಯೇ ಅಡಗಿ, ವಾಯುವು ಪ್ರಾಣಲಿಂಗಿಯಂಗವಾಗಿ ಪ್ರಾಣಲಿಂಗಿಯಲ್ಲಿಯೇ ಅಡಗಿ, ಆಕಾ-

ಶವೇ ಶರಣನಂಗವಾಗಿ ಶರಣನಲ್ಲಿಯೇ ಅಡಗಿ, ಆತ್ಮನೇ ಐಕ್ಯನಂಗವಾಗಿ ಐಕ್ಯನಲ್ಲಿಯೇ ಅಡಗುತ್ತವೆ.

ಹಾಗೆಯೇ ಆಚಾರಲಿಂಗದಂಗ ಭಕ್ತನಾಗಿ ಭಕ್ತನಲ್ಲಿಯೇ ಅಡಗಿ, ಗುರುಲಿಂಗದಂಗ ಮಹೇಶ್ವರನಾಗಿ ಮಹೇಶ್ವರನಲ್ಲಿಯೇ ಅಡಗಿ, ಶಿವಲಿಂಗದಂಗ ಪ್ರಸಾದಿಯಾಗಿ ಪ್ರಸಾದಿಯಲ್ಲಿಯೇ ಅಡಗಿ, ಜಂಗಮಲಿಂಗದಂಗ ಪ್ರಾಣಲಿಂಗಿಯಾಗಿ ಪ್ರಾಣಲಿಂಗಿಯಲ್ಲಿಯೇ ಅಡಗಿ, ಪ್ರಸಾದಲಿಂಗದಂಗ ಶರಣನಾಗಿ ಶರಣನಲ್ಲಿಯೇ ಅಡಗಿ, ಮಹಾಲಿಂಗದಂಗ ಐಕ್ಯನಾಗಿ ಐಕ್ಯನಲ್ಲಿಯೇ ಅಡಗುತ್ತವೆ.

ಈ ಸ್ಥಿತಿಯುಂಟಾಗಲು ಅಂಗವೇ ಕರ್ಪೂರವಾಗಿ, ಲಿಂಗವೇ ಜ್ಯೋತಿಯಾಗಿ, ಉರಿಕರ್ಪೂರ ಸಂಯೋಗವಾದಂತೆ ಶರಣನ ಅಂಗಕ್ಕೂ ಲಿಂಗಕ್ಕೂ ಅಭಿನ್ನತೆಯುಂಟಾಗಿ ಪರಮಾತ್ಮನಲ್ಲಿ ಭಕ್ತನು ಸಾಮರಸ್ಯವನ್ನು ಹೊಂದುತ್ತಾನೆ.

ಪಂಚೀಕರಣದ ಈ ಜ್ಞಾನದಿಂದ ಅರ್ಪಣದ ರೀತಿಯನ್ನು ತಿಳಿದು ಷಟ್‌ಸ್ಥಲಾಚರಣೆಗಳನ್ನು ಅಷ್ಟಾವರಣಗಳ ಮೂಲಕ ಜರಗಿಸುತ್ತ ಲಿಂಗಾಂಗ ಸಾಮರಸ್ಯವನ್ನು ಭಕ್ತನು ಹೊಂದಬೇಕು. ಇದು ಶಿವಶರಣರ ನಡೆಯು, ವಚನಕಾರರು ನಿರೂಪಿಸುವ ಪದ್ಧತಿಯು.

(೩೧೫) ಕಾಯಾರ್ಪಣದ ರೀತಿ:– (ಹಿಂದೆ ನಂ. ೧೬೦—೧ ಮತ್ತು ನಂ. ೨೮೬ ಇವುಗಳನ್ನು ಸಹ ನೋಡುವುದು.)

(೧) ಭೋಜ್ಯವೆಂಬ ರೂಪನ್ನು ಕಠಿಣವೆಂಬ ದ್ರವ್ಯವನ್ನು ಗಂಧವೆಂಬ ಪದಾರ್ಥವನ್ನು ಕ್ಷೀರಸ್ನಾನವನ್ನು ಓಂ ಹ್ರಾಂ ನಾಂ ನಮಃ ಶಿವಾಯ ಎಂಬ ಮಂತ್ರದಿಂದ ಪೀಠದಲ್ಲಿಯ ಆಚಾರಲಿಂಗಕ್ಕೆ ಅರ್ಪಿಸುವುದು.

(೨) ಪಾನ್ಯವೆಂಬ ರೂಪನ್ನು ಮೃದುವೆಂಬ ದ್ರವ್ಯವನ್ನು ರಸವೆಂಬ ಪದಾರ್ಥವನ್ನು ದಧಿಸ್ನಾನವನ್ನು ಓಂ ಹ್ರೀಂ ಮಾಂ ನಮಃ ಶಿವಾಯ ಎಂಬ ಮಂತ್ರದಿಂದ ಕಟಿಯಲ್ಲಿಯ ಗುರುಲಿಂಗಕ್ಕೆ ಅರ್ಪಿಸುವುದು.



(೩) ಭಕ್ಷ್ಯವೆಂಬ ರೂಪನ್ನು ಉಷ್ಣವೆಂಬ ದ್ರವ್ಯವನ್ನು ರೂಪು ಎಂಬ ಪದಾರ್ಥವನ್ನು ಘೃತಸ್ನಾನವನ್ನು ಓಂ ಹ್ರೂಂ ಶೀಂ ನಮಃ ಶಿವಾಯ ಎಂಬ ಮಂತ್ರದಿಂದ ವರ್ತುಳದಲ್ಲಿಯ ಶಿವಲಿಂಗಕ್ಕೆ ಸಮರ್ಪಿಸುವುದು.

(೪) ಚೋಹ್ಯವೆಂಬ ರೂಪನ್ನು ಶೈತ್ಯವೆಂಬ ದ್ರವ್ಯವನ್ನು ಸ್ಪರ್ಶನವೆಂಬ ಪದಾರ್ಥವನ್ನು ಇಕ್ಷು ಕ್ಷೀರ ಸ್ನಾನವನ್ನು ಓಂ ಹ್ರೈಂ ವಾಂ ನಮಃ ಶಿವಾಯ ಎಂಬ ಮಂತ್ರದಿಂದ ಗೋಮುಖದಲ್ಲಿಯ ಜಂಗಮಕ್ಕೆ ಸಮರ್ಪಿಸುವುದು.

(೫) ಲೇಹ್ಯವೆಂಬ ರೂಪನ್ನು ಮಿಶ್ರವೆಂಬ ದ್ರವ್ಯವನ್ನು ಶಬ್ದವೆಂಬ ಪದಾರ್ಥವನ್ನು ನಾರೀಕೇಳ ಕ್ಷೀರಸ್ನಾನವನ್ನು ಓಂ ಹ್ರೌಂ ಯಾಂ ನಮಃ ಶಿವಾಯ ಎಂಬ ಮಂತ್ರದಿಂದ ನಾಳದಲ್ಲಿಯ ಪ್ರಸಾದ ಲಿಂಗಕ್ಕೆ ಸಮರ್ಪಿಸುವುದು.

(೬) ಇಲ್ಲದಲ್ಲಿಯ ರೂಪನ್ನು ಪರಿಣಾಮವೆಂಬ ದ್ರವ್ಯವನ್ನು ತೃಪ್ತಿ ಎಂಬ ಪದಾರ್ಥವನ್ನು ಸ್ವಾದೋದಕ ಸ್ನಾನವನ್ನು ಓಂ ಹ್ರಃ ಓಂ ನಮಃ ಶಿವಾಯ ಎಂಬ ಮಂತ್ರದಿಂದ ಮಸ್ತಕದಲ್ಲಿಯ ಮಹಾಲಿಂಗಕ್ಕೆ ಸಮರ್ಪಿಸುವುದು.

(೩೧೬) ಕರಣಾರ್ಪಣದ ರೀತಿ:— ಇಲ್ಲಿ ಅಂಗ, ಲಿಂಗ, ಶಕ್ತಿ, ಭಕ್ತಿ, ಹಸ್ತ, ಮುಖ, ಪ್ರಸಾದ, ಪದಾರ್ಥ ಈ ಅಷ್ಟವಿಧ ಸಕೀಲಗಳಿವೆ. ಆಯಾ ಆರು ಲಿಂಗಗಳು ಪರಸ್ಪರ ಮಿಶ್ರವಾದಲ್ಲಿ ೩೬ ಆಗುವವು. ಈ ಮೂವತ್ತಾರುಗಳು ಪ್ರಾಣಲಿಂಗ ಸಂಬಂಧವಾಗಿವೆ. ಈ ೩೬ ಲಿಂಗಗಳಿಗೆ ಮನೋಸಂಬಂಧವಾದ ೩೬ ತೆರದ ರುಚಿ ಪದಾರ್ಥಗಳನ್ನು ೩೬ ತೆರದ ಭಕ್ತಿ ಸಕೀಲಗಳಿಂದ ಸಮರ್ಪಿಸುವುದು.

(೩೧೭) ಭಾವಾರ್ಪಣದ ರೀತಿ:— ಕರಣಾರ್ಪಣದ ಮಧ್ಯದಲ್ಲಿ ಭಾವಾರ್ಪಣ ಉಂಟು. ಆತ್ಮ ತತ್ವ ಸಂಬಂಧವಾದ ೨೧೬ ತೆರದ

ತೃಪ್ತಿ ಪದಾರ್ಥಗಳನ್ನು ಭಾವಲಿಂಗದೊಡನೆ ಕೂಡಿದ ೨೧೬ ಲಿಂಗಗಳಿಗೆ ೨೧೬ ತೆರದ ಭಕ್ತಿ ಸಕೀಲಗಳಿಂದ ಸಮರ್ಪಿಸುವುದು. ಕರಣಾರ್ಪಣದ ಮಿಶ್ರವೇ ಭಾವಾರ್ಪಣವು.

(೩೧೮) ಮಾರ್ಗಕ್ರಿಯೆ, ಮೀರಿದಕ್ರಿಯೆ:— ಲಿಂಗಾಂಗ ಸಾಮರಸ್ಯದಲ್ಲಿ ಮೊದಲು ಮಾರ್ಗಕ್ರಿಯೆಗಳ ಪ್ರಗತಿಯು, ಆ ಮೇಲೆ ಮೀರಿದ ಕ್ರಿಯೆಗಳ ಪ್ರಗತಿಯು, ಈ ಮೇರೆಗೆ ಅನುಕ್ರಮವಾಗಿ ಉಂಟಾಗುತ್ತ ಕಡೆಗೆ ಈ ಉಚ್ಚ ಸ್ಥಿತಿಯು ಪ್ರಾಪ್ತವಾಗುತ್ತದೆ ಮಾರ್ಗಕ್ರಿಯೆಗಳು ಸ್ಥೂಲವಾಗಿಯೂ ಮೀರಿದ ಕ್ರಿಯೆಗಳು ಸೂಕ್ಷ್ಮವಾಗಿಯೂ ಇರುತ್ತವೆ.

(೩೧೯) ಮಾರ್ಗಕ್ರಿಯೆಗಳು:— ಇವುಗಳಲ್ಲಿ ೧೨ ಭಾಗಗಳಿದ್ದು ಪ್ರತಿಯೊಂದರಲ್ಲಿ ೯ ಕ್ರಿಯೆಗಳಿವೆ. ಹೀಗೆ ಅವು ಒಟ್ಟು ೧೦೮ ಆಗುತ್ತವೆ. ಒಂದೊಂದು ಭಾಗದಲ್ಲಿ ಪುನಃ ೯ ಕ್ರಿಯೆಗಳಿದ್ದು ಅವು ಹೆಚ್ಚೆಚ್ಚು ಸೂಕ್ಷ್ಮವಾಗುತ್ತ ಹೋಗುತ್ತವೆ. ಅವು (೧) ಬ್ರಹ್ಮವಿಷ್ಣ್ವಾದಿ ಪೂಜಾರಿಗಳು (೨) ಪೃಥಿವ್ಯಾದಿ ಅಂಗಗಳು (೩) ಸ್ಥೂಲ ಸೂಕ್ಷ್ಮಾದಿ ತನುಗಳು (೪) ಭಕ್ತಮಹೇಶ್ವರಾದಿ ಗಣಗಳು (೫) ಸುಚಿತ್ತ ಸುಬುದ್ಧ್ಯಾದಿ ಹಸ್ತಗಳು (೬) ಶ್ರದ್ಧಾನೈಷ್ಠಿಕಾದಿ ಭಕ್ತಿಗಳು (೭) ಕ್ರಿಯಾಶಕ್ತಿ ಜ್ಞಾನಶಕ್ತ್ಯಾದಿ ಶಕ್ತಿಗಳು (೮) ಆಧಾರ ಸ್ವಾಧಿಷ್ಠಾನಾದಿ ಚಕ್ರಗಳು (೯) ಪೀತ ಶ್ವೇತಾದಿ ವರ್ಣಗಳು (೧೦) ಬ್ರಹ್ಮವಿಷ್ಣ್ವಾದಿ ಅಧಿದೇವತೆಗಳು (೧೧) ಆಚಾರಲಿಂಗ ಗುರುಲಿಂಗಾದಿ ಲಿಂಗಗಳು (೧೨) ಜೀವಾತ್ಮ ಅಂತರಾತ್ಮಾದಿ ಆತ್ಮರುಗಳು ಇದ್ದಾರೆ.

(೩೨೦) ಮೀರಿದ ಕ್ರಿಯೆಗಳು:— ಇವುಗಳಲ್ಲಿ ೧೨ ಭಾಗಗಳಿದ್ದು ಪ್ರತಿಯೊಂದರಲ್ಲಿ ೯ ಕ್ರಿಯೆಗಳಿವೆ. ಹೀಗೆ ಅವು ಸಹ ಒಟ್ಟು ೧೦೮ ಆಗುತ್ತವೆ. ಒಂದೊಂದು ಭಾಗದಲ್ಲಿ ಪುನಃ ೯ ಕ್ರಿಯೆಗಳಿದ್ದು ಅವು ಹೆಚ್ಚೆಚ್ಚು ಸೂಕ್ಷ್ಮವಾಗುತ್ತ ಹೋಗುತ್ತವೆ. ಅವು (೧) ಕರ್ಮಸಾದಾಖ್ಯ ಕರ್ತೃಸಾದಾಖ್ಯಾದಿ ಸಾದಾಖ್ಯಗಳು, (೨) ನಕಾರ ಮಕಾರಾದಿ ಪ್ರಣವಗಳು (೩) ತಾರಕಾಕೃತಿ ದಂಡಕಾಕೃತ್ಯಾದಿ ಆಕೃತಿಗಳು, (೪) ಪೂರ್ವಪಶ್ಚಿಮಾದಿ



ದಿಕ್ಕುಗಳು (೫) ಋಗ್ವೇದ ಯಜುರ್ವೇದಾದಿ ವೇದಗಳು, (೬) ನಿವೃತ್ತಿ ಕಲೆ ಪ್ರತಿಷ್ಠಾಕಲೆ ಮೊದಲಾದ ಕಲೆಗಳು, (೭) ಘ್ರಾಣೇಂದ್ರಿಯ ಜಿಹ್ವೇಂದ್ರಿಯಾದಿ ಮುಖಗಳು, (೮) ಗಂಧ ರಸಾದಿ ಪದಾರ್ಥಗಳು, (೯) ಸುಗಂಧ ಸುರಸಾದಿ ಪ್ರಸಾದಗಳು, (೧೦) ಭ್ರಮರ ವೀಣಾದಿ ನಾದಗಳು, (೧೧) ಸತ್ ಚಿತ್ ಆನಂದಾದಿ ಲಕ್ಷಣಗಳು, (೧೨) ಪರ ಗೂಢ ಶರೀರಸ್ಥಾದಿ ಸಂಜ್ಞೆಗಳು ಇವೇ ಇರುತ್ತವೆ.

ಟೀಪು:— ಪಂಚೀಕರಣಜ್ಞಾನದಿಂದ ಮಿಶ್ರಾರ್ಪಣದ ರೀತಿಗಳು, ಮಿಶ್ರಾರ್ಪಣದಿಂದ ಲಿಂಗದ ಅನುಭವವು, ಲಿಂಗದ ಅನುಭವದಿಂದ ಸಂ॥ ೩೧೯ ಮತ್ತು ೩೨೦ ಇವುಗಳಲ್ಲಿ ಹೇಳಿದ ಕ್ರಿಯೆಗಳ ಉಚ್ಚಸ್ಥಿತಿಗಳು ಪ್ರಾಪ್ತವಾಗುತ್ತವೆ. ಇವುಗಳ ಅಂತ್ಯಸ್ಥಿತಿಯೇ ಲಿಂಗಾಂಗ ಸಾಮರಸ್ಯವಾಗಿರುತ್ತದೆ.

(೩೨೧) ನವವಿಧ ಪೂಜಾರಿಗಳು:— ಇವರು ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹೇಶ್ವರ, ಪರಮೇಶ್ವರ, ಸರ್ವೇಶ್ವರ, ಮಹಾದೇವರು ಇದ್ದಾರೆ. ಇವರು ಉತ್ಪತ್ತ್ಯಾದಿ ಸ್ಥಿತಿಲಯಗಳಿಗೆ ಕಾರಣರು.

(೩೨೨) ನವವಿಧ ಅಂಗಗಳು:—ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮಾಂಗ, ತ್ಯಾಗಾಂಗ, ಭೋಗಾಂಗ, ಯೋಗಾಂಗ ಇವು ಅಂಗಗಳು. ಇವು ಮನುಷ್ಯನ ಗುಣಗಳಿಗೆ ಕಾರಣವಾಗಿವೆ.

(೩೨೩) ತನುಗಳು:— ಸ್ಥೂಲ, ಸೂಕ್ಷ್ಮ, ಕಾರಣ, ನಿರ್ಮಲ, ಆನಂದ, ಶುದ್ಧ, ಚಿದ್ರೂಪ, ಚಿನ್ಮಯ, ನಿರ್ಮುಕ್ತ, ಇವು ತನುಗಳು. ಇವು ಮನುಷ್ಯನ ಅಂತರಂಗ ಬಹಿರಂಗ ಶರೀರಗಳು.

(೩೨೪) ಗಣಂಗಳು:— ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ನಿಷ್ಕಲಂಕ, ನಿಶ್ಶೂನ್ಯ, ನಿರಂಜನ ಇವು ಗಣಂಗಳು. ಇವು ಪ್ರಗತಿಯ ಸ್ಥಲಗಳು.

(೩೨೫) ಹಸ್ತಗಳು:— ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ, ನಿರ್ನಾಮ, ನಿಷ್ಕಳಂಕ, ನಿರಾಳ ಇವು ಹಸ್ತಗಳು. ಇವು ಸ್ಥಲಗಳ ಪ್ರಗತಿಗೆ ಸಾಧನಗಳು.

(೩೨೬) ಭಕ್ತಿಗಳು:— ಶ್ರದ್ಧಾ, ನೈಷ್ಠಿಕಾ, ಅವಧಾನ, ಅನುಭಾವ, ಆನಂದ, ಸಮರಸ, ಪರಿಪೂರ್ಣ, ಅಪ್ರಮಾಣ, ನಿರವಯ ಇವು ಭಕ್ತಿಯ ವಿಧಗಳು.

(೩೨೭) ಶಕ್ತಿಗಳು:— ಕ್ರಿಯಾ, ಜ್ಞಾನ, ಇಚ್ಛಾ, ಆದಿ, ಪರಾ, ಚಿತ್, ನಿರಾಲಂಬ, ನಿಭ್ರಾಂತ, ನಿರವಯ ಇವು ಶಕ್ತಿಯ ವಿಧಗಳು.

(೩೨೮) ಚಕ್ರಗಳು:— ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ, ಬ್ರಹ್ಮ, ಶಿಖಾ, ಪಶ್ಚಿಮ ಇವು ಚಕ್ರಗಳು. ಇವು ಶಕ್ತಿಗೆ ಕೇಂದ್ರಸ್ಥಾನಗಳು.

(೩೨೯) ವರ್ಣಗಳು:— ಪೀತ, ಶ್ವೇತ, ಹರಿತ, ಮಾಂಜಿಷ್ಟ, ಕಪೋತ, ಮಾಣಿಕ್ಯ, ಜ್ಯೋತಿ, ಮಹಾಜ್ಯೋತಿ, ಅಗಣಿತ ಇವು ವರ್ಣಗಳು. ಇವು ಯೌಗಿಕ ಚಿನ್ಹಗಳು.

(೩೩೦) ಅಧಿದೇವತೆಗಳು:— ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹೇಶ್ವರ, ಪರಮೇಶ್ವರ, ಸರ್ವೇಶ್ವರ, ಮಹಾದೇವ ಇವರು ಅಧಿದೇವತೆಗಳು. ಶರೀರಗಳ ಕಾರ್ಯಗಳ ಚಾಲನೆಗೆ ಇವರು ಕಾರಣರು.

(೩೩೧) ಲಿಂಗಗಳು:— ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹತ್, ನಿಃಕಲ, ನಿಃಶೂನ್ಯ, ನಿರಂಜನ ಇವು ಲಿಂಗಗಳು.

(೩೩೨) ಆತ್ಮರುಗಳು:— ಜೀವಾತ್ಮ, ಅಂತರಾತ್ಮ, ಪರಮಾತ್ಮ, ನಿರ್ಮಲಾತ್ಮ, ಶುದ್ಧಾತ್ಮ, ಜ್ಞಾನಾತ್ಮ, ಮಹಾತ್ಮ, ದಿವ್ಯಾತ್ಮ, ಚಿನ್ಮಯಾತ್ಮ ಇವರು ಆತ್ಮರುಗಳು. ಆತ್ಮನ ಪ್ರಗತಿಯ ದ್ಯೋತಕವಾಗಿವೆ.



(೩೩೩) ಸಾದಾಖ್ಯಗಳು:— ಕರ್ಮ, ಕರ್ತೃ, ಮೂರ್ತಿ, ಅಮೂರ್ತಿ, ಶಿವ, ಮಹಾ, ಅಗಮ್ಯ, ಅಗೋಚರ, ಅಪ್ರಮಾಣ ಇವು ಸಾದಾಖ್ಯಗಳು. ಇವು ಮನುಷ್ಯನಲ್ಲಿಯ ಪರಿಸ್ಥಿತಿಗಳು.

(೩೩೪) ಪ್ರಣಮಗಳು:— ನಕಾರ, ಮಕಾರ, ಶಿಕಾರ, ವಕಾರ ಯಕಾರ, ಓಂಕಾರ, ಬಕಾರ, ಕ್ಷಕಾರ, ಹಕಾರ ಇವು ಪ್ರಣಮಗಳು. ಪರಮಾತ್ಮನ ಭಾವವನ್ನುಂಟು ಮಾಡತಕ್ಕವುಗಳು.

(೩೩೫) ಆಕೃತಿಗಳು:— ತಾರಕ, ದಂಡಕ, ಕುಂಡಲ, ಅರ್ಧಚಂದ್ರ, ದರ್ಪಣ, ಜ್ಯೋತಿ, ನಿಷ್ಕಳ, ನಿಃಶೂನ್ಯ, ನಿರಂಜನ ಇವು ಆಕೃತಿಗಳು. ಇವು ಆಯಾ ಚಕ್ರಗಳಿಗೆ ಸಂಬಂಧಿಸಿದವುಗಳು.

(೩೩೬) ದಿಕ್ಕುಗಳು:— ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಊರ್ಧ್ವ, ಪಾತಾಳ, ವಾಯು, ದಿವ್ಯಾನಂದ, ಹೃತ್ಕಮಲ ಇವು ದಿಕ್ಕುಗಳು.

(೩೩೭) ವೇದಗಳು:— ಋಕ್, ಯಜುಸ್, ಸಾಮ, ಅಥರ್ವ, ಅಜಪ, ಗಾಯತ್ರೀ, ಧನುಸ್, ಗಂಧರ್ವ, ಸದ್ಯೋಜಪ ಇವು ವೇದಗಳು.

(೩೩೮) ಕಲೆಗಳು:— ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಶಾಂತ್ಯಾತೀತ, ಶಾಂತ್ಯಾತೀತೋತ್ತರ, ಅನಾದಿ, ನಿರ್ಮಾಯ, ಅನಿರ್ವಾಚ್ಯ ಇವು ಕಲೆಗಳು.

(೩೩೯) ಮುಖಗಳು:— ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಹೃದಯ, ಬ್ರಹ್ಮರಂಧ್ರ, ಉನ್ಮನಿ, ಪಶ್ಚಿಮ ಇವು ಮುಖಗಳು.

(೩೪೦) ಪದಾರ್ಥಗಳು:— ಗಂಧ, ರಸ, ರೂಪ, ಸ್ಪರ್ಶನ, ಶಬ್ದ, ತೃಪ್ತಿ, ಆನಂದ, ಪರಿಪೂರ್ಣ, ಅವಿರಳ ಇವು ಪದಾರ್ಥಗಳು.

(೩೪೧) ಪ್ರಸಾದಗಳು:— ಸುಗಂಧ, ಸುರಸ, ಸುರೂಪ, ಸುಸ್ಪರ್ಶನ, ಸುಶಬ್ದ, ಸುತೃಪ್ತಿ, ನಿಃಕಲಪರಾನಂದ, ನಿಜಾನಂದಪರಿಪೂರ್ಣ, ಮಹಾ ಅವಿರಳಾನಂದ ಇವು ಪ್ರಸಾದಗಳು.

(೩೪೨) ನಾದಗಳು:— ಭ್ರಮರ, ವೇಣು, ಘಂಟಾ, ಭೇರೀ, ಮೇಘ, ಪ್ರಣವ, ದಿವ್ಯ, ಸಿಂಹ, ಮಹತ್ ಇವು ನಾದಗಳು. ಯೌಗಿಕ ಚಿನ್ಹಗಳು.

(೩೪೩) ಲಕ್ಷಣಗಳು:— ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ, ಅಖಂಡ, ಅನಾಮಯ, ಅಗಮ್ಯ, ಅವಿರಳ ಇವು ಲಕ್ಷಣಗಳು.

(೩೪೪) ಸಂಜ್ಞೆಗಳು:— ಪರ, ಗೂಢ, ಶರೀರಸ್ಥ, ಲಿಂಗಕ್ಷೇತ್ರ, ಅನಾದಿ, ಮಹತ್, ಅಪ್ರಮಾಣ, ನಿರ್ನಾಮ, ಅವಿರಳ ಇವು ಸಂಜ್ಞೆಗಳು. ಇವು ಲಿಂಗದ ಪ್ರಗತಿಗಳು.

ಟೀಪು:— ನಂ॥ ೩೨೧ರಿಂದ ೩೩೨ರ ವರೆಗೆ ಮಾರ್ಗಕ್ರಿಯೆಗಳು ಮತ್ತು ನಂ॥ ೩೩೩ರಿಂದ ೩೪೪ ವರೆಗೆ ಮೀರಿದ ಕ್ರಿಯೆಗಳು ಇರುತ್ತವೆ. ಈ ಕ್ರಿಯೆಗಳ ಪ್ರತಿಯೊಂದು ಗುಂಪಿನಲ್ಲಿಯ ಮೊದಲಿನ ಮೂರು ಷಟ್‌ಸ್ಥಲಗಳಲ್ಲಿ ಸ್ಥೂಲವಾದ ಮೊದಲನೇ ಮೂರು ಸ್ಥಲಗಳಿಗೆ, ಮುಂದಿನ ಮೂರು ಸೂಕ್ಷ್ಮವಾದ ಎರಡನೆಯ ಮೂರು ಸ್ಥಲಗಳಿಗೆ, ಮತ್ತು ಕಡೆಯ ಮೂರು ಮೂರು ಶೂನ್ಯಸ್ಥಲಗಳಿಗೆ ಸಂಬಂಧಿಸುತ್ತವೆ. ಈ ಯಾವತ್ತು ಕ್ರಿಯೆಗಳು ಮನುಷ್ಯನಿಗೆ ಸಂಬಂಧಿಸುತ್ತವೆ. ವಿಶ್ವಕ್ಕೆ ಸಂಬಂಧಪಟ್ಟವುಗಳಲ್ಲ. ಈ ದೃಷ್ಟಿಯಿಂದಲೇ ಅವುಗಳ ಅರ್ಥವನ್ನು ತಿಳಿಯತಕ್ಕದ್ದು. ಪ್ರತಿಯೊಂದು ಗುಂಪಿನಲ್ಲಿ ಕಡೆಯದಾದ ೯ನೆಯದು ಅದರ ಅತ್ಯಂತ ಉಚ್ಚತಮ ಸ್ಥಿತಿಯು. ಈ ಕಡೆಯ ಎಲ್ಲವುಗಳು ತನ್ನಲ್ಲಿ ಉಂಟಾದಬಳಿಕ ಮನುಷ್ಯನಲ್ಲಿ ಪೂರ್ಣತ್ವವು ಪ್ರಾಪ್ತವಾಗುತ್ತದೆ.

(೩೪೫) ಪರತತ್ವಲಿಂಗಪ್ರಕಾಶ:— ಇದು ಐಕ್ಯ ಸ್ಥಿತಿಯು. ಪುಷ್ಪ ಪರಿಮಳವ ನುಂಗಿ ಕರಗೊಂಡಂತೆ, ಕರ್ಪೂರವು ಉರಿಯನಪ್ಪಿದಂತೆ ಈ ಸ್ಥಿತಿಯು. ಆಗ ಧ್ಯಾನವು ಮೌನವನ್ನು, ಮೌನವು ಮುಗ್ಧತೆಯನ್ನು ನುಂಗಿ ಶರಣನು ಮಹಾಘನಲಿಂಗವಾಗುತ್ತಾನೆ.

(೩೪೬) ಶಿವಾದ್ವೈತ ಶರಣ ಪ್ರಕಾಶ:— ಅದು ಸೂರ್ಯನ ಪ್ರಭೆಯು ಬೆಳಗಿನಂತಿದೆ. ಈ ಸ್ಥಿತಿಯು ಹೇಗೆ ಮಾಲೆಯು ದಾರವನ್ನೂ ಮಣಿಯು ಮಾಲೆಯನ್ನೂ ನುಂಗಿರುತ್ತವೆಯೋ ಆ ತೆರನಂತಿದೆ. ಇದು ಐಕ್ಯ ಸ್ಥಿತಿಯ ಪರಮಾವಧಿಯು.



(೩೪೭) ಮಹಾಲಿಂಗೈಕ್ಯ:— ಇದು ಐಕ್ಯಸ್ಥಿತಿಯ ಪೂರ್ಣತೆಯು. ಈ ಸ್ಥಿತಿಯಲ್ಲಿ ಪೂರ್ವ ಸ್ಥಿತಿಯು ಇಲ್ಲದಾಗಿ ಶಾಂತಿಸ್ವರೂಪವಾದ ಪರಬ್ರಹ್ಮವು ಪ್ರಾದುರ್ಭಾವವಾಗುತ್ತದೆ. ಅದು ಮಹಾಜ್ಞಾನದ ಬೆಳಗು. ಆಗ ಉಲುಹು ಪೂರ್ಣವಾಗಿ ಅಡಗುತ್ತದೆ. ನಾಹಂ, ಕೋಹಂ, ಸೋಹಂ ಎಂಬ ವಾಗ್ಜಾಲವು ಇಲ್ಲದಾಗುತ್ತದೆ. ದ್ವೈತಾದ್ವೈತಗಳಿಲ್ಲ. ಈ ಸ್ಥಿತಿಯನ್ನು ಮನವು ಲಿಂಗದಲ್ಲಿ ಕೂಡಿ ಸಮರಸವಾಗುವಂಥ ಶರಣನೇ ಬಲ್ಲನು. ಆಗ ಅತ ನಿರಾಕಾರ ನಿರ್ಜಾತ ನಿರ್ದೇಹಿ ಕೇವಲ ಪರಶಿವಲಿಂಗವು

(೩೪೮) ಶೂನ್ಯ:— ಇದು ಏನೂ, ಏನೂ ಇಲ್ಲದ ಕಡೆಯ ಸ್ಥಿತಿಯು. ನಿರ್ವಯಲು ಅಥವಾ ಬಯಲು.

(೩೪೯) ಅಷ್ಟಾವರಣದ ಭೇದಗಳು:—

(ಅ) ಅಂತರಂಗ ಬಹಿರಂಗ ಅಷ್ಟಾವರಣಗಳು:— ಬಹಿರಂಗ ಅಷ್ಟಾವರಣಗಳು ಬಾಹ್ಯಕ್ರಿಯೆಗಳಿಗೆ ಸಂಬಂಧಪಟ್ಟವು. ಅಂತರಂಗ ಅಷ್ಟಾವರಣಗಳು ಸೂಕ್ಷ್ಮಶರೀರಕ್ಕೆ ಸಂಬಂಧಪಟ್ಟವುಗಳು. ಈ ಎರಡನೆಯವುಗಳು ಮನಕ್ಕೆ ಮತ್ತು ಜ್ಞಾನಕ್ಕೆ ಸಂಬಂಧಿಸಿದಂಥವುಗಳು ಇರುತ್ತವೆ.

(ಬ) ತ್ರಿವಿಧ ಅಷ್ಟಾವರಣಗಳು:— ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ, ಕಾರಣಶರೀರಗಳನೆಯಷ್ಟೇ. ಈ ಮೂರು ಶರೀರಗಳಿಗೆ ಅನುಸರಿಸಿ ಮೂರು ತರದ ಅಷ್ಟಾವರಣಗಳೂ ಆಗುತ್ತವೆ. ಅವುಗಳಿಗೆ ಅನುಕ್ರಮವಾಗಿ ಕ್ರಿಯಾಗುರು, ಜ್ಞಾನಗುರು, ಮಹಾಜ್ಞಾನಗುರು; ಕ್ರಿಯಾಲಿಂಗ, ಜ್ಞಾನಲಿಂಗ, ಮಹಾಜ್ಞಾನಲಿಂಗ; ಕ್ರಿಯಾಜಂಗಮ ಜ್ಞಾನಜಂಗಮ, ಮಹಾಜ್ಞಾನಜಂಗಮ ಇತ್ಯಾದಿ ಹೆಸರುಗಳಿರುತ್ತವೆ. ಅಷ್ಟಾವರಣಗಳ ವ್ಯಾಪಾರಗಳು ಈ ಮೂರೂ ಶರೀರಗಳ ಮೇಲೆ ನಡೆಯುತ್ತವೆ.

(೩೫೦) ಅಷ್ಟಾವರಣಕ್ಕೂ ತನಗೂ ಇರುವ ಸಂಬಂಧಃ—

೧ನೇ ವಿಧಃ— ತನುತ್ರಯಂಗಳಲ್ಲಿ ಕ್ರಿಯಾಗುರು ಜ್ಞಾನಗುರು ಮಹಾಜ್ಞಾನ ಗುರುವನ್ನು ಸಂಬಂಧಿಸುವುದು. ಮನತ್ರಯಂಗಳಲ್ಲಿ ಕ್ರಿಯಾಲಿಂಗ ಜ್ಞಾನಲಿಂಗ ಮಹಾಜ್ಞಾನಲಿಂಗವನ್ನು ಸಂಬಂಧಿಸುವುದು. ಭಾವತ್ರಯಂಗಳಲ್ಲಿ ಕ್ರಿಯಾಜಂಗಮ ಜ್ಞಾನಜಂಗಮ ಮಹಾಜ್ಞಾನಜಂಗಮವನ್ನು ಸಂಬಂಧಿಸುವುದು. ಆತ್ಮತ್ರಯಂಗಳಲ್ಲಿ ಕ್ರಿಯಾಪಾದೋದಕ, ಜ್ಞಾನಪಾದೋದಕ, ಮಹಾಜ್ಞಾನಪಾದೋದಕವನ್ನು ಸಂಬಂಧಿಸುವುದು. ಅವಸ್ಥಾತ್ರಯಂಗಳಲ್ಲಿ ಕ್ರಿಯಾಪ್ರಸಾದ, ಜ್ಞಾನಪ್ರಸಾದ, ಮಹಾಜ್ಞಾನಪ್ರಸಾದವನ್ನು ಸಂಬಂಧಿಸುವುದು. ಕರಣತ್ರಯಂಗಳಲ್ಲಿ ಕ್ರಿಯಾಭಸಿತ, ಜ್ಞಾನಭಸಿತ, ಮಹಾಜ್ಞಾನಭಸಿತವನ್ನು ಸಂಬಂಧಿಸುವುದು. ಜೀವತ್ರಯಂಗಳಲ್ಲಿ ಕ್ರಿಯಾರುದ್ರಾಕ್ಷಿ, ಜ್ಞಾನರುದ್ರಾಕ್ಷಿ. ಮಹಾಜ್ಞಾನ ರುದ್ರಾಕ್ಷಿಗಳನ್ನು ಸಂಬಂಧಿಸುವುದು. ಗುಣತ್ರಯಂಗಳಲ್ಲಿ ಕ್ರಿಯಾಮಂತ್ರ, ಜ್ಞಾನಮಂತ್ರ, ಮಹಾಜ್ಞಾನ ಮಂತ್ರವನ್ನು ಸಂಬಂಧಿಸುವುದು.

೨ನೇ ವಿಧಃ— ಅರುವಿನಲ್ಲಿ ಸುಜ್ಞಾನಗುರುವ ಸಂಬಂಧ ಮಾಡಿಕೊಳ್ಳುವದು. ಪ್ರಾಣದಲ್ಲಿ ಸುಜ್ಞಾನಲಿಂಗವ ಸಂಬಂಧ ಮಾಡಿಕೊಳ್ಳುವದು. ಆಚರಣೆಯ ಸಂಬಂಧಗಳಲ್ಲಿ ಸುಜ್ಞಾನಜಂಗಮವ ಸಂಬಂಧ ಮಾಡಿಕೊಳ್ಳುವದು. ನಡೆನುಡಿಗಳಲ್ಲಿ ಸುಜ್ಞಾನ ಪಾದೋದಕವ ಸಂಬಂಧವ ಮಾಡಿಕೊಳ್ಳುವದು. ಜಿಹ್ವೆ ನಾಸಿಕಗಳಲ್ಲಿ ಸುಜ್ಞಾನ ಪ್ರಸಾದವ ಸಂಬಂಧ ಮಾಡಿಕೊಂಬುದು. ಸರ್ವಾಂಗ ಸುಮನಗಳಲ್ಲಿ ಸುಜ್ಞಾನ ಚಿದ್ವಿಭೂತಿಯ ಸಂಬಂಧಿಸುವದು. ಚಿದ್ರುಕ್ಕಿನಲ್ಲಿ ಚಿದ್ರುದ್ರಾಕ್ಷಿಯ ಸಂಬಂಧವ ಮಾಡಿಕೊಳ್ಳುವದು. ಜ್ಞಾನಾಕಾಶದಲ್ಲಿ ಚಿನ್ಮಂತ್ರ ಸಂಬಂಧವ ಮಾಡಿಕೊಳ್ಳುವದು.

೩ನೇ ವಿಧಃ— ದೀಕ್ಷಾತ್ರಯಂಗಳಲ್ಲಿ ನಿಜಗುರುವನ್ನೂ ಪೂಜಾತ್ರಯಂಗಳಲ್ಲಿ ನಿಜಲಿಂಗವನ್ನೂ ಭೋಗತ್ರಯಂಗಳಲ್ಲಿ ನಿಜಜಂಗಮವನ್ನೂ ಕ್ರಿಯಾತ್ರಯಂಗಳಲ್ಲಿ ನಿಜಪಾದೋದಕವನ್ನೂ ಜ್ಞಾನತ್ರಯಂಗಳಲ್ಲಿ ನಿಜಪ್ರಸಾದವನ್ನೂ ಆಚಾರತ್ರಯಂಗಳಲ್ಲಿ ನಿಜಚಿದ್ಭಸಿತವನ್ನೂ



ಪಂಚಾಕ್ಷರ ಷಡಕ್ಷರಗಳೇ ನಡೆನುಡಿಯಾಗಿ ಎರಡೆಂಬತ್ತುಕೋಟಿ ವಚನಗಳೇ ಮಹಾಮಂಗಳವಾಗಿ ಸಂಬಂಧವ ಮಾಡಿಕೊಳ್ಳುವುದು.

(೩೫೧) ಅಷ್ಟಾಂಗ ಶಿವಯೋಗಃ— [ಹಿಂದೆ ನಂ॥ ೪೪ ನೋಡಿರಿ.]

(೧) ಯಮಯೋಗಃ— ಇವು ಐದು ಇವೆ. ಯಾವವೆಂದರೆ— (೧) ಹಿಂಸೆಯನತಿಗಳೆಯಬೇಕು. (೨) ಅನೃತವ ನುಡಿಯಬಾರದು. (೩) ಭವಿಕರ್ಮವನಾಚರಿಸಕೂಡದು. (೪) ಚೌರ್ಯವನ್ನು ಬಿಡಬೇಕು. (೫) ಪರಸ್ತ್ರೀ ವರ್ಜಿಸಬೇಕು.

(೨) ನಿಯಮಯೋಗಃ— ಇವು ಐದು ಇವೆ. ಯಾವವೆಂದರೆ – (೧) ಬ್ರಹ್ಮಚಾರಿಯಾಗಿರುವದು. (೨) ನಿಃಸ್ವಾರ್ಥಿಯಾಗಿರುವದು. (೩) ಧನಾಪೇಕ್ಷೆ ಇಲ್ಲದಿರುವದು. (೪) ಶರಣರ ಮಾರ್ಗದಂತೆ ಆಚರಿಸುವದು. (೫) ಪರತತ್ವವನ್ನರಿಯುವದು.

(೩) ಆಸನಯೋಗಃ— ಇವು ಹತ್ತು ಇವೆ. ಯಾವವೆಂದರೆ— ವಜ್ರಾಸನ, ಪದ್ಮಾಸನ, ಸ್ವಸ್ತಿಕಾಸನ, ಗೋಮುಖಾಸನ, ಕುಕ್ಕುಟಾಸನ, ಅರ್ಧಾಸನ, ಮುಂಡುಕಾಸನ, ಸಿಂಹಾಸನ, ಚಂದ್ರಾಸನ, ಸುಖಾಸನ ಹೀಗೆ ಇವೆ.

(೪) ಪ್ರಾಣಾಯಾಮಃ— ರೇಚಕ ಪೂರಕ ಭೇದವನ್ನು ತಿಳಿದು ಮನ ಪವನ ಪ್ರಾಣಗಳ ಮೇಲೆ ಲಿಂಗವನ್ನು ಸಂಬಂಧಿಸಿ ಹೃದಯ ಕಮಲ ಮಧ್ಯದಲ್ಲಿ ಪ್ರಣವವನ್ನುಚ್ಚರಿಸುತ್ತ ಧ್ಯಾನಿಸುವದು.

(೫) ಪ್ರತ್ಯಾಹಾರಃ— ಇಂದ್ರಿಯಗಳಿಗೆ ಒಡೆಯನಂತಿರುವ ಮನಸ್ಸು, ಮನಸ್ಸಿಗೆ ಒಡೆಯನಂತಿರುವ ಪವನ, ಇವೆರಡನ್ನು ಸಮಗೂಡಿಸಿ, ಇಂದ್ರಿಯಗಳನ್ನು ಸ್ಥಿರಪಡಿಸಿ, ಸ್ಥಿರಚಿತ್ತನಾಗಿರುವದು.

(೬) ಧ್ಯಾನಃ— ಗುರುತತ್ವವನ್ನು ಭಾವಸ್ಥಲಕ್ಕೆ ತಂದು, ಭಾವಸ್ಥಲದ ಲಿಂಗವ ಮನಸ್ಥಲಕ್ಕೆ ತಂದು, ಮನಸ್ಥಲದ ಲಿಂಗವನ್ನು ದೃಷ್ಟಿ

ಸ್ಥಲಕ್ಕೆ ತಂದು ದೃಷ್ಟಿಸ್ಥಲದ ಲಿಂಗವ ಕರಸ್ಥಲಕ್ಕೆ ತಂದು ಅದನ್ನು ಧ್ಯಾನಿಸುವದು ಧ್ಯಾನಯೋಗ.

(೭) ಧಾರಣ:— ಲಿಂಗಧ್ಯಾನದಲ್ಲಿ ಮನಸ್ಸನ್ನು ಅಚ್ಚಳಿಯದೇ ಇಡಲು ಲಿಂಗಗಳು ಚಕ್ರಗಳಲ್ಲಿ ಸ್ಥಾಪ್ಯವಾಗಿ ಭಾವ, ಕರಣ, ಮನದಲ್ಲಿ ಲಿಂಗವು ಬೆಳಗಹತ್ತಲು ಅದು ಧಾರಣಯೋಗವು.

(೮) ಸಮಾಧಿಯೋಗ:— ಅಂತಃಕರಣ ಚತುಷ್ಟಯುವನ್ನು ಸ್ಥಿರವಾಗಿರಿಸಿ ಲಿಂಗಧ್ಯಾನದಲ್ಲಿ ತಲ್ಲೀನನಾಗಿರುವದು ಸಮಾಧಿಯೋಗ.

(೩೫೨) ಷಡ್ವಿಧ ವ್ರತಗಳು: – (೧) ಗುರುವಾಜ್ಞೆಯನ್ನು ಪಾಲಿಸುವುದು ಗುರುವ್ರತ (೨) ಲಿಂಗಪೂಜೆಯಲ್ಲಿ ನಿಯತಾತ್ಮನಾಗಿರುವುದು ಲಿಂಗವ್ರತ (೩) ಜಂಗಮವೇ ಮಹಾಲಿಂಗವೆಂದರಿದು ಆತ್ಮಾರ್ಪಣವಾಡುವುದು ಚರವ್ರತ (೪) ಪ್ರಸಾದಸೇವನೆಯು ಪ್ರಸಾದವ್ರತ (೫) ಪಾದೋದಕ ಸೇವನೆಯು ಪಾದೋದಕವ್ರತ (೬) ಅಷ್ಟಾವರಣಗಳಲ್ಲಿ ಲೀಯವಾದ ಭಕ್ತಿಯೇ ಭಾಕ್ತಿಕವ್ರತ.

(೩೫೩) ಷಡ್ವಿಧ ಶೀಲಗಳು:— ಅಕ್ರೋಧ, ಸತ್ಯವಚನ, ಕ್ಷಮೆ, ಭವಿಭಕ್ತಭೇದ, ಅನುಗ್ರಹ, ಸತ್ಪಾತ್ರ ದ್ರವ್ಯಾರ್ಪಣ, ಇವು ಆರು ಶೀಲಗಳು.

(೩೫೪) ಬಹಿರಂಗಾರ್ಚನೆ:— ಆಕಾರ ನಿರಾಕಾರ ಏಕವೆಂದೇ ಭಾವಿಸಿ ಆಕಾರವಿಡಿದು ಏಕೋಭಾವದಿಂದ ಅರ್ಚಿಸುವದೂ ಪೂಜಿಸುವುದೂ ಬಹಿರಂಗಾರ್ಚನೆ.

(೩೫೫) ಪ್ರಾಣಲಿಂಗ ಪೂಜೆ:— ಲಿಂಗಾಂಗ ಸಂಯೋಗವೆಂಬ ಶಿವಯೋಗದಲ್ಲಿ ವರ್ತಿಸುತ್ತ ಕರ್ಮಯೋಗವನ್ನು ನಿರಾಕರಿಸಿ ತನ್ನಿಷ್ಟಲಿಂಗದ ನಿಜಸ್ವರೂಪವನರಿದು ಆ ನಿಜಸ್ವರೂಪೆಂಬಂಥ ಪ್ರಾಣಲಿಂಗವನ್ನು ಅರ್ಚಿಸುವದು ಪ್ರಾಣಲಿಂಗ ಪೂಜೆಯು.



(೩೫೬) ನವಲಿಂಗ ಪೂಜೆ:— ಪ್ರಾಣಲಿಂಗಾರ್ಚನೆಯನ್ನು ಮಾಡುತ್ತ ಲಿಂಗ ಸುಖದಲ್ಲಿದ್ದಂಥ ಶರಣನು ನವಚಕ್ರದೊಳಗೆ ಪ್ರಾಣಲಿಂಗವು ಪ್ರಕಾಶಿಸುತ್ತಿರಲು ಆ ನವಲಿಂಗಗಳನ್ನು ಅರ್ಚಿಸುತ್ತ ಬೆರಿಸುವದು ನವಲಿಂಗ ಪೂಜೆಯು.

(೩೫೭) ತ್ರಿಲಿಂಗಗಳ ಪೂಜೆ:— ಇಷ್ಟ ಪ್ರಾಣ ಭಾವಗಳು ತ್ರಿಲಿಂಗಗಳು. ಅಷ್ಟವಿಧಾರ್ಚನೆ ಮಾಡುವದು ಇಷ್ಟಲಿಂಗದ ಪೂಜೆ. ಲಿಂಗವನ್ನು ಮನಸ್ಸಿನಲ್ಲಿ ಧ್ಯಾನಿಸಿ ಮನೋಮಧ್ಯದಲ್ಲಿರುವ ನಿಷ್ಕಲ ಬ್ರಹ್ಮವನ್ನು ಧ್ಯಾನವೆಂಬ ಹಸ್ತದಲ್ಲಿ ಹಿಡಿದು ಕರಸ್ಥಲದಲ್ಲಿರುವ ಇಷ್ಟಲಿಂಗದ ಗೊತ್ತಿನಲ್ಲಿ ಕಟ್ಟಿ ನೆರೆವುದು ಪ್ರಾಣಲಿಂಗ ಪೂಜೆ. ಮನಸ್ಸು ಲಿಂಗದಲ್ಲಿ ಲೀಯವಾಗಿ ಅಚ್ಚೊತ್ತಿ ಅಗಲದಿಪ್ಪುದು ಭಾವಲಿಂಗದ ಪೂಜೆ.

(೩೫೮) ಷಟ್‌ಸ್ಥಲಾತ್ಮಕ ಲಿಂಗಪೂಜಾವಿಧಿ:— ಬಹಿರಂಗಾರ್ಚನೆಯಲ್ಲಿ ಷಟ್‌ಸ್ಥಲಗಳಿರುತ್ತವೆ. ಗದ್ದುಗೆಯ ಮೇಲೆ ಮೂರ್ತವಾದಿ ವಿಭೂತಿ ರುದ್ರಾಕ್ಷಿ ಧಾರಣದ ವರೆಗೆ ಭಕ್ತಸ್ಥಲ. ಮೂಲ ಪಂಚಾಕ್ಷರಿ ಮಂತ್ರಜಪವು ಮಹೇಶ್ವರಸ್ಥಲ. ಸುಯಿಧಾನದಿಂದ ಇಷ್ಟಲಿಂಗವನ್ನು ಕರಸ್ಥಲಕ್ಕೆ ಬಿಜಯಂಗೈಸಿಕೊಳ್ಳುವದು ಪ್ರಸಾದಿಸ್ಥಲ. ಷೋಡಶೋಪಚಾರಗಳಿಂದ ಲಿಂಗವನ್ನು ಪೂಜಿಸಿ ಪರಮಾತ್ಮನನ್ನು ಸ್ತುತಿಸುವುದು ಪ್ರಾಣಲಿಂಗಿಸ್ಥಲ. ಲಿಂಗಪ್ರಸಾದವನ್ನು ಸವಿದು ಆನಂದಿಸುವದು ಶರಣಸ್ಥಲ. ತಾನು, ಲಿಂಗ, ಎಂಬುಭಯಭಾವವಳಿದು ತಾನೇ ತಾನಾಗಿರುವುದು ಐಕ್ಯಸ್ಥಲ.

(೩೫೯) ಲಿಂಗಪೂಜಾವಿಧಿ:— ಮೇಲೆ ೩೫೩ ರಿಂದ ೩೫೮ ವರೆಗೆ ಹೇಳಿದ ಕ್ರಮಗಳು ಕೇವಲ ತಾತ್ವಿಕವಾದವುಗಳು. ಆದರೆ ಅವುಗಳ ತತ್ವಗಳನ್ನನುಸರಿಸಿ ಬಹು ವಿಶಾಲತರವಾಗಿ ಲಿಂಗಪೂಜಾಕ್ರಮಗಳು ವಿವರಿಸಲ್ಪಟ್ಟಿರುತ್ತವೆ. ಅವುಗಳ ಅಂಗಗಳು ಅನೇಕವಿದ್ದು ಒಂದೊಂದಕ್ಕೆ ವಿಶಿಷ್ಟಮಂತ್ರಗಳು ಇರುತ್ತವೆ. ಇವುಗಳ ತತ್ವಗಳು ಒಂದೇ ಇದ್ದರೂ

ವ್ಯವಹಾರದಲ್ಲಿ ಭೇದಗಳಾಗಿರುತ್ತವೆ. ಅವುಗಳನ್ನೆಲ್ಲ ಇಲ್ಲಿ ವಿವರಿಸುವದು ಶಕ್ಯವಲ್ಲ ಆದ್ದರಿಂದ ಅವುಗಳ ಮುಖ್ಯಾಂಗಗಳು ಮಾತ್ರ ಇಲ್ಲಿ ಹೇಳಲ್ಪಟ್ಟಿವೆ. ಅವು ಯಾವವೆಂದರೆ:—

(೧) ಮನಶ್ಶುದ್ಧಿ, (೨) ಮುಖ ಪ್ರಕ್ಷಾಲನ (೩) ಪೂಜಾಗೃಹ ಪ್ರವೇಶ, (೪) ಸ್ಥಾನಶುದ್ಧಿ (೫) ಆಸನಾಸೀನನಾಗುವದು (೬) ವಿಭೂತಿ ಧಾರಣ. (೭) ರುದ್ರಾಕ್ಷಧಾರಣ.

(೮) ಕಲಾನ್ಯಾಸ (೯) ಪಂಚಾಕ್ಷರನ್ಯಾಸ (೧೦) ಸೃಷ್ಟಿನ್ಯಾಸ (೧೧) ಸಂಹಾರನ್ಯಾಸ (೧೨) ಸ್ಥಿತಿನ್ಯಾಸ (೧೩) ಕರನ್ಯಾಸ (೧೪) ದೇಹನ್ಯಾಸ (೧೫) ಷಡಂಗನ್ಯಾಸ (೧೬) ದಿಕ್ಕುಗಳಲ್ಲಿ ಅಕ್ಷರನ್ಯಾಸ.

(೧೭) ಪುಷ್ಪಾಂಜಲಿ (೧೮) ಅರ್ಘ್ಯ (೧೯) ಪಾದ್ಯ (೨೦) ಆಚಮನ (೨೧) ಸ್ನಾನ (೨೨) ಗೋಮೂತ್ರ ಸಮರ್ಪಣ (೨೩) ಗೋಮಯ ಸ್ನಾನ (೨೪) ಗೋಕ್ಷೀರಸ್ನಾನ (೨೫) ಗೋದಧಿ ಸ್ನಾನ (೨೬) ಗೋಘೃತ ಸ್ನಾನ (೨೭) ಪಂಚಾಮೃತ ಸ್ನಾನ (೨೮) ಕ್ಷೀರಸ್ನಾನ (೨೯) ದಧಿಸ್ನಾನ (೩೦) ಘೃತಸ್ನಾನ (೩೧) ಮಧುಸ್ನಾನ (೩೨) ಶರ್ಕರಾಸ್ನಾನ.

(೩೩) ಗಂಧೋದಕ ಸ್ನಾನ (೩೪) ಪುಷ್ಪೋದಕ ಸ್ನಾನ (೩೫) ಸ್ವರ್ಣೋದಕ ಸ್ನಾನ (೩೬) ರತ್ನೋದಕಸ್ನಾನ (೩೭) ಮೂಲ ಮಂತ್ರೋದಕ ಸ್ನಾನ (೩೮) ತಿಲೋದಕ ಸ್ನಾನ (೩೯) ತೀರ್ಥೋದಕ ಸ್ನಾನ (೪೦) ಮಹಾಭಿಷೇಕ.

(೪೧) ಪಾದ್ಯಾರ್ಘ್ಯಾಚಮನ (೪೨) ಲಿಂಗಕ್ಕೆ ವಿಭೂತಿಧಾರಣ (೪೩) ಉಪವೀತಧಾರಣ (೪೪) ಗಂಧಸಮರ್ಪಣ (೪೫) ಅಕ್ಷತಸಮರ್ಪಣ (೪೬) ಪುಷ್ಪಸಮರ್ಪಣ.

(೪೭) ಲಿಂಗಾವಯವ ಪೂಜೆ (೪೮) ಶಿವಸಹಸ್ರನಾಮ ಪಠನ (೪೯) ಲಿಂಗದಲ್ಲಿ ಮಂತ್ರಾನುಸಂಧಾನ (೫೦) ಲಿಂಗದಲ್ಲಿ ಮಾತೃಕಾನ್ಯಾಸ (೫೧) ಲಿಂಗದಲ್ಲಿ ಕಲಾನ್ಯಾಸ.



(೫೨) ಧೂಪಸಮರ್ಪಣ (೫೩) ದೀಪಸಮರ್ಪಣ (೫೪) ಕರ್ಪೂರ ಸಮರ್ಪಣ (೫೫) ಪತಾಕಸಮರ್ಪಣ (೫೬) ಅರ್ಘ್ಯಸಮರ್ಪಣ (೫೭) ತಾಂಬೂಲ ಸಮರ್ಪಣ (೫೮) ಮುಖವಾಸನ ಸಮರ್ಪಣ (೫೯) ಆಚಮನಸಮರ್ಪಣ (೬೦) ಪಾದುಕಸಮರ್ಪಣ (೬೧) ಘಂಟಾನಾದ ಸಮರ್ಪಣ (೬೨) ಆದರ್ಶ ದರ್ಶನ (೬೩) ಚಾಮರ ಸಮರ್ಪಣ (೬೪) ವ್ಯಜನ ಸಮರ್ಪಣ (೬೫) ಛತ್ರಸಮರ್ಪಣ (೬೬) ಪುಷ್ಪಾಂಜಲಿ.

(೬೭) ನಮಸ್ಕಾರ (೬೮) ಪುರಾಣಶ್ರವಣ (೬೯) ಸ್ತೋತ್ರಸಮರ್ಪಣ (೭೦) ಮುಖ ಪಾದ್ಯ ಸಮರ್ಪಣ (೭೧) ನಾಮಸಂಕೀರ್ತನ (೭೨) ಪುಷ್ಪಸಮರ್ಪಣ (೭೩) ತರ್ಪಣ (೭೪) ಪುಷ್ಪಾಂಜಲಿ (೭೫) ಮಂತ್ರಪುಷ್ಪ ಸಮರ್ಪಣ (೭೬) ಪೂಜಾಸಮಾಪ್ತಿ.

(೩೬೦) ಷೋಡಶೋಪಚಾರಗಳು:— ಪಾದ್ಯ, ಅರ್ಘ್ಯ, ಆಚಮನ, ಪತ್ರಪುಷ್ಪ, ಗಂಧ, ಅಕ್ಷತೆ, ರುದ್ರಾಕ್ಷಮಾಲಿಕೆ, ಛತ್ರ, ಚಾಮರ, ವ್ಯಜನ, ಗೀತ, ವಾದ್ಯ, ನರ್ತನ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ.

(೩೬೧) ಅಷ್ಟವಿಧಾರ್ಚನೆ:— ಜಲಾಭಿಷೇಕ, ಗಂಧಧಾರಣ, ಅಕ್ಷತಾರ್ಪಣ, ಪತ್ರಪುಷ್ಪಾರ್ಪಣ, ಧೂಪಸಮರ್ಪಣ, ದೀಪಸಮರ್ಪಣ, ನೈವೇದ್ಯ ಸಮರ್ಪಣ, ತಾಂಬೂಲ ಸಮರ್ಪಣ.

(೩೬೨) ಷಡಂಗನ್ಯಾಸಗಳು:— ಅವು ಅಂಗನ್ಯಾಸ, ಇಂದ್ರಿಯನ್ಯಾಸ, ಕರಾಂಗುಲಿನ್ಯಾಸ, ಚಕ್ರನ್ಯಾಸ, ಭೂತನ್ಯಾಸ, ಧಾತುನ್ಯಾಸ ಎಂದಿವೆ.

(೩೬೩) ಸಪ್ತೋದಕಗಳು:— ಇವು ಗಂಧೋದಕ, ಪುಷ್ಪೋದಕ, ಸುವರ್ಣೋದಕ, ರತ್ನೋದಕ, ಮಂತ್ರೋದಕ, ತಿಲೋದಕ, ತೀರ್ಥೋದಕ ಎಂದಿವೆ.

(೩೬೪) ಪಂಚಾಮೃತ:— ಇವು ಕ್ಷೀರ, ಘೃತ, ದಧಿ, ಮಧು, ಶರ್ಕರ ಇವು ಕೂಡಿದರೆ ಪಂಚಾಮೃತ.

(೩೬೫) ದ್ವಾದಶವಿಧ ಪೂಜೆಃ -- ಅಭಿಷೇಕ, ಅಂಗಾರತಾಪನ, ಭಸ್ಮಧಾರಣ, ಗಂಧಧಾರಣ, ಅಕ್ಷತಧಾರಣ. ಪತ್ರಪುಷ್ಪಧಾರಣ, ಧೂಪ ಸಂವೀಜನ, ಧೂಪಪ್ರಸಾರಣ, ದೀಪಪ್ರಕಾಶನ, ನೈವೇದ್ಯಸಮರ್ಪಣ, ತಾಂಬೂಲಪ್ರದಾನ, ವಸ್ತ್ರಪ್ರಾವರಣ.

(೩೬೬) ತ್ರಯೋಪಚಾರಗಳುಃ -- ಸ್ನಾನ, ಪೂಜಾ, ನೈವೇದ್ಯ.

(೩೬೭) ಪಂಚೋಪಚಾರಗಳುಃ— ಸ್ನಾನ, ಪೂಜಾ, ನೈವೇದ್ಯ, ಪ್ರದಕ್ಷಿಣ, ನಮಸ್ಕಾರ.

(೩೬೮) ಅಷ್ಟೋಪಚಾರಗಳುಃ— ಅಭಿಷೇಕ, ಪೂಜೆ, ನೈವೇದ್ಯ, ಪ್ರದಕ್ಷಿಣ, ನಮಸ್ಕಾರ, ಸಂಗೀತ, ನರ್ತನ, ವಾದ್ಯ.

(೩೬೯) ಚತುರ್ವಿಂಶೋಪಚಾರಗಳುಃ—ಆಹ್ವಾನ, ಆಸನ, ಪಾದ್ಯ, ಅರ್ಘ್ಯ, ಆಚಮನ, ಸ್ನಾನ, ಗಂಧ, ಅಕ್ಷತೆ, ಪತ್ರಪುಷ್ಪ, ವಸ್ತ್ರ, ಯಜ್ಞೋಪವೀತ, ಧೂಪ, ದೀಪ, ನೈವೇದ್ಯ, ಫಲ, ತಾಂಬೂಲ, ದರ್ಪಣ, ಪ್ರದಕ್ಷಿಣೆ, ನಮಸ್ಕಾರ, ಸ್ತೋತ್ರ, ಸಂಗೀತ, ವಾದ್ಯ, ನರ್ತನ, ಆತ್ಮಾರ್ಪಣ.

(೩೭೦) ದ್ವಾತ್ರಿಂಶದುಪಚಾರಗಳುಃ— ಆಹ್ವಾನ, ಆಸನ, ಪಾದ್ಯ, ಅರ್ಘ್ಯ, ಆಚಮನ, ಅಭಿಷೇಕ, ವಸ್ತ್ರ, ಯಜ್ಞೋಪವೀತ, ಅಲಂಕಾರ, ಅನುಲೇಪನ, ತಿಲಾಕ್ಷತೆ, ಪತ್ರಪುಷ್ಪ, ಧೂಪ, ದೀಪ, ನೀರಾಜನ, ನೈವೇದ್ಯ, ಫಲ, ತಾಂಬೂಲ, ದರ್ಪಣ, ಘಂಟಾನಾದ, ಪ್ರದಕ್ಷಣ, ನಮಸ್ಕಾರ, ಸ್ತೋತ್ರ, ಪುರಾಣಪಠನ, ಛತ್ರ, ಚಾಮರ, ವ್ಯಜನ, ಶಯ್ಯಾ, ಸಂಗೀತ, ವಾದ್ಯ, ನರ್ತನ, ಆತ್ಮಾರ್ಪಣ.

(೩೭೧) ಪಂಚಗವ್ಯಃ— ಗೋಮೂತ್ರ, ಗೋಮಯ, ಗೋಕ್ಷೀರ, ಗೋದಧಿ, ಗೋಘೃತ.

(೩೭೨) ಷಟ್‌ಸಮ್ಮಾರ್ಜನಃ— ಗೋಮಯ, ಗೋರೋಜನ, ಗೋಮೂತ್ರ, ಗೋದಧಿ, ಗೋಕ್ಷೀರ, ಗೋಘೃತ.



(೩೭೩) ಧೂಪಕ್ಕೆ ಉಪಯೋಗಿಸುವ ಪದಾರ್ಥಗಳುಃ— ಕೃಷ್ಣಾಗರು, ಗಂಧಸಾರ, ಗುಗ್ಗಳ, ಬಿಳೀಅಗರು, ಹಾಲುಮಡ್ಡಿ, ಬಿಲ್ವಪತ್ರಿಯ ಹಣ್ಣಿನೊಳಗಿನ ತಿರುಳು, ಆಕಳ ತುಪ್ಪ, ಜೇನತುಪ್ಪ, ಶಿಲಾರಸ, ಕರ್ಪೂರ.

(೩೭೪) ಲಿಂಗದ ಪಂಚಸೂತ್ರಃ— (೧) ಲಿಂಗದ ಸುತ್ತಳತೆ (೨) ಸುತ್ತಳತೆಯಷ್ಟೇ ಪೀಠ (೩) ಸುತ್ತಳತೆಯಷ್ಟೇ ದೀರ್ಘ (೪) ಸುತ್ತಳತೆಯಷ್ಟೇ ಅಗಲ (೫) ಸುತ್ತಳತೆಯ ಅರ್ಧಪ್ರಮಾಣ ಗೋಮುಖ.

ಟೀಪುಃ— ಶಿವಶರಣರೂ ವಚನಕಾರರೂ ಇಲ್ಲಿ ನಂ॥ ೩೫೪ರಿಂದ ೩೫೮ರ ವರೆಗೆ ಹೇಳಿದ ಲಿಂಗಪೂಜೆಯ ಕ್ರಮಗಳಿಗೆ ಮಹತ್ವ ಕೊಡುತ್ತಾರೆ. ಅವುಗಳನ್ನನುಸರಿಸುವಲ್ಲಿ ಶಿವಾನುಭವ ಶಾಸ್ತ್ರದ ಪೂರ್ಣ ಪರಿಚಯವು ಅವಶ್ಯವು. ಮುಂದೆ ೩೫೯ ರಿಂದ ೩೭೩ರ ವರೆಗೆ ಹೇಳಿದ ಕ್ರಮಗಳು ಶೈವರಿಂದ ತೆಗೆದುಕೊಂಡಂಥವಿರುತ್ತವೆ. ಸ್ಥಾವರ ಲಿಂಗ ಪೂಜೆಗಳು ಆ ರೀತಿ ನಡೆಯುವದುಂಟು. ವ್ಯವಹಾರದಲ್ಲಿ ಅವುಗಳನ್ನೇ ಇಷ್ಟಲಿಂಗ ಪೂಜೆಯಲ್ಲಿಯೂ ನಡೆಸುವದುಂಟು. ಆದರೆ ನಿಜವಾಗಿ ಅವುಗಳಲ್ಲಿ ಕೆಲವು ಮಾತ್ರ ಶಿವಾನುಭವಕ್ಕೆ ಅನ್ವಯಿಸುತ್ತವೆ. ಅವು ಯಾವವೆಂದರೆಃ— ನ್ಯಾಸಗಳು, ಧಾರಣೆಗಳು, ಮುದ್ರೆಗಳು, ಆಸನಗಳು, ಮತ್ತು ಮಂತ್ರ ಸಂಬಂಧ ಇವುಗಳು ಮುಖ್ಯವಾಗಿರುತ್ತವೆ.

(೩೭೫) ನ್ಯಾಸಗಳುಃ — ಇವು ಕಲಾನ್ಯಾಸ, ಷಡಂಗನ್ಯಾಸ, ಪಂಚಬ್ರಹ್ಮನ್ಯಾಸ, ಪಂಚಾಕ್ಷರ ನ್ಯಾಸ ಎಂದಿರುತ್ತವೆ. ದೇಹದ ಅವಯವಗಳಲ್ಲೆಲ್ಲ ಮಂತ್ರಗಳನ್ನು ನ್ಯಾಸಮಾಡುವದು ಕಲಾನ್ಯಾಸ. ಹೃದಯ, ಶಿರಸ್ಸು, ಶಿಖಾ, ಕವಚ, ನೇತ್ರ, ಇವುಗಳಲ್ಲಿ ನಿಶ್ಚಿತಮಂತ್ರಗಳನ್ನು ನ್ಯಾಸಮಾಡುವದು ಷಡಂಗನ್ಯಾಸ. ಪಂಚಬ್ರಹ್ಮಗಳನ್ನು ಶಿರಸ್ಸು, ಮುಖ, ಹೃದಯ, ಗುಹ್ಯ, ಪಾದ ಇವುಗಳಲ್ಲಿ ನ್ಯಾಸ ಮಾಡುವದು ಪಂಚಬ್ರಹ್ಮನ್ಯಾಸ. ಮೂರ್ಧ, ಲಲಾಟ, ಕಂಠ, ಹೃದಯ, ನಾಭಿಗಳಲ್ಲಿ

ಯಕಾರಾದಿ ನಕಾರಾಂತವಾಗಿ ಪಂಚಾಕ್ಷರಗಳನ್ನು ನ್ಯಾಸಮಾಡುವದು ಪಂಚಾಕ್ಷರನ್ಯಾಸ. ಇವುಗಳಲ್ಲಿ ಕೆಲವು ಶೈವ ಪರಮಂತ್ರಗಳಿವೆ. ವೀರ ಶೈವಪರವಾದವುಗಳಿಲ್ಲ.

(೩೭೬) ಅಂಗನ್ಯಾಸಗಳು:— ಇವು ಸೃಷ್ಟಿನ್ಯಾಸ, ಸ್ಥಿತಿನ್ಯಾಸ ಸಂಹಾರನ್ಯಾಸ ಎಂದಿವೆ. ಷಡಕ್ಷರ ಮಂತ್ರಗಳನ್ನು ದೇಹಕ್ಕೆ ಸಂಬಂಧಿಸುವ ವಿಧಗಳು ಇವು ಇವೆ.

(೩೭೭) ಅಂಗುಲಿನ್ಯಾಸಗಳು:— ಇವುಗಳ ಮೂಲಕ ಜಪಕಾಲದಲ್ಲಿ ಅಂಗುಲಿಗಳಲ್ಲಿ ಷಡಕ್ಷರಗಳನ್ನು ಆಯಾ ಶಕ್ತಿಗಳೊಡನೆ ತನಗೆ ಸಂಬಂಧಪಡಿಸಿಕೊಳ್ಳುವದು ಇರುತ್ತದೆ. ಇವುಗಳಲ್ಲಿ ಕರನ್ಯಾಸ, ದೇಹನ್ಯಾಸ, ಷಡಂಗನ್ಯಾಸ ಎಂಬ ಭೇದಗಳಿವೆ. ಪುನಃ ಈ ಪ್ರತಿಯೊಂದರಲ್ಲಿ ಸೃಷ್ಟಿ ಸ್ಥಿತಿ ಮತ್ತು ಸಂಹಾರ ಎಂಬ ಭಾಗಗಳಿವೆ. ಬೆರಳುಗಳಲ್ಲಿ ಮಾತ್ರ ಸಂಬಂಧಿಸುವದು ಕರನ್ಯಾಸವು. ಶಿರಸ್ಸು, ಮುಖ, ಹೃದಯ, ಗುಹ್ಯ, ಪಾದ, ಸರ್ವಾಂಗ ಇವುಗಳಿಗೆ ಸಂಬಂಧಿಸುವುದು ದೇಹನ್ಯಾಸ. ನೇತ್ರ, ಕವಚ, ಶಿಖಾ, ಶಿರಸ್ಸು, ಹೃದಯ ಇವುಗಳಿಗೆ ಸಂಬಂಧಿಸುವುದು ಷಡಂಗನ್ಯಾಸ. ಸಂಬಂಧಿಸುವ ವಿಷಯವಾಗಿ ಬೇರೆ ಬೇರೆ ಕ್ರಮಗಳಿದ್ದು ಅವುಗಳ ಪ್ರಕಾರ ಅವು ಸೃಷ್ಟಿ ಸ್ಥಿತಿ ಸಂಹಾರ ಎಂದು ಹೇಳಲ್ಪಡುತ್ತವೆ. ಹೆಚ್ಚಿನ ವಿವರಣೆಗಳಿಗೆ ಮೂಲ ಗ್ರಂಥಗಳನ್ನು ನೋಡುವದು ಇಲ್ಲವೆ ಬಲ್ಲವರಿಂದ ತಿಳಿದುಕೊಳ್ಳುವದು.

(೩೭೮) ಆಸನಗಳು:— ೮೪ ಆಸನಗಳಿವೆ ಅವುಗಳಲ್ಲಿ ಸಿದ್ಧಾಸನ, ಪದ್ಮಾಸನ, ಸ್ವಸ್ತಿಕಾಸನ, ವೀರಾಸನ, ಗೋಮುಖಾಸನ ಮತ್ತು ಸುಖಾಸನಗಳು ಜಪಸಿದ್ಧಿಗೆ ಯೋಗ್ಯವಾದ ಷಡಾಸನಗಳು.

(೩೭೯) ಪಂಚಧಾರಣೆಗಳು:— ಇವು ಅಗ್ನಿಧಾರಣೆ, ನಾಡಿಧಾರಣೆ, ವಾಯುಧಾರಣೆ, ಅಮೃತಧಾರಣೆ, ಆಧಾರಧಾರಣೆ ಎಂದು ಐದು ಇವೆ.



(೧) ಅಗ್ನಿಧಾರಣೆ:— ಕಾಲಾಗ್ನಿಯನೆಬ್ಬಿಸಿ ಕಮಲನಾಳದ ತುದಿಯನಡರಿ ಮಹಾಜ್ಯೋತಿಯ ಪ್ರಭೆಯಲ್ಲಿರುವದು. (೨) ನಾಡಿಧಾರಣೆ:— ಮನುಷ್ಯನಲ್ಲಿ ಸುಷುಮ್ನಾ ನಾಡಿ ಇದ್ದು ಅದನ್ನು ಚೈತನ್ಯಗೊಳಿಸುತ್ತ ಮಹಾಜ್ಯೋತಿಯ ಪ್ರಕಾಶವ ಕಾಂಬುದು. (೩) ವಾಯುಧಾರಣೆ:— ಮಹಾವಾಯುವನು ಪಿಡಿದು ಸಮಚಿತ್ತನಾಗಿ ಮೂಲ ಜ್ವಾಲೆಯನೆಬ್ಬಿಸುವದು. (೪) ಅಮೃತ ಧಾರಣೆ:— ಜ್ಞಾನಪ್ರಕಾಶನಾಗಿಹ ಮಹಾಜ್ಯೋತಿ ಎಂಬ ಅಮೃತವನುಂಡರೆ ಹಸಿವು ತೃಷೆಗಳಡಗಿ ಅನಂತ ಸ್ವರೂಪನಾಗಿರುವುದು (೫) ಆಧಾರ ಧಾರಣೆ:— ಪ್ರಾಣವೇ ಪೀಠಿಕೆಯಾಗಿ ಶಿವನೆಂಬ ಶಿವಲಿಂಗವ ನೆಲೆಗೊಳಿಸಿ ಅರ್ಪಿಸಿ ಭೇದವಿಲ್ಲದೆ ಬೆರೆವುದು.

(೩೮೦) ದೀಕ್ಷಾವಿಧಿ:— ೧ನೇ ವಿಧ:— ಭವಿತನಕ್ಕೆ ಹೇಸಿ ಭಕ್ತನಾಗಬೇಕೆಂಬುವವನಿಗೆ ಮಾಡತಕ್ಕ ದೀಕ್ಷಾವಿಧಿಗಳ ಅಂಗಗಳು:— (೧) ಕಾಯಶುದ್ಧಿ, ಜೀವಶುದ್ಧಿ, ಆತ್ಮಶುದ್ಧಿ ಮಾಡುವುದು. (೨) ವಾಕ್ಯ, ಪಾಣಿ, ಪಾದ, ಗುಹ್ಯ, ಪಾಯುವೆಂಬ ಕರ್ಮೇಂದ್ರಿಯಗಳ ಮೇಲಣ ಇಂದ್ರಿಯ ಲಿಖಿತವನ್ನು ತೊಡೆದು ಲಿಂಗಲಿಖಿತ ಮಾಡುವುದು (೩) ಅಂತಃಕರಣ ಚತುಷ್ಟಯಗಳ ನಿವರ್ತನೆ (೪) ಪಂಚಭೂತಸ್ಥಾನದ ಅಧಿದೇವತೆಗಳನ್ನು ತೋರುವುದು.

(೫) ಹೀಗೆ ಶುದ್ಧಾತ್ಮನ ಮಾಡಿದ ಬಳಿಕ ಗಣ ತಿಂಥಿಣಿಯ ಮುಂದೆ ನಿಲ್ಲಿಸಿ ದಂಡಪ್ರಣಾಮವನ್ನು ಮಾಡಿಸುವುದು, ಮತ್ತು ಕೈವಿಡಿದೆತ್ತುವುದು.

(೬) ಭೂಶುದ್ಧಿಯನ್ನು ಮಾಡುವುದು. ಆಮೇಲೆ ಚೌಕಮಧ್ಯದಲ್ಲಿ ಕುಳ್ಳಿರಿಸುವುದು. ಗುರುಕಲಶ ಸ್ಥಾಪನೆ ಮಾಡುವುದು.

(೭) ಜಲಶುದ್ಧಿಯನ್ನು ಮಾಡುವುದು (೮) ಜಂಗಮಕ್ಕೆ ಪಾದಾರ್ಚನೆಯನ್ನು ಮಾಡುವುದು. (೯) ಕುಮಾರ ಠಾವನ್ನು ಜಲಾಧಿವಾಸ ಮಾಡುವುದು.

(೧೦) ಶಿಷ್ಯನ ಹಸ್ತವನ್ನು ಶೋಧಿಸುವುದು. (೧೧) ವಿಭೂತಿಯನ್ನು ಧರಿಸುವುದು, (೧೨) ರುದ್ರಾಕ್ಷಿಧಾರಣ, (೧೩) ಜಲಾಧಿವಾಸದೊಳಗಣ ಕುಮಾರ ಶಾವನ್ನು ತೆಗೆಯುವುದು, ಶಿಲೆಯ ಪೂರ್ವಾಶ್ರಯವನ್ನು ಕಳೆಯುವುದು. (೧೪) ಶಿಲೆಗೆ ಪ್ರಾಣಪ್ರತಿಷ್ಠೆ ಮಾಡುವುದು.

(೧೧) ದೇವರಿಗೆ ಸ್ನಪನ, (೧೨) ದೇವರಿಗೆ ವಸ್ತ್ರಸಮರ್ಪಣ, (೧೩) ಗಂಧಸಮರ್ಪಣ, (೧೪) ಅಕ್ಷತಸಮರ್ಪಣ, (೧೫) ಪುಷ್ಪಸಮರ್ಪಣ, (೧೬) ಧೂಪವನ್ನರ್ಪಿಸುವುದು, (೧೭) ದೀಪಸಮರ್ಪಣ, (೧೮) ನೈವೇದ್ಯಸಮರ್ಪಣ, (೧೯) ತಾಂಬೂಲ ಸಮರ್ಪಣ, (೨೦) ಮಂತ್ರಪುಷ್ಪ ಸಮರ್ಪಣ, (೨೧) ನಮಸ್ಕಾರ, (೨೨) ಅನುಷ್ಠಾನ, (೨೩) ಉರಸ್ಥಲದ ಸೆಜ್ಜೆಯಲ್ಲಿ ಲಿಂಗವನ್ನು ಧರಿಸುವುದು.

(೨೩) ಶಿಷ್ಯನ ವಾಯು ಪ್ರಾಣಿತ್ವವ ಕಳೆದು, ಲಿಂಗ ಪ್ರಾಣಿಯ ಮಾಡುವುದು, (೨೪) ಅಗ್ರೋದಕವನ್ನು ಸರ್ವಾಂಗದ ಮೇಲೆ ತಳಿವುದು, (೨೫) ವಿಭೂತಿಯ ಪಟ್ಟವನ್ನು ಕಟ್ಟುವುದು, (೨೬) ಶಿಷ್ಯನ ದುರಕ್ಷರವ ತೊಡೆವುದು, (೨೭) ಲಲಾಟದಲ್ಲಿ ಲಿಂಗ ಲಿಖಿತವನ್ನು ಬರೆವುದು.

(೨೮) ಶಿಷ್ಯನ ಮಸ್ತಕದಲ್ಲಿ ಹಸ್ತವನಿರಿಸುವುದು, (೨೯) ಶಿಷ್ಯನ ಕರ್ಣದಲ್ಲಿ ಶಿವಮಂತ್ರವನ್ನು ನಿರೂಪಿಸುವುದು, (೩೦) ಶತಪತ್ರದೊಳಗಣ ಕಳೆಯನ್ನು ಪ್ರಜ್ವಲಿಸಿ ಪ್ರಾಣದಲ್ಲಿ ಪ್ರಾಣಲಿಂಗವನ್ನು ನೆಲೆಗೊಳಿಸಿ ಇಷ್ಟಲಿಂಗಸ್ಥಲವನ್ನು ತೋರಿಸಿ ಶಿಷ್ಯನನ್ನು ಕೃತಕೃತ್ಯನನ್ನು ಮಾಡುವುದು.

ಬೇರೆ ದೀಕ್ಷಾವಿಧಿಗಳು ಅನೇಕ ಇವೆ. ಆದರೆ ಅವುಗಳಲ್ಲಿ ಶೈವಪದ್ಧತಿಗಳು ಬಹಳ ಸೇರಿಕೊಂಡಿವೆ. ಅವು ಅನೇಕ ಕಡೆಗೆ ಪ್ರಚಾರದಲ್ಲಿಯೂ ಇವೆ. ಆದರೆ ಅವು ವಚನಕಾರರ ತತ್ವಗಳಿಗೆ ಹೊಂದುವದಿಲ್ಲ. ಹೇಗೆ ಶಿವಪೂಜೆಯಲ್ಲಿ ಶೈವಪದ್ಧತಿಗಳು ಕೂಡಿವೆಯೋ, ಹಾಗೆಯೇ



ಇವುಗಳಲ್ಲಿಯೂ ಕೂಡಿವೆ. ಆದುದರಿಂದ ಅವುಗಳನ್ನು ನಾವು ಇಲ್ಲಿ ಉಲ್ಲೇಖಿಸಿರುವದಿಲ್ಲ.

(೩೮೧) ತ್ರಿವಿಧ ದೀಕ್ಷೆಗಳು:— ಇವು ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ಮತ್ತು ವೇಧಾದೀಕ್ಷೆ ಎಂದಿವೆ. ಕ್ರಿಯಾದೀಕ್ಷೆಯಿಂದ ಕಾಯಕ್ಕೆ, ಮಂತ್ರದೀಕ್ಷೆಯಿಂದ ಪ್ರಾಣಕ್ಕೆ, ಮತ್ತು ವೇಧಾದೀಕ್ಷೆಯಿಂದ ಮನಕ್ಕೆ ಉಪದೇಶ ಮಾಡುವುದು.

(೩೮೨) ೨೧ ವಿಧ ದೀಕ್ಷೆಗಳು:— (೧) ಆಜ್ಞಾದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿಕಾರೋಹಣ, ಕಳಶಾಭಿಷೇಕ, ವಿಭೂತಿ ಪಟ್ಟ, ಲಿಂಗಾಯತ, ಲಿಂಗಸ್ವಾಯತ ಈ ಏಳನ್ನು ಕಾಯಕ್ಕುಪದೇಶ ಮಾಡುವುದು. (೨) ಸಮಯ, ನಿಸ್ಸಂಸಾರ, ನಿರ್ವಾಣ, ತತ್ವದೀಕ್ಷೆ, ಅಧ್ಯಾತ್ಮ, ಅನುಗ್ರಹ, ಸತ್ಯಶುದ್ಧ ಈ ಏಳನು ಪ್ರಾಣಕ್ಕುಪದೇಶ ಮಾಡುವುದು. (೩) ಏಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ, ಲಿಂಗನಿಜ, ಮನೋಲಯ, ಸದ್ಯೋನ್ಮುಕ್ತಿ ಈ ಏಳನು ಮನಕ್ಕುಪದೇಶ ಮಾಡುವುದು.

(೩೮೩) ಅಷ್ಟವಿಧ ಸಮಾಧಿಗಳು:— ಇವು ಯಾವವೆಂದರೆ:- (೧) ನಿರ್ವಾಣ ಸಮಾಧಿ:— ಇದು ನಿರವಯಸ್ಥಲಕ್ಕೆ ಕಾರಣವಾದ ಶೂನ್ಯಲಿಂಗಾನುಭವವುಳ್ಳವರಿಗೆ ಸಂಬಂಧವು. (೨) ಚಿದಾನಂದ ಸಮಾಧಿ— ನಿರಾಮಯಸ್ಥಲಕ್ಕೆ ಕಾರಣವಾದ ನಿಃಕಲ ಲಿಂಗಾನುಭವವನ್ನು ಹೊಂದಿದವರಿಗೆ ಸಂಬಂಧವು. (೩) ನಿರವಯ ಸಮಾಧಿ:— ನಿಜೈಕ್ಯಸ್ಥಲಕ್ಕೆ ಕಾರಣವಾದ ಮಹಾಲಿಂಗಾನುಭವವನ್ನು ಹೊಂದಿದವರಿಗೆ ಸಂಬಂಧವು. (೪) ನಿಜಶಿವಸಮಾಧಿ:— ಶರಣಸ್ಥಲಕ್ಕೆ ಕಾರಣವಾದ ಪ್ರಸಾದ ಲಿಂಗಾನುಭವವುಳ್ಳವರಿಗೆ ಸಂಬಂಧವು. (೫) ಬಯಲಸಮಾಧಿ:— ಪ್ರಾಣಲಿಂಗಕ್ಕೆ ಕಾರಣವಾದ ಜಂಗಮ ಲಿಂಗಾನುಭವವನ್ನು ಹೊಂದಿದವರಿಗೆ ಸಂಬಂಧವು. (೬) ಗೋಳಕಸಮಾಧಿ:— ಪ್ರಸಾದಿಸ್ಥಲಕ್ಕೆ ಕಾರಣವಾದ ಶಿವಲಿಂಗಾನುಭವವ ಹೊಂದಿದವರಿಗೆ ಸಂಬಂಧವು. (೭) ಗೋಮುಖ

ಸಮಾಧಿಃ— ಮಹೇಶ್ವರಸ್ಥಲಕ್ಕೆ ಕಾರಣವಾದ ಗುರುಲಿಂಗಾನುಭವವನ್ನು ಹೊಂದಿದವರಿಗೆ ಸಂಬಂಧವು. (೮) ಕ್ರಿಯಾಸಮಾಧಿಃ— ಸದ್ಭಕ್ತಿಕಾರಣವಾದ ಆಚಾರ ಲಿಂಗಾನುಭವವನ್ನು ಹೊಂದಿದವರಿಗೆ ಸಂಬಂಧವು.

(೩೮೪) ಸಮಾಧಿ ಕ್ರಿಯೆಃ— ಇದು ಅಂತ್ಯವಿಧಿಯಾಗಿದೆ. ಇದರಲ್ಲಿಯ ಭಾಗಗಳು ಆವವೆಂದರೆಃ — (೧) ಲಿಂಗೈಕ್ಯಂಗೆ ಘನಮಾರ್ಗದ ಎಚ್ಚರವನ್ನು ಹುಟ್ಟಿಸುವುದು. (೨) ಗುರುವಾಕ್ಯ ಪ್ರಮಾಣವಾಗಿ ನಡೆದು ನುಡಿದು ಆಚರಿಸಿ ಬಯಲಾದ ಮಹಾಮಹಿಮರ ಕಥಾ ಪ್ರಸಂಗಗಳನು ಓದಿ ಅನುಭಾವವ ಮಾಡುವದು. (೩) ರೋದನಗಳನ್ನು ಮಾಡದೆ ಮಂಗಳ ಮಹೋತ್ಸವದಂತೆ ವರ್ತಿಸುವುದು. (೪) ಸಮಾಧಿಯ ಮಾಡುವುದು. (೫) ಪಂಚಾಭಿಷೇಕಗಳಿಂದ ಸ್ನಾನವ ಮಾಡಿಸಿ, ಮಂಟಪವ ರಚಿಸಿ, ಆಸನದಲ್ಲಿ ಮೂರ್ತ ಮಾಡಿಸುವುದು. (೬) ಪುಷ್ಪಾಂಜಲಿಯನ್ನು ಮಾಡುವದು. (೭) ಸಮಾಧಿಸ್ಥಳಕ್ಕೆ ತರುವದು. (೮) ಲಿಂಗೈಕ್ಯಶರಣನ ನಡೆನುಡಿಯಾಚರಣೆಯ ವೃತ್ತಾಂತವನ್ನು ಉಗ್ಘಡಿಸುವುದು. (೯) ಸಮಾಧಿಗೆ ಪಾದೋದಕ ಹಾಕುವದು. (೧೦) ಸಮಾಧಿ ಮಂಟಪದಲ್ಲಿ ಮೂರ್ತವ ಮಾಡಿಸುವದು. (೧೧) ಸರ್ವಾಂಗಕ್ಕೆ ಪ್ರಣವ ಸಂಬಂಧವಾದ ತಗಡು ಸಂಬಂಧಿಸುವದು. (೧೨) ಪುಷ್ಪಾಂಜಲಿ. (೧೩) ಕವಾಟಬಂಧನ. (೧೪) ಸಮಾಧಿಗೆ ಮೃತ್ತಿಕೆಯ ತುಂಬುವುದು. (೧೫) ಮೇಲೆ ಗದ್ದುಗೆಯ ಮಾಡುವದು.

ಸೂಚನೆಃ— ವೀರಶೈವಕ್ಕೆ ಸಂಬಂಧಿಸದೆ ಇದ್ದಂಥ ಅನೇಕ ಆಚಾರಗಳುಂಟು. ಅವುಗಳು ಶೈವ ಕರ್ಮಗಳಾಗಲಿ ಇಲ್ಲವೆ ವೈದಿಕ ಕರ್ಮಗಳಾಗಲಿ ಅಥವಾ ಮಿಶ್ರ ಕರ್ಮಗಳಾಗಲಿ ಇರುತ್ತವೆ. ಅವುಗಳನ್ನು ವಚನಕಾರರು ನಿರಾಕರಿಸಿದ್ದಾರೆ. ಆದರೂ ರೂಢಿಯಲ್ಲಿ ಇಂಥ ಅನೇಕ ಆಚಾರಗಳು ವೀರಶೈವರಲ್ಲಿ ಬಂದಿವೆ. ಮತ್ತು ಅವುಗಳು ವೀರಶೈವ ಗ್ರಂಥಗಳಲ್ಲಿ ಆಗಿಂದಾಗ್ಗೆ ಉಲ್ಲೇಖಿಸಲ್ಪಡುತ್ತವೆ. ಆದ್ದರಿಂದ ಅವುಗಳು ಕೆಳಗೆ ಹೇಳಲ್ಪಟ್ಟಿರುತ್ತವೆ.



(೩೮೫) ಶೋಡಶ ಕರ್ಮಗಳುಃ— (ಅ) ಇವು ಗರ್ಭಾದಾನ, ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ, ಉಪನಯನ, (ದೀಕ್ಷಾ) ಉಪಾಕರ್ಮ. ಉತ್ಸರ್ಜನ, ವೇದವ್ರತ, ಗೌದಾನಿಕ, ಸ್ನಾತಕ, ವಿವಾಹ, ಸ್ಮಾರ್ತಾಗ್ನಿಹೋತ್ರ. ಔರ್ಧ್ವದೇಹಿಕ, ಇವು ಇರುತ್ತವೆ. (ಬ) (೧) ಗರ್ಭಾದಾನ (೨) ಪುಂಸವನ (೩) ಸೀಮಂತೋನ್ನಯನ (೪) ಅನವಲೋಮನ (೫) ಜಾತಕರ್ಮ (೬) ನಾಮಕರಣ (೭) ದುಗ್ಧಪ್ರಾಶನ (೮) ಸೂರ್ಯಚಂದ್ರಾವಲೋಕನ (೯) ನಿಷ್ಕ್ರಮಣ (೧೦) ಕರ್ಣವೇಧ (೧೧) ಅನ್ನಪ್ರಾಶನ (೧೨) ಚೌಲ (೧೩) ವಿದ್ಯಾರಂಭ (೧೪) ದೀಕ್ಷಾ (೧೫) ವಿವಾಹ (೧೬) ಅಂತ್ಯೇಷ್ಟಿ ಹೀಗೆ ಎರಡು ಪ್ರಕಾರವಾಗಿ ಉಲ್ಲೇಖಗಳಿವೆ.

(೩೮೬) ಷಟ್‌ಕರ್ಮಗಳುಃ— ಇವು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ, ಎಂದಿವೆ.

(೩೮೭) ದಶಕರ್ಮಗಳುಃ— ಗರ್ಭಾದಾನ, ಸೀಮಂತ, ಜಾತಕರ್ಮ (ಲಿಂಗಧಾರಣ), ನಾಮಕರಣ, ಕರ್ಣವೇಧ, ಚೌಲ, ವಿದ್ಯಾರಂಭ, ದೀಕ್ಷಾ, ವಿವಾಹ, ಅಂತ್ಯೇಷ್ಟಿ,

(೩೮೮) ನವವಿಧ ಭಕ್ತಿಗಳುಃ— ಇವು ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖತ್ವ, ಆತ್ಮಾರ್ಪಣ, ಎಂದಿವೆ.

(೩೮೯) ನವಶಕ್ತಿಗಳುಃ— ಕಾಕಿನಿ, ಡಾಕಿನಿ, ಲಾಕಿನಿ, ಶಾಕಿನಿ, ಡಾಕಿನಿ, ಆಕಿನಿ, ನಿರ್ಮಾಯಶಕ್ತಿ, ನಿಭ್ರಾಂತಶಕ್ತಿ, ನಿರ್ಭಗ್ನಶಕ್ತಿ ಎಂದಿವೆ.

(೩೯೦) ೨೮ ಆಗಮಗಳುಃ— ಕಾಮಿಕಾಗಮ, ಯೋಗಜಾಗಮ, ಚಿಂತ್ಯಾಗಮ, ಕಾರಣಾಗಮ, ಅಜಿತಾಗಮ, ದೀಪ್ತಾಗಮ, ಸೂಕ್ಷ್ಮಾಗಮ, ಸಹಸ್ರಾಗಮ, ಅಂಶುಮಾನಾಗಮ, ಸುಪ್ರಬೋಧಾಗಮ, ವಿಜಯಾಗಮ, ನಿಶ್ವಾಸಾಗಮ, ಸ್ವಯಂಭುವಾಗಮ, ಅನಿಲಾಗಮ, ವೀರಾಗಮ, ರೌರವಾಗಮ, ಮಕುಟಾಗಮ, ವಿಮಲಾಗಮ, ಚಂದ್ರಜ್ಞಾ

ನಾಗಮ, ಬಿಂಬಾಗಮ, ಪ್ರೋದ್ಗೀತಾಗಮ, ಲಲಿತಾಗಮ, ಸಿದ್ಧಾಗಮ, ಸಂತಾನಾಗಮ, ಸರ್ವೋಕ್ತಾಗಮ, ಪಾರಮೇಶ್ವರಾಗಮ, ಕಿರಣಾಗಮ, ವಾತುಲಾಗಮ, ಎಂದು ೨೮ ಆಗಮಗಳಿವೆ.

(೩೯೧) ಹದಿನೆಂಟು ಪುರಾಣಗಳು:— ಬ್ರಹ್ಮಪುರಾಣ, ಪದ್ಮಪುರಾಣ, ವಿಷ್ಣುಪುರಾಣ, ಶೈವಪುರಾಣ, ಭಾಗವತಪುರಾಣ, ನಾರದೀಯಪುರಾಣ, ಮಾರ್ಕಂಡೇಯಪುರಾಣ, ಆಗ್ನೇಯಪುರಾಣ, ಭವಿಷ್ಯತ್ಪುರಾಣ, ಬ್ರಹ್ಮವೈವರ್ತಪುರಾಣ, ಲೈಂಗಪುರಾಣ, ವರಾಹಪುರಾಣ, ಸ್ಕಾಂದಪುರಾಣ, ವಾಮನಪುರಾಣ, ಕೂರ್ಮಪುರಾಣ, ಮತ್ಸ್ಯಪುರಾಣ, ಗಾರುಡಪುರಾಣ, ಬ್ರಹ್ಮಾಂಡಪುರಾಣ, ಎಂದಿವೆ. ಇವುಗಳಲ್ಲಿ ಸ್ಕಂದ, ಶೈವ, ಲೈಂಗ, ಕೂರ್ಮ, ವಾಮನ, ವರಾಹ, ಭವಿಷ್ಯತ್ತು, ಮತ್ಸ್ಯ, ಮಾರ್ಕಂಡೇಯ, ಬ್ರಹ್ಮಾಂಡ ಇವು ಹತ್ತು ಶಿವಪುರಾಣಗಳು.

(೩೯೨) ಆರು ದರ್ಶನಗಳು:— ಶೈವ, ಶಾಕ್ತ, ವೈಷ್ಣವ, ಸೌರ, ಗಾಣಾಪತ್ಯ, ಮಾಯಾವಾದಿ, ಇವು ಆರು ದರ್ಶನಗಳು.

(೩೯೩) ಪಂಚ ಸೂತಕಗಳು:—

೧ ನೇ ವಿಧ:— ಇವು ಜಾತಿಸೂತಕ, ಜನನ ಸೂತಕ, ಪ್ರೇತ ಸೂತಕ, ರಜಸೂತಕ, ಉಚ್ಛಿಷ್ಟ ಸೂತಕ, ಇವು ಐದು ಸೂತಕಗಳು.

೨ ನೇ ವಿಧ:- ಆರುಸ್ಥಲಗಳ ಪ್ರಕಾರ ಆರು ಸೂತಕಗಳು ಇವೆ:— ಅವು ಕುಲಸೂತಕ, ಛಲಸೂತಕ, ತನುಸೂತಕ, ಮನಸೂತಕ, ನೆನಹುಸೂತಕ, ಭಾವಸೂತಕ ಎಂದಿವೆ. ಇವುಭಕ್ತ ಮಹೇಶಾದಿ ಸ್ಥಲಗಳಿಗೆ ಅನುಕ್ರಮವಾಗಿ ಸಂಬಂಧಿಸಿವೆ.

(೩೯೪) ಶೈವವಿಧಗಳು:—

(ಅ) ಶೈವ, ಪಾಶುಪತ, ಸೋಮ, ದಕ್ಷಿಣ, ಕಾಳಾಮುಖ, ಲಾಕುಳ, (ಯಾಮಳ)



(ಬ) ಆದಿಶೈವ, ಮಹಾಶೈವ, ಅನುಶೈವ, ಅವಾಂತರಶೈವ, ಅಂತ್ಯಶೈವ, ಪ್ರವರಶೈವ. ಆದಿಶೈವರು ಶಿವದ್ವಿಜರು. ದೀಕ್ಷೆಹೊಂದಿದ ಶಿವದ್ವಿಜರು ಮಹಾಶೈವರು. ನೃಪರಿಗೂ ವೈಶ್ಯರಿಗೂ ದೀಕ್ಷೆಯನ್ನಿತ್ತರೆ, ಅವರು ಅನುಶೈವರು. ಶೂದ್ರಂಗೆ ದೀಕ್ಷೆಯನ್ನಿತ್ತರೆ ಅವರು ಅವಾಂತರ ಶೈವರು. ಬ್ರಾಹ್ಮಣನಿಂದ ಶೂದ್ರಸ್ತ್ರೀಯರಲ್ಲಿ ಹುಟ್ಟಿದವರು ಪ್ರವರಶೈವರು. ಅಂತ್ಯಜರಿಗೆ ದೀಕ್ಷೆಯನ್ನಿತ್ತರೆ ಅವರು ಅಂತ್ಯಶೈವರು.

(ಕ) ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತ. ಶಕ್ತಿಪರವಾದುದು ವಾಮವು. ಭೈರವಪರವಾದುದು ದಕ್ಷಿಣವೆನಿಸುವುದು. ಸಪ್ತಮಾತೃಕಾಪರವಾದುದು ಮಿಶ್ರವು. ಪರಶಿವ ಪರವಾದುದು ಸಿದ್ಧಾಂತವು. ಹೀಗೆ ಶೈವ ಭೇದಗಳಿವೆ.

(ಡ) ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ. ಶಿವನನ್ನು ಪೂಜಿಸುವವರು ಸಾಮಾನ್ಯರು. ಶಿವ, ವಿಷ್ಣು, ಬ್ರಹ್ಮ, ಷಣ್ಮುಖ, ಗಣಪತಿ ಇಂಥ ದೇವತೆಗಳನ್ನೆಲ್ಲ ಪೂಜಿಸುವವರು ಮಿಶ್ರಶೈವರು. ಶಿವನನೊಬ್ಬನನ್ನೇ ಪೂಜಿಸುವವರು ಶುದ್ಧ ಶೈವರು. ಇವರಿಗೆ ಲಿಂಗಧಾರಣವಿದೆ. ಸಂಕಲ್ಪ ವಿಕಲ್ಪಗಳನ್ನು ದೂರಮಾಡಿ ಆತ್ಮತತ್ವದ ವಿಚಾರ ಮಾಡುವವರು ವೀರಶೈವರು.

ಟೀಪು:— ಶಿವಶರಣರು ಮತ್ತು ವಚನಕಾರರು ಇಂಥ ಯಾವ ಭೇದವನ್ನೂ ಎಣಿಸುವದಿಲ್ಲ. ಅವರು ಭವಿ, ಭಕ್ತ ಎಂಬ ಎರಡೇ ಭೇದಗಳನ್ನು ಎಣಿಸುತ್ತಾರೆ. ವೀರಶೈವ ದೀಕ್ಷೆಹೊಂದಿದವರಲ್ಲಿ ಯಾವ ತರದ ಭೇದವನ್ನು ಅವರು ಎಣಿಸುವದಿಲ್ಲ.

(೩೯೫) ಐಕ್ಯದ ಭೇದಗಳು:-ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಇವು ಆಯಾಧರ್ಮದವರ ಧ್ಯೇಯಗಳಾಗಿವೆ.

(೩೯೬) ಕಾಂಡಗಳು:— ಕರ್ಮಕಾಂಡ, ಭಕ್ತಿಕಾಂಡ, ಜ್ಞಾನಕಾಂಡಗಳು ಎಂದಿವೆ.

(೩೯೭) ಗೋತ್ರಗಳು:— ವೀರ, ನಂದಿ, ವೃಷಭ, ಭೃಂಗೀ, ಸ್ಕಂದ ಇವು ೫ ಗೋತ್ರಗಳು. ಇವು ಅನುಕ್ರಮವಾಗಿ ಪಡ್ವಿಡಿ, ವೃಷ್ಟಿ, ಮುಕ್ತಾಗುಚ್ಛ, ಲಂಬನ, ಪಂಚವರ್ಣ ಇದ್ದು ಇವುಗಳ ಕನ್ನಡ ಹೆಸರುಗಳು ವಾಡಿಕೆಯಲ್ಲಿವೆ. ಅವು ಪಡವಿಡಿ ಬಗೆ, ಮಳೆ ಬಗೆ, ಮುತ್ತಿನ ಕಂತೆಯ ಬಗೆ, ಲಂಬನ ಬಗೆ ಮತ್ತು ಪಂಚವರ್ಣಿಗೆಯ ಬಗೆ ಎಂದಿವೆ. ಇವುಗಳಿಗೆ ರೇವಣಸಿದ್ಧ, ಮರುಳಾರಾಧ್ಯ, ಏಕೋರಾಮ, ಪಂಡಿತಾರಾಧ್ಯ, ವಿಶ್ವಾರಾಧ್ಯ ಇವರು ಅನುಕ್ರಮವಾಗಿ ಮೂಲ ಗುರುಗಳು.

(೩೯೮) ಏಕಾದಶ ರುದ್ರರು:— ವೀರಭದ್ರ, ಶಂಭು, ಗಿರೀಶ, ಅಜೈಕಪಾತ್, ಅಹಿರ್ಬುಧ್ನ್ಯ, ಪಿನಾಕಿ, ಸ್ಥಾಣು, ಪಶುಪತಿ, ಭವ, ಉಗ್ರ, ತ್ರಿಟ್‌ಪತಿ.

(೩೯೯) ಅಷ್ಟದಿಕ್ಪಾಲಕರು:— ಇಂದ್ರ, ಅಗ್ನಿ, ಯಮ, ನಿರುತಿ, ವರುಣ, ವಾಯು, ಕುಬೇರ, ಈಶಾನ.

(೪೦೦) ಸಪ್ತಸಾಗರಗಳು:— ಲವಣ ಸಮುದ್ರ, ಕ್ಷೀರಸಮುದ್ರ, ದಧಿಸಮುದ್ರ, ಘೃತಸಮುದ್ರ, ಇಕ್ಷುಸಮುದ್ರ, ಸುರಾಸಮುದ್ರ, ಸ್ವಾದೂದಕಸಮುದ್ರ.

(೪೦೧) ಹದಿನಾಲ್ಕು ಲೋಕಗಳು:— ಅತಳ, ವಿತಳ, ಸುತಳ, ಮಹೀತಳ, ತಳಾತಳ, ರಸಾತಳ, ಪಾತಾಳ; ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ.

(೪೦೨) ಪಂಚ ಯಜ್ಞಗಳು:— ದೇವಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ, ಭೂತಯಜ್ಞ, ಬ್ರಹ್ಮಯಜ್ಞ ಎಂದಿವೆ.

(೪೦೩) ಉದ್ಧರಣಿಗಳು:— ವೀರಶೈವ ತತ್ವಗಳ ಮರ್ಮವನ್ನು ತಿಳಿಯಲಿಕ್ಕೆ ಉದ್ಧರಣಿಗಳು ಸಾಧನವಾಗಿವೆ. ಅವು ೩೨ ಇವೆ. ಅವುಗಳ ಹೆಸರುಗಳು:— ಅನಾದಿ ಭಕ್ತೋದ್ಧರಣೆ, ಅಷ್ಟಾವರಣೋದ್ಧರಣೆ,



ಅನಾದಿ ಜಂಗಮೋದ್ಧರಣೆ, ಗೋಮುಖೋದ್ಧರಣೆ, ಪ್ರಣವೋದ್ಧರಣೆ, ಮಕುಟೋದ್ಧರಣೆ, ಶೂನ್ಯಲಿಂಗೋದ್ಧರಣೆ, ಚಿದಂಬರೋದ್ಧರಣೆ, ಪಟ್ಚಕ್ರೋದ್ಧರಣೆ, ಪಂಚಮೂರ್ತಿ ಲಿಂಗೋದ್ಧರಣೆ, ಶಾಂಭವೀಚಕ್ರೋದ್ಧರಣೆ, ವೃಷಭೋದ್ಧರಣೆ, ನವಚಕ್ರೋದ್ಧರಣೆ, ತತ್ವಪಂಚೀಕರಣೋದ್ಧರಣೆ, ಮಂತ್ರಪಂಚೀಕರಣೋದ್ಧರಣೆ, ಲಿಂಗಪಂಚೀಕರಣೋದ್ಧರಣೆ, ಮಹಾಲಿಂಗೋದ್ಧರಣೆ, ಷಡಕ್ಷರೋದ್ಧರಣೆ, ಬಸವೋದ್ಧರಣೆ, ನೂರೆಂಟು ಪ್ರಣವೋದ್ಧರಣೆ, ಅಧಃಕುಂಡಲಿ ಶಕ್ತಿಪ್ರಣವೋದ್ಧರಣೆ, ಊರ್ಧ್ವಕುಂಡಲಿ ಶಕ್ತಿಪ್ರಣವೋದ್ಧರಣೆ, ಜ್ಞಾನಚಕ್ರೋದ್ಧರಣೆ, ನೂರೆಂಟುತೆರದ ಅರ್ಪಣೋದ್ಧರಣೆ, ಅರುವತ್ತಾರು ತೆರದ ಕರಣಾರ್ಪಣೋದ್ಧರಣೆ, ನಾಲ್ವತ್ತೆಂಟು ತೆರದ ಅರ್ಪಣೋದ್ಧರಣೆ, ಇನ್ನೂರುಹದಿನಾರು ತೆರದ ಅರ್ಪಣೋದ್ಧರಣೆ, ಮೂವತ್ತಾರುತೆರದ ವಿಶ್ರಾರ್ಪಣೋದ್ಧರಣೆ, ಕಾಯಾರ್ಪಣೋದ್ಧರಣೆ, ಅಂಗಷಡಕ್ಷರೋದ್ಧರಣೆ, ಲಿಂಗಷಡಕ್ಷರೋದ್ಧರಣೆ, ಲಯಯೋಗ ಸಮಾಧಿ ಎಂದಿವೆ.

The Vijay College
LIBRARY,
VIJAY COLLEGE,
BIJAPUR.

# ಶಬ್ದಾನುಕ್ರಮಣಿಕೆ.

(ಟೀಪು:– ಶಬ್ದಗಳ ಮುಂದಿನ ಅಂಕಿಗಳು ಗ್ರಂಥದಲ್ಲಿಯ ಗುಂಪುಗಳ ಸಂಖ್ಯೆಗಳನ್ನು ನಿರ್ದೇಶಿಸುತ್ತವೆ.)


ಅ, ಉ, ಮ ಪ್ರಣವಗಳು ೨೪, ೧೯೦–೧೯೩, ೨೦೪, ೨೩೨, ೨೩೩.
ಅಕಾಯ ೧೦೪
ಅಕಾರ ಪ್ರಣವ ೨೪, ೧೯೧
ಅಗ್ನಿ ೨೯, ೪೮
ಅಗ್ನಿಧಾರಣೆ ೩೭೯
ಅಗ್ನಿಯ ಪಂಚೀಕೃತಿ ೨೮
ಅಘೋರಮುಖ ೨೫, ೨೫೭
ಅಘೋರಾಸ್ತ್ರಮಂತ್ರ ೨೬೩
ಅಷ್ಟಪ್ರಸಾದಿ ೧೫೭, ೧೬೬
ಅಜಪಗಾಯತ್ರೀ ೨೬೫
ಅದ್ವೈತ ೨೧
ಅದ್ವೈತಾಚಾರ ೨೧
ಅಧ್ವಗಳು ೨೬
ಅಧಿದೇವತೆಗಳು ೩೩೦
ಅನ್ನಮಯಕೋಶ ೩೬
ಅನಂತಶಕ್ತಿ ೫೫
ಅನಾದಿಕಲೆ ೩೮
ಅನಾದಿ ಗುರುಸ್ವರೂಪ ೧೬೫
ಅನಾದಿ ಜಂಗಮ ಸ್ವರೂಪ ೧೬೫
ಅನಾದಿಪರಿಪೂರ್ಣ ನಿಜವಸ್ತು ೧೬೫
ಅನಾದಿ ಪ್ರಣವ ೧೮೬
ಅನಾದಿ ಬೋಧ ೫೫
ಅನಾದಿ ಭಕ್ತಸ್ವರೂಪ ೧೬೫
ಅನಾದಿ ನಿರಂಜನ ಜಂಗಮ ಸ್ವರೂಪ ೧೬೫
ಅನಾದಿ ಲಿಂಗ ಸ್ವರೂಪ ೧೬೫
ಅನಾದಿ ಶರಣ ಪ್ರಸನ್ನ ಮೂರ್ತಿ ೧೬೫
ಅನಾದಿ ಸಂಜ್ಞೆ ೩೧
ಅನಾಹತ ಚಕ್ರ ೩೮
ಅನಿರ್ವಾಚ್ಯ ೧೮, ೨೦
ಅನಿರ್ವಾಚ್ಯ ಕಲೆ ೩೮
ಅನುಗ್ರಹಲಿಂಗ ೧೦೫
ಅನುಭವ ೭
ಅನುಭಾವ ೭, ೫೮
ಅನುಭಾವಗೋಷ್ಠಿ ೭
ಅನುಭಾವಿ ೭
ಅನುಭಾವಭಕ್ತಿ ೧೩, ೫೧, ೫೬
ಅಪಾನವಾಯು ೨೮, ೪೦
ಅರ್ಪಿತ ಪ್ರಸಾದಿ ೬೫
ಅಪ್ಪುತತ್ತ್ವ ೨೭, ೨೯, ೪೮
ಅಮೂರ್ತಿ ಸಾದಾಖ್ಯ ೨೩
ಅಮೃತಧಾರಣೆ ೩೭೯
ಅರಿವು ೬

ಅರುವತ್ತುನಾಲ್ಕು ಶೀಲಗಳು ೧೦೯
ಅಲಂಬು ೩೯
ಅಲುಪ್ತಾ ಶಕ್ತಿ ೫೫
ಅವಧಾನ ಪ್ರಸಾದಿ ೬೫
ಅವಧಾನ ಭಕ್ತಿ ೧೩, ೫೧, ೫೬
ಅವಧಾನೋದಕ ೧೪೧
ಅವಸ್ಥೆಗಳು ೪೧
ಅವಾಗ್ಜ ೧೮೨
ಅಕ್ಷರಗಳು ೩೮
ಅರ್ಧಚಂದ್ರಾಕೃತಿ ೩೮
ಅರ್ಪಣ ೧೪೨
ಅರ್ಪಿತಪ್ರಸಾದೋದಕ ೧೪೦
ಅರ್ಪಿತಲಿಂಗ ೧೦೫
ಅರ್ಪಿತಾವಧಾನ ೧೪೬
ಅಷ್ಟತನುಮೂರ್ತಿನಿರಸನ ಸ್ಥಲ ೯೮
ಅಷ್ಟದಳ ಜಪ ೨೯೬
ಅಷ್ಟವಿಧಾರ್ಚನೆ ೩೬೧
ಅಷ್ಟಾವರಣಗಳು ೩೮, ೧೨೪, ೩೪೯, ೩೫೦
ಅಷ್ಟಾಕ್ಷರಗಳು ೨೦೪
ಅಷ್ಟೋಪಚಾರಗಳು ೩೬೮
ಅಸ್ತ್ರಮಂತ್ರ ೨೫೬
ಅಹಂಕಾರ ೨೮, ೩೬, ೪೮, ೫೬
ಅಂಗ ೩, ೧೨, ೧೬, ೫೫, ೩೨೨
ಅಂಗನ್ಯಾಸಗಳು ೩೭೬
ಅಂಗಲಿಂಗಸ್ಥಲ ೧೦೦
ಅಂಗಲೇಪನಸ್ಥಲ ೧೦೮
ಅಂಗಸ್ಥಲಗಳು ೫೩, ೯೬
ಅಂಗುಲಿನ್ಯಾಸ ೩೭೭

ಅಂಡಜ ೬೨
ಅಂತರಾತ್ಮ ೩೫, ೩೮, ೧೦೬
ಅಂತ್ಯಪ್ರಸಾದಿ ೧೦೬, ೧೫೬
ಅಂತಃಕರಣ ಚತುಷ್ಟಯಗಳು ೩೦೯
ಅಂತಃಕರಣ ಚತುಷ್ಟಯ ವಿರಹಿತ ಪ್ರಸಾದ ೧೬೨
ಆಕಾಶ ೨೯, ೪೮, ೭೫
ಆಕಾಶದ ಪಂಚೀಕೃತಿ ೨೮
ಆಕಾಶ ಲಿಂಗ ೧೦೭
ಆಕೃತಿಗಳು ೩೮, ೩೩೫
ಆಗಮಗಳು ೩೯೦
ಆಗಮಲಿಂಗ ೧೦೪
ಆಚಾರತೃಪ್ತಿ ೮೩
ಆಚಾರ ನಿಷ್ಠೆ ೭೯
ಆಚಾರ ಪ್ರಾಣಿ ೬೬
ಆಚಾರಲಿಂಗ ೧೬, ೩೮, ೫೬, ೫೭, ೭೦, ೮೬, ೮೭, ೧೦೩, ೧೦೪
ಆಚಾರಾವಧಾನಿ ೮೦
ಆಚಾರಾಂಗ ೭೮
ಆತ್ಮ ೨೫, ೩೪, ೩೮, ೪೮, ೫೬, ೩೩೨
ಆತ್ಮತತ್ತ್ವಗಳು ೨೯
ಆತ್ಮತ್ರಯಗಳು ೩೫
ಆತ್ಮವಿದ್ಯಾಲಿಂಗ ೨೭೩
ಆದಿಪ್ರಣವ ೨೦೨
ಆದಿಪ್ರಸಾದಿ ೧೦೬, ೧೫೬
ಆದಿಶಕ್ತಿ ೧೨, ೩೭
ಆಧಾರ ಚಕ್ರ ೩೮
ಆಧಾರಧಾರಣೆ ೩೭೯
ಆಪ್ಯಾಯನ ಪ್ರಸಾದ ೧೬೨



ಆನಂದ ೩೨, ೭೪
ಆನಂದಮಯಕೋಶ ೩೬
ಆಯತ ೮೨
ಆಸನಗಳು ೩೭೮
ಆಸನಯೋಗ ೯೪
ಆಹ್ವಾನ ನಿರಸನಸ್ಥಲ ೯೮
ಆಜ್ಞಾಚಕ್ರ ೩೮
ಇಚ್ಛಾಶಕ್ತಿ ೧೨, ೩೭
ಇನ್ನೂರು ಹದಿನಾರುತೆರದ ಅರ್ಪಣಗಳು ೧೬೦
ಇನ್ನೂರು ಹದಿನಾರು ಸ್ಥಲಗಳು ೭೭, ೮೮
ಇಲ್ಲವೆ ೧
ಇಷ್ಟಲಿಂಗ ೧೬, ೩೮, ೪೯, ೫೦, ೫೯, ೧೨೭, ೧೨೮, ೧೩೬, ೧೬೧, ೧೬೬
ಇಷ್ಟಲಿಂಗಾರ್ಚನ ೬೭
ಇಷ್ಟಲಿಂಗಾರ್ಪಣ ೧೪೩, ೧೪೭
ಇಷ್ಟಲಿಂಗಾರ್ಪಣ ಜಪ ೨೮೮
ಇಷ್ಟಲಿಂಗಾರ್ಪಿತ ೧೪೭, ೧೬೫
ಇಹಲೋಕವೀರ ೬೪
ಇಂದ್ರಿಯಗಳು ೨೯, ೩೬, ೩೩, ೪೫, ೩೧೩
ಇಂದ್ರಿಯಾನಂದ ೭೪
ಇಂದ್ರಿಯಾನುಗ್ರಹ ೧೦೫
ಈಡಾ ೩೯
ಈಶ್ವರ ೩೮
ಈಶಾನ ೨೫, ೨೫೭
ಈಳನ ೭೦
ಉಕಾರ ಪ್ರಣವ ೧೯೨

ಉದಕದ ಪಂಚೀಕೃತಿ ೨೮
ಉದ್ಧರಣೆಗಳು ೩೩, ೪೦೩
ಉದಾನವಾಯು ೨೮, ೪೦
ಉಪಚಾರಗಳು ೩೬೬, ೩೬೭, ೩೬೮, ೩೬೯, ೩೭೦
ಉಪಾಧಿಭಕ್ತರು ೧೭೦, ೧೭೧, ೨೬೦
ಉಪಾಧಿ ಮಾಟಸ್ಥಲ ೯೭, ೧೭೧
ಉಪಾಂಗಗಳು ೫೪
ಉಭಯಸ್ಥಲ ೯೭
ಏಕಭಾಜನಸ್ಥಲ ೧೦೨, ೧೫೯
ಏಕಾದಶ ಪ್ರಸಾದಗಳು ೧೬೨, ೧೬೩, ೧೬೪
ಏಕೋತ್ತರ ಶತಸ್ಥಲಗಳು ೯೬, ೧೬೬
ಐಕ್ಯ ೧೬, ೨೧, ೮೩, ೩೯೫
ಐಕ್ಯಸ್ಥಲ ೫೧, ೫೩, ೫೬, ೬೮, ೧೦೨
ಐವತ್ತಾರು ತೆರದ ಆಚಾರಗಳು ೧೦೯
ಐವತ್ತೆರಡಕ್ಷರಗಳು ೨೦೫
ಐವತ್ತೆರಡು ವಿಧದ ಇರವು ೧೦೯
ಒಲವು ಲಿಂಗ ೧೦೬
ಓಂಕಾರ ಪ್ರಣವ ೧೯, ೨೨, ೨೪, ೩೩, ೧೮೦, ೨೭೯
ಕರಣ ಚತುಷ್ಟಯಗಳು ೪೮
ಕರಣಾರ್ಪಣ ೧೪೦, ೧೪೪, ೧೫೪, ೧೬೦, ೩೧೬
ಕರಣಾರ್ಪಣ ಜಪ ೨೮೭, ೨೯೦
ಕರಣಾರ್ಪಿತ ೧೦೫
ಕರನ್ಯಾಸ ೩೭೭
ಕರಸ್ಥಲ ೭೨
ಕರ್ತೃಸಾದಾಖ್ಯ ೨೩

ಕರ್ಮಸಾದಾಖ್ಯ ೨೩
ಕರ್ಮಕ್ಷಯ ೫೪
ಕರ್ಮೇಂದ್ರಿಯಗಳು ೨೯, ೩೬, ೩೭,
೪೫, ೩೧೩
ಕರುಣಜಲ ೧೩೯, ೧೪೦, ೧೬೬
ಕಲಾಧ್ವ ೨೬
ಕಲಾಪ್ರಣವ ೧೮೫
ಕಲಾಬ್ರಹ್ಮ ೨೫
ಕಲೆ ೧೧, ೧೯, ೨೩, ೨೯, ೩೦,
೩೮, ೩೩೮
ಕವಚಮಂತ್ರ ೨೫೬
ಕಳಾಗ್ರಾಹಕ ೮೨
ಕಳಾನ್ಯಾಸ ೩೭೫
ಕಾಯಲಿಂಗ ೧೦೪
ಕಾಯಲಿಂಗೈಕ್ಯ ೭೮
ಕಾಯಾನುಗ್ರಹ ೧೦೫
ಕಾಯಾರ್ಪಣ ೧೪೩, ೧೫೪, ೧೬೦,
೩೧೫
ಕಾಯಾರ್ಪಣ ಜಪ ೨೯೬
ಕಾರಣನಾಡಿಗಳು ೩೯
ಕಾರಣ ಶರೀರ ೫, ೧೬, ೪೯
ಕಾಂಡಗಳು ೩೯೬
ಕ್ರಿ ೪
ಕ್ರಿಯಾಗಮ ೧೦೪
ಕ್ರಿಯಾಚಾರ ೧೦೦, ೧೧೭
ಕ್ರಿಯಾಜಂಗಮ ೧೨೯
ಕ್ರಿಯಾದೀಕ್ಷೆ ೭೧, ೩೮೧
ಕ್ರಿಯಾನಿಷ್ಪತ್ತಿ ೧೦೭
ಕ್ರಿಯಾಪ್ರಕಾಶ ೧೦೭
ಕ್ರಿಯಾಪಾದೋದಕ ೧೩೯
ಕ್ರಿಯಾಭಸಿತ ೧೭೦, ೧೭೨
ಕ್ರಿಯಾಲಿಂಗ ೧೦೩, ೧೨೮
ಕ್ರಿಯಾಶಕ್ತಿ ೧೨, ೩೭
ಕ್ರಿಯಾಸಮಾಧಿ ೩೮೩
ಕ್ರಿಯೆ ೪, ೬, ೧೨, ೭೦
ಕೀಲಕಮಂತ್ರ ೨೫೩, ೨೫೫
ಕುಂಡಲಾಕೃತಿ ೩೮
ಕೂರ್ಮವಾಯು ೪೦
ಕೃಕರವಾಯು ೪೦
ಕೈಲಾಸ ೨೧
ಕೈವಲ್ಯ ೨೧
ಕೊಂಡುದುಪ್ರಸಾದಿಸ್ಥಲ ೧೦೮
ಕೋಶಗಳು ೩೬
ಖೇಚರಿ ಮುದ್ರೆ ೪೩
ಗಣಂಗಳು ೩೨೪
ಗಣಾಚಾರ ೫೭, ೭೦, ೧೧೦, ೧೧೪
ಗಂಧ ೨೮, ೪೭, ೧೬೦
ಗಾಂಧಾರೀನಾಡಿ ೩೯
ಗುದ ೪೫
ಗುರು ೧೨೫, ೧೩೨, ೧೩೩, ೧೩೭,
೧೪೯, ೧೫೨, ೧೫೩
ಗುರುಕರುಣಸ್ಥಲ ೯೭
ಗುರುನಿಷ್ಠೆ ೭೯
ಗುರುಪ್ರಸಾದ ೧೪೮, ೧೫೪, ೧೬೫
ಗುರುಪಾದೋದಕ ೧೩೯, ೧೪೧
ಗುರುಭಕ್ತ ೬೩
ಗುರುಮಹಾತ್ಮ್ಯಸ್ಥಲ ೯೯
ಗುರುಮಂತ್ರ ೨೬೦, ೨೬೧





ಗುರುಲಿಂಗ ೧೬, ೩೮, ೫೬, ೫೮,
೭೧, ೮೬, ೮೭, ೧೦೩, ೧೨೪
ಗುಹ್ಯೇಂದ್ರಿಯ ೨೮, ೪೫
ಗೂಢಸಂಜ್ಞೆ ೩೧
ಗೋತ್ರಗಳು ೩೯೭
ಗೋಮುಖ ಸಮಾಧಿ ೩೮೩
ಗೋಳಕ ಸಮಾಧಿ ೩೮೩
ಗೋಳಕಾಕಾರ ಪ್ರಣವ ೨೭, ೨೦೨
ಗೌರವ ತೃಪ್ತಿ ೮೩
ಗೌರವಾವಧಾನಿ ೮೦
ಗೌರವಾಂಗ ೭೮
ಘನಸಾಮರಸ್ಯ ೮೨
ಘ್ರಾಣೇಂದ್ರಿಯ ೨೮, ೪೬, ೪೭, ೫೬
ಚಕ್ರ ೩೬, ೧೬೭, ೩೨೮
ಚತುರ್ವಿಧ ಬಿಂದು ಲಿಂಗ ೧೨೦, ೨೭೩
ಚತುರ್ವಿಧ ಸಾರಾಯಸ್ಥಲ ೯೭
ಚತುರ್ವಿಂಶೋಪಚಾರಗಳು ೩೬೯
ಚರ ೬೦, ೭೩, ೧೦೩
ಚರತೃಪ್ತಿ ೮೩
ಚರನಿಷ್ಠೆ ೭೯
ಚರಾಚರನಾಸ್ತಿಸ್ಥಲ ೧೦೮
ಚರಾವಧಾನಿ ೨೮೦
ಚರಾಂಗ ೭೮
ಚಿತ್ ೧೯, ೩೨
ಚಿತ್ಕಲಾಪ್ರಣವ ೧೮೫
ಚಿತ್ಕಲೆ ೧೯
ಚಿತ್ತ ೨೮, ೩೬, ೪೮, ೫೬
ಚಿತ್ತು ೧೧, ೧೯
ಚಿತ್ಪ್ರಕಾಶ ೧೯
ಚಿತ್ಪ್ರಣವ ೧೭೯
ಚಿಚ್ಛಕ್ತಿ ೧೨, ೩೭, ೧೭೯
ಚಿತ್ಸ್ವರೂಪ ೧೯
ಚಿದಾನಂದ ೧೯
ಚಿದಾನಂದ ಸಮಾಧಿ ೩೮೩
ಚಿದ್ಬ್ರಹ್ಮಾಂಡ ೧೯
ಚಿದ್ರುದ್ರಾಕ್ಷಿ ೧೭೭, ೨೭೩
ಚಿದ್ರೂಪ ೧೯
ಚಿನ್ಮಯ ೧೯
ಚಿನ್ನಾದ ೧೯
ಚಿದ್ಬಿಂದು ೧೯
ಚಿನ್ಮಯಾತ್ಮ ೩೮
ಜಗತ್ತು ೨, ೧೯
ಜಪ ೨೭೧, ೨೭೨, ೨೯೮
ಜಂಗಮ ೧೮, ೨೫, ೧೨೯, ೧೩೧,
೧೩೩, ೧೩೪, ೧೩೫, ೧೩೭, ೧೫೧,
೧೫೨, ೧೫೩
ಜಂಗಮಪ್ರಸಾದ ೧೪೯, ೧೫೪, ೧೬೫
ಜಂಗಮಪಾದೋದಕ ೧೩೯, ೧೪೧
ಜಂಗಮಪ್ರಾಣಿ ೬೬
ಜಂಗಮ ಭಕ್ತ ೬೩
ಜಂಗಮ ಮಹಾತ್ಮ್ಯಸ್ಥಲ ೯೯
ಜಂಗಮ ಮಂತ್ರ ೨೬೦, ೨೬೧
ಜಂಗಮಲಿಂಗ ೩೮, ೫೬, ೬೦, ೭೩
೮೬, ೮೭, ೧೦೩, ೧೦೬, ೧೬೨
ಜಾಗ್ರದವಸ್ಥೆ ೪೧
ಜಿಹ್ವೇಂದ್ರಿಯ ೨೮, ೪೬, ೪೭, ೫೬
ಜೀವಲಿಂಗೈಕ್ಯ ೬೮
ಜೀವಾತ್ಮ ೩೫, ೩೮, ೧೦೬

ಜ್ಯೋತಿರಾಕೃತಿ ೩೮
ಜ್ಯೋತಿರ್ಲಿಂಗ ೨೨
ತತ್ಪುರುಷ ಮುಖ ೨೫
ತತ್ತ್ವ ೧೮, ೨೯
ತತ್ತ್ವ ಸ್ವರೂಪ ೧೮
ತತ್ತ್ವಾರ್ಥ ೨೬
ತನ್ಮಾತ್ರೆಗಳು ೪೭
ತನು ೩೨೩
ತನುಗುಣಲಿಂಗ ೧೦೫
ತನುತ್ರಯಗಳು ೫, ೧೫
ತನುಭಾಜನ ೧೫೯
ತಲೆವಾಗಿಲು ೩೮
ತ್ರಯೋಪಚಾರಗಳು ೩೬೬
ತ್ವಗಿಂದ್ರಿಯ ೨೮, ೪೬, ೪೭, ೫೬
ತಾಮಸನಿರಸನಸ್ಥಲ ೧೦೧
ತಾರಕಾಕೃತಿ ೩೨
ತ್ಯಾಗಾಂಗ ೪೯
ತ್ರಿಕೂಟಸ್ಥಲ ೬೨
ತ್ರಿಲಿಂಗಗಳು ೧೬, ೩೩, ೪೪, ೧೨೮
ತ್ರಿಲಿಂಗ ಜಪಗಳು ೨೯೨
ತ್ರಿಲಿಂಗ ಪೂಜೆ ೩೫೭
ತ್ರಿವಿಧವಿವೇಕಲಿಂಗ ೧೩೦
ತ್ರಿವಿಧಸಂಗತ್ಯಸ್ಥಲ ೯೭
ತ್ರಿವೇಣೀಸಂಗಮ ೩೮
ತುರ್ಯತತ್ತ್ವ ೨೯
ತುರ್ಯಾತೀತಾವಸ್ಥೆ ೪೧
ತುರ್ಯಾನಂದ ೭೪
ತುರ್ಯಾವಸ್ಥೆ ೪೧
ತೃಪ್ತಿ ೫೫, ೮೩, ೮೬, ೧೬೦
ತೃಪ್ತಿಲಿಂಗ ೧೬, ೮೩
ತೃಪ್ತಿಲಿಂಗಾರ್ಚಕ ೬೭
ತೇಜ ೨೯, ೪೮
ದಶಕವರ್ಗಗಳು ೩೮೭
ದಶವಿಧ ಕ್ಷೇತ್ರಲಿಂಗ ೧೩೦, ೨೭೩
ದಳಗಳು ೩೮
ದಂಡಕಾಕೃತಿ ೩೮
ದರ್ಪಣಾಕೃತಿ ೩೮
ದರ್ಪಸಂಕ್ಷಯ ೫೪
ದರ್ಶನಗಳು ೩೯೨
ದ್ವಂದ್ವಾಚರಣೆ ೧೫೯
ದ್ವಾತ್ರಿಂಶದುಪಚಾರಗಳು ೩೭೦
ದ್ವಾದಶವಿಕೃತಿಲಿಂಗ ೧೩೦ ೨೭೩
ದ್ವಾದಶವಿಧ ಪೂಜೆ ೩೬೫
ದಿಕ್ಪಾಲಕರು ೩೯೯
ದಿಕ್ಕುಗಳು ೩೩೬
ದಿವ್ಯಾತ್ಮ ೩೮
ದ್ವಿವಿಧವಿದ್ಯಾಲಿಂಗ ೧೩೦
ದೀಕ್ಷಾಗುರು ೧೦೩, ೧೨೬
ದೀಕ್ಷಾಪಾದೋದಕ ೧೦೬, ೧೩೯
ದೀಕ್ಷಾಭಸಿತ ೧೭೦, ೧೭೨
ದೀಕ್ಷಾವಿಧಿ ೩೮೦
ದೀಕ್ಷೆ ೫೮, ೭೧, ೩೮೧, ೩೮೨
ದೇವದತ್ತವಾಯು ೪೦
ದೇಹ ೩೦೮
ದೇಹನ್ಯಾಸ ೩೭೭
ಧನಂಜಯವಾಯು ೪೦
ಧರ್ಮಾಚಾರ ೧೦೪, ೧೧೦, ೧೨೨
ಧಾರಣಯೋಗ ೪೪





ಧಾರಣೆಗಳು ೩೭೯
ಧ್ಯಾನಮುದ್ರೆ ೪೩
ಧ್ಯಾನಯೋಗ ೪೪
ಧೂಪ ೩೭೩
ಧೂಳಿಪಾದೋದಕ ೧೩೯
ನಕಾರಮಂತ್ರ ೧೮೦
ನಯನಸ್ಥಲ ೬೨
ನವಪ್ರಣವಂಗಳು ೨೩೨
ನವಲಿಂಗಪೂಜೆ ೩೫೬
ನಷ್ಟಾಗಮ ೧೦೬
ನಾಗವಾಯು ೪೦
ನಾಡಿಗಳು ೩೮, ೩೯
ನಾಡಿಧಾರಣೆ ೩೭೯
ನಾದ ೧೧, ೧೯, ೧೩೫, ೧೬೦, ೩೪೨
ನಾಸಿಕೇಂದ್ರಿಯ ೫೬
ನ್ಯಾಸಗಳು ೨೯೧, ೩೬೨, ೩೭೫, ೩೭೬, ೩೭೭
ನ್ಯಾಸಾಕ್ಷರಮಂತ್ರ ೨೫೩, ೨೫೬
ನಿಜಪ್ರಸಾದಿ ೧೫೭, ೧೬೬
ನಿಜ ೧೮
ನಿಜತತ್ತ್ವ ೧೮
ನಿಜಶಿವಸಮಾಧಿ ೩೮೩
ನಿತ್ಯ ೩೨
ನಿತ್ಯಾಚಾರ ೧೧೦, ೧೨೧
ನಿಯತಾಚಾರ ೫೭
ನಿಯಮಯೋಗ ೪೪
ನಿರವಯ ೧, ೧೫, ೯೩, ೧೨೩
ನಿರವಯಸಮಾಧಿ ೩೮೩
ನಿರಹಂಕಾರದ ನೆಲೆ ೩೦೨
ನಿರಹಂಕಾರ ಹಸ್ತ ೫೨, ೬೨
ನಿರಂಜನ ಪ್ರಣವ ೧೭೯, ೧೮೧
ನಿರಂಜನಲಿಂಗ ೩೮
ನಿರಂಜನಷಟ್‌ಸ್ಥಲ ೯೨
ನಿರಂಜನ ಹಕಾರ ೧೮೨
ನಿರಂಜನಾಕೃತಿ ೩೮
ನಿರಂಜನಾತೀತ ಷಟ್‌ಸ್ಥಲ ೯೩
ನಿರ್ಮಲಾತ್ಮ ೩೮
ನಿಷ್ಕಳಾಕೃತಿ ೩೮
ನಿಷ್ಪತ್ತಿಲಿಂಗ ೧೦೭
ನಿರಾಭಾರಿ ಜಂಗಮ ಶರಣಗಣಂಗಳು ೨೬೨
ನಿರಾಮಯಷಟ್‌ಸ್ಥಲ ೯೧
ನಿರಾಲಂಬ ೧೦, ೧೮
ನಿರಾಳ ೧೮
ನಿರ್ನಾಮೋದಕ ೧೪೧
ನಿರ್ಭಾವ ತೃಪ್ತಿ ೮೩
ನಿರ್ಭಾವಾಗಮ ೧೦೬
ನಿರ್ಮಾಯಕಳೆ ೨೮
ನಿರ್ವಾಣ ದೀಕ್ಷೆ ೭೧
ನಿರ್ವಾಣ ಭಕ್ತ ೧೬೦
ನಿರ್ವಾಣ ಸಮಾಧಿ ೩೮೩
ನಿಷ್ಠಾಭಕ್ತಿ ೧೩, ೫೧; ೫೬
ನಿರೀಕ್ಷಣ ೭೦
ನಿರುಪಾಧಿಕ ೭೩
ನಿರುಪಾಧಿಭಕ್ತ ೧೬೦, ೧೭೧, ೨೬೦
ನಿರುಪಾಧಿ ಮಾಟಸ್ಥಲ ೯೭
ನಿರೂಪಲಿಂಗ ೧೦೬
ನಿಶ್ಶೂನ್ಯ ೨೦

ನಿಶ್ಶೂನ್ಯಲಿಂಗ ೩೮
ನಿವೃತ್ತಿ ೧೫, ೩೦, ೩೮, ೯೪
ನಿರ್ದೇಹಾಗಮ ೧೦೬
ನಿಂಬುದೋಗರಸ್ಥಲ ೧೦೮
ನಿಃಕಲಲಿಂಗ ೨೦, ೩೮
ನೂರುಮೂವತ್ತಾರು ವರ್ಣಗಳು ೨೭೦
ನೂರೆಂಟುಪ್ರಣವಗಳು ೨೬೯
ನೆನಪು ೧೯
ನೆಲೆಗಳು ೩೦೦–೩೦೫
ನೇತ್ರಮಂತ್ರ ೨೫೬
ನೇತ್ರೇಂದ್ರಿಯ ೨೮, ೪೬, ೪೭, ೫೬
ಪದಾರ್ಥ ೨೬
ಪಯಸ್ವಿನೀ ೩೯
ಪರಕಾಯ ೧೦೪
ಪರತತ್ತ್ವ ೧೮
ಪರಬ್ರಹ್ಮವಸ್ತು ೧೮, ೨೫
ಪರಮಾತ್ಮ ೧೮, ೩೧, ೩೨, ೩೫, ೩೮, ೧೦೬, ೨೦೭
ಪರಮೇಶ್ವರ ೩೮
ಪರಲೋಕವೀರ ೬೪
ಪರವಸ್ತು ೧೮
ಪರಶಕ್ತಿ ೧೨, ೩೭
ಪರಶಿವ ೧೮, ೨೫
ಪರಸಂಜ್ಞೆ ೩೧, ೬೦, ೭೩, ೧೦೩
ಪರಂಜ್ಯೋತಿರ್ಲಿಂಗ ೨೨
ಪರಿಣಾಮಪ್ರಸಾದಿ ೬೫
ಪರಿಣಾಮಿ ೭೩
ಪರಿಪೂರ್ಣ ೭೩
ಪರಿಪೂರ್ಣ ಪ್ರಕಾಶ ೭೫
ಪರಿಪೂರ್ಣ ಸಂಜ್ಞೆ ೩೨
ಪರೆ ೨೪೧
ಪಶ್ಯತಿ ೨೪೧
ಪಶ್ಚಿಮಚಕ್ರ ೩೮
ಪಂಚಕಲಶ ೩೩
ಪಂಚಕೋಶಗಳು ೩೬
ಪಂಚಗವ್ಯ ೩೭೧
ಪಂಚಧಾರಣೆಗಳು ೩೭೯
ಪಂಚಪಂಚಾಕ್ಷರಗಳು ೨೩೧
ಪಂಚಪ್ರಸಾದಮಂತ್ರ ೨೪೬
ಪಂಚಬ್ರಹ್ಮನ್ಯಾಸ ೩೭೫
ಪಂಚಬ್ರಹ್ಮಮಂತ್ರ ೨೫೭
ಪಂಚಮಹಾಭೂತಗಳು ೨೭, ೪೬
ಪಂಚಮುಖಗಳು ೩೩
ಪಂಚವಿಷಯಗಳು ೪೭, ೩೧೨
ಪಂಚವಿಂಶತಿ ತತ್ತ್ವಗಳು ೪೫–೪೮, ೩೦೮, ೩೧೪
ಪಂಚಾಚಾರಗಳು ೧೧೦–೧೧೫
ಪಂಚಾಮೃತ ೩೬೪
ಪಂಚಾಸ್ತ್ರ ಮಹಾಮಂತ್ರಗಳು ೨೬೩
ಪಂಚಾಕ್ಷರಗಳು ೩೦, ೩೩, ೨೦೩, ೨೦೬, ೨೦೮
ಪಂಚಾಕ್ಷರನ್ಯಾಸ ೩೭೫
ಪಂಚಾಕ್ಷರಿಮಂತ್ರ ೧೭೮, ೧೭೯, ೨೪೭
ಪಂಚಾಕ್ಷರಿಯ ಮಿಶ್ರ ಪಂಚೀಕರಣ ೨೩೬
ಪಂಚಾಕ್ಷರಿ ಸ್ಥಲ ೯೭
ಪಂಚೀಕರಣ ಅಥವಾ ಪಂಚೀಕೃತಿ ೨೮, ೩೦೬, ೩೦೭



ಪಂಚೇಂದ್ರಿಯ ವಿರಹಿತ ಪ್ರಸಾದ ೧೬೨
ಪಂಚೋಪಚಾರಗಳು ೩೬೭
ಪ್ರಕಾಶಲಿಂಗ ೧೦೭
ಪ್ರಕೃತಿ ೧೮
ಪ್ರಣವಂಗಳು ೨೪, ೩೦, ೩೩, ೩೮, ೧೫೫, ೧೯೬, ೧೯೭, ೧೯೮, ೧೯೯, ೨೦೦, ೨೦೧, ೨೬೭, ೩೩೮
ಪ್ರಣವಪಂಚಾಕ್ಷರಿ ೧೮೦
ಪ್ರಣವಸಂಬಂಧಗಳು ೨೦೯-೨೩೦
ಪ್ರಣವೋಚ್ಚರಣೆ ೨೮೨
ಪ್ರತ್ಯಾಹಾರ ೪೪
ಪ್ರತಿಷ್ಠಾಕಲೆ ೩೧, ೩೮
ಪ್ರಯೋಜನ ನಾಡಿಗಳು ೩೯
ಪ್ರವೃತ್ತಿ ೧೪
ಪ್ರಸನ್ನದೀಕ್ಷೆ ೭೧
ಪ್ರಸಾದಕ್ಕೆ ಮಂತ್ರಸಂಬಂಧ ೧೬೨
ಪ್ರಸಾದ ತೃಪ್ತಿ ೮೩
ಪ್ರಸಾದನಿಷ್ಠೆ ೭೯
ಪ್ರಸಾದ ಪಂಚಾಕ್ಷರ ೨೩೧, ೨೫೨, ೨೬೮
ಪ್ರಸಾದಭೋಜನ ೧೫೮
ಪ್ರಸಾದ ಮಹಾತ್ಮ್ಯಸ್ಥಲ ೯೯
ಪ್ರಸಾದ ೧೪, ೧೫೧, ೧೫೨, ೧೫೩, ೧೬೩, ೧೬೪, ೧೬೫, ೧೬೬, ೧೬೭, ೩೪೧
ಪ್ರಸಾದಲಿಂಗ ೧೬, ೩೮, ೫೬, ೬೧, ೭೪, ೮೬, ೮೭, ೧೦೬, ೧೦೭
ಪ್ರಸಾದಾವಧಾನಿ ೮೦
ಪ್ರಸಾದಾಂಗ ೭೮
ಪ್ರಸಾದಿ ೮೬, ೧೪೪, ೧೬೮
ಪ್ರಸಾದಿಯ ಪ್ರಸಾದ ೧೬೨
ಪ್ರಸಾದಿಸ್ಥಲ ೫೧, ೫೩, ೫೬, ೬೫, ೮೦, ೯೯
ಪ್ರಸಾದೋದಕ ೧೪೦
ಪ್ರಾಣ ೪೫
ಪಾದೇಂದ್ರಿಯ ೨೮, ೪೫
ಪಾದೋದಕ ೧೩೮, ೧೪೦, ೧೪೧, ೧೫೩, ೧೬೪, ೧೬೫, ೧೬೬, ೧೬೭
ಪಾದೋದಕ ಲಿಂಗ ೧೦೬
ಪಾಯು ೨೮, ೪೮
ಪಾಶುಪತಾಸ್ತ್ರಮಂತ್ರ ೨೬೩
ಪ್ರಾಣಭಾಜನ ೧೫೯
ಪ್ರಾಣಮಯಕೋಶ ೩೬
ಪ್ರಾಣಲಿಂಗ ೧೬, ೩೮, ೪೨, ೪೯, ೫೦, ೫೯
ಪ್ರಾಣಲಿಂಗ ಪೂಜೆ ೩೫೫
ಪ್ರಾಣಲಿಂಗಾರ್ಚಕ ೬೭
ಪ್ರಾಣಲಿಂಗಾರ್ಚನೆಯಸ್ಥಲ ೧೦೦
ಪ್ರಾಣಲಿಂಗಾರ್ಪಣ ೧೪೩
ಪ್ರಾಣಲಿಂಗಾರ್ಪಿತ ೧೪೭, ೧೬೫
ಪ್ರಾಣಲಿಂಗಿಸ್ಥಲ ೫೧, ೫೩, ೫೬, ೬೬, ೧೦೦
ಪ್ರಾಣವಾಯು ೨೮, ೨೯, ೪೦, ೩೧೦
ಪ್ರಾಣಾನಂದ ೭೪
ಪ್ರಾಣಾನುಗ್ರಹ ೧೦೫
ಪ್ರಾಣಾಯಾಮ ೪೪
ಪ್ರಾಣೇ ೮೬
ಪಿಂಗಳ ೩೯
ಪಿಂಡ ೩, ೯೭
ಪಿಂಡಜ ೬೨

ಪಿಂಡಬ್ರಹ್ಮ ೩೫
ಪಿಂಡಭಾಜನಸ್ಥಲ ೯೭
ಪಿಂಡಾಕಾಶ ೭೫, ೧೦೭
ಪುರಾಣಗಳು ೨೯೧
ಪುರುಷ ೧೮
ಪೂಜಾರಿಗಳು ೨೩೧
ಪೂರ್ವಾಶ್ರಯ ನಿರಸನಸ್ಥಲ ೯೮
ಪೂಷ ೨೯
ಪೃಥ್ವಿ ೩೭, ೪೮
ಪೃಥ್ವಿಯ ಪಂಚೀಕೃತಿ ೩೮
ಬಕಾರಪ್ರಣವ ೩೪, ೧೮೭
ಬಯಲಸಮಾಧಿ ೨೮೨
ಬಯಲು ೧, ೯೨
ಬಸವಾಕ್ಷರಗಳು ೧೯೦, ೨೦೪
ಬಹಿರಂಗಾರ್ಚನೆ ೨೫೪
ಬ್ರಹ್ಮ ೩೫, ೨೮
ಬ್ರಹ್ಮಚಕ್ರ ೨೮
ಬ್ರಹ್ಮರಂಧ್ರ ೨೯
ಬ್ರಹ್ಮಾಂಡ ೩
ಬ್ರಹ್ಮಾನಂದಬ್ರಹ್ಮ ೩೫
ಬಿಂದ್ವಾಕಾಶ ೭೫, ೧೦೭
ಬಿಂದು ೧೧, ೧೯, ೬೩, ೧೨೫
ಬಿಂದುಜ ೬೩
ಬೀಜಾಕ್ಷರಗಳು ೩೪, ೧೯೪, ೨೦೫, ೨೬೮
ಬೀಜಾಕ್ಷರ ಮಂತ್ರ ೩೫೨, ೩೫೪, ೩೬೬
ಬುದ್ಧಿ ೩೮, ೨೬, ೪೮, ೫೪, ೫೬
ಬುದ್ಧೀಂದ್ರಿಯ ೪೬, ೨೧೧
ಬೆಳಗು ೧೯, ೬೮
ಬೋಧಾದೀಕ್ಷೆ ೭೧

ಭಕ್ತ ೪೧, ೬೨, ೮೬, ೧೨೧, ೧೨೫,
೧೪೯, ೧೫೦, ೩೨೯, ೩೪೦
ಭಕ್ತದೇಹಿಕಲಿಂಗಸ್ಥಲ ೯೮
ಭಕ್ತನಿಗೆ ಮಂತ್ರಸಂಬಂಧ ೩೨೭
ಭಕ್ತಪ್ರಸಾದ ೧೫೦
ಭಕ್ತಮಾಹಾತ್ಮ್ಯಸ್ಥಲ ೯೯
ಭಕ್ತಸ್ಥಲ ೫೧, ೫೨, ೫೬, ೭೮, ೯೭
ಭಕ್ತಿ ೧೨, ೫೪, ೭೭, ೮೫, ೨೩೬, ೨೮೮
ಭಕ್ತಿಸ್ಥಲ ೯೭
ಭರಿತಾರ್ಪಣ ೧೪೫
ಭಸ್ಮ ೧೭೨
ಭಸಿತ ೧೭೨
ಭಾಜನಸ್ಥಲ ೧೦೮
ಭಾವ ೫೬
ಭಾವಗಮ್ಯ ೭೫
ಭಾವನಿಷ್ಪತ್ತಿ ೧೦೭
ಭಾವಪ್ರಕಾಶ ೧೦೭
ಭಾವಲಿಂಗ ೧೬, ೨೮, ೪೩, ೪೯, ೫೦,
೫೯, ೮೨, ೧೦೨
ಭಾವಲಿಂಗಾರ್ಪಣ ೧೪೨
ಭಾವಲಿಂಗಾರ್ಪಿತ ೧೪೭, ೧೬೫
ಭಾವಲಿಂಗೈಕ್ಯ ೬೮
ಭಾವಾಗಮ ೧೯೪
ಭಾವಾಚಾರ ೧೦೪, ೧೧೦, ೧೧೯
ಭಾವಾನಂದ ೭೪
ಭಾವಾರ್ಪಣ ೧೪೨, ೧೫೪, ೧೬೦, ೨೧೭
ಭಾವಾರ್ಪಿತ ೧೦೫
ಭಾವಾಭಾವ ನಷ್ಟಸ್ಥಲ ೧೦೮, ೧೬೬
ಭಾಂಡಸ್ಥಲ ೧೦೮
ಭಿನ್ನಭೋಜನ ೧೫೮





ಭುವನಾಧ್ವ ೩೬
ಭೂತಿ ೧೭೨
ಭೃತ್ಯಾಚಾರ ೩೦, ೧೧೦, ೧೧೫
ಭೇದ್ಯ ೮೧
ಭೋಗಾಂಗ ೪೯
ಮಕಾರ ಪ್ರಣವ ೩೪, ೧೮೦, ೧೯೦
ಮಣಿಪೂರಕಚಕ್ರ ೨೮
ಮಧ್ಯಮೆ ೩೪೧
ಮನಭಾಜನ ೧೫೯
ಮನಸ್ಸು ೩೮, ೪೮, ೫೬
ಮನೋಮಗ್ನತೆ ೮೩
ಮನೋಮಯಕೋಶ ೨೨
ಮಹದಂಗ ೭೮
ಮಹದಾಕಾಶ ೭೫, ೧೨೭
ಮಹದಾನಂದ ೭೪
ಮಹದಾವಧಾನಿ ೮೦
ಮಹನ್ನಿಷ್ಠೆ ೭೯
ಮಹಾಘನಲಿಂಗ ೧೫೪
ಮಹಾತ್ಮ ೨೮
ಮಹಾನುಭಾವಿ ೮೧
ಮಹಾಪ್ರನಾದಿ ೧೫೫
ಮಹಾಲಿಂಗ ೧೬, ೧೯, ೩೩, ೨೮, ೫೬,
೬೩, ೭೫, ೧೦೮, ೧೫೪
ಮಹಾಲಿಂಗೈಕ್ಯ ೨೪೭
ಮಹಾಶೂನ್ಯ ೩೦
ಮಹಾಸಾದಾಖ್ಯ ೩೨
ಮಹಾಜ್ಞಾನ ಜಂಗಮ ೧೩೯
ಮಹಾಜ್ಞಾನಲಿಂಗ ೧೩೮
ಮಹೇಶ್ವರ ೨೮

ಮಹೇಶ್ವರಸ್ಥಲ ೫೧, ೫೨, ೫೬, ೬೪,
೯೭, ೯೮
ಮಂತ್ರ ೭೦, ೧೭೮
ಮಂತ್ರದೀಕ್ಷೆ ೭೧, ೨೮೧
ಮಂತ್ರಸ್ಥಲ ೭೩
ಮಂತ್ರಾಧ್ವ ೩೬
ಮಾರ್ಗಕ್ರಿ ೮, ೭೨, ೨೧೮, ೨೧೯
ಮಾಟ ೪
ಮಾಯಾಖ್ಯ ಪಂಚಾಕ್ಷರಿ ೩೨೩, ೩೫೧,
೩೬೮
ಮಾಯೆ ೯
ಮಿಶ್ರಅಂಗಲಿಂಗಸಂಗ ೩೭೮
ಮಿಶ್ರಷಟ್‌ಸ್ಥಲಜಪ ೩೯೫
ಮಿಶ್ರಾರ್ಪಣ ೧೬೦, ೩೯೯
ಮೀರಿದಕ್ರಿ ೮, ೭೨, ೧೬೩, ೨೧೮
ಮೀರಿದಸ್ಥಲ ೧೬೩, ೨೩೦
ಮುಕ್ತಿ ೩೧
ಮುಖಗಳು ೨೨೯
ಮುದ್ರೆಗಳು ೪೨
ಮೂರ್ತಿಬ್ರಹ್ಮ ೩೫
ಮೂರ್ತಿಸಾದಾಖ್ಯ ೩೨
ಮೂಲಚಿತ್ತು ೧೧, ೧೯
ಮೂಲಪಂಚಾಕ್ಷರಮಂತ್ರ ೩೦೭, ೩೨೧,
೩೪೮, ೩೬೮
ಮೂಲಪ್ರಣವ ೨೨, ೩೦೩
ಮೂವತ್ತಾರು ಅಂಗಸ್ಥಲಗಳು ೭೭,
೮೪, ೮೫
ಮೂವತ್ತಾರುತೆರದ ಕರಣಾರ್ಪಣ
ಗಳು ೧೬೦

ಮೂವತ್ತೆರಡು ಕಲೆಗಳು ೧೦೯
ಮೋಹೀ ೮೬
ಮೋಕ್ಷ ೧೬, ೨೧
ಮಕಾರ ಪ್ರಣವ ೧೬೦
ಯಾಜನ ೭೦
ಯಮಯೋಗ ೪೪
ಯೋಗ್ಯ ೮೧
ಯೋಗಾಂಗ ೪೯
ರಸ ೨೮, ೪೭
ರಕ್ಷೆ ೧೭೨
ರುಚಿ ೧೬೦
ರುದ್ರ ೨೫, ೩೮, ೨೭೩, ೨೭೪, ೨೭೫,
೨೭೬, ೨೭೭, ೨೭೮, ೨೭೯, ೩೯೮
ರುದ್ರಾಕ್ಷಿ ೧೭೪, ೧೭೫, ೧೭೬
ರುದ್ರಾಕ್ಷಿಸ್ಥಲ ೯೭
ರೂಪು ೨೮, ೪೭
ಲಕುಹ ೩೯
ಲಯಸ್ಥಲ ೭೨
ಲಕ್ಷಣಗಳು ೩೨, ೩೪೩
ಲಿಂಗ ೧೬, ೨೧, ೩೦, ೩೩, ೫೦,
೧೨೭, ೧೩೨, ೧೩೪, ೧೩೫, ೧೩೬,
೧೩೭, ೧೪೮, ೧೪೯, ೧೫೧, ೧೫೨,
೧೫೩, ೩೩೧
ಲಿಂಗಜಪ ೨೭೨, ೨೮೦, ೨೮೧, ೨೯೪
ಲಿಂಗತತ್ವಗಳು ೨೯
ಲಿಂಗತೃಪ್ತಿ ೮೩
ಲಿಂಗಧಾರಕ ಭಕ್ತ ೧೩೯, ೧೭೦, ೧೭೧
ಲಿಂಗಧಾರಣಸ್ಥಲ ೯೭
ಲಿಂಗನಿಜಸ್ಥಲ ೧೭೦
ಲಿಂಗನಿಷ್ಠಾಸ್ಥಲ ೯೮
ಲಿಂಗನಿಷ್ಠೆ ೭೯
ಲಿಂಗಪ್ರಸಾದ ೧೫೪, ೧೬೫
ಲಿಂಗಪಾದೋದಕ ೧೩೯, ೧೪೧
ಲಿಂಗಪ್ರಾಣಿ ೯೬
ಲಿಂಗಪೂಜೆ ೩೮, ೩೫೮, ೩೫೯
ಲಿಂಗಭಕ್ತ ೬೩
ಲಿಂಗಭೋಗೋಪಭೋಗ ೧೪೪
ಲಿಂಗಭೋಗೋಪಭೋಗಿ ೪೯
ಲಿಂಗಮಹಾತ್ಮ್ಯಸ್ಥಲ ೯೯
ಲಿಂಗಮಂತ್ರ ೨೬೦, ೨೬೧
ಲಿಂಗವೀರ ೬೪
ಲಿಂಗಷಡಕ್ಷರ ಮಂತ್ರ ೨೫೩, ೨೫೯
ಲಿಂಗಸನ್ನಿಹಿತ ೮೨, ೧೨೮
ಲಿಂಗಸ್ಥಲಗಳು ೯೬
ಲಿಂಗಸ್ವಾಯತ ೮೨, ೧೨೮
ಲಿಂಗಕ್ಷೇತ್ರ ಸಂಜ್ಞೆ ೩೧
ಲಿಂಗಾಚಾರ ೭೦, ೧೧೦, ೧೧೮
ಲಿಂಗಾನುಭಾವಿ ೬೩
ಲಿಂಗಾರ್ಪಣ ಜಪಗಳು ೨೮೩, ೨೮೪,
೨೮೫
ಲಿಂಗಾಯತ ೮೨, ೧೨೮
ಲಿಂಗಾವಧಾನಿ ೨೮೦
ಲಿಂಗಾಂಗಕೂಟ ೨೪೨
ಲಿಂಗಾಂಗಸಾಮರಸ್ಯ ೧೬, ೨೧, ೨೯,
೩೦, ೩೮
ಲೀಲೆ ೧೯
ಲೋಕಗಳು ೪೦೧
ವಕಾರಪ್ರಣವ ೨೪, ೧೮೦, ೧೮೯



ವಚನಗಳು ೭
ವದನಾಕ್ಷರಮಂತ್ರ ೨೫೩, ೨೫೭
ವರ್ಣಗಳು ೩೮, ೧೬೦, ೩೨೯,
ವರ್ಣಾರ್ಧ್ಯ ೨೬
ವಾಕ್ ೪೫
ವಾಗದ್ವೈತನಿರಸನಸಲ ೯೮
ವಾಗ್ಮ ೧೮೩
ವಾಗಿಂದ್ರಿಯ ೨೮
ವಾಚ್ಯಪ್ರಣವ ೧೮೩
ವಾಮದೇವಮುಖ ೨೫, ೨೫೭
ವಾಯು ೨೯, ೪೦, ೪೮
ವಾಯುಧಾರಣೆ ೩೭೯
ವಾಯುವಿನ ಪಂಚೀಕೃತಿ ೨೮
ವ್ಯಾನವಾಯು ೨೮, ೪೦
ವ್ಯಾಪಕಾಕ್ಷರಗಳು ೨೦೫
ವಿಕಲಾಕ್ಷರಗಳು ೨೦೫
ವಿಚಾರ ೫೪
ವಿದ್ಯಾಕಲೆ ೩೦, ೩೮
ವಿದ್ಯಾತತ್ತ್ವ ೨೯
ವಿನಯಜಲ ೧೩೯, ೧೬೬
ವಿಭೂತಿ ೧೬೯, ೧೭೦, ೧೭೧, ೧೭೨,
೧೭೩
ವಿಭೂತಿಸ್ಥಲ ೯೭
ವಿಶುದ್ಧಿಚಕ್ರ ೩೮
ವಿಷಯಗಳು ೨೯
ವಿಷ್ಣು ೨೫, ೩೮
ವಿಜ್ಞಾನಬ್ರಹ್ಮ ೨೫
ವಿಜ್ಞಾನಮಯಕೋಶ ೩೬
ವೀರ ೮೬
ವೇದಗಳು ೩೩೭
ವೇದ್ಯ ೮೧
ವೇಧಾ ೭೦
ವೇಧಾದೀಕ್ಷೆ ೭೧, ೩೭೧
ವೈಖರೀ ೨೪೧
ವ್ಯೋಮಾಸ್ತ್ರಮಂತ್ರ ೨೬೩
ಶಕ್ತಿ ೧, ೯, ೨೩, ೩೦, ೨೭೪ ರಿಂದ
೨೭೯ ವರೆಗೆ ೩೨೭, ೩೮೯
ಶಕ್ತಿಪ್ರಣವ ಮಂತ್ರಗಳು ೨೭೧
ಶಕ್ತಿಷಡಂಗಮಂತ್ರ ೨೫೩, ೨೫೮
ಶಂಕಿನೀ ೩೯
ಶತಮಂತ್ರಾಕ್ಷರಗಳು ೨೬೮
ಶ್ರದ್ಧಾಭಕ್ತಿ ೧೩, ೫೧, ೫೬
ಶಬ್ದ ೨೮, ೪೭
ಶಬ್ದಚತುಷ್ಟಯ ಸಂಬಂಧ ೨೪೧
ಶರಣ ೧೮, ೨೫, ೮೨
ಶರಣಮಹಾತ್ಮ್ಯಸ್ಥಲ ೯೯
ಶರಣಸ್ಥಲ ೫೧, ೫೩, ೫೬, ೬೭, ೧೦೧
ಶರೀರ ೩
ಶರೀರಸ್ಥ ೩೧
ಶಾಂತ್ಯತೀತಕಲೆ ೩೦, ೩೮
ಶಾಂತ್ಯತೀತೋತ್ತರಕಲೆ ೩೦, ೩೮
ಶಾಂತಿಕಲೆ ೩೦, ೩೮
ಶಾಂಭವಮುದ್ರೆ ೪೩
ಶಾಂಭವಯೋಗ ೪೨
ಶಿಕಾರಮಂತ್ರ ೧೮೦
ಶಿಖಾಚಕ್ರ ೩೮
ಶಿಖಾಮಂತ್ರ ೨೫೬
ಶಿರೋಮಂತ್ರ ೨೫೬

ಶಿವ ೧೮, ೨೫
ಶಿವಜಗನ್ಮಯಸ್ಥಲ ೯೮
ಶಿವಜಪ ೨೭೨
ಶಿವತತ್ವ ೧೮, ೨೯
ಶಿವಪ್ರಣವ ಮಂತ್ರಗಳು ೨೬೧
ಶಿವಯೋಗ ೩೮, ೪೪, ೩೫೧
ಶಿವಯೋಗ ಸಮಾಧಿಸ್ಥಲ ೧೦೦
ಶಿವಯೋಗಿ ೬೬
ಶಿವಲಿಂಗ ೧೬, ೩೯, ೫೬, ೫೯, ೭೨,
೮೬, ೮೭, ೧೦೩, ೧೦೫
ಶಿವಶಕ್ತಿರಹಿತ ಪ್ರಣವಮಂತ್ರಗಳು ೨೬೧
ಶಿವಸಾದಾಖ್ಯ ೨೩
ಶಿವಾಚಾರ ೭೦, ೧೧೦, ೧೧೩
ಶಿವಾದ್ವೈತಶರಣಪ್ರಕಾಶ ೩೪೬
ಶಿವಾನುಭವ ೭
ಶಿವಾನುಭವಿಗಳು ೭
ಶಿವಾಸ್ತ್ರಮಂತ್ರ ೨೬೩
ಶಿವಾಂಗ ೭೮
ಶಿವಾಂಗಮಂತ್ರ ೨೪೩, ೨೪೪
ಶಿವೈಕ್ಯ ೧೬
ಶಿಷ್ಯ ೧೦೫
ಶಿಕ್ಷಾ ೫೮
ಶಿಕ್ಷಾಗುರು ೧೦೩, ೧೨೪
ಶಿಕ್ಷಾಪಾದೋದಕ ೧೦೬, ೧೩೯
ಶಿಕ್ಷಾಭಸಿತ ೧೭೦, ೧೭೨
ಶೀಲಸಂಪಾದನೆಯಸ್ಥಲ ೧೦೧
ಶುದ್ಧಪ್ರಣವ ೨೭೯
ಶುದ್ಧಪ್ರಸಾದ ೬೧, ೧೪೩, ೧೫೪,
೧೬೨, ೧೬೬
ಶುದ್ಧಪ್ರಸಾದಪ್ರಣವು ೨೬೨
ಶುದ್ಧಾತ್ಮ ೩೮
ಶುಶ್ರೂಷಾ ೧೦೫
ಶೂನ್ಯ ೧, ೪೬, ೩೪೮
ಶೂನ್ಯಲಿಂಗ ೨೦, ೪೧
ಶೈವವಿಧಗಳು ೩೯೪
ಶ್ರೋತ್ರೇಂದ್ರಿಯ ೨೮, ೪೬, ೪೭, ೫೬
ಷಟ್‌ಚಕ್ರಗಳು ೩೩
ಷಟ್‌ತ್ರಿಂಶನ್ಮಂತ್ರಗಳು ೨೫೩
ಷಟ್‌ಪ್ರಸಾದ ಮಂತ್ರಗಳು ೨೪೫, ೨೫೫
ಷಟ್‌ಶಕ್ತಿಗಳು ೩೭
ಷಟ್‌ಸಮ್ಮಾರ್ಜನೆ ೩೭೨
ಷಟ್‌ಸ್ಥಲಗಳಿಗೆ ೧೦೧ ಸ್ಥಲಗಳ
ಸಂಬಂಧ ೨೯೭
ಷಟ್‌ಸ್ಥಲಗಳು ೧೭, ೩೮
ಷಟ್‌ಸ್ಥಲ ಬ್ರಹ್ಮಮೂರ್ತಿಗಳು ೨೫
ಷಟ್‌ಸ್ಥಲಶಾಸ್ತ್ರ ೯೦, ೯೧, ೯೨, ೯೩
ಷಟ್‌ಸಾದಾಖ್ಯಲಿಂಗಗಳು ೨೪೪
ಷಡಕ್ಷರಮಂತ್ರ ೩೩, ೧೮೦, ೨೦೮,
೨೩೨, ೨೬೮
ಷಡಂಗನ್ಯಾಸಗಳು ೩೬೨, ೩೭೫, ೩೭೭
ಷಡಂಗಮಂತ್ರ ೨೫೬, ೨೫೭
ಷಡ್ಲಿಂಗಗಳಿಗೆ ಅರ್ಪಣ ೧೬೧
ಷಡ್ಲಿಂಗಗಳು ೧೬, ೩೩, ೪೧, ೫೬,
೧೨೮, ೧೩೦, ೧೪೪, ೧೬೦, ೧೬೫
ಷಡ್ಲಿಂಗ ಸಾಧನೆ ೮೬, ೮೭
ಷಡ್ವಿಧ ಐಕ್ಯ ೮೩
ಷಡ್ವಿಧ ಧಾತುಲಿಂಗ ೧೩೦, ೨೭೩
ಷಡ್ವಿಧ ಪ್ರಣವಗಳು ೨೦೩



ಷಡ್ವಿಧ ಪ್ರಸಾದಿ ೮೦
ಷಡ್ವಿಧ ಪ್ರಾಣಲಿಂಗಿ ೮೧
ಷಡ್ವಿಧ ಭಕ್ತ ೭೮
ಷಡ್ವಿಧ ಮಾಹೇಶ್ವರ ೭೯
ಷಡ್ವಿಧಲಿಂಗಜಪ ೨೯೩
ಷಡ್ವಿಧ ವ್ರತಗಳು ೧೦೯, ೩೫೨
ಷಡ್ವಿಧ ಶರಣ ೮೨
ಷಡ್ವಿಧ ಶೀಲಗಳು ೩೫೩
ಷಣ್ಮುಖಿ ಮುದ್ರೆ ೪೩
ಷೋಡಶ ಕರ್ಮಗಳು ೩೮೫
ಷೋಡಶ ಕಳಾಲಿಂಗ ೧೩೦, ೨೭೩
ಷೋಡಶೋಪಚಾರಗಳು ೩೬೦
ಸಕಾಯ ೧೦೪
ಸಕಾರ ಪ್ರಣವ ೨೪, ೧೮೮
ಸಕೀಲಗಳು ೯೫
ಸತ್ ೩೨
ಸತ್ಯಾಚಾರ ೧೧೦
ಸತ್ಯೋದಕ ೧೪೧
ಸದಾಚಾರ ೫೭, ೬೩, ೭೦, ೧೧೦, ೧೧೨
ಸದಾಶಿವ ೨೫, ೩೮
ಸದ್ಭಾವದ ನೆಲೆ ೩೦೫
ಸದ್ಭಾವ ಪ್ರಸಾದ ೧೬೨
ಸದ್ಭಾವ ಹಸ್ತ ೩೨, ೭೨
ಸದ್ಯೋಜಾತ ಮುಖ ೨೫, ೨೫೭
ಸನ್ನಿಹಿತ ೮೧, ೮೨
ಸಪ್ತಾಚಾರಗಳು ೧೧೦, ೧೧೬ ರಿಂದ
೧೨೩ ವರೆಗೆ
ಸಪ್ತೋದಕಗಳು ೩೬೩
ಸಮತಾಪ್ರಸಾದ ೧೬೨
ಸಮತೆಜಲ ೧೩೯, ೧೬೬
ಸಮಯ ಪ್ರಸಾದಿ ೧೫೭, ೧೬೬
ಸಮರಸ ೨೧
ಸಮರಸ ಭಕ್ತಿ ೧೩, ೫೧, ೫೬
ಸಮರಸ ಭಾವ ೨೧
ಸಮ್ಯಜ್ಞಾನ ೫೪
ಸಮಾಧಿ ಕ್ರಿಯೆ ೩೪೪
ಸಮಾಧಿಗಳು ೩೮೩
ಸಮಾಧಿ ಯೋಗ ೯೪
ಸಮಾನವಾಯು ೨೮, ೪೦
ಸರ್ವಗತ ನಿರಸನಸ್ಥಲ ೯೮
ಸರ್ವತತ್ವಾಶ್ರಯ ೭೫
ಸರ್ವಶೂನ್ಯ ೨೦, ೨೯
ಸರ್ವಶೂನ್ಯನಿರಾಲಂಬ ೧೦
ಸರ್ವಜ್ಞತಾ ೫೫
ಸರ್ವಾಂಗಲಿಂಗಿಸ್ಥಲ ೮೯, ೧೩೮
ಸರ್ವಾಚಾರಸಂಪತ್ತಿನಾಚರಣೆ ೭೦,
೧೧೦, ೧೨೩
ಸರ್ವಾಚಾರ ಸಂಪತ್ತಿಸ್ಥಲ ೧೦೨, ೧೭೨
ಸರ್ವೇಶ್ವರ ೩೮
ಸಹಜಭಕ್ತ ೧೭೦, ೨೬೦
ಸಹಜಮಾಟಸ್ಥಲ ೯೭
ಸಹಭೋಜನಸ್ಥಲ ೧೦೨, ೧೫೮, ೧೫೯
ಸಹಸ್ರಶಿವಕಳಾಲಿಂಗ ೧೩೦
ಸಂಸಾರ ೧೦
ಸಂಸಾರಹೇಯಸ್ಥಲ ೯೭
ಸಂಜ್ಞೆಗಳು ೩೧, ೩೪೪
ಸ್ಥಲಗಳು ೧೭
ಸ್ಪರ್ಶನೆ ೨೮, ೪೭, ೧೬೦

( ಒಟ್ಟು ಪುಟ ಸಂಖ್ಯೆ - ೨೫೦ )

ಸ್ಪರ್ಶನೋದಕ ೧೪೧
ಸ್ವತಂತ್ರತಾ ೫೫
ಸ್ವಪ್ನಾವಸ್ಥೆ ೪೧
ಸ್ವಯ ೬೦, ೬೨, ೧೦೨
ಸ್ವಯಚರಪರವರಿಯದಸ್ಥಲ ೧೦೮, ೧೬೬
ಸ್ವಯಂಪ್ರಸಾದಿ ೧೫೫
ಸ್ವರಾಕ್ಷರಗಳು ೩೦೫
ಸಾಗರಗಳು ೪೦
ಸಾದಾಖ್ಯಗಳು ೩೨, ೩೫, ೩೯, ೨೮, ೨೨೨
ಸಾಧ್ಯ ೮೧
ಸಾಮರಸ್ಯ ೩೨
ಸ್ಥಾವರಲಿಂಗ ೧೬
ಸ್ವಾಧಿಷ್ಠಾನ ಚಕ್ರ ೨೮
ಸ್ವಾಯತ ೮೩
ಸಿದ್ಧ ೬೧, ೧೪೨, ೧೫೪, ೧೬೩, ೧೬೬
ಸಿದ್ಧಪ್ರಸಾದ ಪ್ರಣವ ೩೬೩
ಸಿದ್ಧಿಮಂತ್ರಗಳು ೩೬೪
ಸುಚಿತ್ರದ ನೆಲೆ ೨೦೦
ಸುಚಿತ್ರಹಸ್ತ ೫೩
ಸುಬುದ್ಧಿಯ ನೆಲೆ ೨೦೧
ಸುಬುದ್ಧಿ ಹಸ್ತ ೫೩, ೬೩
ಸುಮನದ ನೆಲೆ ೨೦೨
ಸುಮನಹಸ್ತ ೫೩, ೬೩
ಸುರಾಳ ೧೮
ಸುಷುಪ್ತ್ಯಾವಸ್ಥೆ ೪೧
ಸುಷುಮ್ನಾನಾಡಿ ೨೯
ಸುಜ್ಞಾನದನೆಲೆ ೨೦೪
ಸುಜ್ಞಾನಭಕ್ತಿ ೧೨, ೫೧, ೫೬
ಸುಜ್ಞಾನಹಸ್ತ ೫೩, ೬೩
ಸೂತಕಗಳು ೨೯೨
ಸೂಕ್ಷ್ಮಪಂಚಾಕ್ಷರ ೩೨೧, ೩೫೦, ೩೬೮
ಸೂಕ್ಷ್ಮಶರೀರ ೫, ೧೩, ೪೯
ಸ್ಥೂಲಪಂಚಾಕ್ಷರ ೩೨೧, ೩೪೯, ೩೬೮
ಸ್ಥೂಲಶರೀರ ೫, ೧೩, ೨೪, ೪೯
ಸೇವ್ಯ ೧೦೫
ಸೇವ್ಯ ಪ್ರಸಾದಿ ೧೦೬, ೧೫೬

The Vijay College
LIBRARY,
VIJAY COLLEGE,